ಹುಬ್ಬಳ್ಳಿ
ಶನಿವಾರ, 16 ಮೇ 2026
ಸಂಪುಟ 16, ಸಂಚಿಕೆ 52, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಏನಾಸಂನಿಂದ ಎಲ್ಲರಿಗೂ ಸಮಾನ ಹಕ್ಕು | ೦೭
18ಕ್ಕೆ ಸರ್ಕಾರ ರಚನೆ: ಸತೀಶನ್ ಸಿದ್ಧತೆ | ೦೭
ಯುದ್ಧ ನಿಲ್ಲಿಸಲು ಭಾರತದಿಂದ ಸಾಧ್ಯ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಅಮಾವಾಸ್ಯೆ, ನಕ್ಷತ್ರ: ಭರಣಿ

ದಿನದ ಮಾತು

ನಂಬಿಕೆಗಳನ್ನು ಬದಲಾಯಿಸಿಕೊಳ್ಳುವುದರಿಂದ ಮಾತ್ರವೇ ಗುರಿ ಈಡೇರುವುದಿಲ್ಲ.
▲ ಗಾಂಧೀಜಿ

ಸೂರ್ಯ ಶಕ್ತಿ ಮತ್ತು ನಾಡಿಗಳು

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
• ಪುಟ ೬

ಕಿರುಸುದ್ದಿ

ಮಳೆಗೆ ಭಾವಣಿ ಕುಸಿದು ನಾಲ್ವರ ಜೀವಂತ ಸಮಾಧಿ

• **ವಿಜಯಪುರ:** ಜೋರಾದ ಮಳೆ, ಗಾಳಿಗೆ ಮನೆ ಭಾವಣಿ ಕುಸಿದು ಇಬ್ಬರು ಪುಟ್ಟ ಮಕ್ಕಳು, ಪತಿ, ಪತ್ನಿ ಸೇರಿ ಕುಟುಂಬದ ನಾಲ್ವರು ಜೀವಂತ ಸಮಾಧಿಯಾಗಿರುವ ಹೃದಯ ವಿದ್ರಾವಕ ಘಟನೆ ಜಿಲ್ಲೆಯ ಆಲಮೇಲ ತಾಲೂಕಿನ ಮೋರಟಗಿ ಗ್ರಾಮದಲ್ಲಿ ನಡೆದಿದೆ. ಗುರುನಾಥ ಬಡಿಗೇರ (35), ಪತ್ನಿ ಜ್ಯೋತಿ (28), ಮಕ್ಕಳಾದ ಕಾಳಮ್ಮ (13), ಕೀರ್ತಿ (9) ಮೃತ ದುರ್ದೈವಿಗಳು.
• ಪುಟ ೩

ಕೊಪ್ಪಳ: ರಸ್ತೆ ಅಪಘಾತ, ಏಳು ಮಂದಿ ಸಾವು
• ಪುಟ ೩

ನೀಟ್-ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಕಿಂಗ್ ಪಿನ್ ಸೆರೆ
• ಪುಟ ೭

19ಕ್ಕೆ ಸಾರ್ಥಕ ಸೇವೆಗಳ ಸಮರ್ಪಣಾ ಸಮಾವೇಶ
• ಪುಟ ೪

ಪ.ಕರಾವಳಿಯಲ್ಲಿ ಮೊದಲ ಪ್ಲಾಸ್ಟಿಸ್ಟೋನ್ ಶಿಲೆ ಪತ್ತೆ
• ಪುಟ ೭

ಅರಾವಳಿಯಲ್ಲಿ ಸದ್ಯಕ್ಕೆ ಗಣಿಗಾರಿಕೆಗೆ ಅನುಮತಿಯಿಲ್ಲ
• ಪುಟ ೭

ಸಾಮಾಜಿಕ ಪರಿವರ್ತನೆಗೆ ಶಿಕ್ಷಣವೇ ಶಕ್ತಿ: ಸಿಎಂ ಸಿದ್ದರಾಮಯ್ಯ ಅಭಿಮತ
• ಪುಟ ೩



ಅಮೆರಿಕ, ಫ್ರಾನ್ಸ್ ಸೇರಿ 20ಕ್ಕೂ ಹೆಚ್ಚು ದೇಶಗಳಲ್ಲಿ ತೈಲ ಬೆಲೆ ಭಾರೀ ಏರಿಕೆ

ಭಾರತದಲ್ಲಿ ಅತ್ಯಲ್ಪ ಹೆಚ್ಚಳ
• ಪುಟ ೭
ಸುದ್ದಿ ಸಮಗ್ರ

ಹಿಂದುಗಳಿಗೆ ಪೂಜೆ ಹಕ್ಕು: ಮ.ಪ್ರ. ಹೈಕೋರ್ಟ್ ಐತಿಹಾಸಿಕ ತೀರ್ಪು

ಭೋಜಶಾಲೆ ಸರಸ್ವತಿಗೆ ಸಮರ್ಪಿತ ದೇವಸ್ಥಾನ

• **ಭೋಪಾಲ್:** ಹಲವು ದಶಕಗಳಿಂದ ರಾಷ್ಟ್ರ ಮಟ್ಟದಲ್ಲಿ ವಿವಾದಕ್ಕೆ ಕಾರಣವಾಗಿದ್ದ ಮಧ್ಯಪ್ರದೇಶದ ಧಾರ ಜಿಲ್ಲೆಯ ಭೋಜಶಾಲೆ-ಕಮಾಲ್ ಮೌಲಾ ಸಮುಚ್ಚಯದ ಕುರಿತಾಗಿ ಮಧ್ಯಪ್ರದೇಶ ಹೈಕೋರ್ಟ್ ಶುಕ್ರವಾರ ಐತಿಹಾಸಿಕ ತೀರ್ಪು ನೀಡಿದ್ದು, ವಿವಾದಿತ ಪ್ರದೇಶದ ಧಾರ್ಮಿಕ ಸ್ವರೂಪ 'ವಾಗ್ದೇವಿ ಸರಸ್ವತಿ ದೇವಾಲಯ' ಎಂದು ಘೋಷಿಸಿದೆ. ರಾಜಾ ಭೋಜನ ಕಾಲದಲ್ಲಿ ಇದು ಸಂಸ್ಕೃತ ಶಿಕ್ಷಣದ



ಪ್ರಮುಖ ಕೇಂದ್ರವಾಗಿತ್ತು ಎಂಬುದನ್ನೂ ನ್ಯಾಯಪೀಠ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ವಿಜಯ್ ಕುಮಾರ್ ಶುಕ್ಲಾ ಹಾಗೂ ಆಲೋಕ್ ಅವಸ್ಥಿ ಅವರ ವಿಭಾಗೀಯ ಪೀಠವು, ಐತಿಹಾಸಿಕ ಸಾಹಿತ್ಯ, ವಾಸ್ತುಶಿಲ್ಪದ ಉಲ್ಲೇಖಗಳು ಮತ್ತು ಪುರಾತತ್ವ ದಾಖಲೆಗಳು ಭೋಜಶಾಲೆಯ ಅಸ್ತಿತ್ವವನ್ನು ದೃಢಪಡಿಸುತ್ತವೆ ಎಂದು ಅಭಿಪ್ರಾಯಪಟ್ಟಿತು. ಈ ಪ್ರದೇಶ ಸರಸ್ವತಿ ಆರಾಧನೆ ಹಾಗೂ ಸಂಸ್ಕೃತ ಅಧ್ಯಯನದ ಕೇಂದ್ರವಾಗಿತ್ತು ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಹಿಂದು ಫ್ರಂಟ್ ಫಾರ್ ಜಸ್ಟಿಸ್ ಸೇರಿದಂತೆ ಹಲವು ಸಂಘಟನೆಗಳು ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಿದ ನ್ಯಾಯಾಲಯ, 2003ರಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಜಾರಿಗೊಳಿಸಿದ್ದ ಪೂಜೆ-ನಮಾಜ್ ವ್ಯವಸ್ಥೆಯ ಆದೇಶದ ಕೆಲವು ಭಾಗಗಳನ್ನು ರದ್ದುಪಡಿಸಿದೆ. ➡ಪುಟ ೪

ತೀರ್ಪಿನ ಪ್ರಮುಖ ಅಂಶಗಳು

1. ಭೋಜಶಾಲೆಯು ಧಾರ್ಮಿಕ ಸ್ವರೂಪ ದೇವಾಲಯ
2. ರಾಜಾ ಭೋಜನ ಕಾಲದ ಸರಸ್ವತಿ ಮಂದಿರ, ಸಂಸ್ಕೃತ ವಿದ್ಯಾಕೇಂದ್ರ
3. 2003ರ ಎಎಸ್ಐ ಪೂಜೆ-ನಮಾಜ್ ವ್ಯವಸ್ಥೆಯ ಭಾಗಶಃ ರದ್ದು
4. ಎಎಸ್ಐಗೆ ಸಂಪೂರ್ಣ ನಿಯಂತ್ರಣ ಮತ್ತು ಸಂರಕ್ಷಣೆ ಜವಾಬ್ದಾರಿ
5. ಮುಸ್ಲಿಂ ಸಮುದಾಯಕ್ಕೆ ಪರ್ಯಾಯ ಮಸೀದಿ ಜಾಗ ಪರಿಗಣನೆ
6. ಲಂಡನ್‌ನಲ್ಲಿರುವ ಸರಸ್ವತಿ ವಿಗ್ರಹ ವಾಪಸಾತಿಗೆ ಕೇಂದ್ರಕ್ಕೆ ಸೂಚನೆ



ಸುಪ್ರೀಂನಲ್ಲಿ ಹಿಂದು ಸಂಘಟನೆಗಳಿಂದ ಕೆವಿಯಟ್

ಮಧ್ಯಪ್ರದೇಶದ ಧಾರ್ ಜಿಲ್ಲೆಯ ಐತಿಹಾಸಿಕ ಭೋಜಶಾಲೆ-ಕಮಾಲ್ ಮೌಲಾ ಮಸೀದಿ ವಿವಾದದಲ್ಲಿ ಮಧ್ಯಪ್ರದೇಶ ಹೈಕೋರ್ಟ್ ನೀಡಿರುವ ಮಹತ್ವದ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಕೆಯಾಗುವ ಸಾಧ್ಯತೆ ನಡುವೆಯೇ ಹಿಂದು ಪರ ಅರ್ಜಿದಾರರು ಶುಕ್ರವಾರ ಕೆವಿಯಟ್ ಅರ್ಜಿ ಸಲ್ಲಿಸಿದ್ದಾರೆ.

ಭೋಜಶಾಲೆ ಸಂಕೀರ್ಣವು ದೇವಿ ಸರಸ್ವತಿಗೆ ಸಮರ್ಪಿತ ಹಿಂದು ದೇವಾಲಯ ಎಂಬುದಾಗಿ ಹೈಕೋರ್ಟ್ ಘೋಷಿಸಿರುವುದು ಹಿಂದುಪಕ್ಷಕ್ಕೆ ದೊಡ್ಡ ಜಯವಾಗಿದೆ. 'ಭೋಜಶಾಲೆಯಲ್ಲಿ ಹಿಂದುಗಳಿಗೆ ನಿರಂತರ ಹಾಗೂ ಅಡೆತಡೆಯಿಲ್ಲದ ಪೂಜೆಗೆ ಹಕ್ಕು ದೊರೆತಿದೆ.
■ ಆಲೋಕ್ ಕುಮಾರ್
ವಿಹಿಂಪ ಅಂತಾರಾಷ್ಟ್ರೀಯ ಅಧ್ಯಕ್ಷ

ಹಿಂದುಪಕ್ಷದ ವಾದಗಳಿಗೆ ನ್ಯಾಯಾಲಯ ಮನ್ನಣೆ • ಪುಟ ೦೦



ಶತಮಾನಗಳ ವಿವಾದಕ್ಕೆ ತಿರುವು ನೀಡಿದ ತೀರ್ಪು



ಭೋಜಶಾಲೆ ವಿವಾದವು ಕೇವಲ ಒಂದು ಧಾರ್ಮಿಕ ಸ್ಥಳದ ಕುರಿತ ಕಾನೂನು ಹೋರಾಟವಾಗಿರಲಿಲ್ಲ, ಅದು ಭಾರತದ ಸಾಂಸ್ಕೃತಿಕ ಪರಂಪರೆ, ಪುರಾತತ್ವ ಸಾಕ್ಷ್ಯ, ಮಧ್ಯಯುಗೀನ ಇತಿಹಾಸ ಮತ್ತು ಆಧುನಿಕ ರಾಜಕೀಯಗಳ ನಡುವೆ ಸಾಗಿದ ಬಹುಮಟ್ಟದ ಸಂಘರ್ಷವಾಗಿತ್ತು. ಹಿಂದೂಗಳು ಈ ಸ್ಥಳವನ್ನು ಸರಸ್ವತಿ ದೇವಾಲಯ, ಸಂಸ್ಕೃತ ವಿದ್ಯಾ ಕೇಂದ್ರವೆಂದು ಪರಿಗಣಿಸಿದರೆ, ಮುಸ್ಲಿಮರು ಇದನ್ನು ಕಮಾಲ್ ಮೌಲಾ ಮಸೀದಿ ಎಂದು ಗುರುತಿಸುತ್ತಿದ್ದರು. ➡ಪುಟ ೪

ತೈಲ ದರ ಹೆಚ್ಚಳ | ರಾಜ್ಯ ಸರ್ಕಾರ ಖಂಡನೆ

ಬೆಲೆ ಏರಿಕೆ ನಿರ್ಣಯ ಹಿಂಪಡೆಯಿರಿ: ಸಿಎಂ



• **ಬೆಂಗಳೂರು:** ಕೇಂದ್ರ ಸರ್ಕಾರವು ಪೆಟ್ರೋಲ್-ಡೀಸೆಲ್ ಬೆಲೆ ಏರಿಸಿರುವುದನ್ನು ರಾಜ್ಯ ಸರ್ಕಾರ ಖಂಡಿಸಿ, ಬೆಲೆ ಏರಿಕೆ ನಿರ್ಣಯ ಹಿಂಪಡೆಯಲು ಒತ್ತಾಯಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ, ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳ ನಂತರ ಕೇಂದ್ರ ಸರ್ಕಾರ ಪೆಟ್ರೋಲ್-ಡೀಸೆಲ್ ದರ ಏರಿಸುವ ನಿರೀಕ್ಷೆ ಇತ್ತು.



ನಿರೀಕ್ಷೆಯಂತೆಯೇ ಹೆಚ್ಚಿಸಿದ್ದಾರೆ. ಆದರೆ, ಕರ್ನಾಟಕದಲ್ಲಿ ಇತರೆ ರಾಜ್ಯಗಳಿಗಿಂತ ಗಣನೀಯವಾಗಿ ಕಡಿಮೆಯಿರುವ ಪೆಟ್ರೋಲ್ ಬೆಲೆಯನ್ನು ಹೆಚ್ಚಿಸಿದ್ದರ ಬಗ್ಗೆ ಬಿಜೆಪಿಯವರು ಟೀಕಿಸಿದ್ದರು. ಮೋದಿ ದೇಶದ ಪ್ರಧಾನಿಯಾದ ನಂತರ ಹಲವು ಬಾರಿ ಪೆಟ್ರೋಲ್ ಡೀಸೆಲ್ ದರ ಹೆಚ್ಚಿಸಿದ್ದಾರೆ. ಕೇಂದ್ರದ ಈ ಬೆಲೆ ಏರಿಕೆ ಕ್ರಮವನ್ನು ರಾಜ್ಯ ಸರ್ಕಾರ ಖಂಡಿಸುವುದಲ್ಲದೇ ಈ ನಿರ್ಣಯವನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸುತ್ತೇವೆ ಎಂದರು. ಮೋದಿ ಅವರ ಆಡಳಿತ ಪ್ರಾರಂಭವಾಗುವ ಮೊದಲು 413 ರೂ. ಗಳಿದ್ದ ಗೃಹಬಳಕೆ ಎಲ್‌ಪಿಜಿ ದರ ಈಗ 1000 ರೂ. ದಾಟಿದೆ. ಈ ಬೆಲೆ ಏರಿಕೆ ದಿನಬಳಕೆ ವಸ್ತುಗಳ ಬೆಲೆ ಹೆಚ್ಚಳಕ್ಕೂ ಕಾರಣವಾಗಲಿದೆ. ➡ಪುಟ ೪

ತೈಲ ಬೆಲೆ ಹೆಚ್ಚಳ

• **ಹೊಸದಿಲ್ಲಿ:** ಸಾರ್ವಜನಿಕ ವಲಯದ ತೈಲ ಕಂಪನಿಗಳು ಶುಕ್ರವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 3 ರೂ. ಹಾಗೂ ಸಿಎನ್‌ಜಿ ಬೆಲೆಯನ್ನು ಪ್ರತಿ ಕೆಜಿಗೆ 2 ರೂ. ಏರಿಕೆ ಮಾಡಿವೆ. ದಿಲ್ಲಿಯಲ್ಲಿ ಪೆಟ್ರೋಲ್ ಬೆಲೆ ಪ್ರತಿ ಲೀಟರ್‌ಗೆ 97.77 ರೂ. ಹಾಗೂ ಡೀಸೆಲ್ ಬೆಲೆ 90.67 ರೂ.ಗೆ ತಲುಪಿದೆ. ಮುಂಬೈನಲ್ಲಿ ಪೆಟ್ರೋಲ್ 106.68 ರೂ., ಡೀಸೆಲ್ 93.14 ರೂ. ಆಗಿದೆ. ದಿಲ್ಲಿಯಲ್ಲಿ ಸಿಎನ್‌ಜಿ ಬೆಲೆ ಕೆಜಿಗೆ 79.09 ರೂ. ಮತ್ತು ಮುಂಬೈನಲ್ಲಿ 84 ರೂ.ಗೆ ಏರಿಕೆಯಾಗಿದೆ. ಆದರೆ, ಪಿಎನ್‌ಜಿ ಮತ್ತು ಎಲ್‌ಪಿಜಿ ದರಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷದಿಂದಾಗಿ ಫೆ.28ರಿಂದ ಹಾರ್ಮುಜ್ ಜಲಸಂಧಿಯಲ್ಲಿ ಉಂಟಾದ ಅಡೆತಡೆಗಳಿಂದಾಗಿ ಜಾಗತಿಕ ಕಚ್ಚಾತೈಲ ಬೆಲೆ ಶೇ.50 ರಷ್ಟು ಏರಿಕೆಯಾಗಿದೆ.

ಬೆಲೆ ಏರಿಕೆ ಮೋದಿ ಕೊಡುಗೆ: ಡಿಸಿಎಂ ಡಿ.ಕೆ.ಶಿವಕುಮಾರ್

ಬೆಲೆ ಏರಿಕೆ ಪ್ರಧಾನಿ ನರೇಂದ್ರ ಮೋದಿ ಅವರ



ಕೊಡುಗೆ. ಅವರು ಬೇರೆ ರಾಷ್ಟ್ರಗಳ ಜತೆ ಉತ್ತಮ ಸಂಬಂಧ ಉಳಿಸಿಕೊಂಡು ಬಂದಿಲ್ಲ. ಅಂತಾರಾಷ್ಟ್ರೀಯ ಬಿಕ್ಕಟ್ಟಿನ ಪರಿಸ್ಥಿತಿ ನಿಭಾಯಿಸುವಲ್ಲಿ ವಿಫಲರಾಗಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ➡ಪುಟ ೪

4 ದಿನ ಮುನ್ನವೇ ಮಾನ್ಸೂನ್ ಮಳೆ ಆಗಮನ: ಐಎಂಡಿ

ಮೇ 26ಕ್ಕೆ ಕೇರಳಕ್ಕೆ ಮುಂಗಾರು

• **ತಿರುವನಂತಪುರಂ:** ಈ ಬಾರಿ ಮೇ 26ರಂದು ಕೇರಳಕ್ಕೆ ನೈಋತ್ಯ ಮುಂಗಾರು ಆಗಮನದ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ)ಶುಕ್ರವಾರ ತಿಳಿಸಿದೆ.

ಮುಂದಿನ 24 ಗಂಟೆಗಳೊಳಗೆ ಬಂಗಾಳಕೊಲ್ಲಿಯ ದಕ್ಷಿಣ ಭಾಗಗಳು, ಅಂಡಮಾನ್ ಸಮುದ್ರ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳತ್ತ ಮುಂದುವರಿಯಲು ಪರಿಸ್ಥಿತಿ ಅನುಕೂಲಕರವಾಗಿದೆ ಎಂದೂ ಅದು ಹೇಳಿದೆ. ಬಂಗಾಳಕೊಲ್ಲಿಯ ನೈಋತ್ಯ ಮತ್ತು ಪಶ್ಚಿಮ-ಮಧ್ಯ ಭಾಗಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ವಾಯುಭಾರ ನಿಮ್ನತೆ ಮುಂದುವರಿದಿದೆ. ಇದಕ್ಕೆ ಸಂಬಂಧಿಸಿದ ಚಂಡಮಾರುತದ ಪರಿಚಲನೆಯು ಸಮುದ್ರ ಮಟ್ಟದಿಂದ 5.8 ಕಿಮೀವರೆಗೆ ವಿಸ್ತರಿಸಿದ್ದು, ನೈಋತ್ಯಕ್ಕೆ ವಾಲುತ್ತಿದೆ ಎಂದು ಐಎಂಡಿ ಮಾಹಿತಿ ನೀಡಿದೆ.

ಮಳೆ ಸಂಬಂಧಿ ವಾತಾವರಣ ತೀವ್ರಗೊಳ್ಳುತ್ತಿರುವಂತೆಯೇ, ಇಡುಕ್ಕಿ ಮತ್ತು ಮಲಪ್ಪುರಂ ಜಿಲ್ಲೆಗಳಲ್ಲಿ ಶುಕ್ರವಾರ ಐಎಂಡಿ ಆರೆಂಜ್ ಅಲರ್ಟ್ ಘೋಷಿಸಿದೆ. ➡ಪುಟ ೪



ರಾಜ್ಯದ ಹಲವೆಡೆ 3 ದಿನ ಗುಡುಗು ಸಹಿತ ಮಳೆ ಸಾಧ್ಯತೆ

• **ಬೆಂಗಳೂರು:** ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದಿನ ಮೂರು ದಿನ ಗುಡುಗು ಮಿಂಚು, ಗಾಳಿ ಸಹಿತ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಸಿದೆ. • ವಿವರ ಪುಟ ೪

ಎಲ್‌ಪಿಜಿ, ರಕ್ಷಣೆ ಸೇರಿ ಹಲವು ಒಪ್ಪಂದಗಳಿಗೆ ಮೋದಿ-ನಹ್ಯಾನ್ ಸಹಿ

ಭಾರತದಲ್ಲಿ ₹48 ಸಾವಿರ ಕೋಟಿ ಹೂಡಿಕೆ

• **ಅಬುಧಾಬಿ:** ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಸಂಘರ್ಷದ ನಡುವೆಯೇ ಭಾರತ ಮತ್ತು ಯುಎಇ ಪೆಟ್ರೋಲಿಯಂ ಸಂಗ್ರಹಣೆ, ದೀರ್ಘಾವಧಿಯ ಎಲ್‌ಪಿಜಿ ಪೂರೈಕೆ, ರಕ್ಷಣಾ ಮತ್ತು ಹಡಗು ಸಾಗಣೆ ಸೇರಿದಂತೆ ಹಲವು ಐತಿಹಾಸಿಕ ಒಪ್ಪಂದಗಳಿಗೆ ಸಹಿ ಹಾಕಿದವು.



ಇದೇ ವೇಳೆ, ಅಬುಧಾಬಿ ಭಾರತದಲ್ಲಿ ಒಟ್ಟು 5 ಬಿಲಿಯನ್ ಡಾಲರ್ (48 ಸಾವಿರ ಕೋಟಿ ರೂ.) ಹೂಡಿಕೆ ಮಾಡುವುದಾಗಿ ಘೋಷಿಸಿತು.

ಪಂಚ ರಾಷ್ಟ್ರಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು ಭೇಟಿಯಾಗಿ ಹಲವು ಒಪ್ಪಂದಗಳಿಗೆ ಸಹಿ ಹಾಕಿದರು. ➡ಪುಟ ೪



ಮೋದಿ ವಿಮಾನಕ್ಕೆ ಯುಎಇ ಎಸ್ಕಾರ್ಟ್

ಯುಎಇ ಅಧ್ಯಕ್ಷ ನಹ್ಯಾನ್ ಸ್ವತಃ ಅಬುಧಾಬಿ ವಿಮಾನ ನಿಲ್ದಾಣದಲ್ಲಿ ಮೋದಿಯವರನ್ನು ಬರಮಾಡಿಕೊಂಡರು. ವಿಶೇಷ ಗೌರವ ಸೂಚಕವಾಗಿ, ಮೋದಿ ವಿಮಾನಕ್ಕೆ ಯುಎಇ ಸೇನಾ ಯುದ್ಧ ವಿಮಾನಗಳು ಎಸ್ಕಾರ್ಟ್ ನೀಡಿದವು.

ರಕ್ಷಣಾ ಕ್ಷೇತ್ರದಲ್ಲಿ ಸಹಕಾರ

ರಕ್ಷಣಾ ಕೈಗಾರಿಕಾ ಸಹಕಾರ ಕೊಂಡಿಯ ಬಲವರ್ಧನೆ, ಆವಿಷ್ಕಾರ ಮತ್ತು ತಂತ್ರಜ್ಞಾನ ವಿನಿಮಯಗಳಿಗೆ ಒತ್ತು, ರಾಷ್ಟ್ರೀಯ, ವಲಯವಾರು ಭದ್ರತೆ ಬಲಪಡಿಸುವ ಆಶಯದ ನಿರ್ಣಾಯಕ ರಕ್ಷಣಾ ಪಾಲುದಾರಿಕೆ ಒಪ್ಪಂದಕ್ಕೆ ಉಭಯ ನಾಯಕರು ಸಹಿಹಾಕಿದ್ದಾರೆ.

ತೈಲ ಉಳಿಕೆಗೆ ಸುಪ್ರೀಂ ಸಾಥ್

• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಉದ್ವಿಗ್ನತೆ ಹಿನ್ನೆಲೆ ಉಂಟಾದ ಆರ್ಥಿಕ ಕುಸಿತವನ್ನು ಎದುರಿಸಲು ಇಂಧನ ಉಳಿತಾಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಕರೆಗೆ ಓಗೊಟ್ಟ ಸುಪ್ರೀಂ ಕೋರ್ಟ್, ವಾರದಲ್ಲಿ 2 ದಿನ (ಸೋಮವಾರ ಮತ್ತು ಶುಕ್ರವಾರ) ಸಂಪೂರ್ಣ ವರ್ಚುವಲ್ ವಿಚಾರಣೆನಡೆಸಲು ನಿರ್ಧರಿಸಿದೆ. ವಾರಕ್ಕೆ ಎರಡು ದಿನ ವರ್ಚುವಲ್ ವಿಚಾರಣೆ ಯಲ್ಲದೆ, ಉಳಿದ ದಿನಗಳಲ್ಲಿ (ಮಂಗಳವಾರದಿಂದ ಗುರುವಾರದವರೆಗೆ) ಹೈಬ್ರಿಡ್ ಮೋಡ್ ವಿಚಾರಣೆ ನಡೆಸುವುದಾಗಿ ನ್ಯಾಯಾಲಯ ಹೇಳಿದೆ. ಪರಿಷ್ಕೃತ ವ್ಯವಸ್ಥೆಯಲ್ಲಿ ಎಲ್ಲಾ ವಿಚಾರಣೆಗಳು, ಸೋಮವಾರ ಮತ್ತು ಶುಕ್ರವಾರ ಆನ್‌ಲೈನ್‌ನಲ್ಲೇ ನಡೆಸಲಾಗುವುದು. ➡ಪುಟ ೪



ವಾರದಲ್ಲಿ ಎರಡು ಬಾರಿ ವರ್ಚುವಲ್ ವಿಚಾರಣೆ



ಜೂನ್ 30ಕ್ಕೆ ಮನೆ ಮನೆ ಭೇಟಿ ಪ್ರಕ್ರಿಯೆಗೆ ಚಾಲನೆ

ರಾಜ್ಯದಲ್ಲಿ ಎಸ್‌ಐಆರ್‌ಗೆ ಸಿದ್ಧತೆ

• **ಬೆಂಗಳೂರು:** ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಗೆ ಚುನಾವಣಾ ಆಯೋಗವು ಸಜ್ಜಾಗಿದೆ. ಜೂನ್ 30ರಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಭೇಟಿ ನೀಡುವ ಪ್ರಕ್ರಿಯೆ ಅಧಿಕೃತವಾಗಿ ಆರಂಭವಾಗಲಿದೆ.

ರಾಜ್ಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಮಾಧ್ಯಮ ಗೋಷ್ಠಿ ನಡೆಸಿದ ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಈ ಕುರಿತು ವಿವರಗಳನ್ನು ನೀಡಿದರು.



ಯಾವುದೇ ಅರ್ಹ ಮತದಾರ ಪಟ್ಟಿಯಿಂದ ಹೊರಗುಳಿಯಬಾರದು, ಇದಕ್ಕಾಗಿ ಬಿಎಲ್‌ಒಗಳಿಂದ ಹಿಡಿದು ಜಿಲ್ಲಾಧಿಕಾರಿಗಳವರೆಗೆ ಬೃಹತ್ ಪಡೆ ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಚುನಾವಣಾ ಆಯೋಗದ ಸೂಚನೆಯಂತೆ ರಾಜ್ಯದಲ್ಲಿ ಎಸ್‌ಐಆರ್‌ಗೆ ತಯಾರಿ ನಡೆಸಲಾಗಿದೆ. ರಾಜ್ಯದಲ್ಲಿ 2026 ಮೇ 12ರಂತೆ 5,55,74,064 ಮತದಾರರು ವಿಶೇಷ ತೀವ್ರ ಪರಿಷ್ಕರಣೆ ಒಳಗೊಂಡಿದ್ದಾರೆ. ಅದರಲ್ಲಿ 4,80,39,560 ಮತದಾರರ ಮ್ಯಾಪಿಂಗ್ ಪೂರ್ಣವಾಗಿದೆ. ಅಂದರೆ ಶೇ.86.46 ರಷ್ಟು ಮ್ಯಾಪಿಂಗ್ ಕಾರ್ಯ ಮುಗಿದಿದೆ. ➡ಪುಟ ೪



ಕಾರ್ಯಪಡೆ ಸನ್ನದ್ಧ

ರಾಜ್ಯದಲ್ಲಿ 59,050 ಬಿಎಲ್‌ಒಗಳು ಪರಿಷ್ಕರಣೆ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಪ್ರತಿ 10 ಬಿಎಲ್‌ಒಗಳಿಗೆ ಒಬ್ಬ ಮುಖ್ಯಸ್ಥರಂತೆ 5,905 ಅಧಿಕಾರಿಗಳನ್ನು ನೇಮಿಸಲಾಗಿದೆ. ಅಲ್ಲದೆ 336 ಎಇಆರ್‌ಒ, 224 ಇಆರ್‌ಒ, 31 ಇಆರ್‌ಒ, 4 ಸಹಾಯಕ ಇಆರ್‌ಒಗಳನ್ನು ನೇಮಿಸಲಾಗಿದೆ. ➡ಪುಟ ೪

ಜೂ.21ಕ್ಕೆ ನೀಟ್ ಮರುಪರೀಕ್ಷೆ

• **ಹೊಸದಿಲ್ಲಿ:** ನೀಟ್-ಯುಜಿ ಮರುಪರೀಕ್ಷೆಯನ್ನು ಜೂ.21ರಂದು ನಡೆಸಲಾಗುವುದು ಎಂದು ಕೇಂದ್ರ ಶಿಕ್ಷಣ



ಸಚಿವ ಧರ್ಮೇಂದ್ರ ಪ್ರಧಾನ್ ಅವರು ಶುಕ್ರವಾರ ಘೋಷಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಅಕ್ರಮಗಳ ಆರೋಪಗಳ ದೃಷ್ಟಿಯಿಂದ ಸುಧಾರಣೆಗಳ ಭಾಗವಾಗಿ ಮುಂದಿನ ವರ್ಷದಿಂದ ವೈದ್ಯಕೀಯ ಪ್ರವೇಶ ಪರೀಕ್ಷೆಯು ಕಂಪ್ಯೂಟರ್ ಆಧಾರಿತ ಪರೀಕ್ಷೆಯಾಗಲಿದೆ ಎಂದು ಹೇಳಿದರು. ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಪ್ರಧಾನ್, ಸರ್ಕಾರದ ಅತ್ಯುನ್ನತ ಆದ್ಯತೆ ಎಂದರೆ ವಿದ್ಯಾರ್ಥಿಗಳು ಮತ್ತು ಅವರ ಭವಿಷ್ಯ ಎಂದು ಹೇಳಿದರು. ➡ಪುಟ ೪

ಮುಂದಿನ ವರ್ಷದಿಂದ ಕಂಪ್ಯೂಟರ್ ಆಧಾರಿತ ವ್ಯವಸ್ಥೆ

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,90,000 (3,00,000) ಅಪರಂಜಿ ಚಿನ್ನ: 1,57,910 (1,62,330) ಆಭರಣ ಚಿನ್ನ: 1,44,750 (1,48,800) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,237 (160↓) ಎನ್‌ಎಸ್‌ಇ 23,643 (46↓)

$1 = ₹95.71

ಕಿರುಸುದ್ದಿ



ಹುಬ್ಬಳ್ಳಿ: ದಿ. ಗುದ್ಲೆಪ್ಪ ಹಳ್ಳಿಕೇರಿ ಅವರ ಪುಣ್ಯತಿಥಿ ಅಂಗವಾಗಿ ಮಹಾನಗರ ಪಾಲಿಕೆ ವತಿಯಿಂದ ನಗರದ ಇಂದಿರಾ ಗಾಜಿನ ಮನೆಯಲ್ಲಿರುವ ಅವರ ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಲಾಯಿತು.

ಜಾನಪದ ಸಂಭ್ರಮ ಇಂದು

ಧಾರವಾಡ: ನಗರದ ಮರಾಠಾ ವಿದ್ಯಾ ಪ್ರಸಾರಕ ಮಂಡಳದ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ಕಲಾ-ವಾಣಿಜ್ಯ, ವಿಜ್ಞಾನ ಪದವಿ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಹಳ್ಳಿ ಸೊಗಡಿನ ಜಾನಪದ ಸಂಭ್ರಮ ಮೇ 16ರ ಬೆಳಗ್ಗೆ 10.30ಕ್ಕೆ ಕಾಲೇಜಿನ ಆವರಣದಲ್ಲಿ ನಡೆಯಲಿದೆ. ವಿದ್ಯಾರ್ಥಿಗಳ ಪೂರ್ಣಕುಂಭ ಹಾಗೂ ಜೋಡೆತ್ತಿನ ಮೆರವಣಿಗೆ, ಹಳ್ಳಿಯ ಜಾನಪದ ಹಬ್ಬಗಳ ವೈಭವ ಗಮನ ಸೆಳೆಯಲಿದೆ. ಈ ಕಾರ್ಯಕ್ರಮಕ್ಕೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಡಾ.ಪಾರ್ವತೆವ್ವ ಸಿದ್ದಪ್ಪ ಹೊಂಗಲ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಮಂಡಳದ ಪದಾಧಿಕಾರಿಗಳು, ಸಮಾಜದ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಾಚಾರ್ಯರಾದ ಪ್ರೊ. ಎಂ.ಎಸ್.ಗಾಣಿಗೇರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಬೃಹತ್ ರಕ್ತದಾನ ಶಿಬಿರ

ಹುಬ್ಬಳ್ಳಿ: ರಾಷ್ಟ್ರೀಯ ಸ್ವಯಂಸೇವಕ ಸಂಘ, ನವೀನ ಪಾರ್ಕ್ ನಿವಾಸಿಗಳ ಸಂಘ ಹಾಗೂ ರಾಷ್ಟ್ರೋತ್ಥಾನ ರಕ್ತ ಕೇಂದ್ರ ಸಹಯೋಗದಲ್ಲಿ ಮೇ 17ರಂದು ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ರ ವರೆಗೆ ನವೀನ ಪಾರ್ಕ್‌ನ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಶಿಬಿರ ನಡೆಯಲಿದೆ ಎಂದು ರಕ್ತ ಕೇಂದ್ರ ಸಂಚಾಲಕ ದತ್ತ ಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.

ಪುಸ್ತಕ ಬಿಡುಗಡೆ ನಾಳೆ

ಹುಬ್ಬಳ್ಳಿ: ನಗರದ ಸಪ್ನಾ ಬುಕ್ ಹೌಸ್ ವತಿಯಿಂದ ಮೇ 17ರಂದು ಬೆಳಗ್ಗೆ 11 ಗಂಟೆಗೆ ಧಾರವಾಡ ಜುಬಿಲಿ ವೃತ್ತದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಧುರಂಧರರ ಬದುಕುಗಳನ್ನಾಧರಿಸಿದ ಖ್ಯಾತ ಬರಹಗಾರ ಹಾಗೂ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಡಾ.ಡಿ.ವಿ. ಗುರುಪ್ರಸಾದ ಅವರ ಸಂಗ್ರಹಿಸಿ ಬರೆದ ಪಾರ್ಕ್‌ನಲ್ಲಿ ನಮ್ಮ ಧುರಂಧರರು ಎಂಬ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ಡಿವಾನ್ಸ್ ಮುಖ್ಯ ಆಡಳಿತಾಧಿಕಾರಿ ಮೇಜರ್ ಸಿದ್ಧಲಿಂಗಯ್ಯ ಹಿರೇಮಠ ಪುಸ್ತಕ ಲೋಕಾರ್ಪಣೆ ಮಾಡಲಿದ್ದಾರೆ. ಅಂದು ಸಂಜೆ 6 ಗಂಟೆಗೆ ಹುಬ್ಬಳ್ಳಿ ಲಕ್ಷ್ಮೀ ಮಾಲ್ ಸಪ್ನಾ ಬುಕ್ ಹೌಸ್‌ನಲ್ಲಿ ಅದೇ ಪುಸ್ತಕವನ್ನು ಉದ್ಯಮಿ ವಿಜಯ ಸಂಕೇಶ್ವರ ಅವರು ಬಿಡುಗಡೆ ಮಾಡಲಿದ್ದಾರೆ ಎಂದು ಬುಕ್ ಹೌಸ್ ಪ್ರಕಟಣೆಗೆ ತಿಳಿಸಿದೆ.

ನಾಳೆ ಅಧಿಕ ಮಾಸದ ಕಾರ್ಯಕ್ರಮ

ಹುಬ್ಬಳ್ಳಿ: ನಗರದ ತೊರವಿ ಗಲ್ಲಿಯ ರಾಘವೇಂದ್ರ ಸ್ವಾಮಿ ಮಠದಲ್ಲಿ ಮೇ 17 ರಿಂದ ಜೂನ್ 15 ರ ವರೆಗೆ ಸಂಜೆ 4 ಗಂಟೆಗೆ ಅಧಿಕ ಮಾಸದ ಕಾರ್ಯಕ್ರಮ ನಡೆಯಲಿದೆ. 33 ದೇವರ ನಾಮ 33 ಪ್ರದಕ್ಷಿಣೆ ಹಾಗೂ 33 ನಮಸ್ಕಾರ ಹಾಕಲಾಗುವುದು. ಮೇ 17ರಂದು ಬೆಳಗ್ಗೆ 9.30ಕ್ಕೆ ತೊರವಿ ಗಲ್ಲಿಯ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ದೊಡ್ಡ ಗೌರಿಯನ್ನು ಕೊಡಿಸಲಾಗುವುದು ಭಗವದ್ಗೀತಾ ಭಜನಾ ಮಂಡಳಿಯ ಅಧ್ಯಕ್ಷೆ ಸುರೇಖಾ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಬ್ಬಳ್ಳಿ: ಇತ್ತೀಚೆಗೆ ಕಳ್ಳತನವಾದ ಇಲ್ಲಿಯ ಹೊಸೂರು ವೃತ್ತದಲ್ಲಿರುವ ಜೈನ ಮಂದಿರಕ್ಕೆ ಶಾಸಕ ಮಹೇಶ ಟೆಂಗಿನಕಾಯಿ ಭೇಟಿ ನೀಡಿ ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದರು. ಅಪರಾಧ ವಿಭಾಗ ಡಿಸಿಪಿ ರವೀಶ್ ಆರ್., ಜೈನ ಮುಖಂಡ ಮಹೇಂದ್ರ ಸಿಂಘಿ, ಪಾಲಿಕೆ ಸದಸ್ಯೆ ಮೀನಾಕ್ಷಿ ವಂಟಮುರಿ, ಪ್ರಕಾಶ್ ಬಾಪನಾ, ಪ್ರವೀಣ ಪವಾರ್, ಮಂಜುನಾಥ್ ಊಟವಾಲೆ, ವಿದ್ಯಾನಗರ ಪಿಎಸ್‌ಐ ಸುನೀಲ ಇದ್ದರು.

ಸನಾತನ ಸಂಸ್ಕಾರ ತರಬೇತಿ ಶಿಬಿರ ಯಶಸ್ವಿ

ಹುಬ್ಬಳ್ಳಿ: ಇಲ್ಲಿಯ ಬೆಂಗೇರಿಯ ಗಾಯತ್ರಿ ದೇವಿ ದೇವಸ್ಥಾನದಲ್ಲಿ ಸನಾತನ ಸಂಸ್ಕಾರ ತರಬೇತಿ ಶಿಬಿರ ಐದು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.

ಇಂದಿನ ಯುವ ಪೀಳಿಗೆಯಲ್ಲಿ ಹೆಚ್ಚುತ್ತಿರುವ ಪಾಶ್ಚಾತ್ಯ ಪ್ರಭಾವ, ಧರ್ಮ ಶಿಕ್ಷಣದ ಅಭಾವ ಹಾಗೂ ಸಂಸ್ಕಾರ ಕುಸಿತದ ಹಿನ್ನೆಲೆ ಮಕ್ಕಳಲ್ಲಿ ಹಿಂದೂ ಧರ್ಮದ ಜ್ಞಾನ, ಸಂಸ್ಕಾರ, ರಾಷ್ಟ್ರಭಕ್ತಿ ಮತ್ತು ಸ್ವಾಭಿಮಾನವನ್ನು ಜಾಗೃತಗೊಳಿಸಲಾಯಿತು.

9 ವರ್ಷದಿಂದ 15 ವರ್ಷದ ಮಕ್ಕಳಿಗಾಗಿ ಉಚಿತವಾಗಿ ಆಯೋಜಿಸಲಾದ ಶಿಬಿರದಲ್ಲಿ ಮಕ್ಕಳು ಉತ್ಸಾಹದಿಂದ ಭಾಗವಹಿಸಿದ್ದರು. ಮಕ್ಕಳಿಗೆ ಹಿಂದೂ ಧರ್ಮದ ಸಂಸ್ಕಾರಗಳನ್ನು ತಿಳಿಸುವುದು. ಶ್ಲೋಕ ಪಠಣ, ದೇವತೆಗಳು, ಮಹಾಪುರುಷರು, ಹಿಂದೂಗಳ ತೇಜಸ್ವಿ ಇತಿಹಾಸ, ಹಿಂದೂ ವಿಜ್ಞಾನಿಗಳು ಮತ್ತು ಋಷಿಮುನಿಗಳ ಬಗ್ಗೆ ಮಾಹಿತಿ ನೀಡಿ ಮಕ್ಕಳಲ್ಲಿ ಧರ್ಮ ಮತ್ತು ರಾಷ್ಟ್ರದ ಬಗ್ಗೆ ಅಭಿಮಾನ ಮೂಡಿಸುವುದು. ಮಕ್ಕಳ ಜ್ಞಾನ ವೃದ್ಧಿಗಾಗಿ ರಸಪ್ರಶ್ನೆಗಳು, ಸಾತ್ವಿಕ ಚಿತ್ರಕಲೆ ಮತ್ತು ಶುದ್ಧವಾಗಿ ಪ್ರಾದೇಶಿಕ ಭಾಷೆಗಳನ್ನು ಓದುವ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಪಾಲಕರಿಗೂ ಅವರ ಜವಾಬ್ದಾರಿಗಳನ್ನು ತಿಳಿಸಿ, ಮಕ್ಕಳಿಗೆ ಸಂಸ್ಕಾರಗಳನ್ನು ಕಲಿಸುವುದರ ಮಹತ್ವವನ್ನು ಮನವರಿಕೆ ಮಾಡಿಕೊಡಲಾಯಿತು. ಈ ಶಿಬಿರ ಯಶಸ್ವಿಯಾಗಲು ಸಹಕರಿಸಿದ ಎಲ್ಲಾ ಕಾರ್ಯಕರ್ತರು, ಪೋಷಕರು, ದೇವಸ್ಥಾನದ ವ್ಯವಸ್ಥಾಪಕರು ಹಾಗೂ ಭಾಗವಹಿಸಿದ ಮಕ್ಕಳಿಗೆ ಸನಾತನ ಸಂಸ್ಥೆ ವತಿಯಿಂದ ಅಭಿನಂದನೆಯನ್ನು ಸಲ್ಲಿಸಲಾಯಿತು.



ಹುಬ್ಬಳ್ಳಿ: ಇಲ್ಲಿಯ ಬೆಂಗೇರಿಯ ಗಾಯತ್ರಿ ದೇವಿ ದೇವಸ್ಥಾನದಲ್ಲಿ ಸನಾತನ ಸಂಸ್ಕಾರ ತರಬೇತಿ ಶಿಬಿರ ಐದು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.

ಹದಿಹರೆಯದಲ್ಲಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಿ: ಡಾ. ಸಂಜೀವ

ಸೂಕ್ತ ಮಾರ್ಗದರ್ಶನ ಅಗತ್ಯ

ಕುಂದಗೋಳ: ಹದಿಹರೆಯವು ವಿದ್ಯಾರ್ಥಿ ಜೀವನದ ಮಹತ್ವದ ಸಂಕ್ರಮಣ ಕಾಲವಾಗಿದ್ದು, ಈ ಅವಧಿಯಲ್ಲಿ ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದು ಧಾರವಾಡದ ಕ.ವಿ.ವ ಸಂಘದ ಉಪಾಧ್ಯಕ್ಷ ಡಾ. ಸಂಜೀವ ಕುಲಕರ್ಣಿ ಹೇಳಿದರು.

ತಾಲೂಕಿನ ಗುಡಗೇರಿ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪ ಆಯೋಜಿಸಿದ್ದ 'ಹದಿಹರೆಯದ ಸಮಸ್ಯೆಗಳು ಹಾಗೂ ಪರಿಹಾರೋಪಾಯ' ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಹದಿಹರೆಯದಲ್ಲಿ ವಿದ್ಯಾರ್ಥಿಗಳಲ್ಲಿ ಭಾವನಾತ್ಮಕ, ದೈಹಿಕ ಹಾಗೂ ಮಾನಸಿಕ ಬದಲಾವಣೆಗಳು ಸಹಜವಾಗಿಯೇ ಉಂಟಾಗುತ್ತವೆ. ಈ ಸಂದರ್ಭದಲ್ಲಿ ಸಿಟ್ಟು, ಆತಂಕ, ಖಿನ್ನತೆ, ಹತಾಶೆ ಸೇರಿದಂತೆ ವಿವಿಧ ಮನೋಭಾವಗಳು ಕಾಣಿಸಿಕೊಳ್ಳುತ್ತವೆ. ಕನಸುಗಳು ನನಸಾಗದಿದ್ದರೆ ಕೆಲವರು ದುಶ್ಚಟಗಳಿಗೆ ಒಳಗಾಗುವ ಸಾಧ್ಯತೆಯೂ ಇರುತ್ತದೆ. ಸಮೂಹ ಮಾಧ್ಯಮಗಳ ಪ್ರಭಾವದಿಂದ ಓದಿನ ಮೇಲೆ ಏಕಾಗ್ರತೆ ಕಡಿಮೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಪೋಷಕರು ಮತ್ತು ಶಿಕ್ಷಕರು ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ಹೇಳಿದರು.

ಕಾಲೇಜಿನ ಸಿಡಿಸಿ ಉಪಾಧ್ಯಕ್ಷ ಅಪ್ಪಣ್ಣ ಹುಂಡೇಕಾರ ಕಾರ್ಯಕ್ರಮ ಉದ್ಘಾಟಿಸಿದರು. ಕಾಲೇಜಿನ ಪ್ರಾಚಾರ್ಯ ಪ್ರೊ. ಗಂಗಾಧರ ಗುಮ್ಮಗೋಳಮಠ ಅಧ್ಯಕ್ಷತೆ ವಹಿಸಿ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘ ನಾಡಿನ ಹೆಮ್ಮೆಯ ಸಂಸ್ಥೆಯಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿದೆ ಎಂದರು.

ವೈ.ಎಚ್. ಬೀರಣ್ಣವರ ಸ್ವಾಗತಿಸಿದರು. ಶಿಕ್ಷಣ ಮಂಟಪ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಸಿದರು ಡಾ. ಭೀಮೇಶ ಯರಡೋಣಿ ನಿರೂಪಿಸಿದರು. ಬಿ.ಸಿ.ಅಮಾತಿ ವಂದಿಸಿದರು.



ಸಾಮರ್ಥ್ಯ ಬೆಳೆಸಿಕೊಳ್ಳಿ

ವಿದ್ಯಾರ್ಥಿಗಳು ಯಾವುದೇ ಸಮಸ್ಯೆ ಎದುರಾದರೂ ಧೈರ್ಯ ಕಳೆದುಕೊಳ್ಳದೆ ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಉತ್ತಮ ಹವ್ಯಾಸಗಳನ್ನು ಅಳವಡಿಸಿಕೊಂಡು ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸಂಶಿಯ ಕೆ.ಎಲ್.ಇ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ರಮೇಶ ಅತ್ತಿಗೇರಿ ಸಲಹೆ ನೀಡಿದರು.

> **ಹದಿಹರೆಯವು ವಿದ್ಯಾರ್ಥಿ ಜೀವನದ ವಸಂತಕಾಲವಾಗಿದ್ದು, ವಿದ್ಯಾರ್ಥಿಗಳು ಸಮಾಜಕ್ಕೆ ಉಪಯುಕ್ತ ವ್ಯಕ್ತಿಗಳಾಗಿ ಬೆಳೆಯಬೇಕು.**
> ■ **ಶಂಕರ ಹಲಗತ್ತಿ, ಕ.ವಿ.ವ ಸಂಘದ ಪ್ರಧಾನ ಕಾರ್ಯದರ್ಶಿ**

- ಯುವಕರು ದುಶ್ಚಟದಿಂದ ದೂರವಿರಲಿ
- ಓದಿನ ಮೇಲೆ ಏಕಾಗ್ರತೆ ಹೆಚ್ಚಲಿ
- ಮನೋಭಾವನೆಗಳ ಮೇಲೆ ಹಿಡಿತವಿರಲಿ

ಕಾರ್ಯಕ್ರಮದಲ್ಲಿ ಶಂಭಯ್ಯ ಹಿರೇಮಠ, ಡಾ. ಹನುಮಂತ ಕಲ್ಲೋಳಿಕರ, ದೇವರಾಜು, ಚೇತನಾ, ಡಾ. ಸಂಗಮೇಶ ಬಸರಕೋಡ, ಮೆಹಬೂಬ ಶೇಖ, ವೀರೇಶ ಶಹಪೂರಕರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಓದಿನಿಂದ ಆತ್ಮವಿಶ್ವಾಸ ವೃದ್ಧಿ: ನರಸಿಂಹಮೂರ್ತಿ ಪ್ಯಾಟಿ

ಧಾರವಾಡ: ಓದು ಎಲ್ಲದಕ್ಕೂ ಬಹುಮುಖ್ಯ. ಓದುಗಾರಿಕೆಯ ಹವ್ಯಾಸವು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಆತ್ಮವಿಶ್ವಾಸದಿಂದ ಅದ್ಭುತ ಮಾತುಗಾರಿಕೆ ಸಾಧ್ಯ. ವಿದ್ಯಾರ್ಥಿಗಳು ಅಧ್ಯಯನಶೀಲರಾಗಿ, ಬಹುಮುಖ ಕೌಶಲ್ಯಗಳನ್ನು ಕಲಿತುಕೊಳ್ಳಬೇಕು ಎಂದು ಟಿವಿ ಪತ್ರಕರ್ತ ನರಸಿಂಹಮೂರ್ತಿ ಪ್ಯಾಟಿ ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ಶುಕ್ರವಾರ ಹಮ್ಮಿಕೊಂಡ ಸಂವಹನ ಕೂಟದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಟಿವಿ ವರದಿಗಾರಿಕೆ ತಂತ್ರಗಳು ಎಂಬ ವಿಷಯದ ಕುರಿತು ಅವರು ಮಾತನಾಡಿದರು. ಮಾಧ್ಯಮ ಜಗತ್ತಿನಲ್ಲಿ ತೀಕ್ಷ್ಣಮತಿಗಳಾಗಿರುವುದು ಆವಶ್ಯಕ. ಅಂದಿನ ವಿಷಯಗಳ ಕುರಿತು ಆ ದಿನವೇ ತಿಳಿದುಕೊಂಡಿರಬೇಕು. ಕಾರ್ಯಕ್ಷೇತ್ರವು ಪ್ರಾಯೋಗಿಕ ಜ್ಞಾನ ನೀಡುತ್ತದೆ. ಅದರ ಜೊತೆಗೆ ಪರಿಪೂರ್ಣತೆ ಸಾಧಿಸಲು ಮನೆಯಲ್ಲಿ ಅಭ್ಯಸಿಸುವುದು ತೀರಾ ಅಗತ್ಯ. ಸ್ನೇಹಿತರೊಂದಿಗೆ ವಿಷಯದ ಕುರಿತು ಚರ್ಚಿಸಿ, ಮೌಲ್ಯಮಾಪನ ಮಾಡಿಕೊಂಡು ಕಲಿಯುವುದು ಪರಿಣಾಮಕಾರಿಯಾಗಿದೆ ಎಂದರು.

ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ ಪ್ರೊ. ಜೆ. ಎಂ. ಚಂದುನವರ ಮಾತನಾಡಿ, ಮಾಧ್ಯಮ ಎಂಬುದು ಒಂದು ವಿಶಾಲ ಜಗತ್ತು. ಇದರಲ್ಲಿ ನಿರೂಪಣೆ, ವರದಿಗಾರಿಕೆಯ ಹೊರತಾಗಿಯೂ ಅನೇಕ ಉದ್ಯೋಗ ಅವಕಾಶಗಳಿದ್ದು, ಅವುಗಳ ಕಡೆಗೆ ಲಕ್ಷ್ಯ ಕೊಡಬೇಕು. ವಿದ್ಯಾರ್ಥಿಗಳು ಸಾಹಿತ್ಯವನ್ನು ಓದಿಕೊಂಡು, ಬರವಣಿಗೆ ಕೌಶಲ್ಯ ಹೆಚ್ಚಿಸಿಕೊಳ್ಳಬೇಕು. ಡಿಜಿಟಲೀಕರಣದ ಪರಿಕಲ್ಪನೆಯನ್ನು ಅರಿತುಕೊಂಡು, ಅದಕ್ಕೆ ತಕ್ಕಂತೆ ಕಾರ್ಯಪ್ರವೃತ್ತರಾಗಬೇಕು. ವಿದ್ಯೆಗೆ ವಿನಯವೇ ಭೂಷಣ. ಹಾಗಾಗಿ ವಿದ್ಯಾರ್ಥಿಗಳು ವಿನಯವನ್ನು ರೂಢಿಸಿಕೊಂಡರೆ ಜೀವನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯ ಎಂದರು.

ಡಾ. ಚಿದಾನಂದ ಸಾಲಿ, ಜೀ ಟಿವಿ ವರದಿಗಾರ ವಿಠ್ಠಲ ಕರಡಿಗುಡ್ಡ, ಪ್ರಾಧ್ಯಾಪಕ ಡಾ. ಮಂಜುನಾಥ ಅಡಿಗಲ್, ಡಾ. ವಿಶ್ವನಾಥ ಚಿಂತಾಮಣಿ, ವಿಭಾಗದ ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ದಿನೇಶ ಗೌಡ ಸ್ವಾಗತಿಸಿದರು. ಡ್ಯಾನಿಯಲ್ ಕೆ. ಪ್ರಾರ್ಥಿಸಿದರು. ಸಂಜನಾ ಕುಲಕರ್ಣಿ ಪರಿಚಯಿಸಿದರು. ಸಪ್ನಾ ಭಾಟಿ ನಿರೂಪಿಸಿದರು. ಪ್ರದೀಪ ಅಂಬಿಗೇರ ವಂದಿಸಿದರು.

ತೀವ್ರ ಬದಲಾವಣೆ

ಮಾಧ್ಯಮ ಕ್ಷೇತ್ರವು ತೀವ್ರಗತಿಯಲ್ಲಿ ಬದಲಾವಣೆ ಹೊಂದುತ್ತಿದ್ದು, ವಿದ್ಯಾರ್ಥಿಗಳು ಅದಕ್ಕನುಗುಣವಾಗಿ ತಯಾರಿ ನಡೆಸಬೇಕು. ಟಿವಿ ಜಗತ್ತಿನ ಹೊಸ ಲೋಕದ ವಿಷಯಗಳನ್ನು ವಿದ್ಯಾರ್ಥಿಗಳಿರುವಾಗಲೇ ತಿಳಿದುಕೊಂಡು, ಅವುಗಳನ್ನು ಅಳವಡಿಸಿಕೊಳ್ಳಬೇಕು ಎಂದು ವಿಭಾಗದ ಮುಖ್ಯಸ್ಥ ಪ್ರೊ. ಸಂಜಯಕುಮಾರ ಮಾಲಗತ್ತಿ ಹೇಳಿದರು.



ಓಲೈಕೆ ರಾಜಕಾರಣ ಸಲ್ಲ: ಸಂಕಲ್ಪ ಶೆಟ್ಟರ್

ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಾಲಾ – ಕಾಲೇಜುಗಳಲ್ಲಿ ಸಮವಸ್ತ್ರದ ಜೊತೆಗೆ ಹಿಜಾಬ್‌ಗೆ ಅವಕಾಶ ನೀಡುವ ಮೂಲಕ ನೀಡುತ್ತಿರುವ ಸಂದೇಶವೇನು? ಇದರಿಂದ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಹದಗೆಡುತ್ತದೆ. ಕಾಂಗ್ರೆಸ್ಸಿನ ಓಲೈಕೆ ರಾಜಕಾರಣದ ನಡೆ ಖಂಡನೀಯ ಎಂದು ಬಿಜೆಪಿ ಮುಖಂಡ ಸಂಕಲ್ಪ ಶೆಟ್ಟರ್ ಕಿಡಿಕಾರಿದ್ದಾರೆ.



ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ವಿದ್ಯಾರ್ಥಿಗಳಲ್ಲಿ ಸಮಾನತೆಯ ಅರಿವು ಮೂಡಿಸಲು ಸಮವಸ್ತ್ರವನ್ನು ಜಾರಿಗೊಳಿಸಲಾಗಿದ್ದು, ಮಕ್ಕಳ ಮನಸ್ಸಿನಲ್ಲಿ ನಾವೆಲ್ಲರೂ ಒಂದು ಎಂಬ ಭಾವನೆ ಮೂಡಿಸುವುದೇ ಇದರ ಮೂಲ ಉದ್ದೇಶ. ರಾಜ್ಯದ ಮುಖ್ಯಮಂತ್ರಿಗಳಾದವರು ಎಲ್ಲರನ್ನೂ ಸಮಾನತೆಯ ದೃಷ್ಟಿಯಿಂದ ನೋಡಬೇಕೇ ಹೊರತು ಕೇವಲ ಒಂದು ನಿರ್ದಿಷ್ಟ ಸಮುದಾಯವನ್ನು ಓಲೈಕೆ ಮಾಡುವುದು ಸರಿ ಅಲ್ಲ. ಸಚಿವ ಮಧು ಬಂಗಾರಪ್ಪ ಅವರಿಗೆ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಒದಗಿಸುವುದಕ್ಕಿಂತ ಸಮಾಜದಲ್ಲಿ ಕೋಮು ಗಲಭೆಗಳಾಗಿ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವ ಗುರಿಯಾಗಿದೆ ಎಂದು ದೂರಿದ್ದಾರೆ.

ಕೂಡಲೇ ಈ ನಿರ್ಧಾರದಿಂದ ರಾಜ್ಯ ಸರ್ಕಾರ ಹಿಂದೆ ಸರಿದರೆ ಒಳ್ಳೆಯದು. ವಿದ್ಯಾರ್ಥಿಗಳಲ್ಲಿ, ಪೋಷಕರಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಸಮಾಜದಲ್ಲಿ ಮತ್ತಷ್ಟು ಗೊಂದಲವನ್ನು ಸೃಷ್ಟಿಸುವುದು ಸರಿಯಲ್ಲ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮಕ್ಕಳಲ್ಲಿ ನಾವೆಲ್ಲರೂ ಸಮಾನರು ಎಂಬ ಭಾವನೆ ಮೂಡಿದರೆ ಅದು ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರವಾಗುತ್ತದೆ ಎಂದಿದ್ದಾರೆ.



ಧಾರವಾಡ: ಇಲ್ಲಿನ ಸವದತ್ತಿ ರಸ್ತೆಯಲ್ಲಿರುವ ಕೌಶಲ್ಯ ಐ.ಟಿ.ಐ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಅಗಸ್ತ್ಯಾ ಫೌಂಡೇಶನ್‌ನಿಂದ ಆಯೋಜಿಲಾಗಿದ್ದ 3 ದಿನಗಳ ಡಿಜಿಟಲ್ ಸ್ಕಿಲ್ಲಿಂಗ್ ಕಾರ್ಯಾಗಾರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಚಾರ್ಯ ರಾಹುಲ್ ಉಪಾಧ್ಯೆ, ರವಿ ದೇಸಾಯಿ, ಶ್ರೀನಾಥ ಮಡಿವಾಳರ, ಲಿಂಗರಾಜ ಹೆಡಿಯಾಳ ಉಪಸ್ಥಿತರಿದ್ದರು.

ಸತ್ಯ ಪ್ರತಿಪಾದನಾ ಹೋರಾಟ ಪ್ರಾರಂಭ



ಧಾರವಾಡ: ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಆಡಳಿತದಿಂದ ಧಾರವಾಡವನ್ನು ಮುಕ್ತಗೊಳಿಸಿ, ಪ್ರತ್ಯೇಕ ಮಹಾನಗರ ಪಾಲಿಕೆಯನ್ನು ಸ್ಥಾಪಿಸಬೇಕೆಂದು ಆಗ್ರಹಿಸಿ 'ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ವೇದಿಕೆ'ಯಿಂದ ಸತ್ಯ ಪ್ರತಿಪಾದನಾ ಹೆಸರಿನ ಹೋರಾಟ ಶುರುವಾಗಿದೆ.

ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದ ಎದುರು ಸಾಂಕೇತಿಕ ಧರಣಿ ಸತ್ಯಾಗ್ರಹ ನಡೆಸಿದ ಹೋರಾಟಗಾರರು ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಉಪವಾಸ ಸತ್ಯಾಗ್ರಹಕ್ಕೂ ಸಿದ್ಧ: ಧರಣಿಯನ್ನುದ್ದೇಶಿಸಿ ಮಾತನಾಡಿದ ಹೈಕೋರ್ಟ್ ವಕೀಲರ ಸಂಘದ ಅಧ್ಯಕ್ಷರಾದ ಬಿ. ಡಿ. ಹಿರೇಮಠ ಅವರು, ಧಾರವಾಡದ ಪ್ರತ್ಯೇಕ ಪಾಲಿಕೆಗಾಗಿ ನಮ್ಮ ಸಾಂಕೇತಿಕ ಧರಣಿ ಆರಂಭಗೊಂಡಿದೆ. ಸರ್ಕಾರ ಮತ್ತು ಜನಪ್ರತಿನಿಧಿಗಳು ನಮ್ಮ ನ್ಯಾಯಯುತ ಬೇಡಿಕೆಗೆ ತಕ್ಷಣ ಸಂದಿಸದಿದ್ದರೆ, ಮುಂದಿನ ದಿನಗಳಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳಲು ಸಹ ನಾವು ಸಿದ್ಧರಿದ್ದೇವೆ ಎಂದು ಎಚ್ಚರಿಕೆ ನೀಡಿದರು. ರಾಜ್ಯಪಾಲರು ಕೂಡಲೇ ಅಂಕಿತ ಹಾಕಲಿ: ಹಿರಿಯ ನಾಯಕರಾದ ವೀರಣ್ಣ ಮತ್ತಿಕಟ್ಟಿ ಮಾತನಾಡಿ, ಧಾರವಾಡದ ಅಭಿವೃದ್ಧಿ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರತ್ಯೇಕ ಪಾಲಿಕೆಯ ಅಗತ್ಯವಿದೆ. ಈ ಕುರಿತಾದ ಕಡತಕ್ಕೆ ರಾಜ್ಯಪಾಲರು ಯಾವುದೇ ವಿಳಂಬವಿಲ್ಲದೆ ಕೂಡಲೇ ಅಂಕಿತ ಹಾಕಬೇಕು ಎಂದು ಒತ್ತಾಯಿಸಿದರು. ವೇದಿಕೆಯ ಪ್ರಮುಖರಾದ ಮಹದೇವ ಹೊರಟ್ಟಿ ಮಾತನಾಡಿ, ಧಾರವಾಡದ ಜನತೆಗೆ ಯಾವುದೇ ಕಾರಣಕ್ಕೂ ಅನ್ಯಾಯ ಮಾಡಬೇಡಿ. ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿಯವರು ವೈಯಕ್ತಿಕ ಮುತವರ್ಜಿ ವಹಿಸಿ, ರಾಜ್ಯಪಾಲರಿಂದ ಕಡತಕ್ಕೆ ಅಂಕಿತ ಹಾಕಿಸುವ ಮೂಲಕ ಧಾರವಾಡದ ಜನರಿಗೆ ನ್ಯಾಯ ಒದಗಿಸಬೇಕು ಎಂದು ಪರೋಕ್ಷವಾಗಿ ಒತ್ತಾಯಿಸಿದರು. ಹೋರಾಟಗಾರ ಅರವಿಂದ ಏಗನಗೌಡರ, ದೀಪಕ ಚಿಂಚೋರಿ ಮಾತನಾಡಿದರು. ಸತ್ಯಾಗ್ರಹದಲ್ಲಿ ವಕೀಲರ ಸಂಘ, ಗಾಂಧಿ ಶಾಂತಿ ಪ್ರತಿಷ್ಠಾನ, ಅಂಜುಮನ್ ಇಸ್ಲಾಂ ಸಂಸ್ಥೆ, ಆಟೋ ಚಾಲಕರ ಸಂಘ, ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ, ಬಸವ ಶಾಂತಿ ಮಿಷನ್, ಡಿಎಸ್‌ಎಸ್, ಜೆಡಿಯು, ಪಕ್ಷ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸುವ ಮೂಲಕ ಬೆಂಬಲಿಸಿದರು. ಮುಖಂಡರಾದ ಗುರುರಾಜ ಹುಣಶಿಮರದ, ಮಾಜಿ ಮೇಯರ ದಾನಪ್ಪ ಕಬ್ಬೇರ, ಬಶೀರ ಅಹ್ಮದ ಜಹಗೀರದಾರ, ನಜೀರ ಅಹ್ಮದ ಮನಿಯಾರ, ಮನೋಜ ಪಾಟೀಲ, ವೆಂಕಟೇಶ ಮಾಚಕನೂರ, ಪಾಲಿಕೆ ಸದಸ್ಯ ರಾಜಶೇಖರ ಕಮತಿ, ಗೌರಮ್ಮ ಬಲೋಗಿ, ಬಾಳಣ್ಣ ಶೀಗಿಹಳ್ಳಿ, ಬಸವರಾಜ ಜಾಧವ, ಶ್ರೀಶೈಲಗೌಡ ಕಮತರ ಇದ್ದರು.

ನಾಳೆ ಚಲನಚಿತ್ರದ ಎರಡು ಹಾಡುಗಳ ಬಿಡುಗಡೆ

ಹುಬ್ಬಳ್ಳಿ: ನಟ ವಿಜಯ ರಾಘವೇಂದ್ರ ಅವರ ನಟನೆಯ ರುದ್ರಾಭಿಷೇಕಂ ಕನ್ನಡ ಚಲನಚಿತ್ರದ ಎರಡು ಹಾಡುಗಳು ಮೇ 17 ರಂದು ಸಂಜೆ 6ಕ್ಕೆ ಹುಬ್ಬಳ್ಳಿ ಸಿದ್ಧಾರೂಢಮಠದ ಆವರಣದಲ್ಲಿ ಬಿಡುಗಡೆಗೊಳ್ಳಲಿದೆ ಎಂದು ಸಿನಿಮಾ ಪಿಆರ್‌ಓ ಡಾ.ಪ್ರಭು ಗಂಜೀಹಾಳ್ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಟ ವಿಜಯ ರಾಘವೇಂದ್ರ ಅವರು ಮೊದಲ ಬಾರಿಗೆ ವೀರಭದ್ರೇಶ್ವರನ ಆರಾಧಕನಾಗಿ ಪ್ರಮುಖ ದ್ವಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂದರು. ಅಂದಿನ ಕಾರ್ಯಕ್ರಮದಲ್ಲಿ ನಟ ವಿಜಯ ರಾಘವೇಂದ್ರ, ನಟಿ ಪ್ರಿಯಾಂಕ ತಿಮ್ಮೇಶ್, ನಿರ್ದೇಶಕ ವಸಂತ್ ಕುಮಾರ್ ಸಂಗೀತ ನಿರ್ದೇಶಕ ವಿ.ಮನೋಹರ್, ನಟ ಬಲರಾಜ್ ವಾಡಿ ಹಾಗೂ ಚಿತ್ರತಂಡದ ಎಲ್ಲ ನಟ ನಟಿಯರು ತಂತ್ರಜ್ಞರು ಪಾಲ್ಗೊಳ್ಳಲಿದ್ದಾರೆ ಎಂದರು.

ಸಂಸದ ಜಗದೀಶ್ ಶೆಟ್ಟರ್ ಹಾಡನ್ನು ಬಿಡುಗಡೆಗೊಳಿಸುವರು. ಸಿದ್ಧಾರೂಢ ಮಠ ಟ್ರಸ್ಟ್ ಚೇರಮನ್ ಬಾಳು ಮಗಜಿಕೊಂಡಿ ಅಧ್ಯಕ್ಷತೆ, ಮುಖ್ಯ ಅತಿಥಿಗಳಾಗಿ ಮೇಯರ್ ಜ್ಯೋತಿ ಪಾಟೀಲ್, ಡಿಸಿಪಿ ಆರ್. ರವೀಶ್, ಎಸಿಪಿ ಉಮೇಶ ಚಿಕ್ಕಮಠ, ಹಿರಿಯ ಪತ್ರಕರ್ತ ಗಣಪತಿ ಗಂಗೊಳ್ಳಿ, ಹಳೆ ಹುಬ್ಬಳ್ಳಿ ಇನ್ಸಪೆಕ್ಟರ್ ಎಂ.ಎನ್. ಸಿಂದೂರ, ನಿವೃತ್ತ ಪ್ರಾಚಾರ್ಯ ಭರಮರೆಡ್ಡಿ ಪೂಜಾರ್, ಸಿದ್ಧಾರೂಢ ಮಠ ಟ್ರಸ್ಟ್ ಕಾರ್ಯದರ್ಶಿ ವಿನಾಯಕ ಘೋಡಕೆ ಭಾಗವಹಿಸುವರು ಎಂದರು.

ಈ ಸಿನಿಮಾದ ಎರಡು ಹಾಡುಗಳು ಇದೀಗ ಯುಟ್ಯೂಬನಲ್ಲಿ ಹಿಟ್ ಆಗಿವೆ. ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಮೊದಲಬಾರಿಗೆ ರುದ್ರಾಭಿಷೇಕಂ ಹಾಡಿನ ಕರೋಕೆ ಟ್ರ್ಯಾಕ್ ನಲ್ಲಿ ಹುಬ್ಬಳ್ಳಿಯ ಪ್ರಸಿದ್ಧ ಗಾಯಕರಾದ ರವೀಂದ್ರ ರಾಮದುರ್ಗಕರ್ ಹಾಗೂ ವಿಜಯಲಕ್ಷ್ಮಿ ಹಾಡನ್ನು ಪ್ರಸ್ತುತಪಡಿಸಲಿದ್ದಾರೆ ಎಂದು ತಿಳಿಸಿದರು.

ರವೀಂದ್ರ ರಾಮದುರ್ಗಕರ್, ಭರಮಗೌಡರ್ ಪೂಜಾರ್, ವಿನಯ್ ಪಾಟೀಲ್, ಫಯಾಜ್ ಇದ್ದರು.



ಸುಧಾರಿತ ಸಂಶೋಧನೆ, ಅಭಿವೃದ್ಧಿ ಪರಿಸರ ವ್ಯವಸ್ಥೆ ಸ್ಥಾಪನೆ

ಧಾರವಾಡ: ಏಕಸ್ ಗ್ರೂಪ್ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ – ಧಾರವಾಡ (ಐಐಟಿ-ಡಿ) ಜತೆಗೂಡಿ ಐಐಟಿ-ಡಿ ಕ್ಯಾಂಪಸ್‌ನಲ್ಲಿ ವಸ್ತು ವಿಜ್ಞಾನ(ಮೆಟೀರಿಯಲ್ ಸೈನ್ಸ್) ಮತ್ತು ಉತ್ಪಾದನಾ ನಾವೀನ್ಯತೆಯ ಸುಧಾರಿತ ಸಂಶೋಧನೆ ಮತ್ತು ಅಭಿವೃದ್ಧಿ ಪರಿಸರ ವ್ಯವಸ್ಥೆಯನ್ನು ಸ್ಥಾಪಿಸಿವೆ.

ಈ ಸೌಲಭ್ಯವು ಸುಧಾರಿತ ವಸ್ತುಗಳ ಗುಣಲಕ್ಷಣ, ವೈಫಲ್ಯ ವಿಶ್ಲೇಷಣೆ, ಉತ್ಪಾದನಾ ವಿಧಾನದ ಪ್ರತ್ಯನುಕರಣೆ (ಸಿಮ್ಯುಲೇಶನ್) ಮತ್ತು ಕಾರ್ಯಸಾಧು ಪರಿಣಾಮಕಾರಿತ್ವ (ಆಪ್ಟಿಮೈಸೇಷನ್) ಬೆಂಬಲಿಸಲು ಸಜ್ಜುಗೊಂಡಿದೆ. ಇದು ನಿಖರತೆ-ಚಾಲಿತ ಉತ್ಪಾದನಾ ಕ್ಷೇತ್ರಗಳಲ್ಲಿ ಆಳವಾದ ಉದ್ಯಮ-ಶೈಕ್ಷಣಿಕ ಸಹಭಾಗಿತ್ವವನ್ನು ಸಕ್ರಿಯಗೊಳಿಸುತ್ತದೆ.

ಈ ಬೆಳವಣಿಗೆ ಕುರಿತು ಪ್ರತಿಕ್ರಿಯೆ ನೀಡಿದ ಏಕಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಮತ್ತು ಸಿಇಒ ಅರವಿಂದ್ ಮೆಲ್ಲಿಗೇರಿ, ಈ ಪಾಲುದಾರಿಕೆಯು ಸಂಶೋಧನೆ, ನಾವೀನ್ಯತೆ ಮತ್ತು ಕೌಶಲ್ಯ ಅಭಿವೃದ್ಧಿಯಲ್ಲಿ ನಿರಂತರ ಹೂಡಿಕೆಗಳ ಮೂಲಕ ಭಾರತದ ಮುಂದುವರಿದ ಉತ್ಪಾದನಾ ಪರಿಸರ ವ್ಯವಸ್ಥೆ ಬಲಪಡಿಸುವ ಏಕಸ್‌ನ ದೀರ್ಘಕಾಲೀನ ಬದ್ಧತೆಯನ್ನು ಪ್ರತಿಬಿಂಬಿಸುತ್ತಿದೆ ಎಂದರು.



ಐಐಟಿ-ಧಾರವಾಡದ ನಿರ್ದೇಶಕ ಪ್ರೊ. ವೆಂಕಪ್ಪಯ್ಯ ಆರ್. ದೇಸಾಯಿ ಮಾತನಾಡಿ, ಈ ಸುಧಾರಿತ ವಸ್ತುಗಳ ಸಂಶೋಧನೆ ಮತ್ತು ಅಭಿವೃದ್ಧಿ ಸೌಲಭ್ಯವನ್ನು ಏಕಸ್ ನೊಂದಿಗೆ ಕಾರ್ಯಗತಗೊಳಿಸುವ ಈ ಸಹಭಾಗಿತ್ವವು ಐಐಟಿ-ಧಾರವಾಡದಲ್ಲಿ ಉದ್ಯಮ- ಸಂಯೋಜಿತ ಸಂಶೋಧನೆಯನ್ನು ಬಲಪಡಿಸುವಲ್ಲಿ ಒಂದು ದಿಟ್ಟ ಹೆಜ್ಜೆಯಾಗಿದೆ. ಈ ಸಹಭಾಗಿತ್ವದಿಂದ ನಮ್ಮ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ನೈಜ ಜಗತ್ತಿನ ಉತ್ಪಾದನಾ ಸವಾಲುಗಳಿಗೆ ನೇರವಾಗಿ ಒಡ್ಡಿಕೊಳ್ಳಲು ಸಾಧ್ಯವಾಗಲಿದೆ. ಅದೇ ಸಮಯದಲ್ಲಿ, ಹೆಚ್ಚಿನ ಪ್ರಭಾವ ಅಥವಾ ಪರಿಣಾಮ ಬೀರುವ ಕೈಗಾರಿಕಾ ನಾವೀನ್ಯತೆಗಳಿಗೆ ಅರ್ಥಪೂರ್ಣ ಕೊಡುಗೆಗಳನ್ನು ನೀಡುತ್ತದೆ ಎಂದರು. ಈ ಕೇಂದ್ರವು ವಸ್ತುಗಳ ನಡವಳಿಕೆ ಮತ್ತು ವೈಫಲ್ಯ ಕಾರ್ಯವಿಧಾನಗಳ ಬಗ್ಗೆ ವಿವರವಾದ ಒಳನೋಟಗಳನ್ನು ಸಕ್ರಿಯಗೊಳಿಸುತ್ತದೆ. ಸುಧಾರಿತ ಉತ್ಪನ್ನ ಗುಣಮಟ್ಟ, ಹೆಚ್ಚಿನ ವಿಶ್ವಾಸಾರ್ಹತೆ, ಕಡಿಮೆಯಾದ ವೈಫಲ್ಯ ದರಗಳು ಮತ್ತು ಹೆಚ್ಚು ಪರಿಣಾಮಕಾರಿ ಉತ್ಪಾದನಾ ಪ್ರಕ್ರಿಯೆಗಳಿಗೆ ಕೊಡುಗೆ ನೀಡುತ್ತದೆ. ವಿಶೇಷವಾಗಿ ಇದು ಹೆಚ್ಚಿನ ನಿಖರತೆ ಸೂಕ್ಷ್ಮ ಕೈಗಾರಿಕೆಗಳಿಗೆ ನಿರ್ಣಾಯಕವಾಗಿದೆ ಎಂದರು.

ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ ಅವಶ್ಯ

ಧಾರವಾಡ: ಈಗಿನ ಮಕ್ಕಳು ತುಂಬಾ ಬುದ್ಧಿವಂತರು. ಅಂತಹ ಮಕ್ಕಳಿಗೆ ಕೇವಲ ಪಠ್ಯವೊಂದೇ ಸೀಮಿತವಿರುವುದಿಲ್ಲ, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಕೂಡ ಬಹಳ ಅಗತ್ಯವಿರುತ್ತದೆ ಎಂದು ಭಾರತದ ಮಾನವ ಹಕ್ಕುಗಳ ಸಮಿತಿ ಸದಸ್ಯ ಹಾಗೂ ಜಿಲ್ಲಾ ಸಂಪನ್ಮೂಲ ಅಧಿಕಾರಿ ಡಾ. ಸುರೇಶ್ ಕಮ್ಮಾರ ಹೇಳಿದರು.

ಅವರು ಇಲ್ಲಿಯ ಯುವ ಡಾನ್ಸ್ ಅಕಾಡೆಮಿ ಕ.ವಿ.ವ. ಸಂಘದ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಆಯೋಜಿಸಿದ್ದ 'ಯುವ ಉತ್ಸವ-2026' ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ದೀಪಕ್ ಚಿಂಚೋರೆ ಮಾತನಾಡಿ, ನಮ್ಮ ಶರೀರವನ್ನು ಸದೃಢಗೊಳಿಸಲು ನೃತ್ಯ, ವ್ಯಾಯಾಮ ತುಂಬಾ ಆಗತ್ಯವಾದದ್ದು ಮತ್ತು ಮುಂಬರುವ ದಿನಗಳಲ್ಲಿ ಹಂಪಿ ಉತ್ಸವ ಬೇರೆ ಎಲ್ಲ ಉತ್ಸವದಲ್ಲೂ ಪಾಲ್ಗೊಳ್ಳಲು ಯುವ ಡಾನ್ಸ್ ಅಕಾಡೆಮಿಗೆ ನಮ್ಮಿಂದ ಅವಕಾಶ ಮತ್ತು ಎಲ್ಲ ರೀತಿಯ ಸಹಾಯ ಮಾಡುತ್ತೇವೆ ಎಂದರು.



ಶಿಕ್ಷಣ ತಜ್ಞ ಎಂ.ಎಂ. ಚಿಕ್ಕಮಠ ಮಾತನಾಡಿ, ಇಂದಿನ ದಿನಮಾನಗಳಲ್ಲಿ ಮಕ್ಕಳಿಗೆ ಬಿಪಿ, ಶುಗರ ಅಂತಹ ಕಾಯಿಲೆಗಳು ಚಿಕ್ಕ ವಯಸ್ಸಿನಲ್ಲಿಯೇ ಬರುತ್ತಿವೆ ಮತ್ತು ಎಲ್ಲ ಮಕ್ಕಳು ಮೊಬೈಲ್ ಫೋನ್‌ಗಳಿಗೆ ಬಲಿಯಾಗುತ್ತಿದ್ದಾರೆ. ಪಾಲಕರು ಇದರ ಬಗ್ಗೆ ಆದಷ್ಟು ಎಚ್ಚರದಿಂದ ಇರಬೇಕು ಎಂದರು. ಈಶ್ವರ್ ಶಿವಳ್ಳಿ ಮಾತನಾಡಿ, ಪ್ರತಿ ಮಕ್ಕಳಿಗೂ ಇಂತಹ ಒಂದು ವೇದಿಕೆಯನ್ನು ಒದಗಿಸುವುದು ತುಂಬಾ ಒಳ್ಳೆಯ ಕಾರ್ಯ ಎಂದರು. ಸವಿತಾ ಅಮರಶೆಟ್ಟಿ ಮಾತನಾಡಿ, ರಮೇಶ್ ಪಾಟೀಲ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎರಡುವರೆ ಮೂರು ವರ್ಷದ ಮಕ್ಕಳು ಕೂಡಾ ಫ್ಯಾಷನ್ ಶೋ ಮಾಡೋದು ಬಹಳ ಆಶ್ಚರ್ಯಕರವಾದದ್ದು ಎಂದರು. ಕೆಎಸ್‌ಪಿಎಸ್ ಪೊಲೀಸ್ ಆಯುಕ್ತ ಪ್ರಶಾಂತ ಸಿದ್ದನಗೌಡರ ಮಾತನಾಡಿ, ಬೇಸಿಗೆ ಶಿಬಿರಗಳು ಮಕ್ಕಳಿಗೆ ತುಂಬಾ ಅತ್ಯಗತ್ಯ.ಯುವ ಡ್ಯಾನ್ಸ್ ಅಕಾಡೆಮಿ ನಡೆಸುವ ಬೇಸಿಗೆ ಶಿಬಿರವು ತುಂಬಾ ವಿಭಿನ್ನವಾಗಿರುತ್ತದೆ ಎಂದರು. ಹಿರಿಯ ವರದಿಗಾರ ಪರಶುರಾಮ ಅಂಗಡಿ ಅತಿಥಿಯಾಗಿ ಭಾಗವಹಿಸಿದ್ದರು. ಡಾ. ಉಮೇಶ್ ಹಳ್ಳಿಕೇರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಯುವ ಉತ್ಸವ 2026 ಕಾರ್ಯಕ್ರಮದಲ್ಲಿ ಮಕ್ಕಳ ವೈವಿಧ್ಯಮಯ ಸಾಂಸ್ಕೃತಿಕ ಪ್ರತಿಭೋತ್ಸವ, ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಮತ್ತು ಕ್ಯಾನ್ಸರ್ ಪೀಡಿತ ಮಕ್ಕಳ ಧನ ಸಹಾಯಕ್ಕೆ ಹಣ ಸಂಗ್ರಹಿಸಲಾಯಿತು. ಯುವ ಡ್ಯಾನ್ಸ್ ಅಕ್ಯಾಡೆಮಿ ಹಿರಿಯ ವಿದ್ಯಾರ್ಥಿನಿ ವಿಜಯಲಕ್ಷ್ಮೀ ಮೇಸ್ತ್ರಿ ಪ್ರಾಸ್ತಾವಿಸಿದರು. ಅದೃಶ್ಯ ಕುರುಬಗಟ್ಟಿ ಸ್ವಾಗತಿಸಿ, ನಿರೂಪಿಸಿದರು. ಸುಸ್ಮಿತಾ ವಂದಿಸಿದರು. ಯುವ ಡಾನ್ಸ್ ಅಕಾಡೆಮಿಯ ಗೌರವಾಧ್ಯಕ್ಷೆ ರತ್ನಮ್ಮ ಪಾಟೀಲ್, ಕಾರ್ಯದರ್ಶಿ ಸೌಮ್ಯ ಪಾಟೀಲ್, ಬೇಸಿಗೆ ಶಿಬಿರದ ಶಿಕ್ಷಕರಾದ ರೇಣುಕಾ, ಸುಸ್ಮಿತಾ, ಕರಾಟೆ ಶಿಕ್ಷಕ ವಿಠ್ಠಲ್ ಕಟ್ಟಿಮನಿ, ಮಾರ್ಗದರ್ಶಕ ಉಳವಪ್ಪ ಹುಡೇದ್ ಉಪಸ್ಥಿತರಿದ್ದರು.

ಸಿಇಟಿ ಕೌನ್ಸಿಲಿಂಗ್ ಬಗ್ಗೆ ಚರ್ಚೆ

ಬೆಂಗಳೂರು: ಸಿಇಟಿ ಕೌನ್ಸಿಲಿಂಗ್ ಬಗ್ಗೆ ವೈದ್ಯಕೀಯ ಶಿಕ್ಷಣ ಸಚಿವರ ಜೊತೆ ಚರ್ಚಿಸಿ ತೀರ್ಮಾನಿಸುವುದಾಗಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2023 ರಿಂದ ನೀಟ್ ಮತ್ತು ಸಿಇಟಿಯ ಕೌನ್ಸಿಲಿಂಗ್ ಅನ್ನು ಒಟ್ಟಿಗೆ ಮಾಡುತ್ತ ಬಂದಿದ್ದೆವು. ಇದರಿಂದಾಗಿ ಪ್ರತಿಭಾವಂತರಿಗೆ ಅವಕಾಶ ಸಿಗುತ್ತಿತ್ತು. ಇದೀಗ ನೀಟ್ ಮರು ಪರೀಕ್ಷೆಯಿಂದ ವಿಳಂಬವಾಗುತ್ತಿದೆ ಎಂದು ಹೇಳಿದರು.

ವೈದ್ಯಕೀಯ ಕೋರ್ಸ್‌ಗಳಿಗೆ ಸೇರಬೇಕಾದರೆ ನೀಟ್ ಪರೀಕ್ಷೆ ಬಹುಮುಖ್ಯವಾಗಿದೆ. ಕೆಲವು ಸಂದರ್ಭಗಳಲ್ಲಿ ಸಿಇಟಿ ಪರೀಕ್ಷೆ ಬರೆಯುವಾಗ ತಪಾಸಣೆ ಮಾಡುವವರಿಂದ ಬೇಜವಾಬ್ದಾರಿ ಆಯಿತು. ಅದನ್ನು ಬಿಜೆಪಿಯವರು ದೊಡ್ಡ ಮಟ್ಟಕ್ಕೆ ಬಿಂಬಿಸಿದ್ದರು. ಈಗ ಇಡೀ ದೇಶದ 22 ಲಕ್ಷ ಮಕ್ಕಳ ಭವಿಷ್ಯ ನೀಟ್ ಪರೀಕ್ಷೆಯ ತೂಗುಯ್ಯಾಲೆಯಲ್ಲಿದೆ. ಬಿಜೆಪಿಯ ಮಹಾನ್ ನಾಯಕರು ಏನು ಉತ್ತರ ಕೊಡುತ್ತಾರೆ ಎಂದು ಪ್ರಶ್ನಿಸಿದರು.

ಇನ್ನು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಬಿಜೆಪಿಯ ಅಂಧ ಭಕ್ತರು ಏನೇ ಮಾಡಿದರೂ ಸಂತೋಷ ಪಡುತ್ತಾರೆ. ಮೋದಿ ಅವರು ಹೇಳುವುದನ್ನು ಎಲ್ಲಾ ಕಡೆ ಅವರು ಕೇಳುತ್ತಾರೆ. ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಆಗಿರುವುದಕ್ಕೆ ಅವರೆಲ್ಲರಿಗೂ ಈಗ ಸಂತೋಷ ಆಗಿದೆ ಎಂದು ಲೇವಡಿ ಮಾಡಿದರು.

ಇಂದಿನಿಂದ ಖಾಸಗಿ ಬಸ್ ಟಿಕೆಟ್ ದರ ಏರಿಕೆ

ಬೆಂಗಳೂರು: ಪೆಟ್ರೋಲ್, ಡಿಸೇಲ್ ದರ ಏರಿಕೆ ಹಿನ್ನೆಲೆ ಶುಕ್ರವಾರ ಮಧ್ಯರಾತ್ರಿಯಿಂದಲೇ ಖಾಸಗಿ ಬಸ್ ಟಿಕೆಟ್ ದರ ಏರಿಕೆಗೆ ತೀರ್ಮಾನಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ನಟರಾಜ್ ಶರ್ಮಾ ತಿಳಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಸ್ ಒಂದಕ್ಕೆ ಪ್ರತಿದಿನ ಕನಿಷ್ಠ 150 ಲೀ. ಡೀಸೆಲ್ ಹಾಕಿಸುತ್ತೇವೆ. ಇಂಧನ ಬೆಲೆಯಲ್ಲಿ 3 ರೂ. ಹೆಚ್ಚಳವಾಗಿರುವ ಕಾರಣ 450 ರೂ. ಹೆಚ್ಚುವರಿಯಾಗಿ ನಮಗೆ ಹೊರೆಯಾಗಲಿದೆ. ಹೀಗಾಗಿ ಟಿಕೆಟ್‌ಗಳ ದರ ಏರಿಸೋದು ನಮಗೂ ಅನಿವಾರ್ಯವಾಗಿದೆ. ಇದರ ಪರಿಣಾಮ ಪ್ರಯಾಣಿಕರ ಮೇಲೆ ಉಂಟಾಗಲಿದೆ ಎಂದು ಹೇಳಿದರು.



ಮೈಸೂರಿನಲ್ಲಿ ತೋಟಗಾರಿಕಾ ಇಲಾಖೆ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಮಾವು ಮೇಳದಲ್ಲಿ ಗ್ರಾಹಕರು ವಿವಿಧತಳಿ ಮಾವಿನ ಹಣ್ಣುಗಳನ್ನು ಖರೀದಿಸಿದರು.

ರಸ್ತೆ ಅಪಘಾತ: 7 ಮಂದಿ ಸಾವು

ಕೊಪ್ಪಳ: ತಾಲೂಕಿನ ಮುನಿರಾಬಾದ್ ಬಳಿ, ರಾಷ್ಟ್ರೀಯ ಹೆದ್ದಾರಿ 50ರಲ್ಲಿ ನಡೆದ ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ 7 ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅನೇಕರು ಚಿಂತಾಜನಕ ಸ್ಥಿತಿಯಲ್ಲಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

ಕೊಪ್ಪಳ ಮಾರ್ಗವಾಗಿ ತೆರಳುತ್ತಿದ್ದ ಟ್ರ್ಯಾಕ್ಟರ್‌ಗೆ ಟಿಪ್ಪರ್ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಟ್ರ್ಯಾಕ್ಟರ್ ಸೇತುವೆ ಮೇಲಿಂದ ಸುಮಾರು 20 ಅಡಿ ಕೆಳಗೆ ಬಿದ್ದಿದೆ. ಅಪಘಾತದಲ್ಲಿ ಕೆಂಚಪ್ಪ (35), ಮಹಾಂತೇಶ (18) ಭರತ್ (01) ಸವಿತಾ (12) ಮಾರೇಶ, ಗೌರಮ್ಮ, ಮಂಜಮ್ಮ ಸೇರಿ ಏಳು ಜನ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರು ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕು ಮಲ್ಲಾರಹಳ್ಳಿ ಹಾಗೂ ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ಯಶವಂತ ನಗರ ಗ್ರಾಮದ ನಿವಾಸಿಗಳು. ಉಳಿದಂತೆ ಟ್ರ್ಯಾಕ್ಟರ್ ನಲ್ಲಿದ್ದ 6 ವರ್ಷದ ಮಗು ಹೊರತಾಗಿ ಸುಮಾರು 10 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರು ಕೊಪ್ಪಳ ತಾಲೂಕು ಹುಲಗಿ ಗ್ರಾಮದ ಹುಲಿಗೆಮ್ಮ ದೇವಿ ದೇವಸ್ಥಾನಕ್ಕೆ ಹೋಗುತ್ತಿದ್ದಾಗ ಘಟನೆ ನಡೆದಿದೆ. ವಿಜಯನಗರ- ಕೊಪ್ಪಳ ಜಿಲ್ಲೆಯ ಗಡಿ ಭಾಗದಲ್ಲಿ ಅಪಘಾತ ಜರುಗಿದ್ದು, ಗಾಯಾಳುಗಳ ಪೈಕಿ ಹಲವರನ್ನು ಕೊಪ್ಪಳ ಕಿಮ್ಸ್‌ಗೆ ಮತ್ತು ಕೆಲವರನ್ನು ಹೊಸಪೇಟೆ ತಾಲೂಕು ಆಸ್ಪತ್ರೆಗೆ ರವಾನಿಸಲಾಗಿದೆ. ಸಂಡೂರು ತಾಲೂಕು ಮಲ್ಲಾರಹಳ್ಳಿ ಗ್ರಾಮದ ಅಜಯ್ ತಂದೆ ಜಾತಪ್ಪ (26), ಮಾಯಾ ತಂದೆ ಕೆಂಚಪ್ಪ (16)ವರ್ಷ, ಚೇತನ ತಂದೆ ನಾಗರಾಜ (21), ಹನುಮಕ್ಕ ಗಂಡ ಮಂಜುನಾಥ, ನಾಗರಾಜ ತಂದೆ ಯಶವಂತ್, ಅರುಣಮ್ಮ ಗಂಡ ಜಾತಪ್ಪ(45), ರೇಣುಕಾ ಗಂಡ ಚಂಚಪ್ಪ(36), ಅಂಜಲಿ ತಂದೆ ಮಹಾಂತೇಶ(12)

ಸವಿತಾ(9) ಅವರನ್ನು ಕೊಪ್ಪಳ ಕಿಮ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ರವಾನಿಸಲಾಗಿದೆ. ಇನ್ನು ಕೂಡ್ಲಿಗಿಯ 14 ನೇ ವಾರ್ಡ್ ನ ರೇಖಾ ತಂದೆ ಮಂಜುನಾಥ(14), ಅರ್ಜುನ ತಾಯಿ ರತ್ನಮ್ಮ(13), ರಕ್ಷಿತಾ ತಾಯಿ ಸವಿತಾ(4), ಮಹಾಲಕ್ಷ್ಮಿ ತಂದೆ ಓಬಳೇಶ (6) ಎಂಬುವರು ಹೊಸಪೇಟೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಿರುಸುದ್ದಿ

ಮುಸ್ಲಿಂ ತುಷ್ಟೀಕರಣಕ್ಕೆ ಯತ್ನ: ಸಂಸದ ಬೊಮ್ಮಾಯಿ

ಬೆಂಗಳೂರು: ರಾಜ್ಯ ಸರ್ಕಾರ ಯಾವುದೇ ಬೇಡಿಕೆ ಇಲ್ಲದಿದ್ದರೂ ಶಾಲೆಗಳಲ್ಲಿ ಹಿಜಾಬ್ ಧರಿಸಲು ಅವಕಾಶ ಕಲ್ಪಿಸಿ ಧರ್ಮದ ಆಧಾರದಲ್ಲಿ ಮುಸ್ಲಿಂ ತುಷ್ಟೀಕರಣಕ್ಕಾಗಿ ಈ ಆಜ್ಞೆ ಮಾಡಿದೆ. ಇದನ್ನು ಹಿಂಪಡೆದಿದ್ದರೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಆಗುವ ಆತಂಕ ಮತ್ತು ಭೇದ-ಭಾವಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಎಚ್ಚರಿಸಿದ್ದಾರೆ.



1980 ರ ಶಾಲಾ ಸಮವಸ್ತ್ರ ಕಾನೂನಿನಡಿಯಲ್ಲಿ ನಾವು ಆ ಸ್ಪಷ್ಟೀಕರಣದ ಆದೇಶ ಮಾಡಿದ್ದೆವು. ಅದನ್ನು ಹೈಕೋರ್ಟ್ ಕೂಡ ಎತ್ತಿ ಹಿಡಿದಿತ್ತು. ಸುಪ್ರೀಂ ಕೋರ್ಟ್‌ನಲ್ಲಿಯೂ ಅದು ವಿಭಜಿತ ತೀರ್ಪು ಆಗಿತ್ತು. ಈ ಪ್ರಕರಣ ಇನ್ನೂ ಸುಪ್ರೀಂ ಕೋರ್ಟ್‌ನಲ್ಲಿರುವಾಗಲೇ ಮಕ್ಕಳಲ್ಲಿ ಮತ್ತೆ ಬೇಧ-ಭಾವದ ಆತಂಕವನ್ನು ಮೂಡಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ರಾಜ್ಯ ಸರ್ಕಾರ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹದಗೆಡಿಸಿದೆ. ಯಾವುದೇ ಸ್ಪಷ್ಟವಾದ ನೀತಿ ಇಲ್ಲ. ಯಾವುದೇ ವಿದ್ಯಾರ್ಜನೆ ಆಗುತ್ತಿಲ್ಲ. ಶಿಕ್ಷಕರ ಕೊರತೆ ಇದೆ. ಇಂತಹದನ್ನು ಮುಚ್ಚಿಕೊಳ್ಳಲು ಇಂತಹ ಆದೇಶ ಮಾಡಿದ್ದಾರೆ. ಕಾನೂನು ರೀತಿಯಲ್ಲಿ ರಾಜ್ಯ ಸರ್ಕಾರವೇ ವಿವಾದ ಹುಟ್ಟು ಹಾಕಿದೆ. ಇದು ನಾಗರಿಕ ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಇದು ಜವಾಬ್ದಾರಿಯಲ್ಲ. ಅತ್ಯಂತ ಬೇಜವಾಬ್ದಾರಿಯ ನಿರ್ಣಯ ಎಂದು ಬಸವರಾಜ ಬೊಮ್ಮಾಯಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎಲೆಕ್ಟ್ರಿಕ್ ದ್ವಿಚಕ್ರ ವಾಹನದಲ್ಲಿ ಶಾಸಕ ಶ್ರೀವತ್ಸ ಸಂಚಾರ

ಮೈಸೂರು: ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ತಮ್ಮ ಐಷಾರಾಮಿ ಪೆಟ್ರೋಲ್ ಕಾರಿನಲ್ಲಿ ಸಂಚರಿಸುವುದನ್ನು ಸ್ಥಗಿತಗೊಳಿಸಿದ್ದಾರೆ. ದೇಶದ ಪ್ರಧಾನಿ ನರೇಂದ್ರ ಮೋದಿ ಅವರು ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯನ್ನು ಕಡಿಮೆ ಮಾಡುವಂತೆ ಸಾರ್ವಜನಿಕರಿಗೆ ಕರೆ ನೀಡಿದ್ದು, ಅದರಂತೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ತಮ್ಮ ದಿನನಿತ್ಯದ ಸಂಚಾರಿ ವಾಹನ ವ್ಯವಸ್ಥೆಯಲ್ಲಿ ಶೇಕಡ 90ರಷ್ಟು ಇಂಧನ ಬಳಕೆ ಕಡಿತಗೊಳಿಸಲು ತೀರ್ಮಾನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಶುಕ್ರವಾರದಿಂದಲೇ ಎಲೆಕ್ಟ್ರಿಕ್ ಕಾರ್ ಮತ್ತು ಎಲೆಕ್ಟ್ರಿಕ್ ದ್ವಿಚಕ್ರ ವಾಹನದ ಮೂಲಕ ತಮ್ಮ ಕೆಲಸಗಳಿಗಾಗಿ ಮಾರ್ಪಾಡು ಮಾಡಿಕೊಂಡು ಸಂಚರಿಸಿದ್ದಾರೆ. ಎಲೆಕ್ಟ್ರಿಕ್ ದ್ವಿಚಕ್ರ ವಾಹನದಲ್ಲಿ ಓಡಾಡಿದ್ದಾರೆ. ಇದೇ ಸಂಧರ್ಭದಲ್ಲಿ ಕೃಷ್ಣರಾಜ ಕ್ಷೇತ್ರದ ನಾಗರೀಕರು ಸಮೂಹ ಸಾರಿಗೆ ಬಸ್‌ಗಳನ್ನು ಹೆಚ್ಚಾಗಿ ಬಳಸಬೇಕೆಂದು ಕರೆ ನೀಡಿದರು.



ಗೋಮಾಂಸ ಮಾರಾಟಕ್ಕೆ ಯತ್ನ: ದೂರು

ನಾಗಮಂಗಲ: ಪ್ಯಾಕೇಟ್‌ನಲ್ಲಿ ಗೋಮಾಂಸವನ್ನು ಮನೆ ಮನೆಗೆ ಮಾರಾಟ ಮಾಡಲು ಯತ್ನಿಸಿದ ಘಟನೆ ಬೆಳ್ಳೂರಿನ ಅಂಬೇಡ್ಕರ್ ಕಾಲೋನಿಯಲ್ಲಿ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ. ತಾಲೂಕಿನಲ್ಲಿ ಅಪರಿಚಿತ ವ್ಯಕ್ತಿ ರಾಜಾರೋಷವಾಗಿ ಅಂಬೇಡ್ಕರ್ ಕಾಲೋನಿಯಲ್ಲಿ 17 ಪ್ಲಾಸ್ಟಿಕ್ ಚೀಲದಲ್ಲಿ ಗೋಮಾಂಸವನ್ನು ಮಾರಾಟ ಮಾಡಲು ಯತ್ನಿಸಿದಾಗ ಸ್ಥಳೀಯರು ತಡೆದು ವಿಚಾರಿಸಿದ ವೇಳೆ ಬೈಕ್ ಅಲ್ಲೆ ಬಿಟ್ಟು ಆತ ಪರಾರಿಯಾಗಿದ್ದಾನೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಈ ಬಗ್ಗೆ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೆಂಗಳೂರಲ್ಲಿ 875 ಜಾಗತಿಕ ಸಾಮರ್ಥ್ಯ ಕೇಂದ್ರ | ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು

ಸಾಮಾಜಿಕ ಪರಿವರ್ತನೆಗೆ ಶಿಕ್ಷಣವೇ ಶಕ್ತಿ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎಐ), ಜೈವಿಕ ತಂತ್ರಜ್ಞಾನ, ಅರೆವಾಹಕ ಉತ್ಪಾದನೆ, ಹವಾಮಾನ ತಂತ್ರಜ್ಞಾನ ಹಾಗೂ ಡಿಜಿಟಲ್ ಪರಿವರ್ತನೆಯ ಯುಗದಲ್ಲಿ ವಿದ್ಯಾರ್ಥಿಗಳನ್ನು ಭವಿಷ್ಯದ ಸವಾಲುಗಳಿಗೆ ಸಿದ್ಧಗೊಳಿಸುವುದು ಅತ್ಯಗತ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉನ್ನತಶಿಕ್ಷಣ ಇಲಾಖೆಯ ನೇತೃತ್ವದಲ್ಲಿ ವಿವಿಧ ಇಲಾಖೆಯಗಳ ಸಹಯೋಗದೊಂದಿಗೆ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿರುವ ಕ್ಯಾಂಪಸ್ ಟು ಕೆರಿಯರ್ (ಸಿಟುಸಿ) ಕಾರ್ಯಕ್ರಮವನ್ನು ಅವರು ಉದ್ಘಾಟಿಸಿದರು.

ಶಿಕ್ಷಣವು ಕೇವಲ ಪದವಿ ನೀಡುವ ಪ್ರಕ್ರಿಯೆಯಲ್ಲ, ಶಿಕ್ಷಣವು ಸಾಮಾಜಿಕ ಪರಿವರ್ತನೆಗೆ ಅತ್ಯಂತ ಶಕ್ತಿಯುತ ಸಾಧನವಾಗಿದೆ. ಜ್ಞಾನ, ಕೌಶಲ ಅಭಿವೃದ್ಧಿ, ನಾವೀನ್ಯತೆ ಮತ್ತು ಎಲ್ಲರನ್ನೂ ಒಳಗೊಂಡ ಬೆಳವಣಿಗೆಗೆ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಸಮಾನ, ಪ್ರಗತಿಪರ ಮತ್ತು ಸದೃಢ ಸಮಾಜವನ್ನು ರೂಪಿಸುವಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ ಎಂದು ರಾಜ್ಯ ಸರ್ಕಾರ ನಂಬಿದೆ. ಪ್ರತಿ ಪದವೀಧರರನು ಉದ್ಯೋಗಕ್ಕೆ ಸಿದ್ಧನಾಗಿರುವ ಹಾಗೂ ಪ್ರತಿ



ಶಿಕ್ಷಣ ಸಂಸ್ಥೆಯೂ ಭವಿಷ್ಯಮುಖಿಯಾಗಿರುವ ಕರ್ನಾಟಕ ನಿರ್ಮಾಣವೇ ಸರ್ಕಾರದ ಗುರಿ ಎಂದರು.

ಕರ್ನಾಟಕ ಇಂದು 30.7 ಲಕ್ಷ ಕೋಟಿ ರೂ. ಜಿಎಸ್‌ಡಿಪಿ ಹೊಂದಿರುವ ದೇಶದ ಪ್ರಮುಖ ಆರ್ಥಿಕ ರಾಜ್ಯಗಳಲ್ಲಿ ಒಂದಾಗಿದೆ. ಬೆಂಗಳೂರು 875 ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ಹೊಂದುವ ಮೂಲಕ ವಿಶ್ವದ ಪ್ರಮುಖ ತಾಂತ್ರಿಕ ಕೇಂದ್ರವಾಗಿ ಬೆಳೆದಿದೆ. ರಾಜ್ಯವು ದೇಶದ ಅತ್ಯಂತ ಕ್ರಿಯಾತ್ಮಕ ಆರ್ಥಿಕತೆಗಳಲ್ಲಿ ಒಂದಾಗಿ ಪರಿವರ್ತನೆಯಾಗಲು ದಶಕಗಳ ಕಾಲ ಶಿಕ್ಷಣ, ಸಂಸ್ಥೆಗಳ ನಿರ್ಮಾಣ ಮತ್ತು ಮಾನವ ಬಂಡವಾಳದಲ್ಲಿ ಹೂಡಿಕೆ ಮಾಡಿರುವುದರಿಂದ ದೊರೆತಿರುವ ನೇರ ಲಾಭಾಂಶ ಇದಾಗಿದೆ. ರಾಜ್ಯದಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ 66 ಕಾಲೇಜುಗಳಿದ್ದು, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿದೆ ಎಂದು ತಿಳಿಸಿದರು.

ಶಿಕ್ಷಣವು ವಿದ್ಯಾರ್ಥಿಗಳಿಗೆ ಉದ್ಯೋಗ, ಉದ್ಯಮಶೀಲತೆ ಮತ್ತು ನಾಯಕತ್ವದ ಅವಕಾಶಗಳನ್ನು ಒದಗಿಸಬೇಕು. ಶಿಕ್ಷಣವು ಪದವಿಗಳನ್ನು ನೀಡುವುದಕ್ಕಿಂತ ಹೆಚ್ಚಿನದನ್ನು ನೀಡಬೇಕು. ಕುತೂಹಲ, ಸೃಜನಶೀಲತೆ, ಸಾಮರ್ಥ್ಯ ಮತ್ತು ವ್ಯಕ್ತಿತ್ವವನ್ನು ಪೋಷಿಸಬೇಕು ಎಂದರು.

ಇದೇ ವೇಳೆ ಉನ್ನತ ಶಿಕ್ಷಣ ಇಲಾಖೆಯು 6 ಭಾಗೀದಾರರೊಂದಿಗೆ ವಿವಿಧ ಸಹಭಾಗಿತ್ವದ ಕಾರ್ಯಕ್ರಮಗಳ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿತು. ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್, ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಖುಷ್ಬೂ ಚೌಧರಿ ಮತ್ತಿತರರಿದ್ದರು.

20 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ

ರಾಜ್ಯದ ಮಹತ್ವಾಕಾಂಕ್ಷಿ ಯುವ ನಿಧಿ ಯೋಜನೆಯ ಮೂಲಕ ಪದವೀಧರರ ಕೌಶಲ ಹಾಗೂ ಆತ್ಮವಿಶ್ವಾಸ ವೃದ್ಧಿಗೆ ಸರ್ಕಾರ ಸಹಕಾರ ನೀಡುತ್ತಿದೆ. ಜೊತೆಗೆ ಕೈಗಾರಿಕಾ ನೀತಿಯ ಮೂಲಕ ಉತ್ಪಾದನೆ, ಸೇವೆ, ಶುದ್ಧ ತಂತ್ರಜ್ಞಾನ ಹಾಗೂ ಉದಯೋನ್ಮುಖ ವಲಯಗಳಲ್ಲಿ 20 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಹೊಂದಿದೆ. ನಮ್ಮ ಮಹತ್ವಾಕಾಂಕ್ಷಿ ಕ್ವಿನ್ ಸಿಟಿ ಕಾರ್ಯಕ್ರಮವು ಮುಂದಿನ ಪೀಳಿಗೆಯ ಜ್ಞಾನ, ಸ್ವಾಸ್ಥ್ಯ, ನಾವೀನ್ಯತೆ ಮತ್ತು ಉದ್ಯಮವು ಒಮ್ಮುಖವಾಗಿ ಭವಿಷ್ಯದ ಪೀಳಿಗೆಗೆ ಅವಕಾಶಗಳನ್ನು ಸೃಷ್ಟಿಸುತ್ತದೆ. ಆದ್ದರಿಂದ ಸರ್ಕಾರ, ಶಿಕ್ಷಣ ಕ್ಷೇತ್ರ ಮತ್ತು ಉದ್ಯಮದ ನಡುವೆ ಬಲವಾದ ಸಹಯೋಗ ಮುಖ್ಯ ಎಂದು ಸಿದ್ದರಾಮಯ್ಯ ಹೇಳಿದರು.

> ನಮ್ಮ ವಿಶ್ವವಿದ್ಯಾಲಯಗಳು ಕೇವಲ ಪದವಿ ನೀಡುವುದಕ್ಕೆ ಸೀಮಿತವಾಗದೇ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕೌಶಲಗಳು, ನಾವೀನ್ಯತೆ ಸಾಮರ್ಥ್ಯ ಮತ್ತು ನೈಜ ಪ್ರಪಂಚದ ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸ ನೀಡಬೇಕು.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಉತ್ಖನನದಲ್ಲಿ ಆನೆಯ ಶಿಲ್ಪ ಪತ್ತೆ

ವಿಜಯನಗರ: ವಿಶ್ವವಿಖ್ಯಾತ ಹಂಪಿಯ ಹಜಾರರಾಮ ದೇವಸ್ಥಾನ ಸಮೀಪ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ (ಎಎಸ್ ಐ) ನಡೆಸುತ್ತಿರುವ ಉತ್ಖನನದ ವೇಳೆ ವಿಜಯನಗರ ಕಾಲದ ಅಪರೂಪದ ಆನೆಯ ಕಲಾಕೃತಿಯ ಹುಬ್ಬು ಶಿಲೆ ಪತ್ತೆಯಾಗಿದೆ.

ಹಜಾರರಾಮ ದೇವಸ್ಥಾನದ ದಕ್ಷಿಣ ದ್ವಾರದ ಗೋಡೆಯ ಭಾಗದಲ್ಲಿ ಜೀರ್ಣೋದ್ದಾರ ಕೆಲಸ ನಡೆಯುತ್ತಿದ್ದು, ಈ ಸುಂದರ ಶಿಲ್ಪ ಬೆಳಕಿಗೆ ಬಂದಿದೆ. 1565ರ ಯುದ್ಧದ ಸಮಯದಲ್ಲಿ ಹಾನಿಗೊಳಗಾಗಿದ್ದ ಅನೇಕ ಸ್ಮಾರಕಗಳ ಅವಶೇಷಗಳು ಈಗ ಒಂದೊಂದಾಗಿ ಲಭ್ಯವಾಗುತ್ತಿದ್ದು, ಅಂದಿನ ಕಾಲದ ಶ್ರೀಮಂತ ಕಲೆಗೆ ಸಾಕ್ಷಿಯಾಗಿವೆ. ಸುದ್ದಿ ತಿಳಿಯುತ್ತಿದ್ದಂತೆಯೇ ಪುರಾತತ್ವ ಅಧೀಕ್ಷಕ ಕೆ.ರಾಮಕೃಷ್ಣ ರೆಡ್ಡಿ ಅವರು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

> ಹಜಾರರಾಮ ದೇವಸ್ಥಾನದ ಬಳಿ ಆನೆಯ ಉಬ್ಬು ಶಿಲ್ಪಕಲಾಕೃತಿಯೊಂದಿ ಪತ್ತೆಯಾಗಿದೆ. ಅದು ವಿಜಯನಗರ ಕಾಲಕ್ಕೆ ಸೇರಿದ್ದು ಎಂದು ಅಂದಾಜಿಸಲಾಗಿದೆ.
> ■ ಕೆ.ರಾಮಕೃಷ್ಣ ರೆಡ್ಡಿ, ಪುರಾತತ್ವ ಇಲಾಖೆ ಅಧೀಕ್ಷಕ



> ವಿಶ್ವಪ್ರಸಿದ್ಧ ಐತಿಹಾಸಿಕ ಹಂಪಿಯಲ್ಲಿ ಪ್ರಸ್ತುತ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಕೈಗೊಂಡಿರುವ ಉತ್ಖನನ ಮತ್ತು ಜೀರ್ಣೋದ್ಧಾರ ಕಾರ್ಯವು ವೈಜ್ಞಾನಿಕ ಮತ್ತು ವ್ಯವಸ್ಥಿತವಾಗಿ ನಡೆಯುತ್ತಿದ್ದು, ಮಣ್ಣಿನಲ್ಲಿ ಅಡಗಿರುವ ಐತಿಹಾಸಿಕ ಸ್ಮಾರಕಗಳು ಬೆಳಕಿಗೆ ಬರುತ್ತಿವೆ. ಇದರಿಂದ ವಿಜಯನಗರ ಸಾಮ್ರಾಜ್ಯದ ಗತ ವೈಭವದ ಪುಟಗಳು ಮತ್ತೆ ತೆರೆದುಕೊಳ್ಳಲಿವೆ.
> ■ ವಿರೂಪಾಕ್ಷಿ ವಿ ಹಂಪಿ, ರಾಜ್ಯ ಪ್ರವಾಸಿ ಮಾರ್ಗದರ್ಶಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ

ಶೇ.90ಕ್ಕೂ ತಕರಾರು ಪ್ರಕರಣ ಇತ್ಯರ್ಥ

ಬೆಂಗಳೂರು: ಹತ್ತಾರು ವರ್ಷಗಳ ದುರಾಡಳಿತದ ಬಳುವಳಿಯಾಗಿದ್ದ ಉಪ ವಿಭಾಗಾಧಿಕಾರಿಗಳ (ಎಸಿ) ನ್ಯಾಯಾಲಯ ಬಾಕಿ ತಕರಾರು ಪ್ರಕರಣಗಳ ಪೈಕಿ ಶೇ.90ಕ್ಕೂ ಹೆಚ್ಚು ಪ್ರಕರಣಗಳನ್ನು ಕಳೆದ ಮೂರು ವರ್ಷಗಳಲ್ಲಿ ಇತ್ಯರ್ಥಪಡಿಸಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಮೆಚ್ಚುಗೆ ವ್ಯಕ್ತಪಡಿಸಿದರು.

ಗುರುವಾರ ವಿಕಾಸಸೌಧದಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳ ಜೊತೆ ಅವರು ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. 3 ವರ್ಷದ ಹಿಂದೆ ನಾವು ಕಂದಾಯ ಇಲಾಖೆ ಜವಾಬ್ದಾರಿ ಸ್ವೀಕರಿಸಿದ್ದಾಗ ರಾಜ್ಯಾದ್ಯಂತ ಅವಧಿ ಮೀರಿದ 73,624 ತಕರಾರು ಪ್ರಕರಣಗಳು ಬಾಕಿಯಿದ್ದವು. ಆ ಸಂಖ್ಯೆಯನ್ನು ಇದೀಗ 7,490ಕ್ಕೆ ಇಳಿಸಿದಂತಾಗಿದೆ. ಮುಂದಿನ ದಿನಗಳಲ್ಲಿ ಈ ಪ್ರಕರಣಗಳನ್ನೂ ಶೀಘ್ರ ಇತ್ಯರ್ಥಪಡಿಸಬೇಕು ಎಂದು ಸೂಚಿಸಿದರು.

ಅತಿಹೆಚ್ಚು ಪ್ರಕರಣಗಳು ಬಾಕಿ ಇದ್ದ ತುಮಕೂರು, ದೊಡ್ಡಬಳ್ಳಾಪುರ, ತರೀಕೆರೆ, ಕೋಲಾರ ಸೇರಿದಂತೆ ಹಲವು ಎಸಿ ವಲಯಗಳು ಪ್ರಸ್ತುತ ಸುಧಾರಣೆ ಕಂಡಿವೆ. ಆದರೆ, ಸ್ವತಃ ನಾನು ಪ್ರತಿನಿಧಿಸುವ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಸಾಕಷ್ಟು ಪ್ರಕರಣಗಳು ಬಾಕಿಯಿವೆ ಎಂದು ಸಚಿವ ಕೃಷ್ಣ ಬೈರೇಗೌಡ ಅಸಮಾಧಾನ ಹೊರಹಾಕಿದರು.

ಉತ್ತರ ಜಿಲ್ಲೆಯ ವಿಶೇಷ ಉಪ ವಿಭಾಗಾಧಿಕಾರಿಗಳು ನಿಜಕ್ಕೂ ತಮಗೆ ನೀಡಿದ ಜವಾಬ್ದಾರಿಯನ್ನು ಅತ್ಯುತ್ತಮವಾಗಿ ನಿರ್ವಹಿಸುತ್ತಿದ್ದಾರೆ.



ಆದರೆ, ರೆಗ್ಯುಲರ್ ಉಪ ವಿಭಾಗಾಧಿಕಾರಿಗಳು ಆದೇಶಕ್ಕಾಗಿ ಕಾಯ್ದಿರಿಸಿದ ಪ್ರಕರಣಗಳನ್ನೂ ವಿಲೇ ಮಾಡುತ್ತಿಲ್ಲ. ಪರಿಣಾಮ ಜನ ಸಾಮಾನ್ಯರು ಪ್ರತಿನಿತ್ಯ ನನ್ನ ಗೃಹ ಕಚೇರಿಗೆ ಆಗಮಿಸಿ ನನ್ನನ್ನು ಪ್ರಶ್ನಿಸುತ್ತಿದ್ದಾರೆ. ಯಾರೋ ಒಬ್ಬ ಅಧಿಕಾರಿ ಮಾಡುವ ತಪ್ಪಿಗೆ ಜನರ ಎದುರು ನಾನು ತಲೆ ತಗ್ಗಿಸುವಂತಾಗಿದೆ ಎಂದರು.

ಅಧಿಕಾರಿಗಳ ಸಹಕಾರದಿಂದಾಗಿ ಕಳೆದ ಮೂರು ವರ್ಷಗಳಲ್ಲಿ ಕೋರ್ಟ್ ಕೇಸ್, ಪೌತಿಖಾತೆ, ಪೋಡಿ ದುರಸ್ತಿ, ಆಧಾರ್ ಸೀಡಿಂಗ್, ಇ-ಆಫೀಸ್ ಸೇರಿದಂತೆ ಕಂದಾಯ ಇಲಾಖೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಆದರೆ, ಆಗಬೇಕಾದ ಕೆಲಸ ಇನ್ನಷ್ಟು ಬಾಕಿ ಇದೆ. ಹೀಗಾಗಿ ಅಧಿಕಾರಿಗಳು ಮತ್ತಷ್ಟು ಜನಪರವಾಗಿ ಕೆಲಸ ನಿರ್ವಹಿಸಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಛಾವಣಿ ಕುಸಿದು ನಾಲ್ವರು ಜೀವಂತ ಸಮಾಧಿ

ವಿಜಯಪುರ: ಜೋರಾದ ಮಳೆ, ಗಾಳಿಗೆ ಮನೆ ಮೇಲ್ಛಾವಣಿ ಕುಸಿದು ಇಬ್ಬರು ಪುಟ್ಟ ಮಕ್ಕಳು, ಪತಿ, ಪತ್ನಿ ಸೇರಿ ಒಂದೇ ಕುಟುಂಬದ ನಾಲ್ವರು ಜೀವಂತ ಸಮಾಧಿಯಾಗಿರುವ ಹೃದಯ ವಿದ್ರಾವಕ ಘಟನೆ ಜಿಲ್ಲೆಯ ಆಲಮೇಲ ತಾಲೂಕಿನ ಮೋರಟಗಿ ಗ್ರಾಮದಲ್ಲಿ ನಡೆದಿದೆ.

ಗುರುನಾಥ ಬಡಿಗೇರ (35), ಪತ್ನಿ ಜ್ಯೋತಿ ಗುರುನಾಥ ಬಡಿಗೇರ (28), ಮಕ್ಕಳಾದ ಕಾಳಮ್ಮ (13), ಕೀರ್ತಿ (9) ಮೃತ ದುರ್ದೈವಿಗಳು. ಗುರುನಾಥ ಬಡಿಗೇರ ಕುಟುಂಬ ತಮ್ಮ ಸ್ವಂತ ಮನೆಯ ದುರಸ್ತಿ ಮಾಡುವ ಕಾರಣಕ್ಕೆ, ಊರಲ್ಲಿನ ಹಳೆಯ ಮನೆಯಲ್ಲಿ ಬಾಡಿಗೆಯಾಗಿ ವಾಸವಾಗಿದ್ದರು ಎಂದು ತಿಳಿದು ಬಂದಿದೆ. ಜೋರಾದ ಮಳೆ, ಗಾಳಿಗೆ ಹಳೇ ಮನೆಯ ಮೇಲ್ಛಾವಣಿ ಕುಸಿದಿದ್ದರಿಂದ ಈ ಅವಘಡ ಸಂಭವಿಸಿದೆ. ನಾಲ್ವರ ಮೃತ ದೇಹವನ್ನು ಹೊರ ತೆಗೆಯಲು ಅಗ್ನಿ ಶಾಮಕ ದಳ ಸಿಬ್ಬಂದಿ ಸತತ ಕಾರ್ಯಾಚರಣೆ ನಡೆಸಿದರು. ಘಟನಾ ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿತ್ತು. ಈ ದುರ್ಘಟನೆ ಸುದ್ದಿ ತಿಳಿಯುತ್ತಿದ್ದಂತೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಸ್ಥಳಕ್ಕೆ ಆಗಮಿಸಿ, ಸಂತ್ರಸ್ತ ಕುಟುಂಬದವರಿಗೆ ಸಾಂತ್ವನ ಹೇಳಿದರು.



ಸರ್ಕಾರದ ನಿರ್ಧಾರಕ್ಕೆ ವಿಹಿಂಪ ವಿರೋಧ

ಬೆಂಗಳೂರು: ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವ ಮೇಲಿನ ನಿರ್ಬಂಧವನ್ನು ಹಿಂಪಡೆಯುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ವಿಶ್ವ ಹಿಂದು ಪರಿಷತ್ ಕರ್ನಾಟಕ ದಕ್ಷಿಣ ತೀವ್ರ ವಿರೋಧ ವ್ಯಕ್ತಪಡಿಸಿದೆ.

2022ರ ಫೆ.5ರಂದು ಜಾರಿಗೊಂಡ ಸರ್ಕಾರದ ಆದೇಶವು ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಸೆಕ್ಷನ್ 133 (2) ಅಡಿಯಲ್ಲಿ ಹೊರಡಿಸಲ್ಪಟ್ಟಿದೆ. ಅದು ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು, ಏಕರೂಪತೆ ಮತ್ತು ಧರ್ಮನಿರಪೇಕ್ಷತೆಯನ್ನು ಕಾಪಾಡುವ ಉದ್ದೇಶ ಹೊಂದಿತ್ತು. ಆದರೆ, ಸರ್ಕಾರದ ಇತ್ತೀಚಿನ ನಿರ್ಧಾರವು ಶಿಕ್ಷಣ ಸಂಸ್ಥೆಗಳ ಸಮವಸ್ತ್ರ ನಿಯಮ ಜಾರಿಗೆ ಇರುವ ಅಧಿಕಾರವನ್ನು ದುರ್ಬಲಗೊಳಿಸುವುದರ ಜೊತೆಗೆ ಆಡಳಿತಾತ್ಮಕ ಗೊಂದಲಕ್ಕೂ ಕಾರಣವಾಗಬಹುದು ಎಂದು ಪರಿಷತ್ ಕಾರ್ಯದರ್ಶಿ ಬಿ.ಇ. ಸುರೇಶ್ ಹೇಳಿದ್ದಾರೆ.

ಹಿಜಾಬ್ ನಿಷೇಧ ಕುರಿತ ಹಿಂದಿನ ಸರ್ಕಾರದ ಆದೇಶವನ್ನು ಹೈಕೋರ್ಟ್ ಮಾನ್ಯಗೊಳಿಸಿತ್ತು. ಈ ತೀರ್ಪು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ಸಂದರ್ಭದಲ್ಲಿ ಹಿಜಾಬ್‌ಗೆ ಅವಕಾಶ ನೀಡಿ ಆದೇಶ ಹೊರಡಿಸಿರುವುದು ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಟಾಂಗ್

ಎಚ್‌ಡಿಕೆ ಟೀಕಿಸದೇ ಇದ್ದರೆ ಬದುಕಲ್ಲ

ಬೆಂಗಳೂರು: ಕುಮಾರಸ್ವಾಮಿ ಅವರು ನಮ್ಮ ಬಗ್ಗೆ ಟೀಕೆ ಮಾಡದಿದ್ದರೆ ರಾಜಕೀಯವಾಗಿ ಬದುಕಿರಲು ಆಗುವುದಿಲ್ಲ, ನಾವು ಒಳ್ಳೆಯ ಕೆಲಸ ಮಾಡುತ್ತೇವೆ, ಅವರು ವಿರೋಧ ಮಾಡುತ್ತಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಡದಿ ಟೌನ್‌ಶಿಪ್ ಯೋಜನೆಯ ಬಗ್ಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಟೀಕೆಗೆ ಶುಕ್ರವಾರ ಮಾಧ್ಯಮಗಳಿಗೆ ಅವರು ಪ್ರತಿಕ್ರಿಯೆ ನೀಡಿದರು. ಕುಮಾರಸ್ವಾಮಿ ಅವರು ಮಾಡಿದ ಯೋಜನೆಯನ್ನೇ ನಾವು ಮುಂದುವರೆಸುತ್ತಿದ್ದೇವೆ. ನಾನು ರೈತರ ಬಳಿ ಮಾತ ನಾಡಲು ಸಮಯ, ದಿನಾಂಕ ನಿಗದಿ ಮಾಡಿಕೊಂಡು ಹೋಗುತ್ತೇನೆ. ರೈತರು ನನಗೆ ಎರಡೇಟು ಹೊಡೆಯ ಬಹುದು, ಅಷ್ಟೇ ತಾನೇ? ಬಟ್ಟೆ ಹರಿಯಬಹುದು, ಕಲ್ಲೆಸೆಬಹುದು, ಧಿಕ್ಕಾರ ಹಾಕಬಹುದು. ಅದಕ್ಕೆಲ್ಲ ಹೆದರಿಕೊಳ್ಳಲು ಆಗುತ್ತದೆಯೇ? ಮುಂದೆ ಅವರ ಭವಿಷ್ಯ, ಮಕ್ಕಳ ಹಾಗೂ ಆಸ್ತಿಗಳ ಭವಿಷ್ಯ ಮುಖ್ಯ. ಇವತ್ತಲ್ಲ ಮುಂದಿನ 20 ವರ್ಷಗಳ ನಂತರ ಬಿಡದಿ, ಬೆಂಗಳೂರು ದಕ್ಷಿಣದ ಜನರು ನನ್ನನ್ನು ನೆನಪಿಸಿಕೊಳ್ಳುತ್ತಾರೆ ಎಂದರು.

ಕುಮಾರಸ್ವಾಮಿ ಅವರೇ ಈ ಯೋಜನೆಯ ಭೂಮಿಯನ್ನು ಡಿನೋಟಿಫೈ ಮಾಡಬಹುದಿತ್ತಲ್ಲವೇ? ಯಾಕೆ ಮಾಡಲಿಲ್ಲ? ನಾನು ಡಿನೋಟಿಫೈ ಮಾಡಲು ತಯಾರಿಲ್ಲ, ಅವರು ಡಿನೋಟಿಫೈ ಮಾಡಿ ಎಷ್ಟು ಅನುಭವಿಸುತ್ತಿದ್ದಾರೆ ಎಂದು ಅವರಿಗೆ ಗೊತ್ತು. ಯಡಿಯೂರಪ್ಪ ಅವರಿಗೆ, ನನಗೂ ಗೊತ್ತಿದೆ ಎಂದು ತಿರುಗೇಟು ನೀಡಿದರು. ಎಸ್‌ಐಆರ್ ಬಗ್ಗೆ ನಮಗೂ ಅರಿವಿದೆ. ಪಕ್ಷದ ನಾಯಕರಿಗೆ ಇದರ ಬಗ್ಗೆ ತಿಳಿವಳಿಕೆ ಮೂಡಿಸಲಾಗಿದೆ. ಎಲ್ಲಾ ಪಕ್ಷಗಳು ಈ ಕೆಲಸ ಮಾಡುತ್ತಿವೆ. ಬಿಜೆಪಿ, ಜನತಾದಳ ಎಲ್ಲರೂ ಅವರವರ ಮತಗಳನ್ನು ರಕ್ಷಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಪ್ರಶ್ನೆಗೆ ಉತ್ತರಿಸಿದರು.



ಕೇರಳದ ನೂತನ ಮುಖ್ಯಮಂತ್ರಿಗೆ ಶುಭಕೋರುತ್ತೇನೆ

ಕೇರಳಕ್ಕೆ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಬಗ್ಗೆ ಕೇಳಿದಾಗ, ನಾನು ಅವರಿಗೆ ಶುಭಾಶಯ ಕೋರುತ್ತೇನೆ. ಪಕ್ಷದಲ್ಲಿ ಅರ್ಹತೆ ಇರುವ ಅನೇಕ ಹಿರಿಯ ನಾಯಕರಿದ್ದಾರೆ. ಪಕ್ಷದ ಹೈಕಮಾಂಡ್ ಸತೀಶನ್ ಅವರಿಗೆ ಅವಕಾಶ ನೀಡಿದೆ. ಅವರಿಗೆ ಮನಃಪೂರ್ವಕವಾಗಿ ಶುಭ ಕೋರುತ್ತೇನೆ. ಎಲ್ಲಾ ಮೈತ್ರಿ ಪಕ್ಷಗಳಿಗೆ ಧನ್ಯವಾದ ತಿಳಿಸುತ್ತೇನೆ. ಜನರ ಆಶೋತ್ತರಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತೇವೆ ಎಂದರು.

ಸಿಟಿಸಿ ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಸುಧಾಕರ್ ಇಂಗಿತ

ಶಿಕ್ಷಣದಲ್ಲಿ ಪಠ್ಯಕ್ರಮ ಬದಲಾವಣೆ ಅಗತ್ಯ

ಬೆಂಗಳೂರು: ತಾಂತ್ರಿಕ ಶಿಕ್ಷಣದಲ್ಲಿ ಪಠ್ಯಕ್ರಮ ಬದಲಾವಣೆಯ ಅಗತ್ಯವಿದೆ. ವಿಶೇಷವಾಗಿ ಇಂಜಿನಿಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿ ಸುಮಾರು ಶೇ. 75ರಷ್ಟು ಬೋಧಕ ವೃಂದಕ್ಕೆ ಸಾಮರ್ಥ್ಯ ವೃದ್ಧಿ ಹಾಗೂ ತರಬೇತಿ ಕಾರ್ಯಕ್ರಮದ ಅಗತ್ಯವಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ ಸುಧಾಕರ್ ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಉನ್ನತ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿರುವ ಕ್ಯಾಂಪಸ್ ಟು ಕೆರಿಯರ್ (ಸಿಟಿಸಿ) ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅನುಭವಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ. ಇಂಜಿನಿಯರಿಂಗ್, ತಾಂತ್ರಿಕ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಹಾಗೂ ಸುರಕ್ಷತಾ ಕೋರ್ಸ್‌ಗಳಲ್ಲಿ ಸಮಗ್ರ ಬದಲಾವಣೆ ತರಬೇಕಾಗಿದೆ ಎಂದರು.

ಶಿಕ್ಷಣ ಇಲಾಖೆ ವಿದ್ಯಾರ್ಥಿ ಕೇಂದ್ರಿತ ಸಂಸ್ಥೆಯಾಗಿದೆ. ವಿವಿಧ ವಿಭಾಗಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಕೌಶಲಾಭಿವೃದ್ಧಿಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಆರಂಭಿಸಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ವೃತ್ತಿ ಅಭಿವೃದ್ಧಿಗೆ ಅಗತ್ಯವಾದ ತರಬೇತಿ ಮತ್ತು ಅನುಭವ ಒದಗಿಸುವತ್ತ ಉನ್ನತ ಶಿಕ್ಷಣ ಇಲಾಖೆ ಕಾರ್ಯನಿರ್ವಹಿಸುತ್ತಿದೆ ಎಂದು ವಿವರಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಸಮಗ್ರ ಪರಿವರ್ತನೆ ತರಲು ಸರ್ಕಾರ ಹಾಗೂ ಶಿಕ್ಷಣ ಸಂಸ್ಥೆಗಳು ಹಲವು ಹೊಸ ಯೋಜನೆಗಳನ್ನು ರೂಪಿಸುತ್ತಿದೆ. ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಅವಕಾಶಗಳನ್ನು ಕಲ್ಪಿಸುವ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಹೊಸ ಆಲೋಚನೆಗಳು, ತಂತ್ರಜ್ಞಾನ ಆಧಾರಿತ ವ್ಯವಸ್ಥೆಗಳು ಹಾಗೂ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ ಎಂದು ಹೇಳಿದರು.

ಇಂಗ್ಲಿಷ್ ಸಂವಹನ ಕೌಶಲ ವೃದ್ಧಿಗೆ ಕಾರ್ಯಕ್ರಮ ನೆರವು



ಡಿಜಿಟಲ್ ಪರಿವರ್ತನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಆನ್‌ಲೈನ್ ಸೇವೆಗಳ ಸುಧಾರಣೆ, ತಂತ್ರಜ್ಞಾನ ಆಧಾರಿತ ಬೆಂಬಲ ಹಾಗೂ ಶಿಕ್ಷಣದ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಜಾರಿಗೆ ತರಲು ಸಿದ್ಧತೆ ನಡೆದಿದೆ. ಜೊತೆಗೆ ಯುವಕರಿಗಾಗಿ ಬ್ರಿಟಿಷ್ ಕೌನ್ಸಿಲ್ ಸಹಯೋಗದಲ್ಲಿ ಇಂಗ್ಲಿಷ್ ಭಾಷಾ ಪರಿಣತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆರಂಭಿಸಲಾಗುತ್ತಿದೆ. ರಾಷ್ಟ್ರೀಯ ವಿಶ್ವವಿದ್ಯಾಲಯ ಹಾಗೂ ಇತರೆ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಸಂವಹನ ಕೌಶಲ ವೃದ್ಧಿಗೆ ಈ ಕಾರ್ಯಕ್ರಮ ನೆರವಾಗಲಿದೆ. ಬ್ರಿಟಿಷ್ ಕೌನ್ಸಿಲ್ ಹಾಗೂ ಇತರೆ ಸಂಸ್ಥೆಗಳ ಸಹಭಾಗಿತ್ವದಲ್ಲಿ ವ್ಯಾಪಕ ಇಂಗ್ಲಿಷ್ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಸಿಬ್ಬಂದಿ ಆಯ್ಕೆ ಪರೀಕ್ಷೆಗೆ ಪೂರಕ ಪಠ್ಯಕ್ರಮವನ್ನು ರೂಪಿಸುವ ಪ್ರಯತ್ನ ನಡೆಸುತ್ತಿದ್ದೇವೆ ಎಂದು ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.

ಡ್ರೋನ್ ಉದ್ಯಮ ನಾವೀನ್ಯತೆ ಅಭಿವೃದ್ಧಿ: ಖರ್ಗೆ




• **ಬೆಂಗಳೂರು:** ಡ್ರೋನ್‌ಗಳು ಆಡಳಿತದ ದಕ್ಷತೆ ಮತ್ತು ಸಾರ್ವಜನಿಕ ಸೇವೆಗಳ ಸ್ವರೂಪವನ್ನು ಗಮನಾರ್ಹವಾಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿರುವುದರಿಂದ ಅವುಗಳ ವ್ಯಾಪಕ ಬಳಕೆಗೆ ರಾಜ್ಯ ಸರ್ಕಾರವು ಅಗತ್ಯ ಉತ್ತೇಜನ ನೀಡಲಿದೆ ಎಂದು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ತಮ್ಮ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಡ್ರೋನ್ ಉದ್ಯಮದ ಅಭಿವೃದ್ಧಿಗೆ ಸಂಬಂಧಿಸಿದ ಉನ್ನತ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು. ಡ್ರೋನ್‌ಗಳ ತಯಾರಿಕೆ ಮತ್ತು ಬಳಕೆಯಲ್ಲಿ ಕರ್ನಾಟಕವು ಆದ್ಯತೆಯ ಕೇಂದ್ರವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಕಾರ್ಯಪ್ರವೃತ್ತವಾಗಿದೆ. ಮೂಲಸೌಕರ್ಯಗಳ ಅಭಿವೃದ್ಧಿ, ಸರ್ಕಾರದ ಅಗತ್ಯ ಬೆಂಬಲ ಮತ್ತು ಅಗತ್ಯ ಇರುವ ಕಡೆಗಳಲ್ಲಿ ಡ್ರೋನ್ ಬಳಕೆ ಹೆಚ್ಚಿಸುವ ಮೂಲಕ ದೇಶದ ಡ್ರೋನ್ ಆರ್ಥಿಕತೆಯನ್ನು ಮುನ್ನಡೆಸಲು ಕರ್ನಾಟಕ ಬದ್ಧವಾಗಿದೆ. ಡ್ರೋನ್‌ಗಳ ಪರೀಕ್ಷಾ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು, ನಿಯಂತ್ರಣ ಕ್ರಮಗಳನ್ನು ಸರಳೀಕರಿಸುವುದು, ಈ ವಲಯದ ನವೋದ್ಯಮಗಳು ಮತ್ತು ಡ್ರೋನ್ ಉದ್ಯಮವು ನಾವೀನ್ಯತೆ ಸಾಧಿಸಲು ಮತ್ತು ದೊಡ್ಡ ಪ್ರಮಾಣದಲ್ಲಿ ಬೆಳೆಯುವುದಕ್ಕೆ ರಾಜ್ಯ ಸರ್ಕಾರ ಗಮನ ನೀಡುತ್ತಿದೆ ಎಂದು ಹೇಳಿದರು.

ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಇಲಾಖೆಯು ಭಾರತದ ಡ್ರೋನ್ ಒಕ್ಕೂಟದ (ಡಿಎಫ್‌ಐ) ಸಹಯೋಗದಲ್ಲಿ ಈ ಸಭೆ ಆಯೋಜಿಸಿತ್ತು. ಡ್ರೋನ್ ನಾವೀನ್ಯತೆ ಮತ್ತು ಅವುಗಳ ಬಳಕೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿ ಇರುವುದಕ್ಕೆ ಇನ್ನಷ್ಟು ವೇಗ ನೀಡಲು ಕೈಗೊಳ್ಳಬೇಕಾದ ಕ್ರಮಗಳನ್ನು ಸಭೆಯಲ್ಲಿ ಪ್ರಮುಖವಾಗಿ ಚರ್ಚಿಸಲಾಯಿತು. ಡ್ರೋನ್ ತಯಾರಿಕೆ, ಪರೀಕ್ಷೆ ಮತ್ತು ದಿನನಿತ್ಯದ ಬಳಕೆಗೆ ಅವುಗಳನ್ನು ವ್ಯಾಪಕವಾಗಿ ಬಳಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉದ್ಯಮದ ಪ್ರಮುಖರು ಸಲಹೆಗಳನ್ನು ನೀಡಿದರು.

ಬೆಂಗಳೂರಿನ ಸಮೀಪ ಪ್ರತ್ಯೇಕ ಡ್ರೋನ್ ಹಾರಾಟ ಪರೀಕ್ಷಾ ಸೌಲಭ್ಯ ಅಭಿವೃದ್ಧಿಪಡಿಸುವುದನ್ನು ಸಭೆಯಲ್ಲಿ ಪ್ರಮುಖವಾಗಿ ಚರ್ಚಿಸಲಾಯಿತು. ಡ್ರೋನ್ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಪರಿಣತರ ಸಂಖ್ಯೆ ಹೆಚ್ಚಿಸಲು ಕಾರ್ಯಪಡೆಯ ತರಬೇತಿ, ಆಡಳಿತ ಸುಧಾರಣೆ ಮತ್ತು ಸೇವೆಗಳನ್ನು ದಕ್ಷ ರೀತಿಯಲ್ಲಿ ಒದಗಿಸಲು ಪ್ರಮುಖ ವಲಯಗಳಲ್ಲಿ ಡ್ರೋನ್ ತಂತ್ರಜ್ಞಾನಗಳ ಬಳಕೆ ವಿಸ್ತರಿಸುವುದು; ಡ್ರೋನ್ ರೇಸಿಂಗ್, ಹ್ಯಾಕಥಾನ್‌ಗಳು, ನಾವೀನ್ಯತೆ ಪ್ರದರ್ಶನಗಳು ಮತ್ತು ಸಾರ್ವಜನಿಕರ ತೊಡಗಿಸಿಕೊಳ್ಳುವಿಕೆ ಉತ್ತೇಜಿಸಲು ಡ್ರೋನ್ ಉತ್ಸವ ಆಯೋಜನೆ ಮತ್ತು ಬೆಂಗಳೂರನ್ನು ಡ್ರೋನ್ ತಂತ್ರಜ್ಞಾನದ ರಾಷ್ಟ್ರೀಯ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು. ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಎನ್. ಮಂಜುಳಾ, ರಾಹುಲ್ ಶರಣಪ್ಪ ಸಂಕನೂರ, ಕೆಡಿಇಎಂ ಸಿಇಒ ಸಂಜೀವ್ ಕುಮಾರ್ ಗುಪ್ತಾ, ಭಾರತದ ಡ್ರೋನ್ ಒಕ್ಕೂಟದ ಅಧ್ಯಕ್ಷ ಸ್ಮಿತ್ ಶಾ ಸಭೆಯಲ್ಲಿ ಇದ್ದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೇನೇಜಿ

◈ ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಪ್ರಧಾನಿ ಮೋದಿ ನೀಡಿರುವ ಹೇಳಿಕೆಯ ಬಗ್ಗೆ ಪ್ರತಿಪಕ್ಷವಾದ ಕಾಂಗ್ರೆಸ್ ಸಣ್ಣತನದಿಂದ ಮಾತನಾಡುವುದು ಸರಿಯಲ್ಲ - **ಕುಮಾರಸ್ವಾಮಿ**
- ಅವರಿಂದ ದೊಡ್ಡತನದ ವರ್ತನೆಯನ್ನು ನಿರೀಕ್ಷಿಸುವುದು ಮೂರ್ಖತನ!

ದಿನ ಭವಿಷ್ಯ

ಮೇಷ
ಧಾವಂತದ ದಿನ. ಪ್ರತಿಕ್ಷಣ ಒತ್ತಡ. ನಿಮ್ಮ ಕಾರ್ಯ ಮೆಚ್ಚುಗೆಗೂ ಪಾತ್ರ. ವೃತ್ತಿ ಸಂಬಂಧ ಪ್ರಯಾಣ ಸಂಭವ. ಆಪ್ತರ ಸಾಹಚರ್ಯ.

ವೃಷಭ
ಯೋಚಿಸಿ ಮಾತಾಡಿ. ಏಕೆಂದರೆ ಮಾತಿನಿಂದ ವಿವಾದಕ್ಕೆ ಸಿಲುಕುವ ಸಾಧ್ಯತೆ ಇದೆ. ಹಣಕಾಸು ಒತ್ತಡ. ಖರ್ಚು ಅನಿವಾರ್ಯ.

ಮಿಥುನ
ಯಶಸ್ವೀ ದಿನ. ಉದ್ದೇಶ ಈಡೇರಿಕೆ. ವೃತ್ತಿಯಲ್ಲಿ ಉನ್ನತಿ. ಮನಸ್ತಾಪ ಇದ್ದವರ ಜತೆ ಸಂಬಂಧ ಸುಧಾರಣೆ. ಆರೋಗ್ಯ ಸುಸ್ಥಿರ.

ಕಟಕ
ನಿಮ್ಮ ಮನಸ್ಥಿತಿಯ ದುರುಪಯೋಗ ಮಾಡಿಕೊಳ್ಳಲು ಅವಕಾಶ ಕೊಡದಿರಿ. ವ್ಯಕ್ತಿಯೊಬ್ಬರು ನಿಮ್ಮ ಮೇಲೆ ದೊಡ್ಡ ಪ್ರಭಾವ ಬೀರಬಹುದು.

ಸಿಂಹ
ನಿಮ್ಮ ಕೆಲಸ ತಕ್ಷಣಕ್ಕೆ ಫಲ ನೀಡದು. ಸರಿಯಾದ ಯೋಜನೆ ಮುಖ್ಯ. ಖಾಸಗಿ ಬದುಕಲ್ಲಿ ಸಂವಹನ ಕೊರತೆ. ಭಿನ್ನಮತ ಸಂಭವ.

ಕನ್ಯಾ
ಕೆಲಸದಲ್ಲಿ ವಿಘ್ನ. ಆದರೂ ಕೌಶಲದಿಂದ ಕಾರ್ಯ ಮುಗಿಸುವಿರಿ. ಖರೀದಿ ಹುಮ್ಮಸ್ಸು. ಅವಿವಾಹಿತರಿಗೆ ಸಂಗಾತಿ ಸಿಗಬಹುದು.

ತುಲಾ
ಸುಲಭದಲ್ಲಿ ಕಾರ್ಯ ಸಾಧ್ಯ. ಸಮಸ್ಯೆಗೆ ತಕ್ಷಣವೇ ಸ್ಪಂದಿಸುವ ರೀತಿ ಯಶಸ್ಸು ತರಲಿದೆ. ಆಹಾರದಲ್ಲಿ ಹಿತಮಿತ ಸಾಧಿಸಿರಿ.

ವೃಶ್ಚಿಕ
ನಿಮ್ಮ ಪರಿಶ್ರಮಕ್ಕೆ ಸೂಕ್ತ ಫಲ ಪಡೆಯುವ ಕಾಲ ಬಂದಿದೆ. ಕುಟುಂಬದಲ್ಲಿ ಭಿನ್ನಮತ ಸಂಭವ. ದೇಹಾಲಸ್ಯ ಕಾಡಬಹುದು.

ಧನು
ಪ್ರಮುಖ ನಿರ್ಧಾರ ಮುಂದೂಡಿ. ಕಾಲ ಪಕ್ವವಾಗಿಲ್ಲ. ನಿಮ್ಮಿಂದ ಲೋಪ ಉಂಟಾದೀತು. ಎಚ್ಚರದಿಂದ ಕಾರ್ಯ ನಿರ್ವಹಿಸಿ.

ಮಕರ
ನಿಂತ ನೀರಾಗಬೇಡಿ. ಹೊಸತನಕ್ಕೆ ತುಡಿಯಿರಿ. ವಾಗ್ವಾದದಿಂದ ದೂರವಿರಿ. ಆರೋಗ್ಯ ಸಮಸ್ಯೆ ಕಾಡಬಹುದು. ಆರ್ಥಿಕ ಒತ್ತಡ ಹೆಚ್ಚಲಿದೆ.

ಕುಂಭ
ಒತ್ತಡದಿಂದ ನಿರಾಳತೆ. ಸಮಸ್ಯೆ ಪರಿಹಾರದ ಸಂಕೇತ. ಆಪ್ತರಿಂದ ಬೆಂಬಲ. ಆತ್ಮೀಯರ ಜತೆ ಕಾಲ ಕಳೆಯುವ ಅವಕಾಶ.

ಮೀನ
ಕುಟುಂಬ ಸದಸ್ಯರ ಒಳಿತಿಗೆ ಶ್ರಮಿಸುವಿರಿ. ನಿಮ್ಮ ಕುರಿತಂತೆಯೆ ಅಂತರ್ಮಥನ. ಆರ್ಥಿಕ ಸ್ಥಿತಿ ಉತ್ತಮ. ಆದರೂ ಖರ್ಚು ಹೆಚ್ಚಿದ ಚಿಂತೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 6,0,4,1

ಸಿಎಂ, ಡಿಸಿಎಂ ಡಿಕೆಶಿ ಸೇರಿದಂತೆ ಪ್ರಮುಖ ನಾಯಕರು ಭಾಗಿ: ಪರಮೇಶ್ವರ್

19ಕ್ಕೆ ಸಾರ್ಥಕ ಸಮಾವೇಶ

• **ತುಮಕೂರು:** ಇದೇ ಮೇ 20ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರಕ್ಕೆ 3 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿ ಸಾರ್ಥಕ ಸೇವೆಗಳ ಸಮರ್ಪಣಾ ಸಮಾವೇಶ ಮೇ 19ರಂದು ನಡೆಯಲಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದ್ದಾರೆ.

ತುಮಕೂರಿನ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹಲವಾರು ಯೋಜನೆಗಳನ್ನು ರಾಜ್ಯ ಸರ್ಕಾರ ಚಾಲನೆ ನೀಡಿ ಅವುಗಳನ್ನು ಆದ್ಯತಾ ಕಾರ್ಯಕ್ರಮಗಳಾಗಿ ತೆಗೆದುಕೊಂಡು ಸಮರ್ಪಕವಾಗಿ ಅನುಷ್ಠಾನಗೊಳಿಸಿದೆ. ಈ ವಿಷಯವನ್ನು ಜನಸಮುದಾಯದೊಂದಿಗೆ ಹಂಚಿಕೊಳ್ಳಬೇಕಿತ್ತು, ಹೀಗಾಗಿ ಕಾರ್ಯಕ್ರಮ ಆಯೋಜಿಸಿದ್ದೇವೆ ಎಂದು ಹೇಳಿದರು.

» ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ 3 ವರ್ಷ

» 20ರ ಬದಲು ಒಂದು ದಿನ ಮುಂಚಿತವಾಗಿ ಸಮಾರಂಭ

ಈ ಮೊದಲು ಮೇ 20ರಂದೇ ಸಮಾರಂಭ ನಡೆಸಲು ಉದ್ದೇಶಿಸಲಾಗಿತ್ತಾದರೂ, ಅಂದು ಸಾರಿಗೆ ನೌಕರರ ಮುಷ್ಕರ ಇರುವುದರಿಂದ ಸಮಾರಂಭಕ್ಕೆ ಅಡ್ಡಿಯಾಗದಂತೆ ಮುನ್ನಾದಿನವೇ ನಡೆಸಲು ಸಿಎಂ ಸಿದ್ದರಾಮಯ್ಯ ಸೂಚಿಸಿದ್ದಾರೆ. ಹೀಗಾಗಿ, ದಿನಾಂಕ ಬದಲಾವಣೆ ಮಾಡಲಾಗಿದೆ ಎಂದು ಪರಮೇಶ್ವರ್ ತಿಳಿಸಿದರು. ಹಾಗೆಯೇ, ಉಳಿದ ಎಲ್ಲ ಕಾರ್ಯಕ್ರಮಗಳು ಪೂರ್ವ ಯೋಜಿತದಂತೆ ನಡೆಯಲಿವೆ ಎಂದು ವಿವರಿಸಿದ್ದಾರೆ.

ಹಕ್ಕುಪತ್ರಗಳ ವಿತರಣೆ: ಪ್ರಮುಖವಾಗಿ ಕಂದಾಯ ಇಲಾಖೆಯಲ್ಲಿ ಬಹುಕಾಲದಿಂದ ಜಮೀನು ವಾರಸುದಾರರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಕಳೆದ ಒಂದೂವರೆ ವರ್ಷದಲ್ಲಿ ತುಮಕೂರು ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಅಭೂತಪೂರ್ವ ಅಭಿವೃದ್ಧಿ ಕೆಲಸಗಳು ನಡೆದಿದ್ದು, ಮೇ 19ರ ಕಾರ್ಯಕ್ರಮದಲ್ಲಿ ಇ-ಪೌತಿ ಖಾತೆ, ದರಖಾಸ್ತು ಪೋಡಿ, ಕಂದಾಯ ಗ್ರಾಮ ಹಕ್ಕುಪತ್ರಗಳು, ಪಿಂಚಣಿ ಸೇರಿದಂತೆ ಸುಮಾರು 1,52,492 ಫಲಾನುಭವಿಗಳಿಗೆ ಹಕ್ಕುಪತ್ರ ಮತ್ತು ಸೌಲಭ್ಯಗಳನ್ನು ವಿತರಿಸಲಾಗುತ್ತಿದೆ. ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಸುಮಾರು 14 ಲಕ್ಷ ಜನರಿಗೆ ಈ ಸೌಲಭ್ಯಗಳು ದೊರೆತಿವೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ತುಮಕೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸುಮಾರು 2ಲಕ್ಷಕ್ಕೂ ಹೆಚ್ಚು ಜನ ಆಗಮಿಸಲಿದ್ದು, ಅವರಿಗೆ ಬಸ್ಸುಗಳ ವ್ಯವಸ್ಥೆ ಹಾಗೂ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜ ಉಪಸ್ಥಿತರಿದ್ದರು.



682 ಕೋಟಿ ರೂ.ಗಳ ಕಾಮಗಾರಿಗಳಿಗೆ ಚಾಲನೆ

ಅಲ್ಲದೆ, ತುಮಕೂರು ಜಿಲ್ಲೆಯಲ್ಲಿ ಆಗಿರುವ ಇತರೆ ಇಲಾಖೆಗಳ ಅಭಿವೃದ್ಧಿ ಸಂಬಂಧಿಸಿದಂತೆ ಸುಮಾರು 682 ಕೋಟಿ ರೂ.ಗಳ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಉದ್ಘಾಟನೆ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸಿಕೊಡಲಿದ್ದಾರೆ ಎಂದು ಸಚಿವರು ತಿಳಿಸಿದರು. ಈ ಕಾರ್ಯಕ್ರಮ ಸಂಪೂರ್ಣ ಸರ್ಕಾರಿ ಕಾರ್ಯಕ್ರಮವಾಗಿದ್ದು, ಪಕ್ಷಾತೀತ ಕಾರ್ಯಕ್ರಮ ಎಂದು ಈ ಹಿಂದೆಯೇ ತಿಳಿಸಲಾಗಿತ್ತು. ಅಂತೆಯೇ ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಎಲ್ಲಾ ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಮುಖಂಡರು ಆಗಮಿಸಲಿದ್ದಾರೆ.

ರಾಜ್ಯದಲ್ಲಿ ಮೂರು ದಿನ ಗುಡುಗು ಸಹಿತ ಮಳೆ

• **ಬೆಂಗಳೂರು:** ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದಿನ ಮೂರು ದಿನಗಳ ಕಾಲ ಗುಡುಗು ಮಿಂಚು, ಗಾಳಿ ಸಹಿತ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಸಿದೆ.

ಈ ಹಿನ್ನೆಲೆಯಲ್ಲಿ ಹಲವು ಪ್ರದೇಶಗಳಿಗೆ ಆರೆಂಜ್ ಅಲರ್ಟ್ ಮತ್ತು ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಐಎಂಡಿ ಪ್ರಕಾರ, ಕರ್ನಾಟಕದ ಉತ್ತರ ಒಳನಾಡು ಭಾಗದಲ್ಲಿ ಮೇ 17 ರವರೆಗೆ ತಾಸಿಗೆ 40-50 ಕಿ.ಮೀ. ವೇಗದ ಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಮೇ 16 ಮತ್ತು 17 ರಂದು ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ.

ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಈ ಭಾಗದಲ್ಲಿ ಗಾಳಿಯ ವೇಗ ಪ್ರತಿ ತಾಸಿಗೆ 40 ರಿಂದ 50 ಕಿ.ಮೀ. ಇರಲಿದೆ. ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಕೆಲವು ಕಡೆ ಹಗುರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ವಾಯುಭಾರ ಕುಸಿತ ಪರಿಣಾಮ

ಬಂಗಾಳ ಕೊಲ್ಲಿಯ ನೈಋತ್ಯ ಭಾಗದಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಇದರ ಪರಿಣಾಮವಾಗಿ ಸುಮಾರು 5.8 ಕಿ.ಮೀ. ಎತ್ತರದವರೆಗೆ ಸುಳಿಗಾಳಿ ಉಂಟಾಗಿದೆ. ಇದರ ನೇರ ಪ್ರಭಾವ ಕರ್ನಾಟಕದ ಹವಾಮಾನದ ಮೇಲೆ ಬೀರಲಿದೆ. ರಾಜ್ಯಾದ್ಯಂತ ಮಳೆಯ ಜೊತೆಗೆ ಗುಡುಗು ಮಿಂಚಿನ ಆರ್ಭಟ ಹೆಚ್ಚಿರಲಿದ್ದು, ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸುವಂತೆ ಹವಾಮಾನ ಇಲಾಖೆ ಮನವಿ ಮಾಡಿದೆ.

ಕರಾವಳಿಯಲ್ಲಿ ಮಳೆ: ಓರ್ವ ಸಾವು

• **ಮಂಗಳೂರು:** ಕೆಲವು ದಿನಗಳಿಂದ ಕರಾವಳಿಯ ಕೆಲವು ಪ್ರದೇಶಗಳಲ್ಲಿ ಗಾಳಿ, ಗುಡುಗು ಸಹಿತ ಭಾರೀ ಮಳೆಯಾಗುತ್ತಿದೆ. ಉಡುಪಿ ಜಿಲ್ಲೆಯಲ್ಲಿ ಸಿಡಿಲಿನ ಆಘಾತಕ್ಕೆ ಓರ್ವ ಬಲಿಯಾದ ಘಟನೆ ಗುರುವಾರ ಸಂಜೆ ಸಂಭವಿಸಿದೆ. ದ.ಕ. ಜಿಲ್ಲೆಯ ವಿವಿಧೆಡೆ ಮಳೆಗೆ ಹಾನಿ ಸಂಭವಿಸಿದ್ದುಘಿ, ಶುಕ್ರವಾರ ಮಳೆಯ ಆಗಮನವಿರಲಿಲ್ಲ. ಕುಂದಾಪುರದಲ್ಲಿ ರಸ್ತೆ ಕಾಮಗಾರಿ ಪರಿಶೀಲನೆ ನಡೆಸುತ್ತಿದ್ದ ಕಾರ್ಮಿಕರಿಗೆ ಸಿಡಿಲು ಬಡಿದ ಪರಿಣಾಮ ಓರ್ವ ಕಾರ್ಮಿಕ ಮೃತಪಟ್ಟ ಘಟನೆ ಹೊಸಾಡು ಗ್ರಾಮದ ಆರಾಟಿ ಸೇತುವೆ ಸಮೀಪ ಗುರುವಾರ ಸಂಜೆ ನಡೆದಿದೆ. ಸಾವನ್ನಪ್ಪಿದ ಕಾರ್ಮಿಕನನ್ನು ಪಂಜಾಬ್ ರಾಜ್ಯದ ನಿವಾಸಿ ಅಶಿತೋಷ್ ಸಿಂಗ್ (35) ಎಂದು ಗುರುತಿಸಲಾಗಿದೆ. ಇನ್ನೋರ್ವ ಕಾರ್ಮಿಕ ಗಂಭೀರವಾಗಿ ಗಾಯಗೊಂಡು ಕುಂದಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾರ್ಕಳ ತಾಲೂಕಿನ ಮುಂಡೂರು ಗ್ರಾಮದಲ್ಲಿ ಜಯ ಸಾಲ್ಯಾನ್ ಎಂಬವರ ಮನೆಗೆ ಸಿಡಿಲು ಬಡಿದು, ಮನೆಯ ಗೋಡೆ ಹಾಗೂ ವಿದ್ಯುತ್ ಉಪಕರಣಗಳು ಹಾನಿಗೀಡಾಗಿವೆ.

ಜೂ.21ಕ್ಕೆ ನೀಟ್ ಮರುಪರೀಕ್ಷೆ

ಪುಟ ೧➔ ನೀಟ್-ಯುಜಿ ಪರೀಕ್ಷೆಯಲ್ಲಿನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು. ವಿದ್ಯಾರ್ಥಿಗಳ ಭವಿಷ್ಯವು ನಮ್ಮ ಮೊದಲ ಆದ್ಯತೆಯಾಗಿದೆ. ಈ ಬಾರಿ ಅಕ್ರಮ ನಡೆಯಲು ನಾವು ಬಿಡುವುದಿಲ್ಲ, ಸರ್ಕಾರ ನಿಮ್ಮೊಂದಿಗಿದೆ ಎಂದು ಹೇಳಿದರು. ಪರೀಕ್ಷಾ ಪ್ರಕ್ರಿಯೆಯಲ್ಲಿ ಅಕ್ರಮಗಳ ಆರೋಪಗಳ ಹಿನ್ನೆಲೆಯಲ್ಲಿ ಮೇ 3ರಂದು ನಡೆದ ನೀಟ್-ಯುಜಿಯನ್ನು ರದ್ದುಪಡಿಸಲಾಯಿತು. ಪರೀಕ್ಷಾ ಅಕ್ರಮಗಳು ಬೆಳಕಿಗೆ ಬಂದ ಬೆನ್ನಲ್ಲೇ ತನಿಖೆ ಪ್ರಾರಂಭಿಸಲಾಗಿದೆ ಎಂದು ಪ್ರಧಾನ್ ಹೇಳಿದರು. ಸರ್ಕಾರವು ಈ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಿದೆ ಮತ್ತು ತನಿಖೆಯ ಬಗ್ಗೆ ವಿಶ್ವಾಸವನ್ನು ವ್ಯಕ್ತಪಡಿಸಿದೆ ಎಂದು ಸಚಿವರು ಹೇಳಿದರು. ಅಕ್ರಮದಲ್ಲಿ ಭಾಗಿಯಾದ ಯಾರನ್ನೂ ಬಿಡಲಾಗುವುದಿಲ್ಲ ಎಂದು ಸಿಬಿಐ ಹೇಳಿದ್ದು ಸರಿಯಾಗಿದೆ. ಯಾರಾದರೂ ಎನ್‌ಟಿಎ ವ್ಯಾಪ್ತಿಯೊಳಗೆ ಇರಲಿ ಅಥವಾ ಹೊರಗೆ ಇರಲಿ, ಯಾರನ್ನೂ ಬಿಡಲಾಗುವುದಿಲ್ಲ ಎಂದು ಅವರು ಹೇಳಿದರು.

ಮೇ 26ಕ್ಕೆ ಕೇರಳಕ್ಕೆ ಮುಂಗಾರು

ಪುಟ ೧➔ ಮುಂದಿನ 24 ಗಂಟೆಗಳಲ್ಲಿ 115.6 ಮಿ.ಮೀ.ನಿಂದ 204.4 ಮಿ.ಮೀ.ನಷ್ಟು ಮಳೆಯಾಗುವ ಸಾಧ್ಯತೆ ಇದೆ ಎಂದು ಸೂಚಿಸಿದೆ. ಕೊಲ್ಲಂ, ಎರ್ನಾಕುಳಂ, ತ್ರಿಶೂರು, ಪಾಲಕ್ಕಾಡ್, ಕೋಯಿಕ್ಕೋಡ್, ವಯನಾಡ್, ಕಣ್ಣೂರು, ಕಾಸರಗೋಡು ಜಿಲ್ಲೆಗಳಲ್ಲಿ ಕೂಡ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ 64.5 ಮಿ.ಮೀ.ನಿಂದ 115.5 ಮಿ.ಮೀ.ನಷ್ಟು ತೀವ್ರ ಮಳೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಜೋರಾದ ಗಾಳಿ ಬೀಸುವ ಎಚ್ಚರಿಕೆ: ಮೇ 21ರವರೆಗೂ ಕೇರಳದಾದ್ಯಂತ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದ್ದು, ಮೇ 16ರವರೆಗೂ ಗರಿಷ್ಠ ತಾಪಮಾನ 33 ಡಿಗ್ರಿ ಸೆಲ್ಸಿಯಸ್‌ನಷ್ಟು ಇರಲಿದೆ.

ಭೋಜಶಾಲೆ ಸರಸ್ವತಿಗೆ ಸಮರ್ಪಿತ ದೇವಸ್ಥಾನ

ಪುಟ ೧➔ ಆ ಆದೇಶದ ಪ್ರಕಾರ ಮಂಗಳವಾರ ಹಿಂದುಗಳಿಗೆ ಪೂಜೆ ಹಾಗೂ ಶುಕ್ರವಾರ ಮುಸ್ಲಿಮರಿಗೆ ನಮಾಜ್ ಅವಕಾಶ ನೀಡಲಾಗುತ್ತಿತ್ತು. ಹಿಂದುಗಳ ಪೂಜಾ ಹಕ್ಕುಗಳನ್ನು ಅನಾವಶ್ಯಕವಾಗಿ ಸೀಮಿತಗೊಳಿಸಲಾಗಿತ್ತು ಎಂದು ಅರ್ಜಿದಾರರು ವಾದಿಸಿದ್ದರು.

ನ್ಯಾಯಾಲಯವು ಎಎಸ್‌ಐಗೆ ಸ್ಮಾರಕದ ಸಂರಕ್ಷಣೆ, ನಿರ್ವಹಣೆ ಹಾಗೂ ಧಾರ್ಮಿಕ ಚಟುವಟಿಕೆಗಳ ಮೇಲ್ವಿಚಾರಣೆಯ ಸಂಪೂರ್ಣ ಅಧಿಕಾರ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದೆ. ಇದೇ ವೇಳೆ ಮುಸ್ಲಿಂ ಸಮುದಾಯದ ಧಾರ್ಮಿಕ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು ಧಾರ ಜಿಲ್ಲೆಯಲ್ಲೇ ಪರ್ಯಾಯ ಮಸೀದಿ ಅಥವಾ ಪ್ರಾರ್ಥನಾ ಕೇಂದ್ರ ನಿರ್ಮಾಣಕ್ಕೆ ಸೂಕ್ತ ಜಾಗ ಒದಗಿಸುವ ಬಗ್ಗೆ ರಾಜ್ಯ ಸರ್ಕಾರ ಪರಿಗಣಿಸಬಹುದು ಎಂದು ಸೂಚಿಸಿದೆ. ಲಂಡನ್‌ನ ಸಂಗ್ರಹಾಲಯದಲ್ಲಿರುವ ಸರಸ್ವತಿ ದೇವಿಯ ವಿಗ್ರಹವನ್ನು ಭಾರತಕ್ಕೆ ಮರಳಿ ತಂದು ಭೋಜಶಾಲೆಯಲ್ಲಿ ಮರು ಪ್ರತಿಷ್ಠಾಪಿಸುವಂತೆ ಸಲ್ಲಿಸಿರುವ ಮನವಿಗಳನ್ನೂ ಕೇಂದ್ರ ಸರ್ಕಾರ ಪರಿಗಣಿಸಬಹುದು ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಶತಮಾನಗಳ ವಿವಾದಕ್ಕೆ ತಿರುವು ನೀಡಿದ ತೀರ್ಪು

ಪುಟ ೧➔ ಧಾರದಲ್ಲಿರುವ ಈ ಸಮುಚ್ಚಯದಲ್ಲಿ ಹಿಂದೂ ಶೈಲಿಯ ಕಂಬಗಳು, ಸಂಸ್ಕೃತ ಶಾಸನಗಳು, ದೇವಾಲಯದ ವಿನ್ಯಾಸಗಳು ಹಾಗೂ ಮಸೀದಿ ಶೈಲಿಯ ಕಮಾನುಗಳು, ಮಿಹ್ರಾಬ್‌ಗಳು ಮತ್ತು ಪಕ್ಕದಲ್ಲೇ ಕಮಾಲ್ ಮೌಲಾ ದರ್ಗಾ ಇರುವುದರಿಂದಲೇ ವಿವಾದ ವರ್ಷಗಳಿಂದ ಮುಂದುವರಿಯುತ್ತಿತ್ತು.

ರಾಜ್ಯದಲ್ಲಿ ಎಸ್‌ಐಆರ್‌ಗೆ ಸಿದ್ಧತೆ

ಪುಟ ೧➔ ಉಳಿದ ಮ್ಯಾಪಿಂಗ್ ಕಾರ್ಯ ಶೀಘ್ರ ಪೂರ್ತಿಗೊಳಿಸಲಾಗುವುದು ಎಂದು ಹೇಳಿದರು. ಈ ಬಾರಿ ರಾಜ್ಯದಲ್ಲಿ 2026 ಅಕ್ಟೋಬರ್ 1 ಅನ್ನು ಅರ್ಹತಾ ದಿನಾಂಕ ಎಂದು ನಿಗದಿಪಡಿಸಲಾಗಿದೆ. ಅರ್ಹತಾ ದಿನಾಂಕ ಎಂದರೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಅರ್ಜಿದಾರರ ಕನಿಷ್ಠ ವಯಸ್ಸು 18 ವರ್ಷ ತುಂಬಿದೆಯೇ ಎಂದು ನಿರ್ಧರಿಸುವ ಮಾನದಂಡವಾಗಿದೆ ಎಂದರು. ಪರಿಷ್ಕರಣೆ ಪ್ರಕ್ರಿಯೆ, ನಮೂನೆಗಳು ಹಾಗೂ ವೇಳಾಪಟ್ಟಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳ ಅಧಿಕೃತ ಜಾಲತಾಣಗಳು, ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಹಾಗೂ ಭಾರತದ ಚುನಾವಣಾ ಆಯೋಗದ ಅಧಿಕೃತ ಜಾಲತಾಣಗಳಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಕಾರ್ಯಪಡೆ ಸನ್ನದ್ಧ

ಪುಟ ೧➔ ಪ್ರಸ್ತುತ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಂದ 25,284 ಬೂತ್ ಮಟ್ಟದ ಏಜೆಂಟರನ್ನು (ಬಿಎಲ್‌ಎ) ನೇಮಕ ಮಾಡಲಾಗಿದೆ. ರಾಜಕೀಯ ಪಕ್ಷಗಳಲ್ಲಿ ಪ್ರತಿಯೊಂದು ಮತಗಟ್ಟೆಗೆ ಬೂತ್ ಏಜೆಂಟರನ್ನು ನೇಮಕ ಮಾಡುವಂತೆ ಕೇಳಲಾಗಿದೆ. ಮತದಾರರು ಗಣತಿ ನಮೂನೆಗಳ ವಿತರಣೆ ಹಾಗೂ ಸಂಗ್ರಹಣೆಗಾಗಿ ಮತಗಟ್ಟೆ ಮಟ್ಟದ ಅಧಿಕಾರಿಗಳು ಕೈಗೊಳ್ಳುವ ಮನೆಮನೆ ಭೇಟಿ ಪ್ರಕ್ರಿಯೆಯಲ್ಲಿ ಸಂಪೂರ್ಣ ಸಹಕಾರ ನೀಡುವಂತೆ ಅನ್ಬುಕುಮಾರ್ ಮನವಿ ಮಾಡಿದರು.



“ ರಾಜ್ಯದಲ್ಲಿ ಚುನಾವಣಾ ಆಯೋಗದಿಂದ ಎಸ್‌ಐಆರ್ ಪ್ರಕ್ರಿಯೆಯು ಪ್ರಾರಂಭವಾಗಿದ್ದು, ಇದಕ್ಕೆ ಬೇಕಾದ ಸಿದ್ಧತೆಯನ್ನು ಸರ್ಕಾರ ಮಾಡಿಕೊಳ್ಳುತ್ತಿದೆ.

■ **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಎನ್ಯೂಮರೇಷನ್ ಫಾರ್ಮ್ ಪ್ರಮುಖ ಅಂಶಗಳು

» ಪರಿಷ್ಕರಣೆ ಸಮಯದಲ್ಲಿ ಬಿಎಲ್‌ಒಗಳು ಪ್ರತಿ ಮನೆಗೆ ಭೇಟಿ ನೀಡಿ ಎರಡು ಸೆಟ್ ಫಾರ್ಮ್‌ಗಳನ್ನು ನೀಡಲಿದ್ದಾರೆ

» ಮತದಾರರು ಅರ್ಜಿಯನ್ನು ಭರ್ತಿ ಮಾಡಿ ಒಂದು ಪ್ರತಿಯನ್ನು ಬಿಎಲ್‌ಒಗೆ ನೀಡಿ, ಮತ್ತೊಂದನ್ನು ಸಹಿ ಪಡೆದು ತಮ್ಮ ಬಳಿ ಇಟ್ಟುಕೊಳ್ಳಬೇಕು

» ಪ್ರತಿಯೊಂದು ಅರ್ಜಿ ಕ್ಯೂಆರ್ ಕೋಡ್ ಹೊಂದಿದ್ದು, ಬಿಎಲ್‌ಒಗಳು ಆ್ಯಪ್ ಮೂಲಕ ಸುಲಭವಾಗಿ ಸ್ಕ್ಯಾನ್ ಮಾಡಿ ಮಾಹಿತಿ ತುಂಬಲಿದ್ದಾರೆ

» ಮತದಾರರ ಅನುಪಸ್ಥಿತಿಯಲ್ಲಿ ಮನೆಯಲ್ಲಿರುವ 18 ವರ್ಷ ಮೇಲ್ಪಟ್ಟ ಯಾವುದೇ ಸದಸ್ಯರು ಈ ಅರ್ಜಿಗೆ ಸಹಿ ಮಾಡಬಹುದಾಗಿದೆ

» ಭೌತಿಕವಾಗಿ ಅರ್ಜಿ ನೀಡಲು ಸಾಧ್ಯವಾಗದವರು ಆನ್‌ಲೈನ್ ಮೂಲಕವೂ ಸಲ್ಲಿಕೆ ಮಾಡಬಹುದು.

ಬೆಲೆ ಏರಿಕೆ ನಿರ್ಣಯ ಹಿಂಪಡೆಯಿರಿ: ಸಿಎಂ

ಪುಟ ೧➔ ಎಲ್‌ಪಿಜಿ ಪೂರೈಕೆ ವ್ಯತ್ಯಯವಾಗಿರುವ ನಡುವೆಯೇ ಬೆಲೆ ಏರಿಕೆಯು ಜನಜೀವನವನ್ನು ಅಸ್ತವ್ಯಸ್ತಗೊಳಿಸಲಿದೆ. ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ತಲಾ 3 ರೂ. ಏರಿಕೆ ಮಾಡುವ ಮೂಲಕ ದೇಶದ ಜನಸಾಮಾನ್ಯರ ಬದುಕಿನ ಮೇಲೆ ಬರೆ ಎಳೆದಿದೆ. ಇದು ಬೆಲೆ ಏರಿಕೆಯಲ್ಲ, ಭಾರತದ ಸಾಮಾನ್ಯ ಜನರ ದೈನಂದಿನ ಬದುಕಿನ ಮೇಲೆ ನಡೆಸಿದ ನೇರ ದಾಳಿಯಾಗಿದೆ ಎಂದು ಟೀಕಿಸಿದರು.

ದಿನಬಳಕೆ ವಸ್ತುಗಳೂ ತುಟ್ಟಿ: ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀ. ಒಂದಕ್ಕೆ 106 ರೂ. ದಾಟಿದೆ. ಡೀಸೆಲ್ ದರವು 94 ರೂ. ಆಗಿದೆ. ಈ ಏರಿಕೆಯು ಕೇವಲ ಬಂಕ್‌ಗಳಿಗೆ ಸೀಮಿತಗೊಳ್ಳುವುದಿಲ್ಲ. ಇದರೊಂದಿಗೆ ಸಾರಿಗೆ ವೆಚ್ಚ, ತರಕಾರಿ, ಹಣ್ಣು, ಹಾಲು, ಸೇರಿದಂತೆ ಪ್ರತಿಯೊಂದು ದಿನಬಳಕೆ ವಸ್ತುಗಳ ದರ ಏರಿಕೆಯಾಗುತ್ತದೆ. ಇದರಿಂದ ಕಾರ್ಮಿಕರು, ರೈತರು, ಸಣ್ಣ ವ್ಯಾಪಾರಿಗಳು, ಮಹಿಳೆಯರು ಹಾಗೂ ಮಧ್ಯಮ ವರ್ಗದವರು ದೈನಂದಿನ ಬದುಕು ನಡೆಸುವುದು ಮತ್ತಷ್ಟು ದುಸ್ತರವಾಗಲಿದೆ ಎಂದು ತಿಳಿಸಿದರು.

ಜನತೆಯ ಮೇಲೆ ಸರ್ಕಾರದ ವೈಫಲ್ಯದ ನಷ್ಟ: ಮೋದಿ ಸರ್ಕಾರವು ಹಣದುಬ್ಬರ ನಿಯಂತ್ರಿಸಲು, ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತ ತಡೆಯಲು, ದೇಶದ ಆರ್ಥಿಕ ನಿರ್ವಹಣೆಯಲ್ಲಿ ಹಾಗೂ ಒಟ್ಟಾರೆ ಸಾಮಾನ್ಯ ಜನರ ಹಿತ ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿದೆ. ದೇಶದ ಜನತೆಯ ಹಿತಾಸಕ್ತಿಗಳನ್ನು ಕಾಪಾಡುವ ಬದಲು ಅವರಿಂದಲೇ ಹಣ ಕಿತ್ತುಕೊಂಡು ತನ್ನ ವೈಫಲ್ಯದ ನಷ್ಟ ಭರಿಸುತ್ತಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಕಡಿಮೆಯಿದ್ದಾಗ ಅದರ ಲಾಭವನ್ನು ಮೋದಿ ಸರ್ಕಾರ ಎಂದಿಗೂ ಜನತೆಗೆ ಬಿಟ್ಟುಕೊಡಲೇ ಇಲ್ಲ. ಆಗಲೂ ಜನತೆಯಿಂದ ದೊಡ್ಡ ಮೊತ್ತದ ತೆರಿಗೆ ಸಂಗ್ರಹಿಸಿ ತನ್ನ ಬೊಕ್ಕಸ ತುಂಬಿಕೊಂಡಿತ್ತು. ದರ ಏರಿಕೆಯಾದಾಗಲೂ ಅದರ ಸಂಪೂರ್ಣ ಭಾರ ಜನಸಾಮಾನ್ಯರ ಮೇಲೆ ಹೊರಿಸಿ ಕೈತೊಳೆದುಕೊಳ್ಳುತ್ತಿದೆ. ಇದು ಆಡಳಿತ ನಡೆಸುವ ಕ್ರಮವಲ್ಲ, ಇದು ದೇಶದ ಜನತೆಯ ಮೇಲಿನ ಘೋರ ಶೋಷಣೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಲೆ ಏರಿಕೆ ಮೋದಿ ಕೊಡುಗೆ: ಡಿಸಿಎಂ ಡಿ.ಕೆ.ಶಿವಕುಮಾರ್



ಪುಟ ೧➔ ಅದಕ್ಕೆ ಅವರು ವಿದ್ಯುತ್ ಉಳಿಸಿ, ಪೆಟ್ರೋಲ್ ಬಳಸಬೇಡಿ ಎನ್ನುತ್ತಿದ್ದಾರೆ. ಇಂಧನಗಳನ್ನು ಬಳಸದೇ ದಿನನಿತ್ಯ ಜೀವನ ಮಾಡುವುದು ಹೇಗೆ? ಅನೇಕರು ತಮ್ಮ ಬೆಂಗಾವಲು ಪಡೆ ವಾಹನಗಳನ್ನು ಕಡಿತ ಮಾಡಿದ್ದಾರೆ. ಆದರೆ, ಜನ ಸಾಮಾನ್ಯ ಓಡಾಟ ಮಾಡದೇ ಇರಲು ಹೇಗೆ ಸಾಧ್ಯ? ಬದುಕಿಗಾಗಿ ಪ್ರಯಾಣ ಮಾಡಬೇಕಲ್ಲವೇ? ಚಿನ್ನ ಖರೀದಿ ಮಾಡಬೇಡಿ ಎಂದಿದ್ದಾರೆ, ಇದು ಹೇಗೆ ಸಾಧ್ಯ? ವಿವಾಹಿತ ಮಹಿಳೆಯರಿಗೆ ಮಾಂಗಲ್ಯ ಸರ ಬೇಕು. ಹೀಗಿದ್ದಾಗ ಚಿನ್ನ ಕೊಂಡುಕೊಳ್ಳಬೇಡಿ ಎಂಬುದು ಹೇಗೆ ಸಾಧ್ಯ? ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ತೈಲ ಉಳಿಕೆಗೆ ಸುಪ್ರೀಂ ಕೋರ್ಟ್ ಸಾಥ್

ಪುಟ ೧➔ ಮಂಗಳವಾರ, ಬುಧವಾರ, ಗುರುವಾರಗಳಂದು ವಕೀಲರು, ದಾವೆದಾರರು ನ್ಯಾಯಾಲಯದ ಮುಂದೆ ದೈಹಿಕವಾಗಿ ಅಥವಾ ಆನ್ಲೈನ್ ಮುಖೇನ ಹಾಜರಾಗುವ ಆಯ್ಕೆ ಹೊಂದಿದ್ದಾರೆ. ರಿಜಿಸ್ಟ್ರಿ ಅಧಿಕಾರಿಗಳು ತಮ್ಮ ಕಚೇರಿಯ ಸ್ಥಳಕ್ಕೆ ಅನುಗುಣವಾಗಿ ವರ್ಕ್ ಫ್ರಂ ಹೋಮ್ ನಿಯಮದಲ್ಲಿ ಬದಲಾವಣೆ ಮಾಡಿಕೊಳ್ಳಲು ಸುಪ್ರೀಂ ಅವಕಾಶ ನೀಡಿದೆ.

ಕಾರ್ ಪೂಲಿಂಗ್‌ನಿಂದ ಇಂಧನ ಉಳಿತಾಯ: ಈ ಸಂದರ್ಭ ಸುಪ್ರೀಂ ಕೋರ್ಟ್‌ಗೆ ಹಾಜರಾಗುವ ನ್ಯಾಯಮೂರ್ತಿಗಳು ಕಾರು ಪೂಲಿಂಗ್ ವ್ಯವಸ್ಥೆ ಅಳವಡಿಸಿಕೊಂಡು ಆದಷ್ಟು ಇಂಧನ ಉಳಿತಾಯ ಮಾಡಲು ನಿರ್ಧಾರ ತೆಗೆದುಕೊಂಡಿದ್ದಾರೆ.

ಸಚಿವಾಲಯಕ್ಕೆ ನಡೆದು ಬಂದ ಬಿಹಾರದ ಸಿಎಂ: ಪ್ರಧಾನಿ ಮೋದಿ ಇಂಧನ ಉಳಿತಾಯದ ಮನವಿಗೆ ಪ್ರತಿಕ್ರಿಯಿಸಿದ ಬಿಹಾರ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ, ಶುಕ್ರವಾರ ತಮ್ಮ ಅಧಿಕೃತ ನಿವಾಸದಿಂದ ಪಾಟ್ನಾದಲ್ಲಿನ ಸಚಿವಾಲಯಕ್ಕೆ ಹಿರಿಯ ಅಧಿಕಾರಿಗಳ ಜತೆ ನಡೆದುಕೊಂಡೇ ಹೋಗಿದ್ದಾರೆ. ಸಿಎಂ ಸಾಮ್ರಾಟ್ ತಮ್ಮ ಲೋಕ ಸೇವಕ ನಿವಾಸದಿಂದ ಸಂಪುಟ ಸಚಿವಾಲಯಕ್ಕೆ 500 ಮೀ. ದೂರ ನಡೆದುಕೊಂಡು ಹೋಗಿದ್ದಾರೆ. ಬಿಹಾರ ಶಿಕ್ಷಣ ಸಚಿವ ಮಿಥಿಲೇಶ್ ತಿವಾರಿ ಆಟೋರಿಕ್ಷಾ ಮೂಲಕ ಕಚೇರಿಗೆ ತೆರಳಿದ್ದರು.

ಭಾರತದಲ್ಲಿ 48 ಸಾವಿರ ಕೋಟಿ ರೂ. ಹೂಡಿಕೆ

ಪುಟ ೧➔ 6 ಒಪ್ಪಂದಗಳಲ್ಲಿ ಒಂದಾಗಿ, ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್, ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ ನಡುವೆ ಭಾರತದ ಇಂಧನ ಭದ್ರತೆಯನ್ನು ಬಲಪಡಿಸುವ ಉದ್ದೇಶದಿಂದ ತಂತ್ರಜ್ಞಾನದ ಸಹಯೋಗ ಒಪ್ಪಂದಕ್ಕೆ ಸಹಿಹಾಕಲಾಯಿತು. ಇಂಡಿಯನ್ ಆಯಿಲ್ ಲಿಮಿಟೆಡ್ ಕಂಪನಿ ಮತ್ತು ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ ನಡುವಿನ ಪ್ರತ್ಯೇಕ ಒಪ್ಪಂದವು ಎಲ್‌ಪಿಜಿ ಮಾರಾಟ ಮತ್ತು ಖರೀದಿಯಲ್ಲಿ ಹೊಸ ಅವಕಾಶಗಳಿಗೆ ನೆರವಾಗಲಿದ್ದು, ಇಂಧನದ ದೀರ್ಘಾವಧಿಯ ಪೂರೈಕೆ ಹಾಗೂ ಉಭಯ ಕಂಪನಿಗಳ ನಡುವೆ ದೀರ್ಘಾವಧಿಯ ಮಾರಾಟ-ಖರೀದಿ ಒಪ್ಪಂದಕ್ಕೂ ದಾರಿ ಮಾಡಿಕೊಡಲಿದೆ. ಭಾರತ, ಯುಎಇ ರಕ್ಷಣಾ ಕೈಗಾರಿಕಾ ಸಹಕಾರ, ತಂತ್ರಜ್ಞಾನ ಹಂಚಿಕೆ, ನವೀನತೆ ಮತ್ತು ಪ್ರಾದೇಶಿಕ ಭದ್ರತಾ ಸಹಕಾರದ ಮೇಲೆ ಕೇಂದ್ರೀಕೃತವಾದ ತಂತ್ರಜ್ಞಾನದ ರಕ್ಷಣಾ ಸಹಭಾಗಿತ್ವದ ಚೌಕಟ್ಟಿನ ಮೇಲೂ ಸಹಿ ಹಾಕಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ತಿಳಿಸಿದೆ.

ಮಳೆ, ಗಾಳಿ ಆರ್ಭಟಕ್ಕೆ ಅಪಾರ ಹಾನಿ

◆**ಬೀಳಗಿ:** ತಾಲೂಕಿನಾದ್ಯಾಂತ ಗುರುವಾರ ಸಂಜೆಯಿಂದ ತಡರಾತ್ರಿವರೆಗೆ ಸುರಿದ ಮಳೆ, ಗಾಳಿ, ಸಿಡಿಲಿನಿಂದ ಅಪಾರ ಹಾನಿಯಾಗಿದೆ. ರಭಸವಾಗಿ ಬೀಸಿದ ಗಾಳಿಯಿಂದ ದನದ ಶೆಡ್‌ಗಳು, ಜನ ವಾಸವಿರುವ ಪತ್ರಾಸ ಶೆಡ್ಡುಗಳ ಮೇಲ್ಛಾವಣಿ ಹಾರಿ ಹೋಗಿದ್ದರೆ, ಮನೆಯ ಮೇಲಿನ ಸಿಂಟೆಕ್ಸ್‌ಗಳು ಪತ್ತೆ ಇಲ್ಲದಂತೆ ಹಾರಿ ಹೋಗಿವೆ. ಗಿಡಮರಗಳು, ವಿದ್ಯುತ್ ಕಂಬಗಳು ಧರಾಶಾಯಿಯಾಗಿವೆ.

ಬೀಳಗಿ ಪಟ್ಟಣ ಹಾಗೂ ವಿವಿಧ ಗ್ರಾಮಗಳಲ್ಲಿನ ರಸ್ತೆ ಮೇಲೆ ಗಾಳಿಯ ರಭಸಕ್ಕೆ ಗಿಡಮರಗಳು ಮುರಿದು ಬಿದ್ದು ವಾಹನ ಸಂಚಾರಕ್ಕೆ ಕೆಲ ಹೊತ್ತು ಅಡಚಣೆಯಾಗಿ ಪರಿಣಮಿಸಿತು. ಅಲ್ಲದೇ ವಿದ್ಯುತ್ ಸಂಪರ್ಕ ಕಡಿತಗೊಂಡು ಜನರು ಪರದಾಡುವಂತಾಯಿತು. ಚಿಕ್ಕಾಲಗುಂಡಿ, ಅರಕೇರಿ ಹಾಗೂ ರೊಳ್ಳಿ ಗ್ರಾಮದಲ್ಲಿ ಮರಗಳು ಬಿದ್ದಿವೆ. ತಗಡಿನ ಶೆಡ್‌ಗಳು ಹಾರಿ ಹೋಗಿವೆ.



ಬೀಳಗಿ ತಾಲೂಕಿನಲ್ಲಿ ಒಟ್ಟು 260 ವಿದ್ಯುತ್ ಕಂಬಗಳು, 25 ಕೆವಿಯ 8, 63 ಕೆವಿಯ 2, 100 ಕೆವಿಯ 1 ಸೇರಿದಂತೆ ಒಟ್ಟು 11 ಪರಿವರ್ತಕ(ಟಿಸಿ)ಗಳು ಮತ್ತು ಅದರ ಚೌಕಟ್ಟುಗಳು ಮುರಿದು ಬಿದ್ದಿವೆ. 5 ಕಿ.ಮೀ. ಎಚ್‌ಟಿ ವಾಹಕ(ತಂತಿ), 2 ಕಿ.ಮೀ. 2 ಎಸಿ ಎಸ್ಸಾರ್ ಎಲ್‌ಟಿ ವಾಹಕ ಹರಿದು ಬಿದ್ದಿದೆ.

■ **ಮಂಜುನಾಥ ಬೋಕಿ, ಎಇಇ, ಹೆಸ್ಕಾಂ ಬೀಳಗಿ**

ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಇಂದು

◆**ಹುಬ್ಬಳ್ಳಿ:** ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ(ಎಸ್‌ಎಎಸ್‌ಎಸ್) ವತಿಯಿಂದ ಮೇ 16 ರಂದು ಬೆಳಿಗ್ಗೆ10 ಗಂಟೆಗೆರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಎಸ್‌ಎಎಸ್‌ಎಸ್ ನ ರಾಷ್ಟ್ರೀಯ ಅನ್ನಪ್ರಸಾದ ಸದಸ್ಯ ಹಾಗೂ ಉದ್ಯಮಿ ವಿ.ಎಸ್.ವಿ. ಪ್ರಸಾದ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2008 ರಲ್ಲಿ ಆರಂಭವಾದ ಸಮಿತಿಯು ಶಬರಿಮಲೈ ಅಯ್ಯಪ್ಪ ಭಕ್ತರ ಶ್ರೇಯಾಭಿವೃದ್ಧಿಗೆ ಶ್ರಮಿಸುತ್ತಿದೆ. ಪಂಪಾ ನದಿಯ ಸ್ವಚ್ಛತೆ, ಶಬರಿ ಮಲೈನಲ್ಲಿ ಪ್ಲಾಸ್ಟಿಕ್ ಬಳಸದಂತೆ ಜಾಗೃತಿ, ಅಯ್ಯಪ್ಪಸ್ವಾಮಿ ಭಕ್ತರಿಗೆ ಉಚಿತ ಪ್ರಸಾದ, ಸರ್ಕಾರದಿಂದ ದೊರೆಯಬೇಕಾದ ಸೌಲಭ್ಯಗಳ ಬಗ್ಗೆ ಧ್ವನಿ ಎತ್ತುವ ಕಾರ್ಯ ಸಮಿತಿ ಮಾಡುತ್ತಿದೆ ಎಂದರು.



ಹುಬ್ಬಳ್ಳಿ ಶಿರೂರ ಪಾರ್ಕ್‌ನ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಯುತ್ತಿದ್ದು, ಮುಂದಿನ ಕಾರ್ಯ ರೂಪರೇಷಗಳ ಬಗ್ಗೆ ಚರ್ಚೆ ನಡೆಸಲಾಗುವುದು ಎಂದು ತಿಳಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ಗೋ ಪೂಜೆಯಿಂದ ಆರಂಭವಾಗಿ, ಸಮಿತಿ ಧ್ವಜಾರೋಹಣ ನಡೆಯಲಿದೆ. ಸಮಾಜಂ ರಾಷ್ಟ್ರೀಯ ಅಧ್ಯಕ್ಷ ಎಸ್. ಜೆ. ಆರ್. ಕುಮಾರ್ ಅಧ್ಯಕ್ಷತೆ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಚಾಲನೆ ನೀಡಲಿದ್ದಾರೆ. ಹಿರಿಯ ಮಾರ್ಗದರ್ಶಕ ಸೇತು ಮಾಧವನ್, ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಶಾಸಕ ಮಹೇಶ ಟೆಂಗಿನಕಾಯಿ, ಸಮಾಜಂ ರಾಜ್ಯ ಸಂಯೋಜಕ ಪಿ.ಎಸ್. ಪ್ರಕಾಶ, ಶ್ರೀರಾಮ ಸೇನೆಯ ಅಧ್ಯಕ್ಷ ಪ್ರಮೋದ ಮುತಾಲಿಕ್, ಉದ್ಯಮಿ ಆನಂದ ಸಂಕೇಶ್ವರ ಎ.ಆರ್. ಮೋಹನ್, ಟಿ.ಬಿ. ಶೇಖರ್, ಸೆಲ್ವನ್ ಮುರುಘನ್, ಬುಚ್ಚಿರೆಡ್ಡಿ, ಪ್ರಕಾಶ ಗಣಪತಿ, ಈರೂಡ್ ಎನ್ ರಾಜನ್, ದೊರೈ ಶಂಕರ್, ವಿನೋದ್, ಡಾ.ಎನ್ ಜಯರಾಂ ಭಾಗವಹಿಸುವರು ಎಂದರು. ಎಸ್‌ಎಎಸ್‌ಎಸ್‌ನ ಕರ್ನಾಟಕ ರಾಜ್ಯಾಧ್ಯಕ್ಷ ಡಾ. ಎನ್. ಜಯರಾಂ, ಪಿ.ಬಿ. ಶಂಕರ ಹಾಗೂ ಮೋಹನ ಗುರು ಸ್ವಾಮಿ ಇದ್ದರು.

ಹಿಜಾಬ್, ಜನಿವಾರ, ಸಿಖ್ಖರ್ ಪೇಟಾ ಎಲ್ಲದಕ್ಕೂ ಅನುಮತಿ

◆**ವಿಜಯಪುರ:** ಹಿಜಾಬ್, ಜನಿವಾರ, ಸಿಖ್ಖರ್ ಪೇಟಾ ಎಲ್ಲದಕ್ಕೂ ಅನುಮತಿ ನೀಡಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.



ಶಾಲಾ, ಕಾಲೇಜುಗಳಲ್ಲಿ ಹಿಜಾಬ್ ಧರಿಸುವ ಕುರಿತಾದ ವಿವಾದ ವಿಚಾರಕ್ಕೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, ಜನಿವಾರ ತೆಗೆದಾಗ ಗಲಾಟೆ ಮಾಡಿದ್ರಿ. ಹಿಜಾಬ್, ಜನಿವಾರ, ನಾವು ಲಿಂಗ ಕಟ್ಟಿಕೊಳ್ಳುತ್ತೇವೆ ಅದಕ್ಕೂ ಅನ್ವಯ ಆಗುತ್ತೆ. ಸಿಖ್ಖರು ಪೇಟಾ ಹಾಕೋತ್ತಾರೆ. ಅದಕ್ಕೂ ಅನುಮತಿ ನೀಡಿದ್ದೇವೆ. ನಾವು ಸೆಲೆಕ್ಟೀವ್ ಅಲ್ಲ ಸಮಗ್ರ ಎಂದರು. ಎಲ್ಲಾ ಜಾತಿ ಮತ್ತು ಧರ್ಮಗಳ ಅವರವರ ಆಚರಣೆಗೆ ಗೌರವ ಕೊಡುತ್ತೇವೆ. ಜನರು ಜನಿವಾರ ಧರಿಸುವುದು, ಲಿಂಗ ಧರಿಸುವುದು ಅಥವಾ ಸಿಖ್ಖರು ಪೇಟ ಧರಿಸುವುದು ಅವರವರ ಧಾರ್ಮಿಕ ಹಕ್ಕು. ಅದನ್ನು ನಾವು ಬೆಂಬಲಿಸುತ್ತೇವೆ. ದೇವಸ್ಥಾನ ಅಥವಾ ಮಠಗಳ ಮೇಲೆ ಕೇಸರಿ ಧ್ವಜ ಇರುವುದು ಸಹಜ. ಆದರೆ ಈ ಹಿಂದೆ ಶಾಲಾ ಮಕ್ಕಳು ಕೇಸರಿ ಶಾಲು ಧರಿಸುತ್ತಿದ್ದರಾ , ಸುಮ್ಮನೆ ಮಂಡ ನ್ಯಾಯವೇಕೆ ಎಂದರು.

ವಿಭೂತಿ, ಕುಂಕುಮ ಹಚ್ಚಿಕೊಂಡು ಶಾಲೆಗೆ ಹೋಗಬಹುದಾ ಎಂಬ ವಿಚಾರಕ್ಕೆ, ತಪ್ಪು ಏನಿದೆ, ವಿಭೂತಿ ಕುಂಕುಮ ಹಚ್ಚಿಕೊಂಡು ಶಾಲೆಗೆ ಹೋಗಬಹುದು. ಕುಂಕುಮ ವಿಭೂತಿ ನಾಮ ಹಚ್ಚಿಕೊಂಡು ಹೋಗ್ತಿದ್ರು, ಅದಕ್ಕೆ ಯಾರು ಬೇಡಾ ಅನ್ನುತ್ತಾರೆ. ಜನಿವಾರ ಇಷ್ಟಲಿಂಗ ಹಾಕಿಕೊಂಡಿರುತ್ತಾರೆ. ಅದಕ್ಕೆ ಯಾರು ಬೇಡಾ ಅನ್ನುತ್ತಾರೆ ಎಂದರು. ಕೇಸರಿ ಶಾಲು ಹಂಚುತ್ತೇವೆ–ಯತ್ನಾಳ ಹೇಳಿಕೆ ವಿಚಾರಕ್ಕೆ, ನಾನು ಅವರ ಬಗ್ಗೆ ಮಾತನಾಡಲ್ಲ, ಸಾಂಪ್ರದಾಯಿಕ ಗುರುತುಗಳು, ಶಾಲಾ- ಕಾಲೇಜುಗಳಿಗೆ ವಿದ್ಯಾರ್ಥಿಗಳು ವಿಭೂತಿ, ಕುಂಕುಮ ಅಥವಾ ನಾಮ ಇಟ್ಟುಕೊಂಡು ಬರುವುದರಲ್ಲಿ ಯಾವುದೇ ತಪ್ಪಿಲ್ಲ, ಮತ್ತು ಅದಕ್ಕೆ ಯಾರೂ ಅಡ್ಡಿಪಡಿಸುವುದಿಲ್ಲ ಎಂದರು. ಪೆಟ್ರೋಲ್, ಡೀಸೆಲ್ ದರ ಏರಿಕೆ ವಿಚಾರಕ್ಕೆ, ನರೇಂದ್ರ ಮೋದಿಯವರ ಅಚ್ಚೆ ದಿನದಲ್ಲಿ ಏನೆಲ್ಲ ಆಗಬೇಕು ಎಲ್ಲವೂ ಆಗುತ್ತಿದೆ ಎಂದರು.

ಶಿವಂ ಅಸೋಸಿಯನ್‌ನ ಕಚೇರಿಗಳು ಸೀಜ್

◆**ಬೆಳಗಾವಿ:** ಹೆಚ್ಚಿನ ಬಡ್ಡಿ ನೀಡುವುದಾಗಿ ಮಾಜಿ ಸೈನಿಕರು ಹಾಗೂ ಸಾರ್ವಜನಿಕರಿಂದ ಹಣ ಸಂಗ್ರಹಿಸಿರುವ ಆರೋಪ ಎದುರಿಸುತ್ತಿರುವ ಶಿವಂ ಅಸೋಸಿಯನ್‌ನ ಶಿವಾನಂದ ನೀಲಣ್ಣವರಗೆ ಸೇರಿದ ಕಚೇರಿಗಳ ಮೇಲೆ ನಡೆದ ದಾಳಿ ಪ್ರಕರಣ ದಿನೇ ದಿನದಿಂದ ದಿನಕ್ಕೆ ಭಾರಿ ತಿರುವು ಪಡೆಯುತ್ತಿದೆ. ಅಧಿಕಾರಿಗಳು ಶಿವಾನಂದ ನೀಲಣ್ಣನವರ್‌ಗೆ ಸಂಬಂಧಿಸಿದ ಮೂರು ಕಚೇರಿಗಳು ಹಾಗೂ ಅಪಾರ್ಟ್‌ಮೆಂಟ್‌ನಲ್ಲಿದ್ದ ಕೆಲವು ಪ್ಲಾಟ್‌ಗಳನ್ನು ಸೀಜ್ ಮಾಡಿದ್ದಾರೆ.

ದಾಳಿಯ ವೇಳೆ ಕಚೇರಿಗಳಲ್ಲಿದ್ದ ಕಂಪ್ಯೂಟರ್‌ಗಳು, ಲ್ಯಾಪ್‌ಟಾಪ್‌ಗಳು, ಮಹತ್ವದ ದಾಖಲೆಗಳು ಹಾಗೂ ನೂರಾರು ಕೋಟಿ ರೂಪಾಯಿ ಮೌಲ್ಯದ ಬಾಂಡ್‌ಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಇದೇ ವೇಳೆ ಶಿವಾನಂದ ನೀಲಣ್ಣನವರ್ ಬಳಸುತ್ತಿದ್ದ ಮೊಬೈಲ್ ಫೋನ್ ಕೂಡ ಸೀಜ್ ಮಾಡಲಾಗಿದ್ದು, ಡಿಜಿಟಲ್ ವ್ಯವಹಾರಗಳ ಮಾಹಿತಿ ಸಂಗ್ರಹಿಸಲು ತಾಂತ್ರಿಕ ಪರಿಶೀಲನೆ ಆರಂಭಿಸಲಾಗಿದೆ ಎಂದು ತಿಳಿದುಬಂದಿದೆ.

ಸುಮಾರು 35 ಸಾವಿರ ಹೂಡಿಕೆದಾರರು ಇದ್ದಾರೆ. ಒಟ್ಟು 2500 ಕೋಟಿ ರೂಪಾಯಿ ವ್ಯವಹಾರ ನಡೆದಿದೆ ಎಂದು ಅಧಿಕಾರಿಗಳಿಗೆ ಮಾಹಿತಿ ನೀಡಿರುವುದು ಪ್ರಕರಣಕ್ಕೆ ಮತ್ತಷ್ಟು ಗಂಭೀರತೆಯನ್ನು ಪಡೆದುಕೊಂಡಿದೆ.

ಶನಿವಾರ ಬೆಳಿಗ್ಗೆ ಸಿಐಡಿ ಅಧಿಕಾರಿಗಳ ತಂಡ ಬೆಳಗಾವಿಗೆ ಎಂಟ್ರಿ ಕೊಡಲಿದ್ದು, ಈ ಪ್ರಕರಣದಲ್ಲಿ ಆರ್‌ಬಿಐ ಹಾಗೂ ಸೆಬಿ ಮಾರ್ಗಸೂಚಿಗಳನ್ನು ಸಂಪೂರ್ಣ ಉಲ್ಲಂಘಿಸಿ, ಯಾವುದೇ ಅಧಿಕೃತ ಅನುಮತಿ ಪಡೆಯದೇ ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಆನ್ಲೈನ್ ಮೂಲಕ ವರ್ಗಾವಣೆ ಮಾಡಲಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಇದಲ್ಲದೆ ಅಧಿಕಾರಿಗಳು ಫ್ರೀಜ್ ಮಾಡಿರುವ ನಾಲ್ಕು ಬ್ಯಾಂಕ್ ಖಾತೆಗಳಲ್ಲಿ ಸುಮಾರು 400 ಕೋಟಿ ರೂಪಾಯಿ ಠೇವಣಿ ಇರುವ ಮಾಹಿತಿ ದೊರೆತಿದ್ದು, ಉಳಿದ ಹಣ ಎಲ್ಲಿಗೆ ವರ್ಗಾವಣೆ ಮಾಡಲಾಗಿದೆ ಎಂಬುದರ ಕುರಿತು ತನಿಖೆ ಮುಂದುವರಿದಿದೆ.

ಯುವಕ ಆತ್ಮಹತ್ಯೆ

◆**ಹುಬ್ಬಳ್ಳಿ:** ಇಲ್ಲಿನ ಉಣಕಲ್ ಗ್ರಾಮದ ಬಳಿಗಾರ ಓಣಿಯಲ್ಲಿ ಯುವಕನೋರ್ವ ಆತ್ಮಹತ್ಯೆ ಮಾಡಿಕೊಂಡ ಘಟನೆ ಶುಕ್ರವಾರ ಬೆಳಗ್ಗೆ ನಡೆದಿದೆ. ಚಂದ್ರಶೇಖರ್ ಗೌಡ ಮೋದಗೊಪ್ಪ(26) ಮೃತಪಟ್ಟವನು. ಯಾವುದೋ ವಿಚಾರವನ್ನು ಮನಸಿಗೆ ಹಚ್ಚಿಕೊಂಡು ಧನದ ಕೊಟ್ಟಿಗೆಯ ತಗಡಿನ ಶೆಡ್ಡಿಗೆ ವಾಯರ್ ನಿಂದ ಉರಲು ಹಾಕಿಕೊಂಡು ಮೃತಪಟ್ಟಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ ಕನಿಷ್ಠ (ಕ್ವಿಂ)	₹ ಗರಿಷ್ಠ (ಕ್ವಿಂ)
ಅಲಸಂದೆ ಕಾಳು	3329	5676
ಕಡಲೆಕಾಳು	2111	5898
ಉದ್ದಿನಕಾಳು	3570	6525
ಒಣ ಮೆಣಸಿನಕಾಯಿ	26000	30000
ಹೆಸರುಕಾಳು	3010	5159
ನೆಲಗಡಲೆ (ಶೇಂಗಾ)	7520	7909
ಹುರುಳಿ ಕಾಳು	3959	3959
ಜೋಳ	2009	3459
ಮೆಕ್ಕೆಜೋಳ	1976	1976
ಮಡಿಕೆ (ಮಟಕಿ)	8159	13971
ಈರುಳ್ಳಿ	500	1800
ಆಲೂಗಡ್ಡೆ	1200	1700
ಕುಸುಬೆ	5230	5230
ಸೋಯಾಬಿನ್	6570	7220
ಗೋಧಿ	1857	2535

P and Sc No: 01/2026
IN THE COURT OF CIVIL JUDGE (JR DIN) NAVALGUND AT: NAVALGUND
Petitioner : Smt. Neelavva W/o. Arunodaya Allapur @ Iti Age: 38 years, Occ: agri, R/o. Basveshwar Nagar, Navalgund
V/S
Respondents: NIL
PETITION NOTICE
(Under order 5 Rule 20 (1A) CPC
The Petitioner has filed this petition for issue of succession certificate as she is the only legal heir of the deceased mother Smt. Channabasavva W/o. Devapa Shalavadi.
In which, if any person having any claim or interest in this matter, you are here by falled upon to appear before this Hon'ble court on or before 24/7/2026 at about 10-30 AM either in person or through an advocate to answer the claim of the petitioner. Failing which the matter will be heard in exparte.
Given under the hand and seal of this Hon'ble court on this Day of 15/5/2026.
By order of the court
Sd/- Sheristedar,
Civil Judge and J.M.F.C. Court, Nayalgund.
(Civil Judge Jr Div Navalgund)
Sd/- S. M. Hiremath
Adv for Petitioner Navalgund

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿ
ಕ್ರಿಮಿನಲ್ ಮಿಸಲೇನಿಯಸ್ ನಂ: 86/2026
ಅರ್ಜಿದಾರ : ಶ್ರೀಮತಿ ಶಾಂತಮ್ಮ ಗಂಡ ದಿ। ಬುಶಪ್ಪ ವ: 38 ವರ್ಷ, ಉದ್ಯೋಗ: ಒಕ್ಕಲುತನ ಸಾ: ಭಟ್ಟರ ನರಸಾಪೂರ, ತಾ: ಗಂಗಾವತಿ. ಜಿ: ಕೊಪ್ಪಳ
ವಿರುದ್ಧ:
ಎದುರುದಾರರು : ಮಾನ್ಯ ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳು ತಹಶೀಲ್ ಕಾರ್ಯಾಲಯ, ಗಂಗಾವತಿ
ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ 1969 ಅಧಿನಿಯಮ ಕಲಂ 13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ನಂ.1 ರವರ ಗಂಡ. ಅರ್ಜಿದಾರ ನಂ.2 ರಿಂದ 5 ರವರ ತಂದೆಯವರಾದ ಬುಶಪ್ಪ ತಂದೆ ಹನುಮಂತಪ್ಪ ಇವರು ದಿನಾಂಕ: 30-11-2014 ರಂದು ಅರ್ಜಿದಾರರ ಮನೆಯಾದ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಭಟ್ಟರನರಸಾಪೂರ ಗ್ರಾಮದಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ: 22-05-2026ರ ಬೆಳಗ್ಗೆ 11.00 ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷೀಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 8-5-2026ರಂದು ಸಹಿ ಮಾಡಿ ಈ ನ್ಯಾಯಾಲಯದ ಶೀಲು/ಮುದ್ರೆಯೊಂದಿಗೆ ಕೊಡಲಾಗಿದೆ.
ಸ್ಥಳ: ಗಂಗಾವತಿ
ದಿ: 8-5-2026
ನ್ಯಾಯಾಲಯದ ಆದೇಶ ಅನುಸಾರ
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ. ಎಮ್.ಎಫ್.ಸಿ ಗಂಗಾವತಿ
ಮುಖಾಂತರ :ವಿ.ಚಂದ್ರಶೇಖರ ವಕೀಲರು
ಅರ್ಜಿದಾರರ ಪರ ವಕೀಲರು

ಅಸಲು ದಾವಾ ನಂ-54/2024
ಮೆ: 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ.
1) ಶ್ರೀಮತಿ ಮಹಾದೇವಿ, ಗಂ: ಮಹಾದೇವಪ್ಪ, ಮಜ್ಜಗಿ, ಮತ್ತು ಇತರರು. .....ವಾದಿಯರು
ವಿರುದ್ಧ
1) ಶ್ರೀ ವಿನೋದ ತಂ: ಅವ್ವಣೆಪ್ಪ, ತುಂಬರಮಟ್ಟ, ವಯಾ: 34 ವರ್ಷ, ಉದ್ಯೋಗ: ಖಾಸಗಿ ಕೆಲಸ
2) ಶ್ರೀ ಸಚಿನ ತಂ: ಅವ್ವಣೆಪ್ಪ, ತುಂಬರಮಟ್ಟ ವಯಾ: 25 ವರ್ಷ, ಉದ್ಯೋಗ: ಖಾಸಗಿ ಕೆಲಸ.
both are R/o No:134, KHCS Layout, Nagadevanahalli, Janabharathi post, Bangalore-560056.
.....ಎದುರುದಾರ/ಪ್ರತಿವಾದಿಯರ ನಂ: 2 ಮತ್ತು 4
ಸಾರ್ವಜನಿಕ ನೋಟಿಸು
ಸದರ ಪ್ರಕರಣದಲ್ಲಿಯ ವಾದಿಯರು ದಾವಾದ ಆಸ್ತಿಗಳ ಬಗ್ಗೆ ಹಕ್ಕು ಠರಾಯಿಸಲು ಮತ್ತು ಪಾಲುವಾಟ್ನಿ ಕೇಳಿ ಈ ಮೇಲ್ಕಾಣಿಸಿದ ಪ್ರತಿವಾದಿಯರ ನಂ:2 ರವರ ಮೇಲೆ ಮತ್ತು ಅನ್ಯೂಳಿದ ಪ್ರತಿವಾದಿಯರ ಮೇಲೆ ದಾವೆಯನ್ನು ದಾಖಲಿಸಿದ್ದು ಇರುತ್ತದೆ.
ಆದ್ದರಿಂದ ಸದರಿ ವಿಷಯದ ಕುರಿತು ಪ್ರತಿವಾದಿಯರ ನಂ:2 ರವರು ಹಾಜರಾತಿಗಾಗಿ ದಿನಾಂಕ: 10-06-2026 ರಂದು ಮೆ: 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ಮುಂದೆ ಮುಂಜಾನೆ: 11-00 ಗಂಟೆಗೆ ಹಾಜರಿದ್ದು ತಮ್ಮ ಪ್ರತಿವಾದ ಪತ್ರ ಏನಾದರೂ ಇದ್ದಲ್ಲಿ ಸಲ್ಲಿಸಬೇಕು. ಅದಕ್ಕೆ ತಪ್ಪಿದಲ್ಲಿ ಪ್ರತಿವಾದಿಯರ ನಮ:2 ರವರದು ಏನು ಪ್ರತಿವಾದ ಪತ್ರ ಇರುವದಿಲ್ಲ ಅಂತ ಪರಿಗಣಿಸಿ ಮೆ: ನ್ಯಾಯಾಲಯದವರು ಮುಂದಿನ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.
ಸದರಿ ನೋಟಿಸು ಇವತ್ತು ದಿನಾಂಕ: ರಂದು ಮೆ: ನ್ಯಾಯಾಲಯದ ಶೀಲು ಹಾಗೂ ಸಹಿಯೊಂದಿಗೆ ಕೊಡಲಾಗಿದೆ.
ಬಾಗಲಕೋಟ.
ದಿನಾಂಕ: 5-5-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು
(ಮೆ:1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ)
ಸಹಿ/- ಶ್ರೀಶೈಲ ಎ. ಹಾವರಗಿ,
ಅರ್ಜಿದಾರರ ಪರ ವಕೀಲರು.

ಪತ್ರಿಕಾ ಪ್ರಕಟಣೆ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ
ಅಪರಾಧಿಕ ಸಂಕೀರ್ಣ ನಂ: 1675/2025
ಅರ್ಜಿದಾರರು :- ಯಮನೂರ ತಂದೆ ಶಂಕರರಾವ್ ಮತ್ತು ಇತರರು
-ವಿರುದ್ಧ-
ಎದುರುದಾರರು : ನಗರಸಭೆ, ಗಂಗಾವತಿ (CMC) ತಾ: ಗಂಗಾವತಿ, ಜಿ: ಕೊಪ್ಪಳ.
ಸಂಬಂಧಪಟ್ಟವರು
ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969 ರ ಕಲಂ 13(3) ನಿಯಮ 9(3) ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು ದಿ॥ಅಂಬಕ್ಕ @ ಅಂಬುಬಾಯಿ ಗಂಡ ಶಂಕರ್ @ ಶಂಕರ್‌ರಾವ್ ಇವರು ದಿನಾಂಕ:07-05-2017 ರಂದು ವಾರ್ಡ್.ನಂ.23, ಗುಂಡಮ್ಮಕ್ಯಾಂಪ್, ಗಂಗಾವತಿ, ತಾ: ಗಂಗಾವತಿ, ಜಿ: ಕೊಪ್ಪಳದಲ್ಲಿ ಮರಣ ಹೊಂದಿದ್ದು, ಸದರಿಯವರ ಮರಣ ನೋಂದಣಿ ಮಾಡಲು ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರ ಕಾರ್ಯಾಲಯಕ್ಕೆ ಆದೇಶ ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ: 06-06-2026 ರಂದು ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರಲ್ಲಿ ಸಮಯ ಬೆಳಿಗ್ಗೆ 11-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ಮುದ್ದತ್ತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು,
ಸ್ಥಳ : ಗಂಗಾವತಿ
ದಿ:: 07/05/2026
ನ್ಯಾಯಾಲಯದ ಆದೇಶದ ಮೇರೆಗೆ
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ
ಮುಖಾಂತರ : RTB ವಕೀಲರು.
ಅರ್ಜಿದಾರರ ಪರ ವಕೀಲರು. ಗಂಗಾವತಿ.

IN THE COURT OF CIVIL JUDGE & JMFC AT SIRUGUPPA
Criminal. Misc. Case No: 447/2026
Between:
Sri. K. Murutaj .....Petitioner
-V/S-
The Tahasildar - Cum- Birth and Deaths Registrar Taluk Office Siruguppa & others .....Respondents
TO WHOM SO EVER IT MAY CONCERN
NOTICE
Whereas above named petitioner here in have instituted above petition under section 13(3) of birth and death Acts 1969 against the respondents for purpose of seeking death certificate of petitioners Mother by name Smt. KHAJA BEE W/o. KARADI KHASIMSAB, who was died on 20-02-2015 at Havinahal village, Siruguppa taluk, Ballari dist, at his residence.
Any person interested are here by summoned to appear before this court in person or by pleader duly instructed and able to answer all material questions relating to the petition on 16-06-2026 at 11.00 am before this court.
In default of your appearance on the date/day of above petition will be heard and determined as "Ex-parte"
Given under my hand & seal of the court this 15th day of May-2026.
By Order of the court,
Sd/- Chief ministrial officer,
Civil judge & JMFC Court Siruguppa.
Sd/- M. Rudragouda, Advocates Siruguppa,



ಪ್ರಕಟಣೆ
ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 162/2026
ಅರ್ಜಿದಾರರು :ಶ್ರೀ ಯಮನೂರ ತಂದೆ: ದಿವರಸಪ್ಪ, ವಯಸ್ಸು: 21 ವಾರ್ಷ, ಉದ್ಯೋಗ: ಕೂಲಿ, ಸಾ: ಕನ್ನೇರಮಡು ತಾ ಕನಕಗಿರಿ ಜಿ ಕೊಪ್ಪಳ ಮತ್ತು ಇತರರು
-ವಿರುದ್ಧ-
ಎದುರುದಾರರು :ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರರ ಕಾರ್ಯಾಲಯ, ಕನಕಗಿರಿ, ತಾ: ಕನಕಗಿರಿ ಜಿ ಕೊಪ್ಪಳ ಸಂಬಂಧಪಟ್ಟವರು.
ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯ್ದೆ 1969 ರ ಕಲಂ 13(3)ರ ನಿಯಮ 9(3)ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಆಳೂರಪ್ಪ ತಂದೆ ಮರಿಯಪ್ಪ" ಅವರು ದಿನಾಂಕ: 05/04/1997 ರಂದು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಗನ್ನೇರಮಡು ಗ್ರಾಮದ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿಯವರ ಮರಣ ನೋಂದಣಿ ಮಾಡಲು ಮರಣ ಪ್ರಮಾಣ ಪತ್ರವನ್ನು ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ:20/6/2026 ರಂದು ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ ಇವರಲ್ಲಿ ಬೆಳಿಗ್ಗೆ 11-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು,
ಸ್ಥಳ : ಗಂಗಾವತಿ
ದಿ:: 07/05/2026
ನ್ಯಾಯಾಲಯದ ಆದೇಶದ ಮೇರೆಗೆ
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ
ಮುಖಾಂತರ : ಶರಣಪ್ಪ ಬಿಣಜಗಿ
ಅರ್ಜಿದಾರರ ಪರ ವಕೀಲರು.ಗಂಗಾವತಿ

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 550/2026
ಅರ್ಜಿದಾರರು : 1) ಶ್ರೀಮತಿ ನೀಲಮ್ಮ ಗಂಡ ಭಾಗಪ್ಪ ಗೊಲ್ಲರ ವಯಸ್ಸು 73 ವರ್ಷ, ಉದ್ಯೋಗ: ಕೂಲಿ, 2) ಶ್ರೀ ಮರ್ದಾನೆಪ್ಪ ತಂದೆ ಭಾಗಪ್ಪ : 51, ವರ್ಷ ಉದ್ಯೋಗ: ಕೂಲಿ, 3) ಶ್ರೀ ಹುಲಗಪ್ಪ ತಂದೆ ಭಾಗಪ್ಪ ಗೊಲ್ಲರ, 49 ಎಲ್ಲರೂ ಸಾ. ವಾ.ನಂ.01, ಮುಕ್ಕುಂಪಿ, ತಾ: ಗಂಗಾವತಿ, ಜಿ ಕೊಪ್ಪಳ.
-ವಿರುದ್ಧ-
ಎದುರುದಾರರು : ಜನನ ಮರಣ ನೋಂದಣಾಧಿಕಾರಿಗಳು ತಹಶೀಲ್ದಾರರು, ತಹಶೀಲ್ ಕಛೇರಿ, ಗಂಗಾವತಿ
ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969 ರ ಕಲಂ 13(3) ನಿಯಮ 9(3) ಮತ್ತು ಕೆ.ಆರ್.ಬಿ & ಡಿ ನಿಯಮಗಳು 1999ರ ಅಡಿಯಲ್ಲಿ ಅರ್ಜಿದಾರ ನಂ.01ರಿಂದ 03 ರವರ ಮೃತರಾದ ದಿ॥ ಹನುಮಂತಪ್ಪ ಉರ್ಫ ಭಾಗಪ್ಪ ಗೊಲ್ಲರ ತಂದೆ ಯಂಕಪ್ಪ ಇವರ ಮರಣ ನೋಂದಣಿಗಾಗಿ ಕೋರಿ ಅರ್ಜಿ ಸಲ್ಲಿಸಿದ್ದು, ಅರ್ಜಿದಾರ ನಂ.01 ರವರು ಮೃತರಿಗೆ ಹೆಂಡತಿಯಾಗಿದ್ದು ಹಾಗೂ ಅರ್ಜಿದಾರ ನಂ.02 ಮತ್ತು 03 ರವರ ಮೃತರಿಗೆ ಮಕ್ಕಳಾಗಿದ್ದು, ಅರ್ಜಿದಾರರು ನಂ.01ರವರ ಗಂಡನಾದ ದಿ॥ ಹನುಮಂತಪ್ಪ ಉರ್ಫ ಭಾಗಪ್ಪ ಗೊಲ್ಲರ ತಂದೆ ಯಂಕಪ್ಪ ಇವರ ಮರಣ ದಿನಾಂಕ: 15/06/2015 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಮುಕ್ಕುಂಪಿ ಗ್ರಾಮದ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಹಾಲ ಮಾಡಬೇಕೆಂದು ಕೋರಿ ಅರ್ಜಿದಾರರು ನಂ.01 ರಿಂದ 03 ಇವರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ: 02-06-2026 ರಂದು ಮಾನ್ಯ ಗೌರವಾನ್ವಿತ ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿಯಲ್ಲಿ ಬೆಳಿಗ್ಗೆ 11-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ಮುದ್ದತ್ತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ. ಎಂದು ಪರಿಗಣಿಸಿ, ಅರ್ಜಿದಾರರ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು,
ಸ್ಥಳ : ಗಂಗಾವತಿ
ದಿ: 05/05/2020
ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಅಧಿಕಾರಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ
ಮುಖಾಂತರ: (ಗುರುಬಸವರಾಜ ಅಬ್ಬಿಗಲ್)
ಅರ್ಜಿದಾರರ ಪರ ವಕೀಲರು. ಗಂಗಾವತಿ

ಕರ್ನಾಟಕ ಸರ್ಕಾರ
ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ: ಸಅಸಂ/ಟೆಂಡರ್/ಸಿಆರ್-01/2026-27 ದಿನಾಂಕ:13.05.2026
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ.
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2026-27 ನೇ ಸಾಲಿಗೆ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ "ನೆಡುತೋಪು ರಚನೆ, ನೆಡುತೋಪು ನಿರ್ವಹಣೆ ಮತ್ತು ವಿವಿಧ ಅಳತೆಯ ಸಸಿಗಳ ನಿರ್ವಹಣೆ" ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿ:20.05.2026 ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp. karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/60/05/228

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಅಂ/ಪಂ.ರಾ.ಇಂ.ವಿ/ಬ/ಎಇ-1 /ವಿ.ಲೆ.ಶೀ /ಟೆಂಡರು /2026-27/196
ದಿನಾಂಕ 13-05-2026
ಅಲ್ಪಾವಧಿ ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025-26 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆ, 2025-26 ನೇ ಸಾಲಿನ ಸಿ.ಐ.ಡಿ.ಎಮ್.ಪಿ ಮತ್ತು 2025-26 ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ ಒಟ್ಟು 04 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ.
ಕಾಮಗಾರಿಗಳ ಇಂಡೆಂಟ್ ಸಂಖ್ಯೆ-
1.RDPR/2026-27/BD/WORK_INDENT26708
2.RDPR/2026-27/BD/WORK_INDENT26706
3.RDPR/2026-27/BD/WORK_INDENT26705
4.RDPR/2025-26/RD/WORK_INDENT25450/CALL-2
ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 14-05-2026** ರಿಂದ **ದಿನಾಂಕ 21-05-2026 ರಂದು ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 21-05-2026 ರ 16.30** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 22-05-2026 ರಂದು 17.30** ಗಂಟೆ ನಂತರ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/144

CHANGE OF NAME
I, **BIBI HALIMA INAMADAR** (Old Name) Resident of At Vinobhanagara, Kuknoor, Koppala, Karnataka - 583232, have changed my name as **BIBI HALIMA** (New Name) for all purposes affidavit Dated.: 15-05-2026 sworn before notary **S. G. Hegde**.

DOCUMENT LOST
I, **HEENAKOUSAR SADDAMHUSEN ALAGUR** Resident of Boragi Village Tq: Sindagi, **Lost My Sale Deed of Plot on FIR Lost Report No 2203377/2026** Lost Date: 20/04/2026, SIN-1-17118-2023-24 and Plot No - 305.

CHANGE OF NAME
I, **MOHAMMED ROHAIL MOHAMMED ALTAF SHAIKH** (Old Name) Resident of Fatima Ismail Manzil, Shanti Nagar 1st Cross, Keladi Road Opp Jingade Layout, Sagar, Shivamogga, State: Karnataka, Pin Code: 577401 (address), have changed my name as **MOHAMMED ROHAIL SHAIKH** (New Name) henceforth I will be called and recognized by new name for all future purposes, dated: 15/05/2026.

CHANGE OF NAME
I, **MOHAMMAD GOUSE** (Old Name) Resident of Nisar, Mohalla Near Masjeed Bijapur 586101 (address), have changed my name as **MOHAMDGOUS INAMDAR** (New Name) henceforth I will be called and recognized by new name for all future purposes, dated: 15/05/2026.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಚೇರಿ, ವಿದ್ಯುತ್ ಭವನ, ಗೋಪನಕೊಪ ಹುಬ್ಬಳ್ಳಿ-580 023
Tel: (0836) 2223877, Fax: (0836) 2324307.
E-Mail: seepmc.hescom@gmail.com Website: www.hescom.co.in
CIN No: U31401KA2002SGCO30437
No: HESCOM/SEE(PMC)/EE-P1/AEE-1/2026-27/CYS-1535 Date: 15-05-2026
ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ ಮಾತ್ರ)
ಅಧೀಕ್ಷಕ ಇಂಜನೀಯರ (ವಿ), ಪಿಎಮ್ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

Sl.No.	Particulars	Bid Indent No.
1	ಹೆಸ್ಕಾಂ ವ್ಯಾಪ್ತಿಯಲ್ಲಿನ ವಿವಿಧ 33/11ಕೆವಿ ಉಪ ಕೇಂದ್ರಗಳಲ್ಲಿ ಹೆಚ್ಚುವರಿಯಾಗಿ 5ಎಂವಿಎ 33/11 ಕೆವಿ ವಿದ್ಯುತ್ ಪರಿವರ್ತಕಗಳನ್ನು ಒದಗಿಸುವುದು (5 ಎಂವಿಎ ವಿದ್ಯುತ್ ಪರಿವರ್ತಕ ಮತ್ತು ಇತರ ಸಾಮಗ್ರಿಗಳನ್ನು ಇಲಾಖೆಯಿಂದ ಪೂರೈಸಲಾಗುವುದು).	HESCOM/2025-26/EL/ WORK_INDENT 1208, 1209, 1210, 1211, 1212, 1213, 1214, 1215 & 1216 **(09 packages)**
2	ಬೆಳಗಾವಿ ಜಿಲ್ಲೆಯ 33/11 ಕೆವಿ ಬಾಳೇಕುಂದ್ರಿ, ಉಪಕೇಂದ್ರದಲ್ಲಿ 2X5 ಎಮ್.ವಿ.ಎ ಪರಿವರ್ತಕವನ್ನು 2X8 ಎಮ್.ವಿ.ಎ ಪರಿವರ್ತಕಗಳಿಂದ ಬದಲಾಯಿಸುವ ಕಾಮಗಾರಿ.	HESCOM/2025-26/EL/ WORK_INDENT 1217 **(01 package)**
3	ಹೆಸ್ಕಾಂ ವ್ಯಾಪ್ತಿಯಲ್ಲಿನ 110/33/11ಕೆವಿ ಸಬ್ ಸ್ಟೇಷನ್‌ಗಳಿಂದ ವಿವಿಧ 33/11ಕೆವಿ ಸಬ್‌ಸ್ಟೇಷನ್‌ಗಳಿಗೆ 33ಕೆವಿ ವಿದ್ಯುತ್ ಮಾರ್ಗಗಳ ನಿರ್ಮಾಣ.	HESCOM/2025-26/EL/ WORK_INDENT 1218, 1219 & 1220 **(3 packages)**
4	ವಿಜಯಪುರದ ಜಿಲ್ಲೆಯ 33ಕೆವಿ ಎಸ್‌ಎಲ್ ವಿಭಾಗ-ದಲ್ಲಿ 220ಕೆವಿ ಬಸವನ ಬಾಗೇವಾಡಿಯಿಂದ 33ಕೆವಿ ಮುತ್ತಗಿವರೆಗೆ 10.88 ಕಿಮೀ ದೂರದವರೆಗೆ 33ಕೆವಿ ವಾಹಕವನ್ನು ಬದಲಾವಣೆ ಮಾಡುವ ಕಾಮಗಾರಿ.	HESCOM/2026-27/EL/ WORK_INDENT1222 **(01 package)**

ಸದರಿ ಟೆಂಡರಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್ **www.kppp.karnataka.gov.in** ರಲ್ಲಿ ದಿನಾಂಕ: **15.05.2026 ರ 5:00 ಗಂಟೆಯ** ನಂತರ ಪಡೆಯಬಹುದು.
ಅಧೀಕ್ಷಕ ಇಂಜನೀಯರ್(ವಿ) (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.
ವಾಸಾಸಂಇ/ಧಾ/ದಿಶಾ/183/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ
ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 04/2026-27 ದಿನಾಂಕ: 12.05.2026 (2ನೇ ಕರೆ)
ಉಲ್ಲೇಖ: ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 37/2025-26 ದಿನಾಂಕ: 25.02.2026
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ **KPWD Class-III & above** ದರ್ಜೆಯ ಗುತ್ತಿಗೆದಾರರಿಂದ (ಕ್ರಮ ಸಂಖ್ಯೆ 01 ಮತ್ತು 02 ರ ಕಾಮಗಾರಿಗಳಿಗೆ **SC Category,** ಕ್ರಮ ಸಂಖ್ಯೆ 03 ಮತ್ತು 04 ರ ಕಾಮಗಾರಿಗಳಿಗೆ **ST Category,** ಕ್ರಮ ಸಂಖ್ಯೆ 05 ರಿಂದ 10 ರ ವರೆಗಿನ ಕಾಮಗಾರಿಗಳಿಗೆ **Category IIA** ಹಾಗೂ ಕ್ರಮ ಸಂಖ್ಯೆ 11 ರಿಂದ 13 ರ ವರೆಗಿನ ಕಾಮಗಾರಿಗಳಿಗೆ **Category I** ಗುತ್ತಿಗೆದಾರರು ಮಾತ್ರ ಭಾಗವಹಿಸತಕ್ಕದ್ದು) ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.
ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ವ್ಯಾಪ್ತಿಯಲ್ಲಿ ಕಾಲು ಸಂಕ (Foot Bridge) ಅಭಿವೃದ್ಧಿ ಕಾಮಗಾರಿಗಳ (13 ಸಂಖ್ಯೆ) ಟೆಂಡರಿಗಿಟ್ಟ ಮೊತ್ತ ರೂ. 9.95 ಲಕ್ಷಗಳಿಂದ ರೂ. 49.96 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 0.11 ಲಕ್ಷಗಳಿಂದ ರೂ. 0.42 ಲಕ್ಷಗಳು.
1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ:15.05.2026 ರಿಂದ 22.05.2026 ಸಂಜೆ 5.30 ರವರೆಗೆ 2) ಟೆಂಡರ್ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 21.05.2026 ಸಂಜೆ 5.30 ಗಂಟೆಗೆ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:25.05.2026 ಬೆಳಿಗ್ಗೆ 11.00 ಗಂಟೆಗೆ 4) ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು.
ಹೆಚ್ಚಿನ ಮಾಹಿತಿಗಾಗಿ (www.kppp.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.
ವಾ.ಸಾ.ಸಂ.ಇ/ಶಿ/ನಂ. 61-05/ ಝೇಂಕಾರ್/2026-27
ಸಹಿ/- ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.

ಪುರಸಭೆ ಕಾರ್ಯಾಲಯ, ಕಾಪು
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್ ಮೆಂಟ್ ಮೂಲಕ ಮಾತ್ರ)
ಪುಸಕಾ/ಇಎಸ್.ಟಿ/ಸಿಆರ್/155/2026-27 ದಿನಾಂಕ : 14-05-2026
ಕಾಪು ಪುರಸಭೆ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಪುರಸಭಾ ನಿಧಿಯಡಿ ಅಂದಾಜು ಮೊತ್ತ ರೂ. 26.97 ಲಕ್ಷಮೊತ್ತದಲ್ಲಿ ನೀರು ಸರಬರಾಜು ಹೆಲ್ಪರ್/ವಾಲ್ವ್‌ಮ್ಯಾನ್ 6 ಹುದ್ದೆ1 ಅಟೆಂಡರ್ ಹುದ್ದೆ ಹಾಗೂ ಜ್ಯೂನಿಯರ್ ಪ್ರೋಗ್ರಾಮರ್ 1 ಹುದ್ದೆ ಅಕೌಂಟೆಂಟ್ 1 ಹುದ್ದೆಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ಒದಗಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್ ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಸಲ್ಲಿಸಲು ಕೊನೆ ದಿನಾಂಕ:25-05-2026 ಇತರ ಷರತ್ತು & ವಿವರಗಳಿಗೆ ಟೆಂಡರ್ ಕೆ.ಡಬ್ಲ್ಯೂ.1ರ ನಮೂನೆಯಲ್ಲಿ www.kauptown.mrc.gov.in ವೆಬ್‌ಸೈಟ್‌ನಲ್ಲಿ ಮತ್ತು https://eproc.karnataka.gov.inನಲ್ಲಿ ಪಡೆಯಬಹುದಾಗಿದೆ. ಅಲ್ಲದೇ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಕಾಪು ಪುರಸಭೆಗೆ ನೀರು ಸರಬರಾಜು ವಿಭಾಗಕ್ಕೆ ಹೆಲ್ಪರ್/ವಾಲ್ವೆಮನ್ (06) ಹುದ್ದೆಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಿಸಿಕೊಳ್ಳುವುದು.	ರೂ. 17.65
2	ಕಾಪು ಪುರಸಭೆಗೆ ಅಟೆಂಡರ್ (01) ಹುದ್ದೆಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಿಸಿಕೊಳ್ಳುವುದು	ರೂ. 2.90
3	ಕಾಪು ಪುರಸಭೆಗೆ ಜ್ಯೂನಿಯರ್ ಪ್ರೋಗ್ರಾಮರ್ (01) ಹಾಗೂ ಲೆಕ್ಕ ಸಹಾಯಕ (ಅಕೌಂಟೆಂಟ್) (01) ನೇಮಿಸಿಕೊಳ್ಳುವುದು	ರೂ. 6.42
ಒಟ್ಟು		26.97

ಸಹಿ/- ಮುಖ್ಯಾಧಿಕಾರಿ, ಪುರಸಭೆ, ಕಾಪು, ಉಡುಪಿ ಜಿಲ್ಲೆ

ಕ್ರಿ. ಮಿ, ನಂ: 58/2026
ಮಾನ್ಯ 2ನೇ ಜೆ.ಎಮ್.ಎಫ್.ಸಿ ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.
ಅರ್ಜಿದಾರ :ಶ್ರೀ ಚನ್ನಪ್ಪ ತಂದೆ ಬಸವಣ್ಣೆಪ್ಪ ಆಯೆಟ್ಟಿ
ವಿರುದ್ಧ
ಎದುರುಗಾರರು: ಮಾನ್ಯ ತಹಶೀಲ್ದಾರರು,ಜನನ ಮರಣ ನೊಂದಣಿ ಅಧಿಕಾರಿಗಳು,ಹುಬ್ಬಳ್ಳಿ ತಾಲೂಕ ಹುಬ್ಬಳ್ಳಿ.
ನೋಟಿಸು
ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನು ಮೃತ ತನ್ನ ತಾಯಿಯಾದ ಶ್ರೀಮತಿ ಚಂದ್ರವ್ವ ಕೋಂ ಬಸವಣ್ಣೆಪ್ಪ ಆಯೆಟ್ಟಿ ಇವರು ದಿನಾಂಕ: 20/03/1980 ರಂದು ಹುಬ್ಬಳ್ಳಿ ತಾಲೂಕ ಬು॥ಅರಳಿಕಟ್ಟಿ ಗ್ರಾಮದ ಮನೆಯಲ್ಲಿ ಮೋತಿಯಾಗಿದ್ದು ಇರುತ್ತದೆ ಅಂತಾ, ಸದರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.
ಸದರ ಮರಣ ದಾಖಲಾತಿ ಕುರಿತು ಸಾರ್ವಜನಿಕರದು ಯಾರದಾದರೂ ಯಾವುದೇ ರೀತಿಯ ತಂಟೆ ತಕರಾರು, ಹಕ್ಕು ಹಿತ ಸಂಬಂಧ ವಗ್ಯೆರೆ ಇದ್ದಲ್ಲಿ ಅವರ ಹಾಜರಾತಿಗಾಗಿ ತಾ: 20/06/2026 ರಂದು ಬೆಳಗಿನ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು ಆ ದಿವಸ ಸದರಿಯವರು ತಾವಾಗಲಿ ತಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವದು.
ಈ ಹೊತ್ತು ನನ್ನ ಸಹಿ ಮತ್ತು ಮಾನ್ಯ ನ್ಯಾಯಾ ಲಯದ ಮೊಹರಿನೊಂದಿಗೆ 2026ರ ಮೇ ತಿಂಗಳಿನ 12ನೇ ಈ ದಿನದಂದು ಇದನ್ನು ಕೊಡಲಾಗಿದೆ
ಹುಬ್ಬಳ್ಳಿ
ದಿನಾಂಕ :12/05/2026
ಸಹಿ/- ಕೋರ್ಟಿನ ಮೊಹರು
ಶಿರಸ್ತೇದಾರರು
ಮಾನ್ಯ 2ನೇ ಜೆ.ಎಮ್.ಎಫ್.ಸಿ ನ್ಯಾಯಾಲಯ, ಹುಬ್ಬಳ್ಳಿ
ಅರ್ಜಿದಾರನ ಪರ ವಕೀಲರು
(ಪಿ.ಎಲ್. ಸತ್ಯಮೂರ್ತಿ)
ವಕೀಲರು ಹುಬ್ಬಳ್ಳಿ


ಕ್ರಿ.ಮಿ. ನಂ: 59/2026
ಮಾನ್ಯ 2ನೇ ಜೆ ಎಮ್ ಎಫ್ ಸಿ ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.
ಅರ್ಜಿದಾರ :ಶ್ರೀ ಚನ್ನಪ್ಪ ತಂದೆ ಬಸವಣ್ಣೆಪ್ಪ ಆಯಟ್ಟಿ,
ವಿರುದ್ಧ
ಎದುರುಗಾರರು:ಮಾನ್ಯ ತಹಶೀಲ್ದಾರರು, ಜನನ ಮರಣ ನೋಂದಣಿ ಅಧಿಕಾರಿಗಳು, ಹುಬ್ಬಳ್ಳಿ ತಾಲೂಕ ಹುಬ್ಬಳ್ಳಿ.
ನೋಟಿಸು
ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನು ಮೃತ ತನ್ನ ತಂದೆಯಾದ ಶ್ರೀ ಬಸವಣ್ಣೆಪ್ಪ ಚನ್ನಬಸಪ್ಪ ಆಯೆಟ್ಟಿ ಇವರು ದಿನಾಂಕ: 25/03/1977ರಂದು ಹುಬ್ಬಳ್ಳಿ ತಾಲೂಕ ಬು॥ಅರಳಿಕಟಿ ಗ್ರಾಮದ ಮನೆಯಲ್ಲಿ ಪೋತಿಯಾಗಿದ್ದು ಇರುತ್ತದೆ ಅಂತಾ, ಸದರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.
ಸದರ ಮರಣ ದಾಖಲಾತಿ ಕುರಿತು ಸಾರ್ವಜನಿಕರದು ಯಾರದಾದರೂ ಯಾವುದೇ ರೀತಿಯ ತಂಟೆ, ತಕರಾರು, ಹಕ್ಕು ಹಿತಸಂಬಂಧ ವಗ್ಯೆರೆ ಇದ್ದಲ್ಲಿ ಅವರ ಹಾಜರಾತಿಗಾಗಿ ತಾ: 20/06/2026 ರಂದು ಬೆಳಗಿನ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು ಆ ದಿವಸ ಸದರಿಯವರು ತಾವಾಗಲಿ ತಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವದು.
ಈ ಹೊತ್ತು ನನ್ನ ಸಹಿ ಮತ್ತು ಮಾನ್ಯ ನ್ಯಾಯಾ ಲಯದ ಮೊಹರಿನೊಂದಿಗೆ 2026 ರ ಮೇ ತಿಂಗಳಿನ 12ನೇ ಈ ದಿನದಂದು ಇದನ್ನು ಕೊಡಲಾಗಿದೆ.
ಹುಬ್ಬಳ್ಳಿ
ದಿನಾಂಕ :12/05/2026
ಸಹಿ ಕೋರ್ಟಿನ ಮೊಹರು
ಶಿರಸ್ತೇದಾರರು
ಮಾನ್ಯ 2ನೇ ಜೆ.ಎಮ್.ಎಫ್.ಸಿ ನ್ಯಾಯಾಲಯ, ಹುಬ್ಬಳ್ಳಿ
ಅರ್ಜಿದಾರನ ಪರ ವಕೀಲರು
(ಪಿ. ಎಲ್. ಸತ್ಯಮೂರ್ತಿ)
ವಕೀಲರು ಹುಬ್ಬಳ್ಳಿ

ಸಂಪಾದಕೀಯ

ಭೋಜಶಾಲೆ ತೀರ್ಪು: ಇತಿಹಾಸಕ್ಕೆ ನ್ಯಾಯ

ಮಧ್ಯಪ್ರದೇಶ ಹೈಕೋರ್ಟ್‌ನ ಭೋಜಶಾಲೆ ಕುರಿತು ಬಂದಿರುವ ತೀರ್ಪು ಕೇವಲ ಒಂದು ಧಾರ್ಮಿಕ ವಿವಾದದ ಅಂತ್ಯವಲ್ಲ, ಅದು ಭಾರತದ ಸಂಸ್ಕೃತಿಯ ಸತ್ಯಾಂಶ, ಇತಿಹಾಸದ ದಾಖಲೆ ಮತ್ತು ನ್ಯಾಯಾಂಗದ ಸಮತೋಲನದ ಚಿಂತನೆಗೆ ದೊರೆತ ಮಹತ್ವದ ಮುದ್ರೆಯಾಗಿದೆ. ಧಾರ ಜಿಲ್ಲೆಯ ಭೋಜಶಾಲೆ ಸಮುಚ್ಚಯವು ಮೂಲತಃ ಸರಸ್ವತಿ ದೇವಿಗೆ ಸಮರ್ಪಿತ ದೇವಾಲಯವಾಗಿತ್ತು ಎಂಬುದನ್ನು ನ್ಯಾಯಾಲಯ ಸ್ಪಷ್ಟಪಡಿಸಿರುವುದು ಹಲವು ದಶಕಗಳಿಂದ ನಡೆಯುತ್ತಿದ್ದ ವಾದವಿವಾದಗಳಿಗೆ ದಿಕ್ಕು ತೋರಿಸಿದೆ.

ಭಾರತದ ಅನೇಕ ಐತಿಹಾಸಿಕ ತಾಣಗಳು ಶತಮಾನಗಳ ಆಕ್ರಮಣ, ಧ್ವಂಸ ಮತ್ತು ರೂಪಾಂತರಗಳ ಸಾಕ್ಷಿಗಳಾಗಿವೆ. ಭೋಜಶಾಲೆಯೂ ಅದಕ್ಕೆ ಹೊರತಲ್ಲ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವೈಜ್ಞಾನಿಕ ಸಮೀಕ್ಷೆಯಲ್ಲಿ ಪತ್ತೆಯಾದ ಶಿಲ್ಪಗಳು, ಶಾಸನಗಳು, ನಾಣ್ಯಗಳು ಮತ್ತು ದೇವಾಲಯದ ಅವಶೇಷಗಳು ಈ ತಾಣದ ಮೂಲ ಸ್ವರೂಪದ ಕುರಿತು ಗಂಭೀರ ಸಾಕ್ಷ್ಯ ಒದಗಿಸಿವೆ. ಸಾವಿರಾರು ಪುಟಗಳ ದಾಖಲೆ, ಹಲವು ಸಮುದಾಯಗಳ ವಾದ ಮತ್ತು ದೀರ್ಘ ವಿಚಾರಣೆಯ ನಂತರವೇ ನ್ಯಾಯಾಲಯ ಈ ತೀರ್ಪು



ನೀಡಿರುವುದು ಗಮನಾರ್ಹ. ಹೀಗಾಗಿ ಇದನ್ನು ಕೇವಲ ಭಾವನಾತ್ಮಕ ನಿರ್ಣಯ ಎಂದು ಕಾಣಲು ಸಾಧ್ಯವಿಲ್ಲ.

ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ, ನ್ಯಾಯಾಲಯ ತೀರ್ಪಿನ ಜೊತೆಗೆ ಮುಸ್ಲಿಂ ಸಮುದಾಯಕ್ಕೆ ಮಸೀದಿ ನಿರ್ಮಾಣಕ್ಕಾಗಿ ಪರ್ಯಾಯ ಭೂಮಿ ನೀಡುವ ಸಲಹೆಯನ್ನೂ ನೀಡಿದೆ. ಇದೇ ಭಾರತೀಯ ನ್ಯಾಯವ್ಯವಸ್ಥೆಯ ವೈಶಿಷ್ಟ್ಯ. ಇತಿಹಾಸದ ಸತ್ಯವನ್ನು ಒಪ್ಪಿಕೊಳ್ಳುವುದರ ಜೊತೆಗೆ ಸಾಮಾಜಿಕ ಸೌಹಾರ್ದ ಕದಡದಂತೆ ನೋಡಿಕೊಳ್ಳುವ ಪ್ರಯತ್ನವೂ ಇದರಲ್ಲಿ ಕಾಣಿಸುತ್ತದೆ. ನ್ಯಾಯ ಎಂದರೆ ಪ್ರತೀಕಾರವಲ್ಲ, ಸಮತೋಲನ ಸಾಧಿಸುವ ಜವಾಬ್ದಾರಿಯೂ ಹೌದು ಎಂಬ ಸಂದೇಶ ಇದರಲ್ಲಿ ಅಡಕವಾಗಿದೆ. ದೇಶದಲ್ಲಿ ಇಂತಹ ವಿಚಾರಗಳು ಚರ್ಚೆಗೆ ಬಂದಾಗ ಕೆಲವು ರಾಜಕೀಯ ವಲಯಗಳು ತಕ್ಷಣ ಧ್ರುವೀಕರಣದ ರಾಜಕಾರಣಕ್ಕೆ ಇಳಿಯುವುದು ದುರದೃಷ್ಟಕರ. ಆದರೆ ಸತ್ಯವನ್ನು ಸತ್ಯವೆಂದು ಒಪ್ಪಿಕೊಳ್ಳುವುದೇ ಸಮಾಜದ ಪ್ರೌಢಿಮೆ. ಶತಮಾನಗಳ ಹಿಂದಿನ ದುರಂತಗಳನ್ನು ಇಂದಿನ ಪೀಳಿಗೆಯ ಮೇಲೆ ಹೊರಿಸುವ ಮನೋಭಾವವೂ ಸರಿಯಲ್ಲ. ಹಾಗೆಯೇ ಇತಿಹಾಸವನ್ನು ಮರೆಮಾಚುವುದೂ ಸರಿಯಲ್ಲ. ಭೋಜಶಾಲೆ ತೀರ್ಪು ಈ ಎರಡರ ನಡುವಿನ ಸಮತೋಲನದ ಮಾರ್ಗವನ್ನು ತೋರಿಸಿದೆ. ಭಾರತದ ನಾಗರಿಕತೆ ಸಾವಿರಾರು ವರ್ಷಗಳ ಪಾರಂಪರ್ಯವನ್ನು ಹೊತ್ತಿದೆ. ಆ ಪಾರಂಪರ್ಯದ ಗುರುತುಗಳನ್ನು ರಾಜಕೀಯದ ಕಣ್ಣಿನಿಂದಲ್ಲ, ಸಾಂಸ್ಕೃತಿಕ ಸತ್ಯದ ಕಣ್ಣಿನಿಂದ ನೋಡುವ ಮನೋಭಾವ ಬೆಳೆಯಬೇಕು. ಭೋಜಶಾಲೆ ಕುರಿತು ಬಂದಿರುವ ತೀರ್ಪು ಅದಕ್ಕೆ ಹೊಸ ಅಧ್ಯಾಯ ಬರೆದಿದೆ.

ಸೂರ್ಯ ಶಕ್ತಿ ಮತ್ತು ನಾಡಿಗಳು

ಪೂರ್ಣ ಪರಿಪೂರ್ಣ


• ಪೂರ್ಣಪ್ರಜ್ಞ ಬೇಲೂರು
poornaprajnabelur@gmail.com



ನಿಮಗೆ ಈ ಹಿಂದೆ ಹೇಳಿರುವಂತೆ ಮೂರು ಮುಖ್ಯ ನಾಡಿಗಳಾದ ಇಡಾ, ಪಿಂಗಳ ಮತ್ತು ಸುಷುಮ್ನಾ ಇವುಗಳಲ್ಲಿ ಪಿಂಗಳ ನಾಡಿಯೇ ಸೂರ್ಯ ನಾಡಿ. ಇದು ನಿಮ್ಮ ಶಕ್ತಿಯನ್ನು, ಜಾಗೃತಿಯನ್ನು ಮತ್ತು ಭೌತಿಕ ಯಶಸ್ಸನ್ನು ನಿಯಂತ್ರಣ ಮಾಡುತ್ತದೆ. ನಿಮ್ಮ ಹಸ್ತದಲ್ಲಿ ಸೂರ್ಯ ರೇಖೆಯು ಹೇಗಿದೆ ಎನ್ನುವುದನ್ನು ನೋಡಿ ನಿಮ್ಮ ಶಕ್ತಿ, ಜಾಗೃತಿ ಮತ್ತು ಯಶಸ್ಸನ್ನು ಆಲೋಚಿಸಲು ಸಾಧ್ಯ. ಕುಂಡಲಿನಿಯು ಜಾಗೃತವಾದಾಗ ಅದು ಮೊದಲಿಗೆ ಇಡಾ ಮತ್ತು ಪಿಂಗಳ ನಾಡಿಗಳಲ್ಲೇ ಪ್ರವಹಿಸುತ್ತದೆ. ಮತ್ತು ಅವುಗಳನ್ನು ಸಮತೋಲನ ಮಾಡುತ್ತದೆ. ಅದು ಹೇಗೆಂದರೆ; ಒಮ್ಮೆ ಇಡಾ ಮತ್ತೊಮ್ಮೆ ಪಿಂಗಳ ಹೀಗೆ ಪ್ರವಹಿಸುವುದು ಸಾಮಾನ್ಯ. ಆದರೆ ಯಾವುದರ ಸಮತೋಲನ ತಪ್ಪಿದೆ ಎನ್ನುವುದನ್ನು ನಿರ್ಧಾರಿಸಿ ಪ್ರವಹಿಸುವುದು ಅಗತ್ಯ. ಇದು ಪ್ರವಹಿಸುವಾಗಲೇ ಆಗಬೇಕಾದ ನಿರ್ಣಯಗಳು. ಅದನ್ನು ಕುಂಡಲಿನಿ ತೀರ್ಮಾನಿಸುತ್ತದೆ ಮತ್ತು ಸೂರ್ಯರೇಖೆಯು ಕಾರ್ಯರೂಪಕ್ಕೆ ತರುತ್ತದೆ.

ಪಿಂಗಳ ನಾಡಿ

ಇಷ್ಟಾಗಿ ಇದೆಲ್ಲಾ ಆಗುವುದು ನಿಮ್ಮ ಉಸಿರಾಟದ ಬಲದಿಂದ. ಬಲ ಮೂಗು ಉಸಿರಾಡುವಾಗ ನಿಮ್ಮ ದೇಹವು ಉಷ್ಣದಿಂದ ಬಿಸಿಯಾಗುತ್ತಾ ಬರುತ್ತದೆ ಎನ್ನುವುದನ್ನು ನೀವು ಗಮನಿಸಿರಬಹುದು. ಜೊತೆಗೆ ಪುರುಷ ಶಕ್ತಿಯೂ ಹೆಚ್ಚುತ್ತದೆ. ದೇಹದ ಚಯಾಪಚಯ ಕ್ರಿಯೆ, ಜೀರ್ಣಕ್ರಿಯೆ ಮತ್ತು ದೈಹಿಕ ಚಟುವಟಿಕೆಗಳನ್ನು ಹೆಚ್ಚಿಸುತ್ತದೆ. ಬೆನ್ನೆಲುಬಿನ ಬಲಭಾಗದಲ್ಲಿ ಹರಿಯುವ ಈ ನಾಡಿಯನ್ನು ಉದ್ದೀಪನ ಮಾಡಿದಾಗ ನಿಮಗೆ ಎಂತಹಾ ಚಳಿಯಾಗುತ್ತಿದ್ದರೂ ಬೆವರು ಹರಿಯುತ್ತದೆ. ಈ ನಾಡಿಯು ಹಗಲಿನಲ್ಲಿ ಅಂದರೆ ಸೂರ್ಯನ ಇರುವಿಕೆಯ ಸಮಯದಲ್ಲಿ ಹೆಚ್ಚು ಚಲನಶೀಲವಾಗಿರುತ್ತದೆ. ಪಿಂಗಳ ನಾಡಿಯು ಸಕ್ರಿಯವಾಗಿದ್ದಾಗ ನಿಮ್ಮ ದೇಹದ ಎಡ ಮಿದುಳು ಚುರುಕಾಗುತ್ತದೆ. ಹೀಗಾಗಿ ನಿಮ್ಮಲ್ಲಿ ತರ್ಕ, ವಿಶ್ಲೇಷಣೆಗಳು ಹೆಚ್ಚುತ್ತವೆ. ಸತ್ಯ, ಪ್ರಾಮಾಣಿಕತೆ, ನೇರ ನಡೆ-ನುಡಿ, ಮಂದಹಾಸ, ಧೈರ್ಯ, ಸಾಹಸ ಮಾಡುವ ಪ್ರವೃತ್ತಿ, ಕೋಪ ಮತ್ತು ಹಸಿವನ್ನು ಸಹಾ ಹೆಚ್ಚಿಸುತ್ತದೆ. ನೀವು ಸದಾಚಾರಿಗಳಾಗಿರುವಂತೆ ನೋಡಿಕೊಳ್ಳುತ್ತದೆ.



ಇಡಾ ನಾಡಿ

ಇದು ಸೂರ್ಯನ ತೇಜಸ್ಸನ್ನು, ಪ್ರಖರತೆಯನ್ನು, ಶಾಖವನ್ನು ಹೀರಿಕೊಂಡು ತಂಪಾದ ಕಿರಣಗಳನ್ನು ನಿಮ್ಮ ಮೇಲೆ ಸುರಿಸುತ್ತದೆ. ನಿಮ್ಮ ದೇಹವು ಎಷ್ಟೇ ಬಿಸಿಯಾಗಿದ್ದರೂ ಬೆನ್ನೆಲುಬಿನ ಎಡ ಭಾಗದಲ್ಲಿರುವ ಈ ನಾಡಿಯನ್ನು ಉದ್ದೀಪನ ಮಾಡಿದರೆ, ನಿಮಗೆ ಇದ್ದಕ್ಕಿದ್ದಂತೆ ಚಳಿ ಪ್ರಾರಂಭವಾಗುತ್ತದೆ. ಇದು ಸ್ತ್ರೀ ಶಕ್ತಿ ಉತ್ತೇಜಕವೂ ಆಗಿದೆ. ಮನಸ್ಸನ್ನು ಶಾಂತಗೊಳಿಸಿ ನಿಮ್ಮ ಸೃಜನಶೀಲತೆಯನ್ನು ಹೆಚ್ಚಿಸುತ್ತದೆ. ಇದು ರಾತ್ರಿಯ ಚಂದ್ರನ ಇರುವಿಕೆಯಲ್ಲಿ ಹೆಚ್ಚು ಕಾರ್ಯಶೀಲವಾಗಿರುತ್ತದೆ. ನಿಮಗೆ ಸುಖವಾದ ನಿದ್ರೆಯನ್ನು ಕೊಡುವುದು ಇಡಾ ನಾಡಿ. ನಿಮ್ಮ ಕಲ್ಪನೆಯನ್ನು ಗರಿಗೆದರಿಸುವುದು ಇಡಾ ನಾಡಿ. ನಿಮ್ಮೊಳಗಿನ ಇಚ್ಛಾ ಶಕ್ತಿಯನ್ನು, ಆಸೆಗಳನ್ನು, ಕಾಮವನ್ನು ಹೆಚ್ಚಿಸುವುದು ಇಡಾ ನಾಡಿ. ಅಷ್ಟೇ ಅಲ್ಲ; ನಿಮ್ಮೊಳಗಿನ ಕ್ರೂರತೆಯನ್ನು, ಬೇಟೆಗಾರನನ್ನು, ಸಂಚು ಮಾಡುವುದನ್ನು, ಯೋಜನೆ ರೂಪಿಸುವುದನ್ನು, ಕೊಲೆಗಾರನನ್ನು ಹೀಗೆ ಎಲ್ಲಾ ವಾಮ ಕ್ರಿಯೆಗಳನ್ನೂ ಸಹಾ ಇಡಾ ನಾಡಿ ಉತ್ತೇಜಿಸಬಲ್ಲದು. ಒಟ್ಟಾರೆ ದೇಹದ ಸಮತೋಲನಕ್ಕೆ ಎರಡೂ ನಾಡಿಗಳ ನಡುವಿನ ಹೊಂದಾಣಿಕೆ ಮುಖ್ಯ.

ಸುಷುಮ್ನಾ ನಾಡಿ

ಹೀಗೆ ಎರಡೂ ನಾಡಿಗಳು ಸಮತೋಲನಕ್ಕೆ ಬಂದಾಗ ಸುಷುಮ್ನಾ ನಾಡಿಯಲ್ಲಿ ಶಕ್ತಿಯ ಪ್ರವಾಹ ಹರಿಯತೊಡಗುತ್ತದೆ. ನಿಮ್ಮೊಳಗೆ ಆಧ್ಯಾತ್ಮಿಕ ಜಾಗೃತಿ ಉಂಟಾಗುತ್ತದೆ. ಅದಕ್ಕಾಗಿಯೇ ಯೋಗದಲ್ಲಿ ಪ್ರಾಣಾಯಾಮಕ್ಕೆ ತುಂಬಾ ಮಹತ್ವ ಇರುವುದು. ನಾಡಿಶೋಧನಾ ಕ್ರಿಯೆ ಅಥವಾ ಅನುಲೋಮ ಮತ್ತು ವಿಲೋಮಗಳ ಮೂಲಕ ಪಿಂಗಳಾ ಮತ್ತು ಇಡಾ ಎರಡೂ ನಾಡಿಗಳನ್ನು ಶುದ್ಧೀಕರಿಸಬಹುದು. ಹೀಗೆ ದಿನಾಲೂ ಶುದ್ಧೀಕರಿಸುವುದರ ಮೂಲಕ ನಿಮ್ಮನ್ನು ಸದಾ ಸಮತೋಲನದಲ್ಲಿ ಇಟ್ಟುಕೊಳ್ಳಲು ಸಾಧ್ಯ. ಸೂರ್ಯ ನಾಡಿ ಅಂದರೆ ಪಿಂಗಳ ನಾಡಿಯು ಅತಿಯಾಗಿ ಕೆಲಸ ಮಾಡಲು ತೊಡಗಿದರೆ, ದೇಹದ ಉಷ್ಣಾಂಶದ ಜೊತೆಗೆ ಆತಂಕವೂ ಉಂಟಾಗುತ್ತದೆ. ಅದೇ ಚಂದ್ರ ನಾಡಿ ಅಂದರೆ ಇಡಾ ಸಹಾ ಅತಿಯಾಗಿ ಸಕ್ರಿಯವಾದರೆ ಆಲಸ್ಯ ಉಂಟಾಗುತ್ತದೆ.

ಸುಷುಮ್ನಾ ನಾಡಿಯು ಬೆನ್ನೆಲುಬಿನ ಒಳಗೆ ಸೂಕ್ಷ್ಮವಾಗಿ ನೆಲೆಸಿದೆ. ನಿಮ್ಮ ಕುಂಡಲಿನಿ ಶಕ್ತಿಯು ಜಾಗೃತವಾದಂತೆ ಅದು ಇನ್ನಷ್ಟು ಶಕ್ತಿಶಾಲಿಯಾಗುತ್ತದೆ. ಕುಂಡಲಿನಿಯ ಜೊತೆ ಮೂಲಾಧಾರದಿಂದ ಸಹಸ್ರಾರದವರೆಗೂ ಇದು ಹರಿಯುತ್ತದೆ. ಇಡಾ ಮತ್ತು ಪಿಂಗಳ ನಾಡಿಗಳು ನಿಮ್ಮ ಭೌತಿಕ ಮತ್ತು ಲೌಕಿಕ ಚಟುವಟಿಕೆಗಳನ್ನು ನಿಯಂತ್ರಿಸಿದರೆ, ಸುಷುಮ್ನಾ ನಾಡಿಯು ನಿಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಉತ್ತೇಜನಗೊಳಿಸುತ್ತದೆ. ಅದಕ್ಕಾಗಿಯೇ ಇಡಾ ಮತ್ತು ಪಿಂಗಳ ನಾಡಿಗಳು ಸಮತೋಲನದಲ್ಲಿ ಇರಬೇಕು. ಆಗ ಮಾತ್ರ ಸುಷುಮ್ನಾ ನಾಡಿಯು ಸಕ್ರಿಯವಾಗುತ್ತದೆ. ನಿಮಗೆ ಏಕಾಗ್ರತೆ ಉಂಟಾಗಬೇಕಿದ್ದರೆ ಸುಷುಮ್ನಾದಿಂದ ಮಾತ್ರ ಸಾಧ್ಯ. ಕುಂಡಲಿನಿಯು ಮೇಲ್ಮುಖವಾಗಿ ಹರಿಯುವಾಗ ಸುಷುಮ್ನಾ ನಾಡಿಯೊಂದಿಗೇ ಹರಿಯಬೇಕು. ಹಾಗೆ ಆದಾಗ ನಿಮ್ಮ ಮನಸ್ಸು ಪರಮ ಶಾಂತಿಯನ್ನು ಪಡೆಯುತ್ತದೆ. ಮುಕ್ತಿ ಮಾರ್ಗವು ಗೋಚರಿಸುತ್ತದೆ.

ಅಂಗಾದಿತ್ಯ ಎಂದರೆ ಈಗಾಗಲೇ ಹೇಳಿರುವಂತೆ ಸೂರ್ಯನ ತೇಜಸ್ಸು ನಿಮ್ಮ ಯಾವ ಅಂಗದಲ್ಲಿ ಹರಿಯುತ್ತಿದೆ ಎನ್ನುವ ತಿಳುವಳಿಕೆ. ಅದು ಜೈವಿಕ ಅಗ್ನಿ. ಸೂರ್ಯ ಯಾವ ಅಂಗದಲ್ಲಿ ತೇಜಸ್ಸನ್ನು ಹರಿಸುತ್ತಿದ್ದಾನೋ ಅದನ್ನು ಪ್ರಾಣಶಕ್ತಿ ಎನ್ನಲಾಗುತ್ತದೆ. ಆ ಮೂಲಕ ಸೂರ್ಯನು ಇಡೀ ದೇಹಕ್ಕೆ ಚೈತನ್ಯವನ್ನು ನೀಡುತ್ತಿರುತ್ತಾನೆ. ಸುಷುಮ್ನಾ ನಾಡಿಯು ಆ ಚೈತನ್ಯವನ್ನು ದಿವ್ಯ ಜ್ಞಾನವನ್ನಾಗಿ ಪರಿವರ್ತಿಸುತ್ತದೆ. ಸುಷುಮ್ನಾದ ಒಳಗೆ ಮೂರು ಪದರಗಳಿವೆ. ವಜ್ರಿಣಿ, ಚಿತ್ರಿಣಿ ಮತ್ತು ಬ್ರಹ್ಮ ನಾಡಿ. ಇವುಗಳಲ್ಲಿ ಅಗ್ನಿ ಮತ್ತು ಸೂರ್ಯನ ತೇಜಸ್ಸು ಅಡಕವಾಗಿವೆ. ಪಿಂಗಳ ನಾಡಿಯು ಸೂರ್ಯನ ತೇಜಸ್ಸನ್ನು ನಿರ್ದಿಷ್ಟವಾಗಿ, ಸೂಕ್ತ ಕ್ರಮದಲ್ಲಿ ಸುಷುಮ್ನಾ ನಾಡಿಗೆ ತಲುಪಿಸಿದರೆ, ಅಂತಹಾ ವ್ಯಕ್ತಿಗೆ ಯಾವುದೇ ರೋಗಗಳೇ ಬಾಧಿಸದು. ಅಷ್ಟೇ ಅಲ್ಲ ಆತ ದಿವ್ಯವಾದ ತೇಜಸ್ಸನ್ನು ಪಡೆಯುತ್ತಾನೆ. ಅಂದರೆ ಸೂರ್ಯನ ತೇಜಸ್ಸು; ಸುಷುಮ್ನಾದಲ್ಲಿ ಕುಂಡಲಿನಿಯೊಂದಿಗೆ ಸೇರಿ ಪ್ರಕಾಶಮಾನವಾಗಿ ಬೆಳಗುತ್ತದೆ. ಅದೇ ಆತ್ಮ ಜ್ಞಾನೋದಯ.

ಅಂಗಾದಿತ್ಯ...ನಾಡಿ... ಜಾತಕ

ಅಂಗಾದಿತ್ಯದಲ್ಲಿ ಸೂರ್ಯನು ನಿಮ್ಮ ದೇಹದ ಭೌತಿಕ ಅಂಗಗಳ ಮೇಲೆ ಪ್ರವಹಿಸುತ್ತಾನೆ. ನಾಡಿಯು ಅದರಿಂದ ಪ್ರೇರೇಪಿತವಾಗಿ ಮಾನಸಿಕ ಸ್ಥಿತಿಯ ಸುಧಾರಣೆ ಮಾಡುತ್ತದೆ. ಜಾತಕವು ಅದಕ್ಕೆ ಒಂದು ಮಾರ್ಗದರ್ಶಕ. ಅದರ ಮೂಲಕ ನಿಮ್ಮ ಸ್ಥಿತಿಯನ್ನು ಅಂದಾಜಿಸಬಹುದು. ಅದರಲ್ಲಿರುವ ಗ್ರಹಗಳ ಮೂಲಕ ನಿಮ್ಮ ಇಂದಿನ ಸ್ಥಿತಿಯನ್ನು ಗ್ರಹಿಸಿ ಸೂಕ್ತವಾದ ಪರಿಹಾರವನ್ನು ಹೊಂದ ಬಹುದು. ಇವೆಲ್ಲದರಿಂದ ನಿಮ್ಮ ಪ್ರಾರಬ್ಧವನ್ನು ಶಮನ ಮಾಡಬಹುದು. ಜಾತಕದಲ್ಲಿ ಸೂರ್ಯನು ಆತ್ಮಕಾರಕ. ಅದೇ ಅಂಗಾದಿತ್ಯ ಎಂದರೆ ನಿಮ್ಮ ದೇಹದ ಪ್ರತಿಯೊಂದು ಅಂಗದಲ್ಲಿ ನೆಲೆಸಿರುವ ಸೂರ್ಯನ ಅಂಶ ಅಥವಾ ಪ್ರಮಾಣ. ವ್ಯಕ್ತಿಯ ಹುಟ್ಟಿನ ಸಮಯದಲ್ಲಿ ಸೂರ್ಯನು ಯಾವ ರಾಶಿ ಮತ್ತು ನಕ್ಷತ್ರದಲ್ಲಿ ಇದ್ದಾನೋ ಎನ್ನುವ ಆಧಾರದಲ್ಲಿ ಆ ವ್ಯಕ್ತಿಯ ಆರೋಗ್ಯ ಮತ್ತು ಭವಿಷ್ಯ ನಿರ್ಧಾರವಾಗುತ್ತದೆ. ಸೂರ್ಯ ಮತ್ತು ಚಂದ್ರರು ಜಾತಕನಲ್ಲಿ ಯಾವ ನಕ್ಷತ್ರಗಳಲ್ಲಿ ಇದ್ದಾರೆ ಎನ್ನುವ ಆಧಾರದ ಮೇಲೆ ಅಂಗಾದಿತ್ಯ ಯಾವ ಅಂಗದಲ್ಲಿ ನೆಲೆಸಿದ್ದಾನೆ, ಯಾವೆಲ್ಲಾ ಅಂಗಗಳನ್ನು ಬೆಳಗುತ್ತಿದ್ದಾನೆ ಎನ್ನುವುದನ್ನು ನಿರ್ಧರಿಸಲಾಗುತ್ತದೆ. ಜಾತಕದಲ್ಲಿ ಸೂರ್ಯನು ಪ್ರಬಲ, ಉಚ್ಚ, ಪ್ರಕಾಶಮಾನವಾಗಿದ್ದರೆ ಅಂತಹಾ ವ್ಯಕ್ತಿಗಳಲ್ಲಿ ಅಂಗಾದಿತ್ಯ ಶಕ್ತಿಯೂ ಹೆಚ್ಚಿರುತ್ತದೆ. ಆತ ರೋಗನಿರೋಧಕ ಶಕ್ತಿ ಪಡೆದಿರುತ್ತಾನೆ ಮತ್ತು ಆತ್ಮವಿಶ್ವಾಸ ಹೊಂದಿದವನಾಗಿರುತ್ತಾನೆ.

ಜಾತಕದಲ್ಲಿನ ಗ್ರಹಗಳ ದೆಸೆ ಮತ್ತು ಗೋಚಾರವು ದೇಹದ ಎಲ್ಲಾ ನಾಡಿಗಳ ಮೇಲೆ ಪ್ರಭಾವ ಬೀರುತ್ತಿರುತ್ತದೆ. ಅದರಲ್ಲೂ ಮೂರು ಮುಖ್ಯ ನಾಡಿಗಳಾದ ಪಿಂಗಳ, ಇಡಾ ಮತ್ತು ಸುಷುಮ್ನಾಗಳು ಅತ್ಯಂತ ಸೂಕ್ಷ್ಮವಾಗಿರುವ ಕಾರಣ ಬಲು ಬೇಗ ಪ್ರತಿಕ್ರಿಯಿಸುತ್ತವೆ. ಉದಾಹರಣೆಗೆ ಜಾತಕದಲ್ಲಿ ಮಂಗಳ ಅಥವಾ ಸೂರ್ಯನ ಪ್ರಭಾವ ಹೆಚ್ಚಾದಾಗ ಪಿಂಗಳ ನಾಡಿಯು ಹೆಚ್ಚು ಸಕ್ರಿಯವಾಗುತ್ತದೆ. ಅದರಿಂದಾಗಿ ದೇಹದಲ್ಲಿ ಉಷ್ಣತೆ ಹೆಚ್ಚುತ್ತದೆ. ವ್ಯಕ್ತಿಯು ಪಿತ್ಥ ಪ್ರಕೋಪಕ್ಕೆ ಒಳಗಾಗುತ್ತಾನೆ.

ಜಾತಕವೆನ್ನುವ ಭೂಪಟ

ಜಾತಕವು ಪಾರಬ್ಧ ಕರ್ಮವನ್ನು ಮತ್ತು ವಿಧಿಯ ನಿಯಮಗಳನ್ನು ಪ್ರತಿನಿಧಿಸುತ್ತದೆ. ಒಂದು ರೀತಿಯಲ್ಲಿ ಜೀವನದ ಏರಿಳಿತಗಳು ಮತ್ತು ಸಂಚಿತ ಕರ್ಮವನ್ನು ತೋರಿಸುತ್ತದೆ. ಆದರೆ ಅದರಲ್ಲಿ ಪರಿಹಾರವಿಲ್ಲ. ಕಾರಣ ಯಾವುದೇ ಸಂಗತಿಗಳೂ ಆಗುವುದಾದರೆ ಆಗಿಹೋಗುವುದು ವಿಧಿ ನಿಯಮ. ಅದನ್ನು ಆಗದಂತೆ ಮಾಡುವುದು ಅಸಾಧ್ಯ. ಆದರೆ ಪ್ರಾರ್ಥನೆ ಮತ್ತು ಪ್ರಯತ್ನಗಳು ವಿಧಿಯ ನಿಯಮಗಳನ್ನು ಸಹಾ ಬದಲಿಸುತ್ತವೆ. ಹಾಗೇ ನಾಡಿಗಳು ದೇಹ ಮತ್ತು ಮನಸ್ಸಿನ ನಡುವಿನ ಸಂಪರ್ಕ ಸೇತುವೆ. ಅಂಗಾದಿತ್ಯ ಸೂರ್ಯ ತೇಜಸ್ಸಿನ ಮೂಲಕವೂ ಸಹಾ ಮುಂಬರುವ ಕಷ್ಟಗಳನ್ನು ಸಮತೋಲನ ಮಾಡಬಹುದು. ಎದುರಿಸಬಹುದು. ನಿಯಂತ್ರಣ ಮಾಡಿಕೊಳ್ಳಬಹುದು. ಅಂದರೆ ನಿಮ್ಮ ದೇಹದಲ್ಲಿರುವ ಸೂರ್ಯ ಶಕ್ತಿಯನ್ನು ಬಳಸಿಕೊಳ್ಳುವುದರ ಮೂಲಕ ದೇಹವನ್ನು, ಮನಸ್ಸನ್ನು, ಆರೋಗ್ಯವನ್ನು, ಆರ್ಥಿಕ ಸ್ಥಿತಿಯನ್ನು, ಸಂಬಂಧಗಳನ್ನು, ಹೀಗೆ ಎಲ್ಲವನ್ನು ಸಹಾ ಸರಿ ಮಾಡಿಕೊಳ್ಳಬಹುದು.

ಸರ್ವತ್ರ ದೇವರಿದ್ದಾನೆ

ಅಗ್ನಿರ್ದೇವೋ ದ್ವಿಜಾತೀನಾಂ ಮುನೀನಾಂ ಹೃದಿ ದೈವತಮ್।
ಪ್ರತಿಮಾ ಸ್ವಲ್ಪ ಬುದ್ಧೀನಾಂ ಸರ್ವತ್ರ ವಿಧಿತಾತ್ಮನಾಮ್ ॥

ದ್ವಿಜರಿಗೆ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ) ಅಗ್ನಿಯಲ್ಲಿ ದೇವರುಂಟು. ಮುನಿಗಳಿಗೆ ತಮ್ಮ ಅಂತರಂಗದಲ್ಲಿಯೇ ದೇವರುಂಟು. ಸಾಮಾನ್ಯ ತಿಳಿವಳಿಕೆಯುಳ್ಳವರಿಗೆ ವಿಗ್ರಹಗಳಲ್ಲಿ ದೇವರುಂಟು. ಆತ್ಮತತ್ವವನ್ನು ಬಲ್ಲವರಿಗೆ ಸರ್ವತ್ರ ದೇವರುಂಟು - ಎಂಬುದು ಶ್ಲೋಕಾರ್ಥ.



ದೇವರನ್ನು ಕಂಡವರು ಯಾರೂ ಇಲ್ಲ. ಕಂಡವರು ಹಿಂದೆ ಇದ್ದರು ಎಂಬುದನ್ನು ಗ್ರಂಥಗಳ ಮೂಲಕ ತಿಳಿದಿದ್ದೇವೆ. ಆದರೆ ಇಂದಿನ ಕಾಲದಲ್ಲಿ ಕಂಡವರು ಯಾರೂ ಇಲ್ಲ. ಯಾರೂ ಕಾಣದಿದ್ದರೂ ದೇವರಿದ್ದಾನೆ ಎಂದು ನಂಬಿಕೊಂಡು ಜೀವನ ನಡೆಸುತ್ತೇವೆ. ಭಗವಂತ ಸರ್ವಜ್ಞ, ಸರ್ವಶಕ್ತ, ಸರ್ವವ್ಯಾಪಿ ಎಂಬುದು ಶಾಸ್ತ್ರ ನಿರ್ವಚನ. ಭಗವಂತನಿದ್ದಾನೆ ಎಂಬ ನಂಬಿಕೆಯೇ ಬದುಕನ್ನು ಅರ್ಥಪೂರ್ಣಗೊಳಿಸುತ್ತದೆ. ಭಗವಂತ ಎಂಬುದು ಒಂದು ಅದ್ಭುತ ಶಕ್ತಿ. ಸಾಮಾನ್ಯರ ಕಣ್ಣಿಗೆ ಕಾಣಿಸದು. ಊಹಿಸಬಹುದಷ್ಟೇ.

ಸನಾತನ ಪರಂಪರೆಯಲ್ಲಿ ಅನೇಕರು ಅನೇಕ ಬಗೆಯಲ್ಲಿ ದೇವನಿದ್ದಾನೆ ಎಂದು ನಂಬಿ ಆರಾಧಿಸುತ್ತಾರೆ. ದೇವರನ್ನು ಕಾಣುವ ಪರಿ ಬೇರೆ ಬೇರೆ ಇರಬಹುದು.

'**ಜನ್ಮನಾ ಜಾಯತೇ ಶೂದ್ರಃ ಕರ್ಮಣಾಜಾಯತೇ ದ್ವಿಜಃ**' ಎಂಬ ಮಾತಿದೆ. ಹುಟ್ಟಿದಾಗ ಎಲ್ಲರೂ ಶೂದ್ರರೇ. ಅಲ್ಲಿ ಜಾತಿಯ ಅಥವಾ ವರ್ಣದ ಕಲ್ಪನೆಯಿಲ್ಲ. ತಾಯಿಯ ಗರ್ಭದಿಂದ ಹೊರಬರುವುದು ಮೊದಲ ಹುಟ್ಟಾದರೆ, ಹುಟ್ಟುವ ಮಗುವಿಗೆ ಸಂಸ್ಕಾರವಿತ್ತರೆ ದ್ವಿಜ ಎನಿಸಿಕೊಳ್ಳುತ್ತದೆ. ದ್ವಿಜ ಎಂದರೆ ಎರಡು ಬಾರಿ ಹುಟ್ಟಿದವರು ಎಂದರ್ಥ. ಎರಡು ಬಾರಿ ಹುಟ್ಟುವುದು ಎಂದರೇನು? ಹುಟ್ಟಿದ ಮಗುವಿಗೆ ಅನಂತರ ಸಂಸ್ಕಾರ ನೀಡಿ ಸುಸಂಸ್ಕೃತನ್ನಾಗಿಸುವ ಕರ್ಮವಿಧಾನವಿದೆ. ಪರತತ್ವವನ್ನು ತಿಳಿಯಲು ವಿಶೇಷ ಅಧ್ಯಯನಕ್ಕಾಗಿ ಉಪನಯನಾದಿ ಸಂಸ್ಕಾರ ನೀಡುವ ಪದ್ಧತಿಯಿದೆ. ಇದು ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯ ಕುಟುಂಬಗಳಲ್ಲಿವೆ. ಹಿಂದೆ ಸ್ತ್ರೀಯರಿಗೂ ಉಪನಯನ ಸಂಸ್ಕಾರವಿತ್ತು. ಕಾಲಕ್ರಮದಲ್ಲಿ ಸ್ತ್ರೀಯರಿಗೆ ಉಪನಯನ ಇಲ್ಲವಾಯಿತು. ಪುರುಷರಿಗೆ ಮಾತ್ರ ಉಳಿದುಕೊಂಡಿತು. ಉಪವೀತ ವಟು ಅಗ್ನಿ ಕಾರ್ಯ ಮಾಡಿ, ಆಹುತಿ ನೀಡಿ ಅನಂತರ ನಿತ್ಯಕರ್ಮದಲ್ಲಿ ಮುಂದುವರಿಯಬೇಕು. ಇದು ಮಾಡಲೇಬೇಕಾದ ನಿತ್ಯಕರ್ಮ. ಅಗ್ನಿಯನ್ನು ಆರಾಧಿಸಿ, ಆಹುತಿ ನೀಡಿ ಎಲ್ಲ ದೇತೆಗಳನ್ನೂ ಅಲ್ಲಿಯೇ ಕಾಣಬೇಕು. ಆದ್ದರಿಂದ ಈ ಮೂರು ವರ್ಣದವರಿಗೆ ಅಗ್ನಿಯೇ ದೇವರು. ಎಲ್ಲ ದೇವರ ಸಾನ್ನಿಧ್ಯ ಇಲ್ಲಿಯೇ ಉಂಟು. ಆದ್ದರಿಂದ ಅಗ್ನಿಯನ್ನು ಆರಾಧಿಸಿ ಅಲ್ಲಿಯೇ ದೇವತ್ವವನ್ನು ಕಾಣುತ್ತಾರೆ.

ಆ ಹಂತವನ್ನು ಮೀರಿ ಪರತತ್ವವನ್ನು ಕಾಣುವ ಉತ್ಕಟ ಇಚ್ಛೆಯಿಂದ ಕೂಡಿದ ಸಂತರು ತಮ್ಮ ಅಂತರಂಗದಲ್ಲಿಯೇ ದೇವರನ್ನು ಕಾಣಲು ಹಂಬಲಿಸುತ್ತಾರೆ. ಈ ಕುರಿತಾದ ಚಟುವಟಿಕೆಗಳಲ್ಲಿ ಇರುತ್ತಾರೆ. ಇವರಿಗೆ ದೇವನಿರುವುದು ಅಂತರಂಗದಲ್ಲಿ. ಈ ಎರಡೂ ಹಂತಕ್ಕೆ ಏರದವರು ಪ್ರತಿಮೆಗಳಲ್ಲಿ ದೇವರನ್ನು ಕಾಣಲು ಪ್ರಯತ್ನಿಸುತ್ತಾರೆ. ಪ್ರತಿಮೆಯಲ್ಲಿ ದೇವತೆಯ ಸಾನ್ನಿಧ್ಯವನ್ನು ಕಂಡು ಆರಾಧಿಸುತ್ತಾರೆ. 'ಅವರವರ ಭಾವಕ್ಕೆ ಅವರವರ ಭಕುತಿಗೆ' ಭಗವಂತ ಕಾಣಿಸಿಕೊಳ್ಳುತ್ತಾನೆ.

ಇವೆಲ್ಲ ಹಂತವನ್ನು ಮೀರಿ ನಿಂತವರು ಎಲ್ಲದರಲ್ಲಿಯೂ, ಎಲ್ಲರಲ್ಲಿಯೂ, ಅಂದರೆ ಸರ್ವತ್ರ ದೇವರನ್ನು ಕಂಡು ಆರಾಧಿಸುವವರು. ಇವರು ಅನುಭಾವಿಗಳು, ಆತ್ಮತತ್ತ್ವವನ್ನು ಕಾಣಲು ಹಂಬಲಿಸುವವರು.

ಖಗೋಳ ವಿಜ್ಞಾನ ಮತ್ತು ಅಧಿಕಮಾಸ

ಒಳನೋಟ

• ಹೆ.ಬಾ. ಮಲ್ಯ



ಈ ಬಾರಿ ಚಾಂದ್ರಮಾನದ ಜ್ಯೇಷ್ಠ ಮಾಸ ಅಧಿಕ ಮಾಸವಾಗಿ ಬಂದಿದೆ. ಈ ಬಾರಿ ಚಾಂದ್ರಮಾನದಲ್ಲಿ 12ರ ಬದಲಾಗಿ 13 ತಿಂಗಳು ಬರುತ್ತವೆ. ಇಂದು ವೈಶಾಖ ಕೃಷ್ಣ ಅಮಾವಾಸ್ಯೆ. ನಾಳೆ ಅಧಿಕ ಜ್ಯೇಷ್ಠ ಮಾಸ ಪ್ರಾರಂಭ. ನಂತರ ಪುನಃ ಒಂದು ತಿಂಗಳು ನಿಜ ಜ್ಯೇಷ್ಠ ಮಾಸ. ಹೀಗೆ ಜ್ಯೇಷ್ಠ ಮಾಸ ಎರಡು ಬಾರಿ ಬರುತ್ತದೆ. ಸೌರಮಾನ ಹಾಗೂ ಗ್ರೆಗೋರಿಯನ್ ಇಂಗ್ಲಿಷ್ ಕ್ಯಾಲೆಂಡರ್‌ಗಳಲ್ಲಿ ಅಧಿಕಮಾಸ ಎಂಬುದಿಲ್ಲ. ಕೇವಲ ಚಾಂದ್ರಮಾನದಲ್ಲಿ ಅಧಿಕಮಾಸದ ವ್ಯವಸ್ಥೆ ಇದೆ. ಹಾಗಂತ ಕೇವಲ ಚಾಂದ್ರಮಾನವನ್ನೇ ಅನುಸರಿಸುತ್ತಾ ಹೋದರೆ ಅಧಿಕಮಾಸದ ಅಗತ್ಯವಿರುತ್ತಿರಲಿಲ್ಲ. ಆದರೆ ನಾವು ಚಾಂದ್ರಮಾನದಲ್ಲಿ ಬಳಸುವ ಋತುಮಾನ ವ್ಯತ್ಯಾಸವಾಗುತ್ತದೆ. ಋತುಮಾನ ಬದಲಾಗುವುದು ಸೂರ್ಯನ ಚಲನೆಯಲ್ಲಾಗುತ್ತಿರುವ ಬದಲಾವಣೆಯಿಂದ. ನಾವು ಚಿಕ್ಕವರಿದ್ದಾಗ ಪ್ರಾಥಮಿಕ ಶಾಲೆಗಳಲ್ಲಿ ಮಗ್ಗಿ ಪುಸ್ತಕ (Tables) ಇತ್ತು. ಮಗ್ಗಿಯ ಜೊತೆಗೆ ಚಾಂದ್ರಮಾನ ಸೌರಮಾನ ಮಾಸಗಳು, 27 ನಕ್ಷತ್ರಗಳು, ಪಕ್ಷಗಳು, ಅಯನ, ಸಂವತ್ಸರ ಇತ್ಯಾದಿಗಳ ಹೆಸರನ್ನು ಬಾಯಿ ಪಾಠ ಮಾಡುವುದು ಕಡ್ಡಾಯವಾಗಿತ್ತು. ಚೈತ್ರ-ವೈಶಾಖ, ವಸಂತ ಋತು.... ಇತ್ಯಾದಿ. ಆದರೆ ಈಗಾಗಲೇ ಮೇಲೆ ಹೇಳಿದಂತೆ ಚಾಂದ್ರಮಾನಕ್ಕೂ ಋತುಮಾನ ಬದಲಾವಣೆಗೂ ಸಂಬಂಧವೇ ಇಲ್ಲ. ಋತುಮಾನ ಸೌರಮಾನಕ್ಕೆ ಸಂಬಂಧಪಟ್ಟದ್ದು. ಹಾಗಾಗಿ ಚಾಂದ್ರಮಾನ -ಋತುಗಳು ಹಾಗೂ ಸೌರಮಾನಗಳಲ್ಲಿ ಹೊಂದಾಣಿಕೆ ಮಾಡುವ ಅನಿವಾರ್ಯತೆ ಉಂಟಾಯಿತು.

ಗಣಿತ, ಖಗೋಳವಿಜ್ಞಾನ ಇತ್ಯಾದಿಗಳನ್ನು ನಮ್ಮ ಪ್ರಾಚೀನ ಋಷಿಮುನಿಗಳು ಸಂಶೋಧನೆ ಮಾಡಿ ಕಾಲಗಣನ ವಿಜ್ಞಾನವನ್ನು ರೂಪಿಸಿ, ಜಗತ್ತಿಗೆ ನೀಡಿದರು. ಅವರು ಚಾಂದ್ರಮಾನ- ಸೌರಮಾನಗಳು ಮಾತ್ರವಲ್ಲದೆ, ಸಾವನಮಾನ, ನಕ್ಷತ್ರಮಾನ, ಪಿತೃಮಾನ, ದೇವಮಾನ, ಪ್ರಾಜಾಪತ್ಯ ಮಾನ, ಬಾರ್ಹಸ್ಪತ್ಯ ಮಾನ, ಬ್ರಾಹ್ಮ ಮಾನ ಎಂಬ 9 ಬಗೆಯ ಕಾಲಮಾನಗಳನ್ನು ರಚಿಸಿದರು. ಈಗ ಚಂದ್ರಮಾನ-ಸೌರಮಾನಗಳು ಮಾತ್ರ ನಿತ್ಯ ಬಳಕೆಯಲ್ಲಿವೆ. ಈ ಅದ್ಭುತ ಜ್ಞಾನ-ವಿಜ್ಞಾನ ಪರಂಪರೆಯ ಹಿಂದಿರುವ ಗಣಿತ, ಖಗೋಳ ವಿಜ್ಞಾನ, ಕಾಲಗಣನ ವಿಜ್ಞಾನವನ್ನು ಇಂದು ಭಾರತೀಯರೇ ಮರೆತಿದ್ದಾರೆ. ಕೇವಲ ಧಾರ್ಮಿಕ ಕಾರ್ಯಕ್ರಮಗಳಿಗೆ ಹಾಗೂ ಮದುವೆ, ಮುಂಜಿ, ಗೃಹಪ್ರವೇಶ, ಹೋಮ ಹವನ, ಪೂಜೆ, ಸಂಧ್ಯಾವಂದನೆಗಳಿಗಷ್ಟೇ ಪಂಚಾಂಗ ಸೀಮಿತವಾಗಿಬಿಟ್ಟಿದೆ. ಅನೇಕ ಆಚರಣೆಗಳು, ನಂಬಿಕೆಗಳು ಉಳಿದುಕೊಂಡು ಬಂದಿರುವುದರಿಂದ ಧಾರ್ಮಿಕ ಶ್ರದ್ಧೆ ಇನ್ನೂ ಉಳಿದುಕೊಂಡು ಬಂದಿದೆ. ಅದರ ಜೊತೆಗೆ, ಅರ್ಥ ಗೊತ್ತಿಲ್ಲದಿದ್ದರೂ ಈ ವಿಜ್ಞಾನವೂ ಸಾವಿರಾರು ವರ್ಷಗಳಿಂದ ಉಳಿದುಕೊಂಡು ಬಂದಿದೆ.

ಈಗ ಅಧಿಕಮಾಸ ಎಂಬ ವಿಶೇಷತೆ ಬಗ್ಗೆ ಚಿಂತಿಸುವ. ಚಂದ್ರನ ಚಲನೆ ಹಾಗೂ ಸೂರ್ಯನ ಚಲನೆಗಳಲ್ಲಿ ವ್ಯತ್ಯಾಸವಿದೆ. ಕ್ರಾಂತಿವೃತ್ತದಲ್ಲಿ ಸೂರ್ಯನು 365.2422 ದಿನಗಳಲ್ಲಿ ಒಂದು ಸುತ್ತು ಬಂದು ವರ್ಷ ಪೂರೈಸುತ್ತಾನೆ. ಚಂದ್ರನ ಚಲನೆಯ ವೇಗ ಹೆಚ್ಚು, ಭೂಮಿಯೊಡನೆ ಚಂದ್ರ 354.3 ದಿನಗಳಲ್ಲಿ ಸೂರ್ಯನಿಗೆ ಒಂದು ಸುತ್ತು ಬರುತ್ತಾನೆ. ಹೀಗೆ ಪ್ರತಿ ವರ್ಷ ಚಾಂದ್ರಮಾನ ಮತ್ತು ಸೌರಮಾನಗಳೊಳಗೆ 10.8422 ದಿವಸಗಳ ಅಂತರ ಏರ್ಪಡುತ್ತದೆ. ಚಾಂದ್ರಮಾನದ ಚೈತ್ರ- ವೈಶಾಖ- ವಸಂತ ಋತು ಇತ್ಯಾದಿ ಋತುಮಾನವನ್ನು ಸೌರಮಾನದೊಂದಿಗೆ ಸಮೀಕರಿಸಬೇಕಾದರೆ ಎರಡು ಕಾಲಮಾನಗಳೊಳಗೆ ಒಂದು ಹೊಂದಾಣಿಕೆ ಮಾಡಬೇಕಾಗುತ್ತದೆ. ಇದನ್ನು ಸರಿದೂಗಿಸಲು ಚಾಂದ್ರಮಾನ ವರ್ಷಕ್ಕೆ ಒಂದು ತಿಂಗಳು ಹೆಚ್ಚುವರಿ ಮಾಸವನ್ನು ಹೆಚ್ಚುವರಿಯಾಗಿ ಸೇರಿಸುವ ವ್ಯವಸ್ಥೆ ಮಾಡಿದರು. ಸರಿಯಾಗಿ 2 ವರ್ಷ ಎಂಟು ತಿಂಗಳು, 16 ತಿಥಿ, ನಾಲ್ಕು ಗಳಿಗೆಗಳು ಸಂದಾಗ 30 ದಿನಗಳ ವ್ಯತ್ಯಾಸವಾಗುತ್ತದೆ. ಈ ಅವಧಿ ಮುಗಿದಾಕ್ಷಣ 30 ದಿನಗಳ ಒಂದು ತಿಂಗಳನ್ನು ಆ ವರ್ಷದ ಚಾಂದ್ರ ಮಾಸಗಳೊಂದಿಗೆ ಜೋಡಿಸುತ್ತಾರೆ. ಹಾಗೆ ಜೋಡಿಸುವಾಗ ಯಾವ ಚಾಂದ್ರಮಾಸ ಪ್ರಾರಂಭವಾಗುತ್ತದೋ ಅದು ಅಧಿಕಮಾಸ ಎನಿಸಿಕೊಳ್ಳುತ್ತದೆ. ಈ ಬಾರಿ ಜ್ಯೇಷ್ಠ ಮಾಸ ಅಧಿಕಮಾಸವಾಗಿ ಬಂದಿದೆ. ಆ ಜೋಡಿಸಿದ ಕ್ಷಣದಿಂದ ಚಾಂದ್ರಮಾನ ಮತ್ತು ಸೌರಮಾನ ಕಾಲ ಒಂದೇ ಆಗಿರುತ್ತದೆ. ಈ ವರ್ಷದ ಪಂಚಾಂಗ ನೋಡಿದಾಗ ಇದು ಸ್ಪಷ್ಟವಾಗುತ್ತದೆ. ಈಗಿನ ವೈಶಾಖ ಮಾಸ ಇಂದು ಅಮಾವಾಸ್ಯೆಯೊಂದಿಗೆ ಮುಗಿಯುತ್ತಿದೆ. ನಾಳೆ ಅಂದರೆ 17 ಭಾನುವಾರ ಜ್ಯೇಷ್ಠ ಶುಕ್ಲ ಪಾಡ್ಯ. ಅದು ಅಧಿಕ ಜ್ಯೇಷ್ಠ ಪ್ರಾರಂಭದ ದಿನ. ಅಮಾವಾಸ್ಯೆ ಮೇ 16ರ ರಾತ್ರಿ ಅಂದರೆ 17ರ ಬೆಳಿಗ್ಗೆ 3.30 ಗಂಟೆಗೆ ಮುಗಿದು ಜ್ಯೇಷ್ಠ ಶುಕ್ಲ ಪಾಡ್ಯ ಪ್ರಾರಂಭವಾಗುತ್ತದೆ. ಅದೇ ಹೊತ್ತಿಗೆ ಸೌರ ವೃಷಭ ಮಾಸದ ಮೊದಲ ದಿನ ಪ್ರಾರಂಭವಾಗುತ್ತದೆ. ಆಗ ಅಧಿಕ ಜ್ಯೇಷ್ಠದ ಮೊದಲ ತಿಥಿ ಹಾಗೂ ಸೌರ ವೃಷಭ ಮಾಸದ ಮೊದಲ ದಿನ ಒಂದೇ ಆಗುತ್ತವೆ. ಕ್ರಮೇಣ ವ್ಯತ್ಯಾಸವಾಗುತ್ತಾ ಮುಂದಿನ 2 ವರ್ಷ 8 ತಿಂಗಳು 16 ತಿಥಿ ಕಳೆಯುವ ಹೊತ್ತಿಗೆ 30 ದಿನಗಳ ವ್ಯತ್ಯಾಸವಾಗುತ್ತದೆ. ಆಗ ಮತ್ತೆ ಒಂದು ತಿಂಗಳು ಅಧಿಕಮಾಸವಾಗಿ ಚಾಂದ್ರಮಾನಕ್ಕೆ ಸೇರಿಸಲಾಗುತ್ತದೆ. ಹೀಗೆ ಚಾಂದ್ರಮಾನ- ಸೌರಮಾನಗಳೊಳಗಿನ ಹೊಂದಾಣಿಕೆ ಕಾಯ್ದುಕೊಳ್ಳಲಾಗುತ್ತದೆ. ಈ 2 ವರ್ಷ 8 ತಿಂಗಳ ನಡುವಣ ಅವಧಿಯಲ್ಲಿ ತಿಥಿಗೂ-ತಾರೀಕಿಗೂ ವ್ಯತ್ಯಾಸ ಬರುತ್ತದೆ. ಕ್ಯಾಲೆಂಡರ್ ಕಾಲಮಾನ ಮತ್ತು ಸೌರಮಾನ ಸುಮಾರಾಗಿ ಹೊಂದಾಣಿಕೆಯಾಗುತ್ತವೆ. ಹಾಗಾಗಿಯೇ ಸೌರ ಮಕರ ಸಂಕ್ರಾಂತಿಯು ಪ್ರತಿ ಕ್ಯಾಲೆಂಡರ್ ವರ್ಷ ಜನವರಿ 14ರಂದೇ ಬರುತ್ತದೆ. ಸಂಪ್ರದಾಯ ಅನುಸರಿಸುವವರು ಜನ್ಮ ತಿಥಿಯಂದೇ ಹುಟ್ಟುಹಬ್ಬ ಆಚರಿಸುತ್ತಾರೆ. ಅದೇ ರೀತಿ ಚಾಂದ್ರಮಾನ ಮಾಸ ಹಾಗೂ ತಿಥಿಯ ದಿನಗಳಂದೇ ಎಲ್ಲಾ ಧಾರ್ಮಿಕ ಹಬ್ಬಗಳನ್ನು ಆಚರಿಸುತ್ತಾರೆ. ಹಬ್ಬಗಳು ಪ್ರತಿ ವರ್ಷ ಬೇರೆ ಬೇರೆ ತಾರೀಕಿನಂದು ಬರಲು ಚಾಂದ್ರಮಾನ-ಸೌರಮಾನ- ಕ್ಯಾಲೆಂಡರ್ ಮಾನಗಳೊಳಗಣ ವ್ಯತ್ಯಾಸವೇ ಕಾರಣ. ಈಗ ಆಧುನಿಕರು ಮಕ್ಕಳ ಹುಟ್ಟುಹಬ್ಬವನ್ನು ಕ್ಯಾಲೆಂಡರ್ ತಾರೀಕಿಗೆ ಅನುಸಾರವಾಗಿ ಆಚರಿಸುವ ರೂಢಿ ಬಂದಿದೆ. ಹಬ್ಬಗಳೆಲ್ಲಾ ನಿಜ ಜ್ಯೇಷ್ಠ ಮಾಸಕ್ಕೆ ಮುಂದಕ್ಕೇ ಹೋಗಿವೆ.

ನಿಜವಾಗಿ ಖಗೋಳ ವಿಜ್ಞಾನದಲ್ಲಿ ಇದೊಂದು ವಿಶೇಷವಾದ ವ್ಯವಸ್ಥೆ. ಹಬ್ಬ ಹರಿದಿನಗಳ ಆಚರಣೆ, ನಂಬಿಕೆಗಳು ಏನೇ ಇರಲಿ, ಅಧಿಕಮಾಸ ಎಂಬುದು ಗಣಿತ, ಖಗೋಳ ವಿಜ್ಞಾನವನ್ನಾಧರಿಸಿದ ಒಂದು ವ್ಯವಸ್ಥೆ. ಇದರ ಉದ್ದೇಶ ಮತ್ತು ಅವಶ್ಯಕತೆಗಳ ಬಗ್ಗೆ ಮೇಲೆ ವಿವರವಾಗಿ ಹೇಳಲಾಗಿದೆ.

ಇನ್ನು ಪ್ರತಿ ಬಾರಿ ಜ್ಯೇಷ್ಠವೇ ಅಧಿಕಮಾಸ ಆಗಬೇಕೆಂದೇನಿಲ್ಲ. ಆದರೆ ಕಾರ್ತಿಕ, ಪುಷ್ಯ, ಮಾಘ ಈ ಮೂರು ಚಾಂದ್ರ ಮಾಸಗಳು ಎಂದೂ ಅಧಿಕಮಾಸವಾಗಿ ಬರುವುದಿಲ್ಲ. ಇದಕ್ಕೂ ಕಾರಣವಿದೆ. ಇಲ್ಲಿ ಒಂದು ಕುತೂಹಲಕಾರಿ ಗಣಿತವನ್ನು ಗಮನಿಸಬೇಕು. ಸೌರ ಮಾಸಗಳಾದ ವೃಶ್ಚಿಕ, ಧನು, ಮಕರ ಈ ಮೂರು ಮಾಸಗಳು ಚಾಂದ್ರ ಮಾಸಗಳಿಗಿಂತ ಚಿಕ್ಕವು. ಆ ಕಾರಣದಿಂದಾಗಿ ಈ ಮೂರು ಸೌರ ಮಾಸಗಳೊಂದಿಗೆ ಬರುವ ಕಾರ್ತಿಕ, ಪುಷ್ಯ, ಮಾಘ ಚಂದ್ರಮಾನ ಮಾಸಗಳು ಸೌರಮಾಸಗಳಿಗಿಂತ ಚಿಕ್ಕವಾದ್ದರಿಂದ ಎಂದೂ ಅಧಿಕಮಾಸವಾಗಿ ಬರುವುದಿಲ್ಲ. ಅಧಿಕಮಾಸಕ್ಕೆ ಇನ್ನೂ ಒಂದು ಸೂತ್ರವಿದೆ. ಅಧಿಕಮಾಸದಲ್ಲಿ ಸೌರ ಸಂಕ್ರಾಂತಿ ಬರುವುದಿಲ್ಲ. ಯಾವ ಚಾಂದ್ರ ಮಾಸದಲ್ಲಿ ಸಂಕ್ರಾಂತಿಯೇ ಬರುವುದಿಲ್ಲವೋ ಅದು ಅಧಿಕಮಾಸವೆಂದು ತಿಳಿಯಬೇಕು. ಇದಕ್ಕೂ ಗಣಿತ ಲೆಕ್ಕಾಚಾರವಿದೆ. ಪ್ರತಿ ಸೌರಮಾಸದ ಕಾಲಾವಧಿ ಸರಾಸರಿ 30 ದಿವಸ 10 ಗಂಟೆಗಳು. ಆದರೆ ಭೂಮಿಯ ಅಂಡಾಕಾರದ ಚಲನೆಯ ಕಾರಣ, ಚಲನೆಯ ಗತಿಯಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಬೇಸಿಗೆಯಲ್ಲಿ ಸೂರ್ಯನ ಮಿಥುನ ಮಾಸದ ಅವಧಿ 31.65 ದಿವಸಗಳಾದರೆ, ಚಳಿಗಾಲದ ಧನುರ್ಮಾಸದ ಅವಧಿ 29.32 ದಿವಸಗಳು. ವೃಶ್ಚಿಕ, ಧನು ಕುಂಭ ಈ ತಿಂಗಳ ಅವಧಿ ದೊಡ್ಡದು. ಈ ಸಮಯದಲ್ಲಿ ಬರುವ ಚಾಂದ್ರ ಮಾಸಗಳ ಅವಧಿ ಚಿಕ್ಕದು. ಸೌರ-ಚಾಂದ್ರ ಮಾಸಗಳೊಳಗಿನ ಗತಿಯ ವ್ಯತ್ಯಾಸದ ಕಾರಣ ಪ್ರತಿಮಾಸದಲ್ಲಿ ಒಂದು ತಿಥಿ ಮುಂದೆ ಹೋಗಿರುತ್ತದೆ. ಹೀಗೆ ಆಗುತ್ತಾ ಒಂದು ಚಾಂದ್ರ ಮಾಸದ ಅವಧಿಯನ್ನೇ ದಾಟಿ ಮುಂದಕ್ಕೆ ಹೋಗಿಬಿಡುತ್ತದೆ. ಆಗ ಆ ಚಾಂದ್ರ ಮಾಸದ ಅವಧಿಯಲ್ಲಿ ಸಂಕ್ರಾಂತಿ ಇರುವುದಿಲ್ಲ. ಯಾವ ಚಾಂದ್ರ ಮಾಸದಲ್ಲಿ ಸಂಕ್ರಾಂತಿ ಇರುವುದಿಲ್ಲವೋ ಆ ಮಾಸವನ್ನು ಅಧಿಕಮಾಸವೆಂದು ಪರಿಗಣಿಸಿ ಆ ಚಾಂದ್ರ ವರ್ಷಕ್ಕೆ ಒಂದು ಹೆಚ್ಚುವರಿ ಮಾಸವನ್ನು ಸೇರಿಸಬೇಕೆಂಬ ನಿಯಮವನ್ನು ಮಾಡಲಾಯಿತು. ಅದನ್ನು ಮಲ ಮಾಸವೆಂದೂ, ಪುರುಷೋತ್ತಮ ಮಾಸವೆಂದೂ ಕರೆಯಲಾಗುತ್ತದೆ.

ಗೃಹಸ್ಥರ ಜೀವನದಲ್ಲಿ 60 ವಯಸ್ಸಿಗೆ ಉಗ್ರ ರಥಶಾಂತಿ, 70ರ ವಯಸ್ಸಿಗೆ ಭೀಮರಥ ಶಾಂತಿ ಆಚರಿಸುವುದರ ಜೊತೆಗೆ ಸಹಸ್ರ ಚಂದ್ರ ದರ್ಶನ ಕಾರ್ಯಕ್ರಮವನ್ನು ಆಚರಿಸುವುದುಂಟು. ವ್ಯಕ್ತಿಯ ಬದುಕಿನಲ್ಲಿ 1000 ಹುಣ್ಣಿಮೆ ಚಂದ್ರ ಕಳೆದಾಗ ಈ ಕಾರ್ಯಕ್ರಮ ಆಚರಿಸುತ್ತಾರೆ. ತಿಂಗಳಿನಲ್ಲೊಂದು ಬಾರಿ ಹುಣ್ಣಿಮೆ ಬರುತ್ತದೆ. 80ರ ವಯಸ್ಸಿಗೆ ವರ್ಷಕ್ಕೆ 12ರಂತೆ 960 ಹುಣ್ಣಿಮೆಗಳಾಗುತ್ತವೆ. ಆದರೆ ಈಗಾಗಲೇ ಹೇಳಿದಂತೆ ಪ್ರತಿ 2 ವರ್ಷ 8 ತಿಂಗಳು 16 ದಿನಗಳಿಗೊಮ್ಮೆ ಒಂದು ಅಧಿಕಮಾಸ ಬಂದಿರುತ್ತದೆ. 80 ವರ್ಷದಲ್ಲಿ ಸುಮಾರು 30 ಹುಣ್ಣಿಮೆಗಳು ಬಂದು ಹೋಗಿರುತ್ತವೆ. ಅಲ್ಲಿಗೆ 990 ಹುಣ್ಣಿಮೆ ಆಯಿತು. 80 ವರ್ಷ 10 ತಿಂಗಳಿಗೆ 1000 ಹುಣ್ಣಿಮೆಗಳಾಗುತ್ತವೆ. ಅದಕ್ಕೆ ಸಹಸ್ರ ಚಂದ್ರ ದರ್ಶನ ಎನ್ನುತ್ತಾರೆ. ಮಕ್ಕಳು ತಂದೆಗೆ ಆ ವಯಸ್ಸಿನಲ್ಲಿ, ನೆಂಟರಿಷ್ಟರನ್ನು ಕರೆದು ಆ ಕಾರ್ಯಕ್ರಮ ಇಟ್ಟುಕೊಳ್ಳುವುದು ರೂಢಿ. ತಂದೆ ಸ್ವತಹ ಮಾಡಿಕೊಳ್ಳುವ ಕ್ರಮವಿಲ್ಲ. ಇದರಲ್ಲೂ ಗಣಿತ -ಖಗೋಳಶಾಸ್ತ್ರಗಳ ಲೆಕ್ಕಾಚಾರವಿದೆ.

ಇದಿಷ್ಟು ಅಧಿಕಮಾಸದ ಕಥೆ. ಪ್ರತಿ ಭಾರತೀಯರೂ ಇದರ ಹಿಂದಿರುವ ಗಣಿತ -ಖಗೋಳ ವಿಜ್ಞಾನವನ್ನು ತಿಳಿದುಕೊಳ್ಳುವುದು ಆವಶ್ಯಕ.

ವೋಟ್ ಬ್ಯಾಂಕ್: ಮುಸ್ಲಿಮರು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ...

▸ ಮಜುಂದಾರ್

ಈ ವರ್ಷ ಐದು ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯ ಒಟ್ಟು 515 ಸ್ಥಾನಗಳಲ್ಲಿ ಬಿಜೆಪಿ ಒಬ್ಬನೇ ಒಬ್ಬ ಮುಸ್ಲಿಂ ಅಭ್ಯರ್ಥಿಯನ್ನು ನಿಲ್ಲಿಸಲಿಲ್ಲ. ಬಿಜೆಪಿಯು ದೇಶದ ಎರಡನೇ ಅತೀ ದೊಡ್ಡ ಸಮುದಾಯವಾದ ಮುಸ್ಲಿಮರಿಗೆ ಸರಿಯಾದ ಪ್ರಾತಿನಿಧ್ಯ ನೀಡಲು ವಿಫಲವಾದುದರ ಸಂಕೇತವಿದು ಎಂದು ಕೆಲವರು ವಾದಿಸುವುದಿದೆ. ಆದರೆ ನಿಜವಾಗಿ ಇದು ಮುಸ್ಲಿಂ ಸಮುದಾಯಕ್ಕೆ ಬಿಜೆಪಿಯ ಒಂದು ದಿಟ್ಟ ಸಂದೇಶವಾಗಿದೆ. ಚುನಾವಣೆಯಿಂದ ಚುನಾವಣೆಗೆ ಮುಸ್ಲಿಮರೆಲ್ಲರೂ ಬಿಜೆಪಿಯನ್ನು ಸೋಲಿಸುವ ಏಕೈಕ ಉದ್ದೇಶದಿಂದ ಸಾಮೂಹಿಕವಾಗಿ ಮತ ಚಲಾಯಿಸುವುದಾದರೆ ನಿಮ್ಮನ್ನು ನಮ್ಮ ಜತೆಗೆ ಕರೆದೊಯ್ಯಲು ನಮಗೂ ಯಾವುದೇ ಬದ್ಧತೆ ಇಲ್ಲ ಎಂಬ ಸಂದೇಶವನ್ನು ಬಿಜೆಪಿ ಸಾರುತ್ತಿದೆ.

ಹಾಗೆಂದು ಬಿಜೆಪಿ ಸರಕಾರಗಳು ಮುಸ್ಲಿಮರಿಗೆ ದೊರಕುತ್ತಿರುವ ಸೌಲಭ್ಯಗಳಲ್ಲೇನೂ ಕಡಿತ ಮಾಡಿಲ್ಲ. ಇತರ ಸಮುದಾಯಗಳವರಿಗೆ ಸಿಗುವಂತಹ ಆರೋಗ್ಯ ವಿಮೆ, ಎಲ್‌ಪಿಜಿ ಸೌಕರ್ಯ, ಉಚಿತ ಪಡಿತರ, ಶೌಚಾಲಯ ಯೋಜನೆ ಮೊದಲಾದವೆಲ್ಲಾ ಮುಸ್ಲಿಮರಿಗೂ ಸಿಗುತ್ತಿವೆ. ಆದರೆ ಮುಸ್ಲಿಮರ ಓಟಿಗಾಗಿ ತಾನು ದುಂಬಾಲು ಬೀಳುವುದಿಲ್ಲ ಎಂದು ಬಿಜೆಪಿ ಸ್ಪಷ್ಟಪಡಿಸುತ್ತಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಶೇ.8 ಮುಸ್ಲಿಮರು ಬಿಜೆಪಿಗೆ ಮತ ಹಾಕಿದ್ದರೆಂದು ಸಮೀಕ್ಷೆಯೊಂದು ತಿಳಿಸಿತ್ತು. ಶೇ. 6ರಿಂದ 9 ಮುಸ್ಲಿಮರ ಮತ ಬಿಜೆಪಿಗೆ ಬಿದ್ದಿತ್ತೆಂದು ಮತ್ತೊಂದು ಸಮೀಕ್ಷೆ ಹೇಳಿತ್ತು. ಆದರೆ ಬಿಜೆಪಿ ಲೆಕ್ಕಾಚಾರದ ಪ್ರಕಾರ ಕೇವಲ 1-4 ಶೇಕಡಾ ಮುಸ್ಲಿಮರ ಮತ ಮಾತ್ರ ಅದಕ್ಕೆ ಬಿದ್ದಿದೆ. ಹೆಚ್ಚಿನೆಲ್ಲಾ ಚುನಾವಣೆಗಳಲ್ಲಿ ಮುಸ್ಲಿಮರು ಬಿಜೆಪಿಯನ್ನು ಸೋಲಿಸಬಲ್ಲಂತಹ ಅಭ್ಯರ್ಥಿಗೆ ಮತ ಹಾಕುವಂತಹ ವ್ಯೂಹಾತ್ಮಕ ತಂತ್ರವನ್ನು ಪ್ರಯೋಗಿಸಿದ್ದಾರೆ.

ರಾಜಕೀಯ ವಿಶ್ಲೇಷಕ ಸುನಂದಾ ವಶಿಷ್ಠ್ ಬರೆಯುತ್ತಾರೆ ''ಯೆಹೂದಿಗಳು ಅಮೆರಿಕದಲ್ಲಿ ಹೇಗಿದ್ದಾರೆಂದು ನೋಡಿ. ಅವರು ಎರಡೂ ಪಕ್ಷಗಳಲ್ಲಿ ಇದ್ದಾರೆ. ಒಂದೇ ಪಕ್ಷಕ್ಕೆ ಸಾಮೂಹಿಕ ಮತ ಹಾಕುವ ಯೋಚನೆ ಅವರದಲ್ಲ. ರಾಜಕೀಯದ ಎಲ್ಲಾ ವಿಧಗಳಲ್ಲೂ ಪ್ರಾತಿನಿಧ್ಯ ಪಡೆಯಲು ಯತ್ನಿಸುತ್ತಿದ್ದಾರೆ. ಭಾರತದಲ್ಲಿ ಮುಸ್ಲಿಮರೂ ಇದೇ ರೀತಿ ವರ್ತಿಸಬಾರದೇಕೆ? ಕೇವಲ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಬೇಕು ಎಂಬ ರೀತಿಯಲ್ಲಿ ಏಕಪ್ರಕಾರವಾಗಿ ಮತ ಚಲಾಯಿಸುವುದೇಕೆ? ಬಿಜೆಪಿಯನ್ನು ಸೋಲಿಸಲಷ್ಟೇ ಅವರು ಮತ ಚಲಾಯಿಸುವುದಾದರೆ ಬಿಜೆಪಿ ಕೂಡಾ ಮುಸ್ಲಿಮರನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಇತರರ ಬೆಂಬಲದಿಂದ ಜಯ ಸಾಧಿಸಲು ತನ್ನದೇ ಆದ ರಣತಂತ್ರ ರೂಪಿಸಬಲ್ಲುದು.'' ಸಾಮಾಜಿಕ ಕಾರ್ಯಕರ್ತ ಜಾಫರ್ ಸರೇಶ್‌ವಾಲಾ ಕೂಡಾ ಮುಸ್ಲಿಮರು ಈ ರೀತಿ ಬಿಜೆಪಿ ಸೋಲಿಸಲು ಮತ ಚಲಾಯಿಸುವುದರಿಂದ ಅವರಿಗೆ ಒಳಿತಿಗಿಂತ ಹಾನಿಯೇ ಹೆಚ್ಚಾಗಿದೆ ಎಂದು ಹೇಳುತ್ತಾರೆ.

ಬಿಜೆಪಿ ಕುರಿತಾದ ಮುಸ್ಲಿಮರ ನಿಲುವು ಅದಕ್ಕೇ ಹಾನಿ ತಂದಿರುವುದು ನಿಜ. ಬಿಜೆಪಿ ಮುಸ್ಲಿಮರಿಗೆ ಟಿಕೆಟ್ ನೀಡಲು ಮುತುವರ್ಜಿ ತೋರುತ್ತಿಲ್ಲ. ಆದರೆ ಇದೇ ವೇಳೆ, ಇತರ ಸಣ್ಣ ಸಣ್ಣ ಸಮುದಾಯಕ್ಕೂ ಟಿಕೆಟ್ ಹಂಚುವಲ್ಲಿ ಅಥವಾ ತನ್ನ ಸರಕಾರದಲ್ಲಿ ಸಚಿವ ಸ್ಥಾನ ನೀಡುವುದರಲ್ಲೇ ಹಿಂದೆ ಬಿದ್ದಿಲ್ಲ. ಸಣ್ಣ ಜಾತಿ, ಪಂಗಡವನ್ನೂ ಗುರುತಿಸಿ ಅದಕ್ಕೆ ಸೂಕ್ತ ಪ್ರಾತಿನಿಧ್ಯ ನೀಡುವುದರಲ್ಲಿ ಬಿಜೆಪಿ ಉಳಿದೆಲ್ಲಾ ಪಕ್ಷಗಳಿಗಿಂತ ಮುಂದಿದೆ. ತಮ್ಮ ಪಕ್ಷಕ್ಕೆ ಬೆಂಬಲ ಸೂಚಿಸುವ ಅಥವಾ ಬೆಂಬಲಿಸುವ ಸಂಕೇತ ತೋರುವ ಜಾತಿಗಳಿಗೆ, ಉಪಜಾತಿಗಳಿಗೆ, ಸಣ್ಣಪುಟ್ಟ ಪಂಗಡಗಳಿಗೆ ಬಿಜೆಪಿ ಚುನಾವಣೆಯಲ್ಲಿ ಮತ್ತು ಸರಕಾರ ರಚನೆಯಲ್ಲಿ ಪ್ರಾತಿನಿಧ್ಯ ಕಲ್ಪಿಸಿದೆ. ಉತ್ತರ ಪ್ರದೇಶದಲ್ಲಿ ಯಾದವೇತರ ಇತರ ಹಿಂದುಳಿದ ವರ್ಗದವರಿಗೆ, ದಲಿತರಿಗೆ, ಸಣ್ಣ ಪುಟ್ಟ ಜಾತಿಗಳಾದ ನಿಷಾದ್, ಕುರ್ಮಿ, ಗುಜ್ಜಾರ್, ಜಾಟ್ ಮೊದಲಾದವರಿಗೂ ಸಚಿವ ಸ್ಥಾನ ನೀಡಲಾಗಿದೆ. ಮಹಾರಾಷ್ಟ್ರದಲ್ಲಿ ಕೂಡಾ ಇದೇ ರೀತಿ ಅಲ್ಲಿನ ಸಣ್ಣ ಸಮುದಾಯಗಳು, ಜಾತಿಗಳು, ಪಂಗಡಗಳು ಸಂಪುಟದಲ್ಲಿ ಪ್ರಾತಿನಿಧ್ಯ ಗಳಿಸಿದೆ.

ಈಗ ಪಶ್ಚಿಮ ಬಂಗಾಳದಲ್ಲಿ ಕೂಡಾ ಸುವೇಂದು ಅಧಿಕಾರಿಯ ಸಂಪುಟದಲ್ಲಿ ಇತರ ಹಿಂದುಳಿದ ವರ್ಗದ ದಿಲೀಪ್ ಘೋಷ್ ಇದ್ದಾರೆ. ಪರಿಶಿಷ್ಟ ಮತುವಾ ಸಮುದಾಯದ ಅಶೋಕ್ ಕೀರ್ತಾನಿಯಾ ಇದ್ದಾರೆ. ರಾಜಭನ್ಶಿ ಸಮಾಜದ ನಿತೀಶ್ ಪ್ರಮಾಣಿಕ್, ಆದಿವಾಸಿ ಪಂಗಡದ ಜಂಗಲ್‌ಮಹಲ್, ಕಾಯಸ್ಥ ಸಮಾಜದ ಅಗ್ನಿಮಿತ್ರ ಪೌಲ್ ಇದ್ದಾರೆ. ಸುವೇಂದು ಕೂಡ ಹಿಂದುಳಿದ ಮಾಹಿಶ್ಯ ಸಮುದಾಯದವರು.

ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ 68 ಮೀಸಲು ಸ್ಥಾನಗಳಲ್ಲಿ 51ನ್ನು ಬಿಜೆಪಿ ಗೆದ್ದುಕೊಂಡಿದೆ. ಪರಿಶಿಷ್ಟ ಪಂಗಡದ ಎಲ್ಲಾ 16 ಸ್ಥಾನಗಳೂ ಬಿಜೆಪಿ ಪಾಲಾಗಿವೆ.

ಆದರೆ ಮುಸ್ಲಿಮರು ಮಾತ್ರ ಈಗಲೂ ಖಂಡತುಂಡವಾಗಿ ಬಿಜೆಪಿಯನ್ನು ವಿರೋಧಿಸುತ್ತಿದ್ದಾರೆ. ಬಿಜೆಪಿಯ ಲೆಕ್ಕಾಚಾರದಲ್ಲಿ ಮುಸ್ಲಿಮರು ಸ್ಥಾನ ಪಡೆಯಬೇಕಾದರೆ ಅವರು ಬಿಜೆಪಿಯೆಡೆಗೆ ಮುಕ್ತ ಮನಸ್ಸು ಹೊಂದಿರಬೇಕು. ಸದಾ ಬಿಜೆಪಿಯನ್ನು ವಿರೋಧಿಸುವುದು ಸಲ್ಲದು. ಕೇಂದ್ರ ಸರಕಾರ ಮತ್ತು ರಾಜ್ಯ ಬಿಜೆಪಿ ಸರಕಾರಗಳು ಮುಸ್ಲಿಮರಿಗೆ ಸರಕಾರಿ ಸೌಲಭ್ಯಗಳನ್ನು ವಿಸ್ತರಿಸುವಲ್ಲಿ ಯಾವುದೇ ತಾರತಮ್ಯ ತೋರದಿದ್ದರೂ ಬಿಜೆಪಿಯನ್ನು ಕುರುಡಾಗಿ ದ್ವೇಷಿಸುವುದು ಮುಸ್ಲಿಮರಿಗೇ ಪ್ರತಿಕೂಲವಾದೀತು.

ಕೆಲವು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಮುಸ್ಲಿಮರು, ಅದರಲ್ಲಿಯೂ ಮುಖ್ಯವಾಗಿ ಮುಸ್ಲಿಂ ಮಹಿಳೆಯರು ಕಾನೂನು ಪರಿಸ್ಥಿತಿ, ಕಲ್ಯಾಣ ಕಾರ್ಯಕ್ರಮಗಳು ಮತ್ತು ಮೂಲಭೂತ ಸೌಕರ್ಯಗಳ ಕುರಿತಂತೆ ಮೆಚ್ಚುಗೆ ಸೂಚಿಸುತ್ತಾರಾದರೂ ಮತ ಚಲಾಯಿಸುವಾಗ ಸಾಮೂಹಿಕವಾಗಿ ಬಿಜೆಪಿ ವಿರೋಧಿಗಳಂತೆಯೇ ವರ್ತಿಸುತ್ತಾರೆ. ಮುಖ್ಯವಾಗಿ ಮುಸ್ಲಿಮರ ಧರ್ಮಗುರುಗಳು ಮತ್ತು ತಥಾಕಥಿತ ಜಾತ್ಯತೀತ ಮುಖಂಡರು ಮುಸ್ಲಿಮರಲ್ಲಿ ಬಿಜೆಪಿ ಕುರಿತಂತೆ ಭೀತಿಯನ್ನು ಸೃಷ್ಟಿಸುತ್ತಾರೆ.


ಮುಸ್ಲಿಮ್ ಧರ್ಮಗುರುಗಳು ಸಮಾನತೆ ಬಯಸುತ್ತಿರುವುದಲ್ಲ. ಅವರು ರಾಜಕೀಯದಲ್ಲಿ ಮುಸ್ಲಿಮರನ್ನು ಇತರರಿಗಿಂತ ಮೇಲಿನ ಸ್ತರದಲ್ಲಿ ಇಡಬೇಕು ಎಂಬಂತೆ ಮಾತನಾಡುತ್ತಾರೆ. ಜಾತ್ಯತೀತತೆ ಎಂಬುದು ಒನ್‌ವೇ ರಸ್ತೆ, ಹಿಂದುಗಳು ಯಾವಾಗಲೂ ಕಾಂಪ್ರಮೈಸ್ ಮಾಡಿಕೊಳ್ಳಬೇಕು ಎಂಬಂತೆ ವಾದಿಸುತ್ತಾರೆ.

ಭಾರತದ ರಾಜಕೀಯ ಈಗ ಬದಲಾಗಿದೆ. ಮುಸ್ಲಿಮರು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಕಾಲ ಬಂದಿದೆ. ಎಲ್ಲದಕ್ಕೂ ಬೇರೆಯವರನ್ನು ದೂರುವ ಬದಲಾಗಿ ಅದಕ್ಕೆ ತಾವೆಷ್ಟು ಕಾರಣರು ಎಂದು ಯೋಚಿಸಬೇಕಾಗಿದೆ.

ಯುಎಇ ಅಧ್ಯಕ್ಷರಿಗೆ ಮೋದಿ ಭರವಸೆ

ಶಾಂತಿ ಸ್ಥಾಪನೆಗೆ ಬೆಂಬಲ ಖಚಿತ





ಅಬುಧಾಬಿ: ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗಾಗಿ ಸಾಧ್ಯವಾದ ಎಲ್ಲಾ ರೀತಿಯ ಬೆಂಬಲ ನೀಡಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಯುಎಇ ಅಧ್ಯಕ್ಷ ಶೇಖ್ ಮೊಹಮದ್ ಬಿನ್ ಝಾಯೇದ್‌ರೊಂದಿಗೆ ಮಾತುಕತೆ ವೇಳೆ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಉಭಯ ನಾಯಕರು ಇಂಧನ, ರಕ್ಷಣೆ, ತಂತ್ರಜ್ಞಾನ ಸಹಿತ ಏಳು ರಂಗಗಳಲ್ಲಿ ವ್ಯೂಹಾತ್ಮಕ ಸಹಕಾರ ಕೊಂಡಿಗಳನ್ನು ಮತ್ತಷ್ಟು ಬಲಪಡಿಸಬಲ್ಲ ಒಪ್ಪಂದಗಳಿಗೆ ಸಹಿ ಹಾಕಿದ್ದಾರೆ. ಭಾರತದಲ್ಲಿ ಸುಮಾರು 5 ಶತಕೋಟಿ ಡಾಲರ್ ಭಾರೀ ಹೂಡಿಕೆ ಮಾಡುವುದಾಗಿ ಯುಎಇ ಅಧ್ಯಕ್ಷರು ಘೋಷಿಸಿರುವುದಾಗಿ ಪ್ರಧಾನಿ ಮೋದಿ ಹೇಳಿದ್ದಾರೆ.

ಸನ್ನಿವೇಶ ನಿಭಾಯಿಸಿದ ರೀತಿ ಪ್ರಶಂಸಾರ್ಹ: ಯುಎಇ ಮೇಲಿನ ದಾಳಿಯನ್ನು ನಾವು ಖಂಡಿಸುತ್ತೇವೆ ಎಂದು ಪ್ರಧಾನಿ ಮೋದಿ ಝಾಯೇದ್ ಜತೆ ಮಾತಿಗೆ ಆರಂಭದಲ್ಲೇ ಹೇಳಿದ್ದಾರೆ. ಯುಎಇಯನ್ನು ಟಾರ್ಗೆಟ್ ಮಾಡಿದ ರೀತಿ ಸರಿಯಲ್ಲ, ಆದರೆ ಯುಎಇ ಅತ್ಯಂತ ತಾಳ್ಮೆಯಿಂದ ಪ್ರಸ್ತುತ ಸನ್ನಿವೇಶ ನಿಭಾಯಿಸಿದ್ದು ಪ್ರಶಂಸಾರ್ಹ ಎಂದು ಮೋದಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಾಲ್ಕು ಯುರೋಪಿಯನ್ ರಾಷ್ಟ್ರಗಳು ಸೇರಿದಂತೆ ಪಂಚ ರಾಷ್ಟ್ರಗಳಿಗೆ ತಮ್ಮ ಪ್ರವಾಸದಂಗ ಮೋದಿ, ಮೊದಲಿಗೆ ಶುಕ್ರವಾರ ಯುಎಇಗೆ ಭೇಟಿ ನೀಡಿದ ಕೆಲವೇ ಹೊತ್ತಲ್ಲಿ ಉಭಯ ನಾಯಕರು ಮಾತುಕತೆ ನಡೆಸಿದ್ದಾರೆ. ಯುಎಇಯಲ್ಲಿ ಎರಡೂವರೆ ತಾಸು ಉಳಿದುಕೊಂಡಿದ್ದ ಪ್ರಧಾನಿ ಮೋದಿ ಬಳಿಕ ನೆದರ್‌ಲೆಂಡ್‌ಗೆ ತೆರಳಿದ್ದಾರೆ.

ಶಾಂತಿಗಾಗಿ ಭಾರತದ ಸಂಪೂರ್ಣ ಬೆಂಬಲ: ಪಶ್ಚಿಮ ಏಷ್ಯಾದ ಬಿಕ್ಕಟ್ಟು ಜಾಗತಿಕ ಪರಿಣಾಮ ಬೀರಿದ್ದನ್ನು ಯುಎಇ ಅಧ್ಯಕ್ಷರ ಗಮನಕ್ಕೆ ತಂದ ಪ್ರಧಾನಿ ಮೋದಿ, ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪನೆಗೆ ಭಾರತ ತನ್ನಿಂದ ಸಾಧ್ಯವಾದ ಎಲ್ಲಾ ರೀತಿಯ ಬೆಂಬಲ ನೀಡಲು ಸಿದ್ಧವಿದೆ ಎಂದು ಪುನರುಚ್ಚರಿಸಿದರು.

ಯುಎಇ ಭೇಟಿ ವೇಳೆ ಇಂಧನ, ರಕ್ಷಣೆ, ಮೂಲಸೌಕರ್ಯ, ಶಿಪ್ಪಿಂಗ್, ಅತ್ಯಾಧುನಿಕ ತಂತ್ರಜ್ಞಾನದಂತಹ ಪ್ರಮುಖ ರಂಗಗಳಲ್ಲಿ ಮಹತ್ವದ ಒಪ್ಪಂದಗಳೇರ್ಪಟ್ಟಿದ್ದು, ಇದು ಭಾರತ-ಯುಎಇ ನಡುವಣ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆಗೆ ಹೊಸ ಪ್ರೇರಣೆ-ವೇಗ ನೀಡಲಿದೆ ಎಂದು ಮೋದಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಇನ್ನೊಂದು ಮಹತ್ವದ ಬೆಳವಣಿಗೆಯಲ್ಲಿ ಭಾರತದಲ್ಲಿ 5 ಶತಕೋಟಿ ಡಾಲರ್ ಹೂಡಿಕೆ ಹೂಡುವುದಾಗಿ ಯುಎಇ ಘೋಷಿಸಿದೆ. ಇದು ಉಭಯ ರಾಷ್ಟ್ರಗಳ ನಡುವಣ ಆರ್ಥಿಕ ಕೊಂಡಿಗಳನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಮೋದಿ ಭರವಸೆ ವ್ಯಕ್ತಪಡಿಸಿದ್ದಾರೆ.

ಮೋದಿಗೆ ಅಲ್ ನಹ್ಯಾನ್ ಸ್ವಾಗತ

ಪ್ರಧಾನಿ ಮೋದಿಗೆ ಯುಎಇ ಕೆಂಪು ಹಾಸಿನೊಂದಿಗೆ ಮತ್ತು ವಾಯುಪಡೆ ಯುದ್ಧ ವಿಮಾನಗಳ ಎಸ್ಕಾರ್ಟ್ ಸ್ವಾಗತವನ್ನು ನೀಡಿದ್ದು, ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ಯುಎಇ ಅಧ್ಯಕ್ಷ ಅಲ್ ನಹ್ಯಾನ್ ಸ್ನೇಹದ ಅಪ್ಪುಗೆಯೊಂದಿಗೆ ಮೋದಿಯವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಇದಾದ ಬಳಿಕ ಝಾಯೇದ್‌ರೊಂದಿಗೆ ಯುಎಇ ಸೈನಿಕರಿಂದ ಮೋದಿ ಗಾರ್ಡ್ ಆಫ್ ಹಾನರ್ ಸ್ವೀಕರಿಸಿದರು. ಮೋದಿ ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಯುಎಇ ನೀಡಿದ ಅದ್ದೂರಿ ಸ್ವಾಗತಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.



ಭಾರತದಲ್ಲಿ ಅತ್ಯಲ್ಪ ಹೆಚ್ಚಳ

ಅಮೆರಿಕ, ಫ್ರಾನ್ಸ್ ಸೇರಿ 20ಕ್ಕೂ ಹೆಚ್ಚು ದೇಶಗಳಲ್ಲಿ ತೈಲ ಬೆಲೆ ಭಾರೀ ಏರಿಕೆ

ಬೆಲೆ ಏರಿಕೆಗೆ ಕಾರಣವೇನು?

ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷದಿಂದಾಗಿ ಹಾರ್ಮುಜ್ ಜಲಸಂಧಿಯ ಮೂಲಕ ಹಡಗು ಸಂಚಾರಕ್ಕೆ ಅಡ್ಡಿಯಾಗಿದ್ದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಈ ಮಾರ್ಗದಲ್ಲಿ ಹಡಗು ಸಂಚಾರದ ವೆಚ್ಚ ಪ್ರತಿ ಪ್ರಯಾಣಕ್ಕೆ 2 ಮಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಅನೇಕ ದೇಶಗಳು ಕೆಲವೇ ದಿನಗಳಲ್ಲಿ ತೈಲ ಬೆಲೆ ಹೆಚ್ಚಿಸಿದರೂ, ಭಾರತ ತಕ್ಷಣವೇ ಬೆಲೆ ಏರಿಕೆ ಮಾಡದೆ ತಾಳ್ಮೆವಹಿಸಿತ್ತು.

ಇರಾನ್ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿಯಲ್ಲಿನ ಸಂಚಾರ ವ್ಯತ್ಯಯದಿಂದ ಕೆಲವು ದೇಶಗಳಲ್ಲಿ ಇಂಧನ ಬೆಲೆ ಶೇ.52ರಷ್ಟು ಏರಿಕೆಯಾಗಿದೆ. ಆದರೆ ಭಾರತದಲ್ಲಿ ಶುಕ್ರವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 3 ರೂ. ಹೆಚ್ಚಿಸಲಾಗಿದೆ. ಇದು ಕಳೆದ ಸುಮಾರು ನಾಲ್ಕು ವರ್ಷಗಳಲ್ಲೇ ನಡೆದ ಮೊದಲ ಬೆಲೆ ಪರಿಷ್ಕರಣೆಯಾಗಿದೆ. ಆದಾಗ್ಯೂ ವಿಶ್ವದ ಪ್ರಮುಖ ಆರ್ಥಿಕತೆ ಹೊಂದಿರುವ ದೇಶಗಳಿಗೆ ಹೋಲಿಸಿದರೆ ಭಾರತದ ಬೆಲೆ ಏರಿಕೆ ಅತ್ಯಂತ ಕನಿಷ್ಠ. ಸಾರ್ವಜನಿಕ ವಲಯದ ತೈಲ ಕಂಪನಿಗಳು ಜಾಗತಿಕ ಬೆಲೆ ಏರಿಕೆಯ ಪೂರ್ಣ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುವ ಬದಲು ಕಳೆದ 76 ದಿನಗಳಿಂದ ತಾವೇ ನಷ್ಟ ಅನುಭವಿಸಿದ್ದವು. ಈ ಅವಧಿಯಲ್ಲಿ ಕಂಪನಿಗಳ ನಷ್ಟದ ಪ್ರಮಾಣ ಪ್ರತಿದಿನ ಸುಮಾರು 1,000 ಕೋಟಿ ರೂ. ತಲುಪಿತ್ತು.

ವಿದೇಶಿ ವಿನಿಮಯದ ಮೇಲೆ ಒತ್ತಡ

ಭಾರತ ತನ್ನ ಒಟ್ಟು ಅಗತ್ಯದ ಶೇ.80-85ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಕಚ್ಚಾ ತೈಲ ಬೆಲೆಯಲ್ಲಿ ಪ್ರತಿ 10 ಡಾಲರ್ ಏರಿಕೆಯಾದಾಗಲೂ ದೇಶದ ಆಮದು ವೆಚ್ಚವು 13-14 ಬಿಲಿಯನ್ ಡಾಲರ್ ಹೆಚ್ಚಾಗುತ್ತದೆ. ವಾರ್ಷಿಕ ತೈಲ ಆಮದು ವೆಚ್ಚ 12-15 ಲಕ್ಷ ಕೋಟಿ ರೂ. ಎಂದು ಅಂದಾಜಿಸಲಾಗಿದ್ದು, ಜತೆಗೆ 6 ಲಕ್ಷ ಕೋಟಿ ರೂ. ಮೌಲ್ಯದ ಚಿನ್ನದ ಆಮದು ವಿದೇಶಿ ವಿನಿಮಯದ ಮೇಲೆ ಭಾರಿ ಒತ್ತಡ ಹೇರುತ್ತಿದೆ. ಗ್ರಾಹಕರ ಹಿತದೃಷ್ಟಿಯಿಂದ ಸರ್ಕಾರ ಈಗಾಗಲೇ ಪೆಟ್ರೋಲ್ ಮೇಲೆ 8 ರೂ. ಮತ್ತು ಡೀಸೆಲ್ ಮೇಲೆ 6 ರೂ. ಅಬಕಾರಿ ಸುಂಕ ಕಡಿತಗೊಳಿಸಿತ್ತು. ಮೇ 15ರ ವೇಳೆಗೆ ತೈಲ ಕಂಪನಿಗಳು ಪೆಟ್ರೋಲ್ ಮೇಲೆ ಪ್ರತಿ ಲೀಟರ್‌ಗೆ 26 ರೂ. ಹಾಗೂ ಡೀಸೆಲ್ ಮೇಲೆ ಸುಮಾರು 82 ರೂ. ನಷ್ಟ ಅನುಭವಿಸುತ್ತಿದ್ದವು.

ಸುದ್ದಿ ಸಮಗ್ರ

ತೈಲ ಬೆಲೆ ಏರಿಕೆ ಅತ್ಯಲ್ಪ

ಮಧ್ಯಪ್ರಾಚ್ಯ ಬಿಕ್ಕಟ್ಟಿನ ಪರಿಣಾಮವಾಗಿ ಜಾಗತಿಕ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ತೀವ್ರ ಅಸ್ಥಿರತೆ ಉಂಟಾಗಿದ್ದು, ಜಗತ್ತಿನ ಬಹುತೇಕ ದೇಶಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರಗಳು ತೀವ್ರವಾಗಿ ಏರಿಕೆಯಾಗಿದ್ದು, ಭಾರತದಲ್ಲಿ 2022ರಿಂದ ಬಹುತೇಕ ಸ್ಥಿರವಾಗಿದ್ದ ಇಂಧನ ಬೆಲೆಯನ್ನು 4 ವರ್ಷಗಳ ಬಳಿಕ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ತಲಾ 3 ರೂ.ಗಳಷ್ಟು ಹೆಚ್ಚಿಸಲಾಗಿದೆ. ಜಾಗತಿಕ ತೈಲ ಪೂರೈಕೆ ವ್ಯವಸ್ಥೆಯಲ್ಲಿ ಅಸ್ತವ್ಯಸ್ತತೆ ಉಂಟಾಗಿರುವ ಹಿನ್ನೆಲೆಯಲ್ಲಿ ಭಾರತದಲ್ಲಿನ ಇಂಧನ ದರದಲ್ಲಿ ಮಾಡಲಾದ ಈ ಏರಿಕೆಯನ್ನು ಕೇಂದ್ರ ಸರ್ಕಾರ ಬಲವಾಗಿ ಸಮರ್ಥಿಸಿಕೊಂಡಿದೆ.

ಗ್ರಾಹಕರು ಮತ್ತು ಆರ್ಥಿಕತೆಯ ಮೇಲೆ ಪ್ರಭಾವ

ಜಾಗತಿಕ ದರಗಳನ್ನು ನೇರವಾಗಿ ಅನ್ವಯಿಸಿದ್ದರೆ ಭಾರತದಲ್ಲಿ ಇಂಧನ ಬೆಲೆಗಳು ಶೇ. 200-300ರಷ್ಟು ಹೆಚ್ಚಾಗಬೇಕಿತ್ತು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಭಾರತದಲ್ಲಿ ರೈತರು ನೀರಾವರಿ ಪಂಪ್‌ಗಳಿಗೆ, ಸಾರಿಗೆ ಸಂಸ್ಥೆಗಳು ಸರಕು ಸಾಗಣೆಗೆ ಮತ್ತು ಆಟೋ ಚಾಲಕರು ಜೀವನೋಪಾಯಕ್ಕೆ ಡೀಸೆಲ್ ಮೇಲೆ ಅವಲಂಬಿತರಾಗಿದ್ದಾರೆ. ಭಾರೀ ಬೆಲೆ ಏರಿಕೆ, ಶೇ.20ರಷ್ಟು ಕೆಳವರ್ಗದ ಜನರ ಮೇಲೆ ತೀವ್ರ ಪರಿಣಾಮ ಬೀರಬಹುದೆಂಬ ಕಾರಣಕ್ಕೆ ಸರ್ಕಾರ ಅತ್ಯಲ್ಪ ಏರಿಕೆ ಮಾಡಿದೆ. ಪ್ರಸ್ತುತ 3 ರೂ. ಏರಿಕೆಯು ಮೂಲ ಬೆಲೆಯ ಮೇಲೆ ಶೇ.3 ರಿಂದ 3.5 ರಷ್ಟು ಮಾತ್ರ ಹೆಚ್ಚಳವಾಗಿದೆ.

ಸರ್ಕಾರದ ಪ್ರತಿಕ್ರಿಯೆ, ಮುನ್ನೆಚ್ಚರಿಕೆ

ಜಾಗತಿಕ ಬಿಕ್ಕಟ್ಟಿನ ನಡುವೆಯೂ ಭಾರತದ ಚಾಲ್ತಿ ಖಾತೆ ಕೊರತೆ ಶೇ.1.5 ಕ್ಕಿಂತ ಕಡಿಮೆ ಇದೆ. ಸುಮಾರು 82 ದೇಶಗಳು ಇಂಧನ ರೇಷನಿಂಗ್ ಅಥವಾ ಭಾರೀ ಬೆಲೆ ಏರಿಕೆ ಜಾರಿಗೆ ತಂದಿದ್ದರೂ, ಭಾರತ ಅಂತಹ ಯಾವುದೇ ಕಠಿಣ ಕ್ರಮ ಕೈಗೊಂಡಿಲ್ಲ. ಬದಲಾಗಿ, ನಾಗರಿಕರು ಸ್ವಯಂಪ್ರೇರಿತವಾಗಿ ಇಂಧನ ಬಳಕೆ ಕಡಿಮೆ ಮಾಡಲು ಮತ್ತು ಚಿನ್ನದ ಖರೀದಿ ಹಾಗೂ ಅನಗತ್ಯ ವಿದೇಶಿ ಪ್ರವಾಸಗಳನ್ನು ನಿಯಂತ್ರಿಸಲು ಸರ್ಕಾರ ಮನವಿ ಮಾಡಿದೆ. ಹಾಗೆಯೇ, ರೈತರಿಗೆ ನೆರವಾಗಲು 2.25 ಲಕ್ಷ ಕೋಟಿ ರೂ. ಗೊಬ್ಬರ ಸಬ್ಸಿಡಿ ನೀಡಲಾಗುತ್ತಿದ್ದು, ಇದರಿಂದ 2,200 ರೂ. ಮೌಲ್ಯದ ಗೊಬ್ಬರದ ಚೀಲ ಕೇವಲ 242 ರೂ.ಗೆ ದೊರೆಯುತ್ತಿದೆ.



ತೈಲ ಕಂಪನಿಗಳ ಮೌನ ನಷ್ಟ

ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಸಂಸ್ಥೆಗಳು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ದರಕ್ಕೆ ತೈಲ ಖರೀದಿಸಿ, ದೇಶೀಯವಾಗಿ ಕಡಿಮೆ ದರಕ್ಕೆ ಮಾರಾಟ ಮಾಡುತ್ತಿವೆ. ಇವುಗಳ ಒಟ್ಟು ದೈನಂದಿನ ನಷ್ಟ 2,400 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಸರ್ಕಾರ ಅಬಕಾರಿ ಸುಂಕ ಕಡಿತಗೊಳಿಸಿದರೂ ಕಂಪನಿಗಳ ಮೇಲಿನ ನಷ್ಟದ ಹೊರೆ ಇನ್ನೂ ಮುಂದುವರಿದಿದೆ.



ವಿವಿಧ ದೇಶಗಳಲ್ಲಿ ತೈಲ ಬೆಲೆ ಹೆಚ್ಚಳ ಪಟ್ಟಿ

ದೇಶ	ಪೆಟ್ರೋಲ್ ಬೆಲೆ	ಡೀಸೆಲ್‌ಬೆಲೆ
ಮ್ಯಾನ್ಮಾರ್	ಶೇ.89.7	ಶೇ.112.7
ಮಲೇಶ್ಯಾ	ಶೇ.56.3	ಶೇ.71.2
ಪಾಕಿಸ್ತಾನ	ಶೇ.54.9	ಶೇ.44.9
ಯುಎಇ	ಶೇ.52.4	ಶೇ.86.1
ಅಮೆರಿಕ	ಶೇ.44.5	ಶೇ.48.1
ಶ್ರೀಲಂಕಾ	ಶೇ.38.2	ಶೇ.41.8
ನೇಪಾಳ	ಶೇ.38.2	ಶೇ.58.5
ನ್ಯೂಜಿಲ್ಯಾಂಡ್	ಶೇ.30.7	ಶೇ.88.6
ಚೀನಾ	ಶೇ.21.7	ಶೇ.23.7
ಫ್ರಾನ್ಸ್	ಶೇ.20.9	ಶೇ.31.0
ಬ್ರಿಟನ್	ಶೇ.19.2	ಶೇ.34.2
ದಕ್ಷಿಣ ಕೊರಿಯಾ	ಶೇ.19.0	ಶೇ.26.2
ಆಸ್ಟ್ರೇಲಿಯಾ	ಶೇ.18.5	ಶೇ.43.1
ಬಾಂಗ್ಲಾದೇಶ	ಶೇ.16.7	ಶೇ.15.0
ಸಿಂಗಾಪುರ	ಶೇ.12.7	ಶೇ.64.7
ಜಪಾನ್	ಶೇ.9.7	ಶೇ.11.2
ದುಬೈ	ಶೇ.7.9	ಶೇ.8.7
ಭಾರತ	ಶೇ.3.2	ಶೇ.3.7

ಬೆಲೆ ಸ್ಥಿರತೆಯ ಉದ್ದೇಶ

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ತಡೆಯಲು ಸರ್ಕಾರ ಇಂಧನ ದರವನ್ನು ಸ್ಥಿರವಾಗಿಟ್ಟಿತ್ತು. ಆಹಾರ ಪದಾರ್ಥಗಳ ಸಾಗಣೆ ವೆಚ್ಚ ಡೀಸೆಲ್ ದರವನ್ನು ಅವಲಂಬಿಸಿರುವುದರಿಂದ, ಬೆಲೆ ಏರಿಕೆ ಎಲ್ಲ ವಸ್ತುಗಳ ದರ ಹೆಚ್ಚಳಕ್ಕೆ ಕಾರಣವಾಗುತ್ತಿತ್ತು. ಮೇ 15ರ ಪರಿಷ್ಕರಣೆಗೂ ಮುನ್ನ ದೆಹಲಿಯಲ್ಲಿ ಪೆಟ್ರೋಲ್ 94.72 ರೂ. ಮತ್ತು ಡೀಸೆಲ್ 87.62 ರೂ. ಇತ್ತು. ಮುಂದಿನ ದಿನಗಳಲ್ಲಿ ಮತ್ತೆ ಬೆಲೆ ಏರಿಕೆಯಾಗುವ ಸಾಧ್ಯತೆಯನ್ನು ಸರ್ಕಾರ ತಳ್ಳಿಹಾಕಿಲ್ಲ.

ಕಿರುಸುದ್ದಿ

ಅರಾವಳಿ ಗಣಿಗಾರಿಕೆಗೆ ಸದ್ಯ ಅನುಮತಿಯಿಲ್ಲ

ಹೊಸದಿಲ್ಲಿ: ಅರಾವಳಿ ಪರ್ವತ ಶ್ರೇಣಿಗಳಲ್ಲಿ ನಡೆಯುತ್ತಿರುವ ಗಣಿಗಾರಿಕೆಯ ಕುರಿತು ಆತಂಕಕಾರಿ ವರದಿಗಳು ಬರುತ್ತಿರುವ ಹಿನ್ನೆಲೆಯಲ್ಲಿ, ಗಣಿ ಗುತ್ತಿಗೆದಾರರ ಪರವಾಗಿ ಯಾವುದೇ ಆದೇಶ ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ. ಪರಿಸರ ನಾಶದ ಆತಂಕಗಳನ್ನು ಪೂರ್ಣವಾಗಿ ಪರಿಹರಿಸುವವರೆಗೆ ಯಾವುದೇ ಚಟುವಟಿಕೆಗೆ ಅವಕಾಶ ನೀಡುವುದಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ ಮಾಲ್ಯ ಬಾಗ್ಚಿ ಅವರ ಪೀಠ ತಿಳಿಸಿದೆ. ದಿಲ್ಲಿ, ಹರ್ಯಾಣ, ರಾಜಸ್ಥಾನ ಮತ್ತು ಗುಜರಾತ್ ವ್ಯಾಪ್ತಿಯ ಅರಾವಳಿ ಪ್ರದೇಶದಲ್ಲಿ ಹೊಸ ಗಣಿಗಾರಿಕೆ ಗುತ್ತಿಗೆ ನೀಡಿಕೆಯನ್ನು ನ್ಯಾಯಾಲಯ 2025 ನವೆಂಬರ್ 20ರಂದು ನಿಷೇಧಿಸಿತ್ತು. ಅರಾವಳಿ ಬೆಟ್ಟಗಳ ಅಧಿಕೃತ ವ್ಯಾಖ್ಯಾನ ಮತ್ತು ಪರಿಸರ ರಕ್ಷಣೆಯ ಕುರಿತಾದ ಅಸ್ಪಷ್ಟತೆಗಳನ್ನು ಬಗೆಹರಿಸಲು ತಜ್ಞರ ಸಮಿತಿಯನ್ನು ರಚಿಸುವಂತೆ ಈ ಹಿಂದೆ ಸೂಚಿಸಲಾಗಿತ್ತು.

ಕೋಲ್ಕತ್ತಾ ಡಿಸಿಪಿ ಶಾಂತನು ಸಿನ್ಹಾರನ್ನು ಬಂಧಿಸಿದ ಇಡಿ

ಕೋಲ್ಕತ್ತಾ: ಸುಲಿಗೆ ಜಾಲ ನಡೆಸುತ್ತಿದ್ದ ಆರೋಪದ ಮೇಲೆ ಕೋಲ್ಕತ್ತಾ ಪೊಲೀಸ್ ಉಪ ಆಯುಕ್ತ ಶಾಂತನು ಸಿನ್ಹಾ ಬಿಸ್ವಾಸ್ ಅವರನ್ನು ಜಾರಿ ನಿರ್ದೇಶನಾಲಯ (ಇಡಿ) ಬಂಧಿಸಿದೆ. ಸಿಜಿಒ ಸಂಕೀರ್ಣದಲ್ಲಿ ಹತ್ತು ಗಂಟೆಗಳ ಸುದೀರ್ಘ ವಿಚಾರಣೆಯ ನಂತರ ಅವರನ್ನು ಬಂಧಿಸಲಾಯಿತು. ವಿಶ್ವಜಿತ್ ಪೋದ್ದಾರ್ ಅಲಿಯಾಸ್ ಸೋನಾ ಪಪ್ಪು ನಡೆಸುತ್ತಿದ್ದ ಕ್ರಿಮಿನಲ್ ಜಾಲಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಿಸ್ವಾಸ್ ಅವರನ್ನು ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ಉದ್ಯಮಿ ಜಾಯ್ ಕಮ್ದಾರ್ ಮತ್ತು ಪೋದ್ದಾರ್ ಅವರೊಂದಿಗೆ ಅವರು ಹಣಕಾಸಿನ ವಹಿವಾಟು ನಡೆಸಿರುವುದನ್ನು ತನಿಖಾಧಿಕಾರಿಗಳು ಪತ್ತೆಹಚ್ಚಿದ್ದಾರೆ.

ನೀಟ್-ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ: ಕಿಂಗ್ ಪಿನ್ ಸೆರೆ

ಪುಣೆ: ನೀಟ್-ಯುಜಿ 2026 ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದ ಕಿಂಗ್ ಪಿನ್ ಪಿವಿ ಕುಲಕರ್ಣಿ ಅನ್ನು ಸಿಬಿಐ ಸಿಬ್ಬಂದಿ ಶುಕ್ರವಾರ ಬಂಧಿಸಿದ್ದಾರೆ. ಪುಣೆ ಮೂಲದ ನಿವೃತ್ತ ರಸಾಯನಶಾಸ್ತ್ರ ಉಪನ್ಯಾಸಕ ಪಿವಿ ಕುಲಕರ್ಣಿ ನೀಟ್ ಹಗರಣದ ಕಿಂಗ್ ಪಿನ್ ಎಂದು ಸಿಬಿಐ ತನಿಖೆಯಲ್ಲಿ ತಿಳಿದುಬಂದಿದೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ವೈದ್ಯಕೀಯ ಪ್ರವೇಶಾತಿ ಪರೀಕ್ಷೆಯೊಂದನ್ನು ರದ್ದುಗೊಳಿಸಲಾಗಿತ್ತು.

ಕ್ಯೂಬಾದಲ್ಲಿ ಇಂಧನ ಕೊರತೆ, ಪ್ರತಿಭಟನೆ

ಹವಾನಾ: ಅಮೆರಿಕ ಹೇರಿದ ಕಠಿಣ ಆರ್ಥಿಕ ಮತ್ತು ವ್ಯಾಪಾರ ನಿರ್ಬಂಧಗಳಿಂದ (ಬ್ಲಾಕೇಡ್) ಕ್ಯೂಬಾಗೆ ಇತರ ರಾಷ್ಟ್ರಗಳಿಂದ ತೈಲ ಖರೀದಿಸುವುದು ಕಷ್ಟವಾಗಿದೆ. ಈ ಕಾರಣದಿಂದ ಕ್ಯೂಬಾ ದೊಡ್ಡ ಮಟ್ಟದ ಇಂಧನ ಕೊರತೆಯನ್ನು ಎದುರಿಸುತ್ತಿದ್ದು, ರಾಜಧಾನಿ ಹವಾನಾದಲ್ಲಿ ಭಾರೀ ಪ್ರತಿಭಟನೆಗಳು ನಡೆದಿವೆ.

ಅಮೆರಿಕ ಹೇರಿದ ಆರ್ಥಿಕ ಮತ್ತು ವ್ಯಾಪಾರ ನಿರ್ಬಂಧಗಳೇ ಪ್ರಮುಖವಾಗಿ ತೈಲ ಕೊರತೆಗೆ ಕಾರಣವೆಂದು ಕ್ಯೂಬಾ ಅಧಿಕಾರಿಗಳು ಆರೋಪಿಸಿದ್ದಾರೆ. ಇದರಿಂದಾಗಿ ಕ್ಯೂಬಾದಲ್ಲಿ ಸತತ 22 ಗಂಟೆ ವಿದ್ಯುತ್ ಕಡಿತ(ಬ್ಲ್ಯಾಕ್‌ಔಟ್) ಮಾಡಲಾಗಿದ್ದು, ಜನ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ದುರ್ಬಲ ಮೂಲಸೌಕರ್ಯ, ಸೀಮಿತ ಶೇಖರಣೆ ಮತ್ತು ಜಾಗತಿಕ ರಾಜಕೀಯ ಉದ್ವಿಗ್ನತೆಯೂ ಬ್ಲ್ಯಾಕ್‌ಔಟ್‌ಗೆ ಕಾರಣಗಳಾಗಿವೆ. ಇಂಧನ ಕೊರತೆ ಇರುವುದನ್ನು ಕ್ಯೂಬಾ ಇಂಧನ ಸಚಿವ ವಿಸೆಂಟ್ ಡಿ ಲಾ ಒ ಲೆವಿ ದೃಢೀಕರಿಸಿದ್ದಾರೆ.

ಅಮೆರಿಕ ನೆರವಿನ ಭರವಸೆ: ಸಿಐಎ ಮುಖ್ಯಸ್ಥ ಜಾನ್ ರ್‍ಯಾಟ್‌ಕ್ಲಿಫ್ ಹವಾನಾಗೆ ಭೇಟಿ ನೀಡಿದ್ದು, ಕ್ಯೂಬಾ ಭದ್ರತಾ ಅಧಿಕಾರಿ ರಾಲ್ ಕ್ಯಾಸ್ಟ್ರೋ ಮೊಮ್ಮಗ ರಾಲ್ ರಾಡ್ರಿಗಸ್ ಕ್ಯಾಸ್ಟ್ರೋನೊಂದಿಗೆ ಮಾತುಕತೆ ನಡೆಸಿದ್ದಾರೆ. 100 ದಶಲಕ್ಷ ಡಾಲರ್ ಮಾನವೀಯ ನೆರವಿನ ಭರವಸೆ ನೀಡಿದ್ದಾರೆ.

ಕ್ಯಾಸ್ಟ್ರೋ ವಿರುದ್ಧ ದೋಷಾರೋಪ: ಇದೇ ವೇಳೆ 1996ರ ಅಮೆರಿಕದ ಅವಳಿ ವಿಮಾನ ಧ್ವಂಸ ಪ್ರಕರಣದಲ್ಲಿ ಫಿಡೆಲ್ ಕ್ಯಾಸ್ಟ್ರೋ ಸಹೋದರ 94 ವರ್ಷದ ರಾಲ್ ಕ್ಯಾಸ್ಟ್ರೋ ವಿರುದ್ಧ 30 ವರ್ಷಗಳ ಬಳಿಕ ಅಮೆರಿಕ ಸರ್ಕಾರ ದೋಷಾರೋಪವನ್ನು ಹೊರಿಸಿದೆ.

ಯುವ ವಕೀಲನ ಮೇಲೆ ಸಿಜೆಐ ಗರಂ

ಹೊಸದಿಲ್ಲಿ: ಉದ್ಯೋಗ ಸಿಗದ ಕೆಲ ಯುವಕರು 'ಜಿರಳೆ'ಗಳಂತೆ ಸಮಾಜದಲ್ಲಿ ಹರಡುತ್ತಿದ್ದು, ನಂತರ ಅವರು ಮಾಧ್ಯಮ, ಸಾಮಾಜಿಕ ಜಾಲತಾಣ, ಆರ್‌ಟಿಐ ಮತ್ತು ಇತರೆ ಕಾರ್ಯಕರ್ತರಾಗಿ ವ್ಯವಸ್ಥೆಯ ಮೇಲೆಯೇ ದಾಳಿ ನಡೆಸುತ್ತಾರೆ ಎಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾ. ಸೂರ್ಯಕಾಂತ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹಿರಿಯ ವಕೀಲ ಹುದ್ದೆ ನೀಡುವ ವಿಚಾರಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ವೇಳೆ ಸಿಜೆಐ ಸೂರ್ಯಕಾಂತ್ ಹಾಗೂ ನ್ಯಾ. ಜೋಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.ಹಿರಿಯ ವಕೀಲ ಹುದ್ದೆಗಾಗಿ ಅರ್ಜಿ ಸಲ್ಲಿಸಿದ್ದ ವಕೀಲರ ನಡೆ-ನುಡಿಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, ಜಗತ್ತಿನ ಎಲ್ಲರೂ ಹಿರಿಯ ವಕೀಲರಾಗಲು ಅರ್ಹರಾಗಿರಬಹುದು. ಆದರೆ ನೀವು ಆ ಕನಿಷ್ಠ ಅರ್ಹತೆ ಹೊಂದಿಲ್ಲ ಎಂದು ಕಿಡಿಕಾರಿತು.

ಅರ್ಜಿದಾರರ ಫೇಸ್‌ಬುಕ್ ಭಾಷೆಯನ್ನೂ ಉಲ್ಲೇಖಿಸಿದ ಸಿಜೆಐ, 'ಈಗಾಗಲೇ ಸಮಾಜದಲ್ಲಿ ವ್ಯವಸ್ಥೆಯ ಮೇಲೆ ದಾಳಿ ಮಾಡುವ ಪರೋಪಜೀವಿಗಳಿದ್ದಾರೆ. ನೀವು ಅವರ ಜೊತೆಗೆ ಸೇರುವ ಉದ್ದೇಶವೇ?' ಎಂದು ಪ್ರಶ್ನಿಸಿದರು.

ಇದೇ ವೇಳೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಿಜೆಐ, 'ಉದ್ಯೋಗವಿಲ್ಲದೆ, ವೃತ್ತಿಯಲ್ಲಿ ನೆಲೆ ಕಂಡುಕೊಳ್ಳದ ಕೆಲ ಯುವಕರು ಜಿರಳೆಗಳಂತೆ ಹುಟ್ಟಿಕೊಳ್ಳುತ್ತಾರೆ. ಕೆಲವರು ಮಾಧ್ಯಮವಾಗುತ್ತಾರೆ, ಕೆಲವರು ಸಾಮಾಜಿಕ ಜಾಲತಾಣ ಕಾರ್ಯಕರ್ತರಾಗುತ್ತಾರೆ, ಕೆಲವರು ಆರ್‌ಟಿಐ ಕಾರ್ಯಕರ್ತರಾಗುತ್ತಾರೆ. ನಂತರ ಎಲ್ಲರ ಮೇಲೂ ದಾಳಿ ಆರಂಭಿಸುತ್ತಾರೆ' ಎಂದು ಹೇಳಿದರು.

ಮೇ18ಕ್ಕೆ ಸರ್ಕಾರ ರಚನೆ: ವಿ.ಡಿ.ಸತೀಶನ್ ಸಿದ್ಧತೆ

ತಿರುವನಂತಪುರಂ: ಕೇರಳದಲ್ಲಿ ನಿಯೋಜಿತ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಮೇ18ರಂದು ನೂತನ ಸರಕಾರ ರಚನೆಗೆ ಭರದ ಸಿದ್ಧತೆಗಳನ್ನು ನಡೆಸುತ್ತಿದ್ದು, ಶುಕ್ರವಾರ ಮಾಜಿ ಮುಖ್ಯಮಂತ್ರಿ , ಎಲ್‌ಡಿಎಫ್ ನಾಯಕ ಪಿಣರಾಯಿ ವಿಜಯನ್ , ಹಿರಿಯ ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ಸೇರಿದಂತೆ ವಿವಿಧ ನಾಯಕರನ್ನು ಭೇಟಿ ಮಾಡಿದರು. ನೂತನ ಯುಡಿಎಫ್ ಸರಕಾರದಲ್ಲಿ ಕಾಂಗ್ರೆಸಿಗೆ 12ಸಚಿವ ಸ್ಥಾನಗಳು ಲಭಿಸುವ ನಿರೀಕ್ಷೆಯಿದೆ.



ಶುಕ್ರವಾರ ಅಪರಾಹ್ನ ಬೇಕರಿ ಜಂಕ್ಷನ್‌ನಲ್ಲಿರುವ ಪಿಣರಾಯಿ ವಿಜಯನ್ ಅವರ ನಿವಾಸಕ್ಕೆ ಭೇಟಿ ನೀಡಿದ ವಿ.ಡಿ.ಸತೀಶನ್ ಅವರು ಅವರೊಂದಿಗೆ ಮಾತುಕತೆ ನಡೆಸಿದರು.ಪಿಣರಾಯಿ ವಿಜಯನ್ ಮತ್ತು ಕುಟುಂಬ ಸತೀಶನ್ ಅವರನ್ನು ಬರಮಾಡಿಕೊಂಡರು.ಬಳಿಕ ಮಾತನಾಡಿದ ಅವರು, ಹೊಸ ಸರಕಾರ ಹಿಂದಿನ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗಲಿದೆ . ಅಭಿವೃದ್ಧಿ ಮುಂದುವರಿಯಲಿದೆ ಎಂದರು.

ರಾಜಕೀಯ ಅಭಿಪ್ರಾಯ ವ್ಯತ್ಯಾಸಗಳು ಇರಬಹುದು.ಆದರೆ ಪ್ರಮುಖ ವಿಷಯಗಳಲ್ಲಿ ನಾವು ಒಂದಾಗಿ ನಿಲ್ಲಬೇಕಿದೆ ಎಂದು ಸತೀಶನ್ ನುಡಿದರು. ಕೇರಳ ರಾಜಕೀಯದಲ್ಲಿ ಪಾತ್ರಗಳೀಗ ತಿರುವುಮುರುವಾಗಿದ್ದು, ಪಿಣರಾಯಿ ವಿಜಯನ್ ಅವರು ಕೇರಳ ವಿಧಾನಸಭೆಯ ವಿಪಕ್ಷ ನಾಯಕರಾಗಲು ಸಜ್ಜಾಗಿದ್ದಾರೆ.

ಏನಾಸಂನಿಂದ ಎಲ್ಲರಿಗೂ ಸಮಾನ ಹಕ್ಕು

ಗುವಾಹಟಿ: ಪ್ರಸ್ತಾವಿತ ಸಮಾನ ನಾಗರಿಕ ಸಂಹಿತೆ (ಏನಾಸಂ)ಯಲ್ಲಿ ನಾಡಿನ ಕಾನೂನು ಎಲ್ಲಾ ಜನರಿಗೆ ಸಮಾನವಾಗಿ ಅನ್ವಯಿಸಲಿದೆ. ಎಲ್ಲರಿಗೂ, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳಿಗೆ ನ್ಯಾಯೋಚಿತ ಹಕ್ಕುಗಳು ಲಭಿಸಲಿವೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ. ಬುಡಕಟ್ಟು ಸಮುದಾಯ ಅಥವಾ ಅಸ್ಸಾಂನ ಜನಜಾತೀಯ ಸಮಾಜದ ಸಂಪ್ರದಾಯ, ರೀತಿರಿವಾಜುಗಳ ಸಂರಕ್ಷಣೆ ದೃಷ್ಟಿಯಿಂದ ಈ ಸಮುದಾಯವನ್ನು ಸಮಾನ ನಾಗರಿಕ ಸಂಹಿತೆ (ಏನಾಸಂ) ವ್ಯಾಪ್ತಿಯಿಂದ ಹೊರಗಿಡಲಾಗುವುದು ಎಂದು ಸಿಎಂ ಶರ್ಮಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಪ್ರಸ್ತಾವಿತ ಯುಸಿಸಿ ಧ್ಯೇಯೋದ್ದೇಶಗಳಿಗೆ ಸಂಬಂಧಿಸಿ ಸಾಮಾಜಿಕ ಜಾಲತಾಣದಲ್ಲಿ ಎರಡು ಸ್ಲೈಡ್‌ಗಳನ್ನು ಶೇರ್ ಮಾಡಿರುವ ಸಿಎಂ ಶರ್ಮಾ, ಒಂದು ರಾಜ್ಯಕ್ಕೆ ಒಂದೇ ಕಾನೂನು ಯುಸಿಸಿ ಆಶಯವಾಗಿದೆ.

ಭಾರತಕ್ಕಿದೆ ರಾಜತಾಂತ್ರಿಕ ಅನುಭವ: ಸೆರ್ಗೆ ಲಾವ್ರೊವ್

ಭಾರತದ ಮಧ್ಯಸ್ಥಿಕೆಗೆ ಬೆಂಬಲ

ಹೊಸದಿಲ್ಲಿ: ಇರಾನ್ ಮತ್ತು ಅಮೆರಿಕವನ್ನು ಒಳಗೊಂಡ ಸಂಘರ್ಷದಲ್ಲಿ ಭಾರತ ದೀರ್ಘಾವಧಿ ಸಂಭಾವ್ಯ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬಹುದು ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಶುಕ್ರವಾರ ಆಶಯ ವ್ಯಕ್ತಪಡಿಸಿದ್ದಾರೆ.



ಬ್ರಿಕ್ಸ್ ವಿದೇಶಾಂಗ ಮಂತ್ರಿಗಳ ಸಭೆ ನಂತರ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಲಾವ್ರೊವ್, ಭಾರತದ ವಿಶಾಲವಾದ ರಾಜತಾಂತ್ರಿಕ ಅನುಭವ ಮತ್ತು ಅಂತಾರಾಷ್ಟ್ರೀಯ ನಿಲುವನ್ನು ಉಲ್ಲೇಖಿಸಿದ್ದಾರೆ. ಆದರೆ ದೀರ್ಘಾವಧಿ ಪ್ರಾದೇಶಿಕ ಸ್ಥಿರತೆಯನ್ನು ಖಾತ್ರಿಪಡಿಸುವಲ್ಲಿ ಭಾರತವು ವಿಶಾಲವಾದ ರಾಜತಾಂತ್ರಿಕ ಪಾತ್ರ ವಹಿಸಬಹುದು ಎಂದು ಸೂಚಿಸಿದರು. ತುರ್ತು ಸಮಸ್ಯೆಗಳನ್ನು ಪರಿಹರಿಸಲು ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆಗಳನ್ನು ನಡೆಸಲು ಪಾಕಿಸ್ತಾನ ಸಹಾಯ ಮಾಡುತ್ತಿದೆ. ಅವರು ಇರಾನ್ ಮತ್ತು ಅದರ ಅರಬ್ ಸ್ನೇಹಿತರ ನಡುವೆ ದೀರ್ಘಾವಧಿಯ ಮಧ್ಯವರ್ತಿಯನ್ನು ಬಯಸಿದರೆ, ಭಾರತವು ತನ್ನ ಅಪಾರ ರಾಜತಾಂತ್ರಿಕ ಅನುಭವವನ್ನು ಪರಿಗಣಿಸಿ ಈ ಪಾತ್ರವನ್ನು ವಹಿಸಬಹುದು. ಪ್ರಸ್ತುತ ಬ್ರಿಕ್ಸ್ ಅಧ್ಯಕ್ಷರಾಗಿ ಮತ್ತು ಪ್ರಾದೇಶಿಕ ಸ್ಥಿರತೆಯಲ್ಲಿ ನೇರ ಹಿತಾಸಕ್ತಿಗಳನ್ನು ಹೊಂದಿರುವ ಪ್ರಮುಖ ಇಂಧನ ಗ್ರಾಹಕನಾಗಿ ಭಾರತವು ಪ್ರಮುಖ ಪಾಲುದಾರರ ನಡುವೆ ಸಂವಾದವನ್ನು ಸುಗಮಗೊಳಿಸಲು ಉತ್ತಮ ಸ್ಥಿತಿಯಲ್ಲಿದೆ.

ಭಾರತದ ಮೇಲೆ ಇರಾನ್‌ಗೂ ಭರವಸೆ

ಇರಾನ್ ಮೇಲಿನ ಅಮೆರಿಕ-ಇಸ್ರೇಲ್ ಯುದ್ಧದ ಆರ್ಥಿಕ ಕುಸಿತದ ಬಗ್ಗೆ ಜಾಗತಿಕ ಕಳವಳ ಹೆಚ್ಚುತ್ತಿರುವ ಮಧ್ಯೆ, ಈ ಪ್ರದೇಶದ ಬಹುತೇಕ ಎಲ್ಲಾ ದೇಶಗಳೊಂದಿಗಿನ ಸ್ನೇಹ ಸಂಬಂಧದಿಂದಾಗಿ ಪಶ್ಚಿಮ ಏಷ್ಯಾದಲ್ಲಿ ಶಾಂತಿಯನ್ನು ತರುವಲ್ಲಿ ಭಾರತವು ಹೆಚ್ಚಿನ ಪಾತ್ರವನ್ನು ವಹಿಸಬಹುದು ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಶುಕ್ರವಾರ ಹೇಳಿದ್ದಾರೆ.

ಬಂಡೆಗಳ ನಡುವೆ ಹಸಿರು ಬಣ್ಣದ ಪ್ಲಾಸ್ಟಿಕ್ ಬಲೆ ಶಿಲೆ: ಪತ್ರಿಕಾ ವರದಿ

ಪಶ್ಚಿಮ ಕರಾವಳಿಯಲ್ಲಿ ಪ್ಲಾಸ್ಟಿಸ್ಟೋನ್

ರಾಯಗಡ: ಸಂಶೋಧಕರು, ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ದೈವೇಗರ್ ಕಡಲತೀರದಲ್ಲಿ ಭಾರತದ ಪಶ್ಚಿಮ ಕರಾವಳಿಯಲ್ಲಿ ಮೊದಲ ಬಾರಿಗೆ ಪ್ಲಾಸ್ಟಿಸ್ಟೋನ್ (ಪ್ಲಾಸ್ಟಿಕ್ ಮತ್ತು ಶಿಲೆ ಸಮಿಶ್ರಣ) ಎಂಬ ವಿಚಿತ್ರ ಶಿಲಾರೂಪ ಪತ್ತೆಹಚ್ಚಿದ್ದಾರೆ.

ಕೋಲ್ಕತ್ತಾದ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ (ಐಐಎಸ್‌ಇಆರ್) ಸಂಶೋಧನಾ ತಂಡ, 2024 ಮೇನಲ್ಲಿ ದೈವೇಗರ್ ತೀರದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಅಧ್ಯಯನ ನಡೆಸಿ ಈ ಮಾದರಿಗಳನ್ನು ಸಂಗ್ರಹಿಸಿತ್ತು. ಅಲ್ಲಿನ ಬಂಡೆಗಳ ನಡುವೆ ಹಸಿರು ಬಣ್ಣದ ಪ್ಲಾಸ್ಟಿಕ್ ಬಲೆ ಶಿಲೆಯೊಂದಿಗೆ ಬೆಸೆದುಕೊಂಡಿರುವುದು ಕಂಡುಬಂದಿದೆ. ಇದನ್ನು ಡಿಸ್ಕವರ್ ಓಷನ್ಸ್ ಎಂಬ ವಿಜ್ಞಾನ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.



ಹೇಗಾಯಿತು ಇದು?: ಸಂಶೋಧನೆಯ ನೇತೃತ್ವ ವಹಿಸಿದ್ದ ಪ್ರೊ. ಪುಣ್ಯಶ್ಲೋಕ ಭಾದುರಿ ಪ್ರಕಾರ, ಇದು ಭಾರತೀಯ ಉಪಖಂಡದಲ್ಲಿ ವರದಿಯಾದ ಮೊದಲ ಪ್ಲಾಸ್ಟಿಸ್ಟೋನ್. ಈ ಹಿಂದೆ ಪತ್ತೆಯಾದ ಪ್ಲಾಸ್ಟಿಕ್ ಶಿಲೆಗಳು ಸುಡುವಿಕೆಯಿಂದ ಉಂಟಾಗಿದ್ದರೆ, ಇದು ನೈಸರ್ಗಿಕ ಪ್ರಕ್ರಿಯೆಯಿಂದ ರೂಪುಗೊಂಡಿದೆ. ಅಲ್ಟ್ರಾವೈಲೆಟ್ (ಯುವಿ) ಕಿರಣಗಳು, ಹೆಚ್ಚಿನ ತಾಪಮಾನ ಮತ್ತು ಸಮುದ್ರದ ಅಲೆಗಳ ಹೊಡೆತದಿಂದಾಗಿ ಪ್ಲಾಸ್ಟಿಕ್ ತ್ಯಾಜ್ಯ, ಮರಳು, ಮೃದ್ವಂಗಿಗಳ ಚಿಪ್ಪುಗಳು ಮತ್ತು ಜೈವಿಕ ಅಂಶಗಳೊಂದಿಗೆ ಬೆರೆತು ಕಲ್ಲಿನಂತಾಗಿದೆ.

ರಾಸಾಯನಿಕ ವಿಶ್ಲೇಷಣೆಯಲ್ಲಿ, ಈ ಶಿಲೆಯಲ್ಲಿ ಪಾಲಿಥಿಲಿನ್, ಪಾಲಿಪ್ರೊಪಿಲಿನ್ ಮತ್ತು ಪಾಲಿಮೈಡ್‌ಗಳಂತಹ ಅಂಶಗಳನ್ನು ಪತ್ತೆಹಚ್ಚಿದೆ. ಶಿಲೆಯೊಳಗಿರುವ ಪ್ಲಾಸ್ಟಿಕ್ ಎಳೆಗಳು ಮೀನುಗಾರಿಕೆಗೆ ಬಳಸುವ ನೈಲಾನ್ ಬಲೆಗಳ ಭಾಗ ಎಂದು ತಿಳಿದುಬಂದಿದೆ. ಪ್ಲಾಸ್ಟಿಕ್ ಕಲ್ಲಿನೊಂದಿಗೆ ಬೆರೆಯುವ ಈ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

ಪರಿಸರಕ್ಕೆ ಅಪಾಯ: ಈ ಪ್ಲಾಸ್ಟಿಸ್ಟೋನ್‌ಗಳು ಬಂಡೆಗಳ ಶಾಖ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಬದಲಾಯಿಸುತ್ತವೆ. ಇದರಿಂದ ಏಡಿ ಮತ್ತು ಆಮೆಗಳಂತಹ ಸಮುದ್ರ ಜೀವಿಗಳ ಸಂತಾನೋತ್ಪತ್ತಿಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ಅಷ್ಟೇ ಅಲ್ಲದೆ, ಇವು ಮೈಕ್ರೋಪ್ಲಾಸ್ಟಿಕ್ ಮತ್ತು ವಿಷಕಾರಿ ಅಂಶಗಳನ್ನು ನಿರಂತರವಾಗಿ ಪರಿಸರಕ್ಕೆ ಬಿಡುಗಡೆ ಮಾಡಿ ಆಹಾರ ಸರಪಳಿಯ ಮೇಲೆ ಪ್ರಭಾವ ಬೀರಬಹುದು, ಎನ್ನಲಾಗಿದೆ.

2026ರ ವರದಿಯಂತೆ ಭಾರತ ವಾರ್ಷಿಕವಾಗಿ 9.3 ಮಿಲಿಯನ್ ಟನ್ ಪ್ಲಾಸ್ಟಿಕ್ ಮಾಲಿನ್ಯವನ್ನು ಹೊರಹಾಕುತ್ತಿದೆ. ಇದು ಜಾಗತಿಕ ಮಾಲಿನ್ಯದ ಐದನೇ ಒಂದು ಭಾಗ.



ಯಮಕನಮರಡಿ: ಗಡಿಬಾಗದ ಹುಕ್ಕೇರಿ ತಾಲೂಕಿನ ಸೋಲಾಪುರ ಗ್ರಾಪಂಯಲ್ಲಿ ವಿಶ್ವ ಕನ್ನಡಿಗ ಡಾ.ಕುಮಾರ ತಳವಾರ ವಿರಚಿತ ನನ್ನದೆ ತಪ್ಪು ಕವನ ಸಂಕಲನ ಬಿಡುಗಡೆ ಸಮಾರಂಭ ಜರುಗಿತು. ಹುಕ್ಕೇರಿ ತಾಲೂಕಿನ ಕಸಾಪ ಅಧ್ಯಕ್ಷ ಪ್ರಕಾಶ ಅವಲಕ್ಕಿ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಸದಸ್ಯ ಎ.ಬಿ.ನಾಯಿಕ ಕಾಡೇಶ ಬಸ್ತವಾಡೆ ಖನ್ನಿನಾಯ್ಕ, ರೈತ ಸಂಘ ಅಧ್ಯಕ್ಷ ಶಿಂತ್ರೆ, ಗ್ರಾಮದ ಕನ್ನಡ ಅಭಿಮಾನಿಗಳು ಇದ್ದರು. ಕವಿ ಕುಮಾರ ತಳವಾರ ಅವರನ್ನು ಸತ್ಕಾರಿಸಲಾಯಿತು. ಕುಮಾರ ಅವರಿಂದ ಎಸ್ಸೆಸ್ಸೆಲ್ಸಿಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಹಾಗೂ ಅಗ್ನಿವೀರ ಸೈನಿಕರ ಪಾಲಕರನ್ನು ಗೌರವಿಸಿ ಸನ್ಮಾನಿಸಲಾಯಿತು.

ಅಭಿನಂದನಾ ಸಮಾರಂಭ ನಾಳೆ

ಬೆಳಗಾವಿ: ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಪಂಚಾಯತಿ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನ ಜಿಲ್ಲೆಯಲ್ಲಿನ ಎಸ್ಸೆಸ್ಸೆಲ್ಸಿ, ಪಿಯುಸಿ, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಹಾಗೂ ಕ್ರೀಡೆಯಲ್ಲಿ ಅತ್ಯುತ್ತಮ ಸಾಧನೆ ಗೈದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ ಮೇ 17ರಂದು ಬೆಳಗ್ಗೆ 10ಕ್ಕೆ ಸುವರ್ಣ ಸೌಧದಲ್ಲಿ ಜರುಗಲಿದೆ.

ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸಿವರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ಸಾರಿಗೆ ನಿಗಮ ಅಧ್ಯಕ್ಷ ಭರಮಗೌಡ ಕಾಗೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಅಧ್ಯಕ್ಷ ಭರಮಣ್ಣ ಉಪ್ಪಾರ ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ.

ಸಂಸದರಾದ ಈರಣ್ಣ ಕಡಾಡಿ, ಪ್ರಿಯಾಂಕಾ ಜಾರಕಿಹೊಳಿ, ಜಗದೀಶ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ, ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ: ನಗರದ ವಿವಿಧ ಭಾಗಗಳಲ್ಲಿರುವ ನಾಲಾಗಳ ಹೂಳೆತ್ತುವ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದು, ಪಾಲಿಕೆ ಆಯುಕ್ತ ಕಾರ್ತಿಕ ಎಂ. ವಿವಿಧ ಬಡಾವಣೆಗಳಿಗೆ ಭೇಟಿ ನೀಡಿ ಕಾರ್ಯ ಪರಿಶೀಲನೆ ನಡೆಸಿದ್ದರು. ಈ ವೇಳೆ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿದರು.

ಕಿರುಸುದ್ದಿ

ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗ ನಾಳೆ, ನಾಡಿದ್ದು

ಬೆಳಗಾವಿ: ಬಿಜೆಪಿ ವತಿಯಿಂದ ಮೇ 17 ಮತ್ತು 18ರಂದು ಖಾನಾಪುರ ತಾಲೂಕಿನ ಜಾಂಬೋಟಿ ಹತ್ತಿರವಿರುವ ಕುಸಮಳಿಯ ಕೈವೈಲ್ಯಂ ಪೌಂಡೇಶನ್ ಯೋಗ ಕೇಂದ್ರದಲ್ಲಿ ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗ ನಡೆಯಲಿದ್ದು, ಈ ಪ್ರಶಿಕ್ಷಣವರ್ಗದಲ್ಲಿ ರಾಜ್ಯದ ಪ್ರಮುಖ ಮುಖಂಡರು, ಜಿಲ್ಲೆಯ ಸಂಸದರು, ಶಾಸಕರು, ಮಾಜಿ ಶಾಸಕರು,



ಪ್ರಮುಖ ಪದಾಧಿಕಾರಿಗಳು ಪ್ರಶಿಕ್ಷಣಾರ್ಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುಂಡಲೀಕಗೆ ದತ್ತಿನಿಧಿ ಪ್ರಶಸ್ತಿ

ಸವದತ್ತಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ಹಾಗೂ ಸವದತ್ತಿ ತಾಲೂಕಾ ಹಿರಿಯ ವರದಿಗಾರ ಪುಂಡಲೀಕ ಭೀಮಪ್ಪ ಬಾಳೋಜಿ ಅವರಿಗೆ ಕಾರಸಗೋಡ ಜಿಲ್ಲಾ ಕನ್ನಡ ಪತ್ರಕರ್ತರ ಸಂಘ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮತ್ತು ಕಾರ್ಯನಿರತ ಪತ್ರಕರ್ತರ ಸಂಘದಿಂದ



ನೀಡುವ ದತ್ತಿನಿಧಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕಳೆದ 30 ವರ್ಷಗಳಿಂದ ಮಾಧ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ದಿನಪತ್ರಿಕೆ ಸೇರಿದಂತೆ ದೃಶ್ಯ ಮಾಧ್ಯಮ ಕ್ಷೇತ್ರದಲ್ಲಿ ಸಹ ಸೇವೆ ಸಲ್ಲಿಸಿದ್ದಾರೆ. ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷರಾಗಿ 2 ವರ್ಷ ಕಾರ್ಯನಿರ್ವಹಿಸಿದ್ದು, ಪ್ರಸ್ತುತ ಕಕಾನಿ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿಯಾಗಿ ಪ್ರಾಮಾಣಿಕ ಕಾರ್ಯ ಮಾಡುತ್ತಿದ್ದಾರೆ. ಕಳೆದ ವರ್ಷ ಅವರಿಗೆ ಮಾಧ್ಯಮ ಅಕಾಡೆಮಿ ರಾಜ್ಯ ಪ್ರಶಸ್ತಿ ಕೂಡಾ ಲಭಿಸಿದೆ. ಮೇ 16ರಂದು ಕಾಸರಗೋಡಿನಲ್ಲಿ ನಡೆಯಲಿರುವ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಅವರಿಗೆ ದತ್ತಿನಿಧಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಗ್ರಾಪಂ ಸಭೆ ಮೇ 22ರಂದು

ಬೆಳಗಾವಿ: ಸನ್ 2026-27 ನೇ ಸಾಲಿನ ಮಾಸ್ತಮರ್ಡಿ, ಬಸರೀಕಟ್ಟಿ, ಶಗಣಮಟ್ಟಿ ಗ್ರಾಪಂ ಗ್ರಾಮ ಸಭೆ ಬೆಳಗಾವಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶದ ಮೇರೆಗೆ ಮೇ 22ರಂದು ಬೆಳಗ್ಗೆ 11ಕ್ಕೆ ಮಾಸ್ತಮರ್ಡಿ ರೈತ ಸಮುದಾಯ ಭವನದಲ್ಲಿ ನಡೆಸಲಾಗುತ್ತಿದೆ. ಸಭೆಗೆ ಎಲ್ಲ ಸಾರ್ವಜನಿಕರು ಹಾಜರಾಗಬೇಕೆಂದು ಮಾಸ್ತಮರ್ಡಿ ಗ್ರಾಪಂ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಹುಚ್ಚ ನಾಯಿಗಳ ದಾಳಿ: 10 ಜನರಿಗೆ ಗಾಯ

ಯಮುಕನಮರಡಿ: ಸಮೀಪದ ಹತ್ತರಗಿ ಗ್ರಾಪಂ ವ್ಯಾಪ್ತಿಯಲ್ಲಿ ಹುಚ್ಚು ನಾಯಿಗಳ ಹಾವಳಿ ಹೆಚ್ಚಾಗಿದ್ದು, ಇತ್ತೀಚಿಗೆ ಸುಮಾರು ಎಂಟು ಜನರನ್ನು ಕಚ್ಚಿದ ಬಗ್ಗೆ ವರದಿಯಾಗಿದೆ. ಕೂಡಲೇ ಗಾಯಾಳುಗಳನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ತುತ್ತು ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಬೆಳಗಾವಿ ಸರ್ಕಾರಿ ಆಸ್ಪತ್ರೆಗೆ ಕಳಿಸಲಾಗಿದೆ ಎಂದು ಸ್ಥಳೀಯ ವೈದ್ಯರು ತಿಳಿಸಿದ್ದಾರೆ. ಈ ಕುರಿತು ಯಮಕನಮರಡಿ ಹತ್ತರಗಿ ಗ್ರಾಪಂ ಜನರಿಗೆ ಜಾಗೃತಿಯಿಂದ ಇರಲು ತಿಳಿಸಿದ್ದಾರೆ. ಸುಮಾರು 10 ಜನರಿಗೆ ಶುಕ್ರವಾರ ಬೆಳಗಿನ ಜಾವ ಹುಚ್ಚು ನಾಯಿಗಳು ದಾಳಿ ಮಾಡಿವೆ ಎಂದು ಗಾಯಾಳುಗಳು ಪತ್ರಕರ್ತರಿಗೆ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: ಖಾನಾಪೂರ ತಾಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಹುದ್ದೆಗೆ ಗೌರವಧನದ ಆಧಾರದ ಮೇಲೆ ಅರ್ಜಿ ಆಹ್ವಾನಿಸಲಾಗಿದೆ. ಜೂನ್ 16ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಕಚೇರಿಗೆ ಸಂಪರ್ಕಿಸಲು ಖಾನಾಪೂರ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಯುವಕ ಆತ್ಮಹತ್ಯೆ

ಸಂಕೇಶ್ವರ: ಪಟ್ಟಣದ ಜನತಾ ಪ್ಲಾಟ್‌ನಲ್ಲಿ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಶುಕ್ರವಾರ ನಡೆದಿದೆ. ದೃಶ್ಯ ಲಕ್ಷ್ಮಣ ಘಸ್ತಿ(20) ಮೃತ ಯುವಕ. ಸ್ಥಳೀಯ ಕೂಲಿ ಕೆಲಸ ಮಾಡುತ್ತಿದ್ದು, ಮಾನಸಿಕವಾಗಿ ಕುಗ್ಗಿದ ಯುವಕ ಬೆಳಗ್ಗೆ ಮನೆಯಲ್ಲಿ



ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗಿದೆ. ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿದೆ.

ಅಭಿವೃದ್ಧಿ ಚರ್ಚೆಗೆ ಎಫ್‌ಒಎಬಿ ನಿರ್ಧಾರ

ಬೆಳಗಾವಿ: ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ತುರ್ತಾಗಿ ಆಗಬೇಕಿರುವ 7 ಗಂಭೀರ ವಿಷಯಗಳನ್ನು ಗುರುತಿಸಿರುವ ಎಫ್‌ಒಎಬಿ (ಫೆಡರೇಶನ್ ಆಫ್ ಅಸೋಸಿಯೇಶನ್ಸ್ ಆಫ್ ಬೆಳಗಾವಿ), ಈ ಕುರಿತು ಜಿಲ್ಲೆಯ ಸಚಿವರು, ಶಾಸಕರು ಹಾಗೂ ಜಿಲ್ಲಾಧಿಕಾರಿಗಳ ಜೊತೆ ನೇರ ಚರ್ಚೆಗೆ ನಿರ್ಧರಿಸಿದೆ.

ಇತ್ತೀಚಿಗೆ ಫೌಂಡ್ರಿ ಕ್ಲಸ್ಟರ್ ಸಭಾಭವನದಲ್ಲಿ ಸಭೆ ಸೇರಿದ ಎಫ್‌ಒಎಬಿಯ ಸುಮಾರು 20ಕ್ಕೂ ಹೆಚ್ಚು ಸಂಘಟನೆಗಳ ಪ್ರತಿನಿಧಿಗಳು ಸುಮಾರು ಎರಡು ಗಂಟೆಗಳ ಕಾಲ ಸುದೀರ್ಘ ಚರ್ಚೆ ನಡೆಸಿದರು. ನಗರದ ಅಭಿವೃದ್ಧಿಗೆ ಪೂರಕವಾಗಿ ರೂಪಿಸಬೇಕಿರುವ ರೈಲ್ವೆ ಮೇಲ್ಸೇತುವೆ ಯೋಜನೆ, ಸಂಚಾರ ದಟ್ಟಣೆ ನಿವಾರಿಸಬೇಕಿರುವ ರಿಂಗ್ ರಸ್ತೆ, ಕೈತಪ್ಪಿ ಹೋಗುವ ಹಂತದಲ್ಲಿರುವ ಸಿಟೀಸ್ 2, ನಿರ್ಲಕ್ಷ್ಯಕ್ಕೊಳಗಾಗಿರುವ ಸಿಡಿಪಿ ಹಾಗೂ ಎಸ್‌ಟಿಪಿ ಯೋಜನೆ, ತುರ್ತಾಗಿ ಮೇಲ್ದರ್ಜೆಗೇರಿಸಬೇಕಾಗಿರುವ ಹೆಸ್ಕಾಂ ಪವರ್ ಸ್ಟೇಶನ್ಸ್, ಗೇಲ್ ಗ್ಯಾಸ್ ಪೈಪ್ ಲೈನ್, ಬಯೋಗ್ಯಾಸ್, ಗೋಬರ್ ಧನ್ ಯೋಜನೆಗಳನ್ನು ಮೊದಲ ಹಂತದಲ್ಲಿ ಗುರುತಿಸಲಾಗಿದೆ.

ಈಗಾಗಲೆ ನಿರ್ಮಾಣವಾಗಿರುವ ಅವೈಜ್ಞಾನಿಕ ರೈಲ್ವೆ ಮೇಲ್ಸೆತುವೆಗಳಿಂದಾಗಿ ನಗರದಲ್ಲಿ ಉಂಟಾಗಿರುವ ಸಮಸ್ಯೆ ಹಾಗೂ ಆಗಬೇಕಿರುವ ಇನ್ನಷ್ಟು ಮೇಲ್ಸೆತುವೆಗಳಿಂದ ನಗರ ಅಭಿವೃದ್ಧಿಗೆ ಮಾರಕವಾಗುವ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು. ರಸ್ತೆಗೆ ಮೇಲ್ಸೆತುವೆ ಬದಲು ರೈಲ್ವೆ ಟ್ರ್ಯಾಕ್‌ಗೆ ಮೇಲ್ಸೆತುವೆ ಮಾಡಿ, ಎಲಿವೇಟೆಡ್ ರೈಲ್ವೆ ಟ್ರ್ಯಾಕ್ ನಿರ್ಮಾಣದಿಂದ ನಗರದ ಅಭಿವೃದ್ಧಿಗೆ ವೇಗ ನೀಡಬಹುದು. ನಗರ ಸೌಂದರ್ಯ, ಪಾರಂಪರಿಕ ತಾಣಗಳ ಸಂರಕ್ಷಣೆ ಜೊತೆಗೆ ಹಲವಾರು ಸಕಾರಾತ್ಮಕ ಅಂಶ ಇದು ಒಳಗೊಂಡಿದೆ ಎನ್ನುವುದನ್ನು, ದೇಶದ ಅನೇಕ ನಗರಗಳ ಸಕ್ಸಸ್ ಸ್ಟೋರಿಗಳೊಂದಿಗೆ ತಜ್ಞರು ಸಭೆಯಲ್ಲಿ ವಿವರಿಸಿದರು.

ಕೇಂದ್ರ ಸರ್ಕಾರ ಸಿಟೀಸ್ 2 ಯೋಜನೆಗೆ ಬೆಳಗಾವಿ ಆಯ್ಕೆಯಾಗಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಕೈತಪ್ಪುವ ಹಂತದಲ್ಲಿದೆ. ಅಭಿವೃದ್ಧಿಗೆ ದೊಡ್ಡಮಟ್ಟದ ಹಿನ್ನಡೆಯಾಗಲಿದೆ ಎಂದು ವಿವರಿಸಲಾಯಿತು.



> **ಬೆಳಗಾವಿ ಅಭಿವೃದ್ಧಿ ದೃಷ್ಟಿಯಿಂದ ಎಫ್‌ಒಎಬಿ ಸಂಘಟನೆಯ ಹೆಜ್ಜೆ ಅತ್ಯಂತ ಪ್ರಶಂಸನೀಯವಾಗಿದೆ. ಇದು ಅಗತ್ಯವಾಗಿತ್ತು. ಮುಂದಿನ ದಿನಗಳಲ್ಲಿ ಎಲ್ಲ ಸಂಘಟನೆಗಳನ್ನು, ಜನಪ್ರತಿನಿಧಿಗಳನ್ನು, ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘಟನೆ ಕೆಲಸ ಮಾಡಬೇಕು.**
> ■ ರಾಮ್ ಭಂಡಾರೆ, ಹಿರಿಯ ಉದ್ಯಮಿ, ಫೌಂಡ್ರಿ ಕ್ಲಸ್ಟರ್ ಚೇರಮನ್

ನಗರ ಬೆಳೆದಂತೆ ಬದಲಾಗಬೇಕಿದ್ದ ಸಿಡಿಪಿ ಯೋಜನೆ ಸುದೀರ್ಘ ಅವಧಿಯಿಂದ ನನೆಗುದಿಗೆ ಬಿದ್ದಿರುವುದರಿಂದ ಸಕಾರಾತ್ಮಕವಾಗಿ ನಗರದ ಬೆಳವಣಿಗೆ ಸಾಧ್ಯವಾಗುತ್ತಿಲ್ಲ. ವಾರ್ಡ್‌ಗೊಂದು ಎಸ್‌ಟಿಪಿ ಯೋಜನೆ ನಗರಕ್ಕೊಂದೂ ಇಲ್ಲದಿರುವುದು ಬೆಳೆಯುತ್ತಿರುವ ನಗರಕ್ಕೆ ಮಾರಕವಾಗಿದೆ. ಕೂಡಲೇ ಆಡಳಿತ ವ್ಯವಸ್ಥೆ ಈ ಬಗ್ಗೆ ಗಮನಹರಿಸಬೇಕಿದೆ ಎನ್ನುವ ಅಂಶ ಗಮನಕ್ಕೆ ತರಲಾಯಿತು. ನಗರದ ಎಲ್ಲ ವಿದ್ಯುತ್ ಸ್ಟೇಷನ್ ಮಿತಿಮೀರಿದ ಹೊರೆಯಿಂದ ಕೂಡಿವೆ. ತುರ್ತಾಗಿ 400 ಕೆವಿ ಸ್ಟೇಷನ್, ಹಲವು ಸಬ್ ಸ್ಟೇಷನ್ ಆಗದಿದ್ದರೆ ಇನ್ನೊಂದ ವರ್ಷದಲ್ಲಿ ನಗರ ದೊಡ್ಡ ಸಮಸ್ಯೆಗೆ ಒಳಗಾಗಲಿದೆ ಎನ್ನುವ ಕುರಿತು ವಿವರಿಸಿದರು. ಕೆಲವು ವಿಷಯಗಳ ಕುರಿತು ಸಭೆಯಲ್ಲಿ ಗಂಭೀರ ಚರ್ಚೆ ನಡೆಯಿತು. ಹಲಗಾ-ಮಚ್ಚೆ ಬೈಪಾಸ್ ಮತ್ತು ಯಡಿಯೂರಪ್ಪ ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ಮಹಾತ್ಮಾ ಫುಲೆ ರಸ್ತೆ ಸಂಚಾರಕ್ಕೆ ಮುಕ್ತ ಮಾಡದೆ ನಗರದಲ್ಲಿ ಫ್ಲೈ ಓವರ್ ನಿರ್ಮಾಣ ಕಾರ್ಯ ಆರಂಭಿಸುವುದರಿಂದ ಆಗಬಹುದಾದ ಸಂಚಾರ ದಟ್ಟಣೆ ಕುರಿತು ಸಭೆ ಕಳವಳ ವ್ಯಕ್ತಪಡಿಸಿತು. ಎಫ್‌ಒಎಬಿ ಸಂಚಾಲಕ ಚೈತನ್ಯ ಕುಲಕರ್ಣಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಸಂಚಾಲಕ ಎಂ.ಕೆ.ಹೆಗಡೆ, ಮುಂದಿನ ಯೋಜನೆಗಳ ಕುರಿತು ವಿವರಿಸಿ, ವಂದಿಸಿದರು.

ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಪ್ರಭಾಕರ ನಾಗರಮುನೋಳಿ, ಪ್ರೊಫೇಶನಲ್ ಫೋರಮ್‌ನ ಡಾ.ಎಚ್.ಬಿ.ರಾಜಶೇಖರ, ಬಿ.ಜಿ.ಧರೆಣ್ಣಿ, ಲಘು ಉದ್ಯೋಗ ಭಾರತಿಯ ಸಚಿನ್ ಸಬ್ನಿಸ್, ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಿ.ಬಿ.ಹಿರೇಮಠ, ಕ್ರೆಡೈ ಅಧ್ಯಕ್ಷ ಯುವರಾಜ ಹುಲಜಿ, ಸದಸ್ಯ ಆನಂದ ಕುಲಕರ್ಣಿ, ಫೌಂಡ್ರಿ ಕ್ಲಸ್ಟರ್ ಕಾರ್ಯದರ್ಶಿ ಸದಾನಂದ ಹುಂಬರವಾಡಿ, ಸದಸ್ಯ ವಿಜಯ ಮುಚ್ಚಂಡಿಕರ, ಎಫ್‌ಒಎಬಿ ಸಂಯೋಜಕ ರಾಜೇಂದ್ರ ಮುಂದಡ, ಕೆಮಿಸ್ಟ್ ಆ್ಯಂಡ್ ಡ್ರಗ್ಗಿಸ್ಟ್ ಅಸೋಸಿಯೇಶನ್ ಎಸ್.ಎಸ್.ಗಡಿಯಣ್ಣವರ, ವಿವಿಧ ಸಂಘಟನೆಗಳ ಪ್ರತಿನಿಧಿಗಳಾದ ಪ್ರಸನ್ನ ಕೋಚರಿ, ಎಸ್.ಬಿ.ದಂಡಗಿ, ಅಮಿತ್ ಕಾಲಕುಂದ್ರಿ, ಅನಿಲ ರಾಮದುರ್ಗ ಮೊದಲಾದವರು ಭಾಗವಹಿಸಿದ್ದರು.

ರೈತರಿಗೆ ತಾಂತ್ರಿಕ ತರಬೇತಿ ಕಾರ್ಯಾಗಾರ

ರಾಮದುರ್ಗ: ರೈತರು ಕಬ್ಬು ಬೆಳೆಯುವ ಕ್ಷೇತ್ರದಲ್ಲಿ ಪರ್ಯಾಯ ಬೆಳೆಯಾಗಿತಾಳೆ ಬೆಳೆ ಬೆಳೆಯುವುದರಿಂದ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಇಳುವರಿ ಪಡೆದು ಲಾಭ ಗಳಿಸಬಹುದು ಎಂದು ಸಹಾಯಕ ತೋಟಗಾರಿಕೆ ನಿರ್ದೇಶಕ ಪ್ರಕಾಶ ಮುಗಳಖೋಡ ಹೇಳಿದರು.

ತಾಲೂಕಿನ ರಂಕಲಕೊಪ್ಪ ಗ್ರಾಮದಲ್ಲಿ ತೋಟಗಾರಿಕೆ ಇಲಾಖೆ ಮತ್ತು 3ಎಫ್ ಆಯಿಲ್ ಪಾವಮ್ ಪ್ರೈವೇಟ್ ಲಿಮಿಟೆಡ್ ಸಹಭಾಗಿತ್ವದಲ್ಲಿ ಶುಕ್ರವಾರ ಆಯೋಜಿಸಿದ ತಾಳೆ ಬೆಳೆ ಅಭಿವೃದ್ಧಿ ಹಾಗೂ ರೈತರಿಗೆ ತಾಳೆ ಬೆಳೆ ಕಟಾವು ಬಗ್ಗೆ ತಾಂತ್ರಿಕ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿ, ರೈತರು ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಆದಾಯದ ಬೆಳೆಗಳಿಗೆ ಹೆಚ್ಚು ಆದ್ಯತೆ ನೀಡುವುದರ ಜೊತೆಗೆ ತಾಳೆ ಬೆಳೆಗಳೊಂದಿಗೆ ಮಿಶ್ರ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದರು.

ತಾಲೂಕಿನ ಪ್ರಗತಿಪರ ರೈತ ಸದಾನಂದ ಕರಾಂಡೆ ಮಾತನಾಡಿ, ರೈತರು ಒಂದು ಬೆಳೆ ಬೆಳೆಯುವುದರಿಂದ ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಉಂಟಾಗಿ ಕೃಷಿ ಲಾಭದಾಯಕವಾಗುತ್ತಿಲ್ಲ, ರೈತರು ತಾಳೆ ಬೆಳೆಯೊಂದಿಗೆ ವಿವಿಧ ಮಿಶ್ರ ಬೆಳೆ ಬೆಳೆದು ಕೃಷಿ ಲಾಭದಾಯಕವಾಗಿ ಮಾಡಿಕೊಳ್ಳಬೇಕು ಎಂದರು.

ಪ್ರಗತಿಪರ ರೈತ ಶಿವಪ್ಪ ಬೆಣ್ಣಿ, ಬಸವರಾಜ ಕ್ವಾರಿ, ಶಂಕರ ಚವ್ಹಾಣ, ಶ್ರೀನಿವಾಸ ಪಾಟೀಲ, ತೋಟಗಾರಿಕೆ ಅಧಿಕಾರಿಗಳಾದ ಬಸವರಾಜ ಹಡಪದ, ಹಣಮಂತ ಹುಕ್ಕೇರಿ, ಪ್ರಕಾಶ ಕಪ್ಪತ್ತಿ ಹಾಗೂ 3ಎಫ್ ತಾಳೆ ಬೆಳೆ ಕಂಪನಿ ಸಿಬ್ಬಂದಿ ಕೃಷ್ಣಾ ನಾಯಕ, ನೂರಕ್ಕೂ ಹೆಚ್ಚಿನ ರೈತರು ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.



ಮೇ 18ರಿಂದ ಚಿಕ್ಕೋಡಿ ಉಪ-ಕಾಲುವೆಗೆ ನೀರು ಹರಿವು

ಗೋಕಾಕ: ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಹಿಡಕಲ್ ಜಲಾಶಯದಿಂದ ಘಟಪ್ರಭಾ ಎಡದಂಡೆ ಕಾಲುವೆಗೆ ಬರುವ ಮೇ 22 ಮತ್ತು ಚಿಕ್ಕೋಡಿ ಉಪ ಕಾಲುವೆಗೆ ಬರುವ ಮೇ 18ರಿಂದ ನೀರು ಹರಿಸಲು ಕ್ರಮ ಕೈಗೊಂಡಿರುವ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರಿಗೆ ಅರಭಾವಿ ಶಾಸಕ ಹಾಗೂ ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಅಭಿನಂದನೆ ಸಲ್ಲಿಸಿದ್ದಾರೆ.



ತೀವ್ರ ಬರ ಮತ್ತು ಬಿಸಿಲಿನ ಪ್ರಖರತೆ ಹೆಚ್ಚಾಗುತ್ತಿರುವುದರಿಂದ ಜನ ಮತ್ತು ಜಾನುವಾರುಗಳಿಗೆ ನೀರಿಲ್ಲದೇ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಿಡ್ಕಲ್ ಜಲಾಶಯದಿಂದ ಚಿಕ್ಕೋಡಿ ಉಪ-ಕಾಲುವೆಗೆ 550 ಕ್ಯೂಸೆಕ್ಸ್‌ನಂತೆ 0.475 ಟಿಎಂಸಿ ನೀರನ್ನು ಹರಿಸಲಾಗುತ್ತಿದೆ. ಅದರಂತೆ, ಘಟಪ್ರಭಾ ಎಡದಂಡೆ ಕಾಲುವೆಗೆ 2650 ಕ್ಯೂಸೆಕ್ಸ್‌ರಂತೆ (ಜಿಎಲ್‌ಬಿಸಿ 2400 ಕ್ಯೂಸೆಕ್ಸ್ ಕನ್ವೆನ್ಸ್ ಲಾಸ್ 100 ಕ್ಯೂಸೆಕ್ಸ್) ಕೋಟಬಾಗಿ ಏತ ನೀರಾವರಿ ಯೋಜನೆಗೆ ಸೇರಿಸಿ ಒಟ್ಟು 2.289 ಟಿಎಂಸಿ ನೀರನ್ನು ಬರುವ 10 ದಿನಗಳವರೆಗೆ ಒಟ್ಟು 2.764 ಟಿಎಂಸಿ ನೀರು ಬಿಡುಗಡೆ ಮಾಡಲು ಸಚಿವರು ಆದೇಶ ನೀಡಿದ್ದಾರೆ.

ಜನ ಮತ್ತು ಜಾನುವಾರುಗಳಿಗೆ ನೀರನ್ನು ಹರಿಸುವಂತೆ ನಾನು ಸತೀಶ್ ಜಾರಕಿಹೊಳಿಯವರಿಗೆ ಕೋರಿಕೆ ಮಂಡಿಸಿದ್ದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಹಿಡ್ಕಲ್ ಜಲಾಶಯದಿಂದ ಘಟಪ್ರಭಾ ಕಾಲುವೆಗಳಿಗೆ ನೀರನ್ನು ಬಿಡುಗಡೆ ಮಾಡುವಂತೆ ನೀರಾವರಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಘಟಪ್ರಭಾ ಬಲದಂಡೆ ಕಾಲುವೆ(ಜಿಆರ್‌ಬಿಸಿ) ದುರಸ್ತಿ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ನೀರನ್ನು ಹರಿಸಲು ಸ್ವಲ್ಪ ವಿಳಂಬವಾಗಬಹುದು. ಆದ್ದರಿಂದ ಘಟಪ್ರಭಾ ಬಲದಂಡೆ ಕಾಲುವೆ ಸಾರ್ವಜನಿಕರು ಸಹಕರಿಸುವಂತೆ ಶಾಸಕ ಬಾಲಚಂದ್ರ ಜಾರಕಿಹೊಳಿ ಮನವಿ ಮಾಡಿಕೊಂಡಿದ್ದಾರೆ.

ಪಾಲಿಕೆಯ ಪೌರ ಕಾರ್ಮಿಕರ ಸೌಲಭ್ಯಗಳ ಕುರಿತು ಸಭೆ

ಬೆಳಗಾವಿ : ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಲೋಕಲ್ ಸೆಲ್ಫ್ ಗವರ್ನಮೆಂಟ್, ಬೆಳಗಾವಿಯಲ್ಲಿ ಮೇ.14 2026 ರಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ರಾಷ್ಟ್ರೀಯ ಸಫಾಯಿಕರ್ಮಚಾರಿ ಆಯೋಗ ಭಾರತ ಸರ್ಕಾರದ ಉಪಾಧ್ಯಕ್ಷ ಹರದೀಪ ಸಿಂಗ ಗಿಲ್ಲ, ಸದಸ್ಯ ಕರಮು ಸಿಂಗ ಕರ್ಮಾ, ಇವರ ಆಪ್ತ ಸಹಾಯಕ ಶಶಾಂಕ ಸಿಂಗ ರಜಪೂತ, ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಲೋಕಲ್ ಸೆಲ್ಫ್ ಗವರ್ನಮೆಂಟ್ ಪ್ರಾದೇಶಿಕ ನಿರ್ದೇಶಕ ಶಿವಕುಮಾರ ಟಿ.ಸುರಪುರಮಠ ನಗರದಲ್ಲಿ ಮಹಾನಗರ ಪಾಲಿಕೆ ಪೌರ ಕಾರ್ಮಿಕರೊಂದಿಗೆ ಅವರಿಗೆ ದೊರೆಯಬೇಕಾದ ಸೌಲಭ್ಯಗಳ ಕುರಿತು ಚರ್ಚಿಸಿದರು. ಈ ವೇಳೆ ಸ್ಥಳೀಯ ಪೌರ ಕಾರ್ಮಿಕರ ಮುಖಂಡರು ಹಾಗೂ ಎಐಐಎಲ್‌ಎಸ್‌ಜಿಯ ಸಿಬ್ಬಂದಿಗಳು ಭಾಗಿಯಾಗಿಯಾಗಿದ್ದರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಡಾವಣೆಗಳಿಗೆ ಪಾಲಿಕೆ ಆಯುಕ್ತ ಕಾರ್ತಿಕ ಭೇಟಿ

ಬೆಳಗಾವಿ: ಮಳೆಗಾಲದಲ್ಲಿ ನಾಲಾಗಳು ಚರಂಡಿಗಳು ತುಂಬಿ ರಸ್ತೆ ಮೇಲೆ ನೀರು ಹರಿಯುವುದು ಸೇರಿದಂತೆ ಮುಂತಾದ ಸಮಸ್ಯೆಗಳ ಪರಿಹಾರಕ್ಕಾಗಿ ಬೆಳಗಾವಿ ಮಹಾನಗರ ಪಾಲಿಕೆಯಿಂದ ನಾಲಾ ಹೂಳೆತ್ತುವ ಹಾಗೂ ಸ್ವಚ್ಛಗೊಳಿಸುವ ಕಾರ್ಯ ಭರದಿಂದ ಸಾಗಿದೆ.

ಶುಕ್ರವಾರ ಮುಂಜಾಗ್ರತಾ ಕ್ರಮಕ್ಕೆ ಪಾಲಿಕೆ ಮುಂದಾಗಿದೆ.

ಹಲವಾರು ಬಡಾವಣೆಗಳ ಸಾರ್ವಜನಿಕರಿಂದ ದೂರುಗಳು ಸಹ ಬಂದಿವೆ. ವಿವಿಧ ವಾರ್ಡ್ ನಗರ ಸೇವಕರೂ ಮಳೆಗಾಲದಿಂದಾಗುವ ಅನಾನುಕೂಲತೆ ಮುಂಚಿತವಾಗಿ ಸರಿಪಡಿಸಬೇಕೆಂಬ ಸಲಹೆ ನೀಡಿದ್ದರು.

ಈ ಹಿನ್ನಲೆಯಲ್ಲಿ ಸ್ವಚ್ಛತೆಯ ಕಡೆಗೆ ಗಮನಹರಿಸಿರುವ ಪಾಲಿಕೆ ಶೀಘ್ರದಲ್ಲೇ ಮಳೆಗಾಲ ಆರಂಭವಾಗುತ್ತಿರುವುದರಿಂದ ಮಹಾನಗರದ ವಿವಿಧ ಭಾಗಗಳಲ್ಲಿರುವ ನಾಲಾಗಳ ಹೂಳೆತ್ತುವ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಚರಂಡಿಗಳನ್ನು ಸ್ವಚ್ಛಗೊಳಿಸಿ ಕಸ ವಿಲೇವಾರಿ ಮಾಡುವ ಕಾರ್ಯ, ಗಾಳಿ ಮಳೆಯಿಂದ ಬೀಳುವ ಹಂತದಲ್ಲಿರುವ ಹಾಗೂ ಚರಂಡಿ ನೀರು ಹರಿಯಲು ಅಡ್ಡಲಾಗಿರುವ ಹಾಗೂ ವಿದ್ಯುತ್ ತಂತಿಗಳ ಮೇಲೆ ಬಿದ್ದು ಅಪಾಯ ತಂದೊಡ್ಡಲಿರುವ ಗಿಡ ಮರಗಳನ್ನು ತೆಗೆದುಹಾಕುವ ಕಾರ್ಯ ಸಹ ಭರದಿಂದ ಸಾಗಿದೆ.



ಖುದ್ದು ಪಾಲಿಕೆ ಆಯುಕ್ತ ಕಾರ್ತಿಕ ಎಂ. ವಿವಿಧ ಬಡಾವಣೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಈ ವೇಲೆ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿದರು. ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಬೇಕೆಂದು ಸೂಚಿಸಿದ್ದಾರೆ.

ವಿಭಾಗದ ಅಭಿಯಂತರ ಅಂಕಿತ ಸೇರಿದಂತೆ ಇತರ ಅಧಿಕಾರಿಗಳು, ವಾರ್ಡ್ ನಗರ ಸೇವಕರು ಹಾಗೂ ಸಿಬ್ಬಂದಿ ಆಯುಕ್ತರಿಗೆ ಸಾತ್ ನೀಡಿದರು.

ಪ್ರತಿಭಾ ಪುರಸ್ಕಾರ ಮೇ 24ರಂದು

ರಾಮದುರ್ಗ: ಕರ್ನಾಟಕ ಪ್ರದೇಶ ಕುರುಬರ ಸಂಘದ ತಾಲೂಕು ಘಟಕ ಮತ್ತು ಕನಕ ನೌಕರರ ಸಂಘದ ಆಶ್ರಯದಲ್ಲಿ ಮೇ 24ರಂದು ಪಟ್ಟಣದ ಪ್ರಗತಿ ಕಲ್ಯಾಣ ಮಂಟಪದಲ್ಲಿ ಪ್ರತಿಭಾವಂತ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಕುರುಬ ಸಮಾಜದ ತಾಲೂಕಾ ಅಧ್ಯಕ್ಷ ಪಡಿಯಪ್ಪ ಕ್ವಾರಿ ಹೇಳಿದರು.

ಶುಕ್ರವಾರ ಪ್ರೆಸ್‌ಕ್ಲಬ್‌ದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ವರ್ಷದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಪ್ರತಿಶತ 85ರಷ್ಟು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸತ್ಕರಿಸಲಾಗುವುದು. ಧಾರವಾಡದ ಜಿನಿಯಸ್ ಕೋಚಿಂಗ್ ಅಕಾಡೆಮಿ ಸಿದ್ದಾರ್ಥ ದಳವಾಯಿ ಅವರಿಂದ ಮಕ್ಕಳಿಗೆ ಐಎಎಸ್ ಮತ್ತು ಐಪಿಎಸ್ ತರಬೇತಿ ನೀಡಲಾಗುವುದು ಎಂದರು.

ಕುರುಬ ಸಮಾಜದ ಮಕ್ಕಳು ಪರೀಕ್ಷೆಗಳಲ್ಲಿ ಪ್ರತಿಶತ 85 ರಷ್ಟು ಅಂಕ ಗಳಿಸಿದವರು ತಮ್ಮ ಅಂಕ ಪಟ್ಟಿ, ಆಧಾರ ಕಾರ್ಡ್ ಸಮೇತ ಸಮಾಜದ ಮುಖಂಡ ಪಡಿಯಪ್ಪ ಕ್ವಾರಿ (9740472786), ಸಿದ್ದಪ್ಪ ಮಕ್ಕಣ್ಣವರ 9741953084, ಕೆ.ಎನ್. ಯಡ್ರಾವಿ 9663174016, ಎಂ.ಎನ್. ಗವನ್ನವರ 9481559878, ಕರಿಯಪ್ಪ ಕ್ವಾರಿ 8722283667 ಅವರಲ್ಲಿ ಮೇ 22ರ ಒಳಗಾಗಿ ಸಂಪರ್ಕಿಸಿ ಹೆಸರು ನೋಂದಾಯಿಸಬೇಕು ಎಂದರು.



ಪ್ರತಿಭಾ ಪುರಸ್ಕಾರ ಸಮಾರಂಭವು ಧಾರವಾಡದ ಮನಸೂರಮಠದ ಬಸವರಾಜ ದೇವರ ಸಮ್ಮುಖದಲ್ಲಿ ನಡೆಯಲಿದೆ. ವಿವಿಧ ಗಣ್ಯರು ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸುವರು ಎಂದರು. ಸಮಾಜದ ಮುಖಂಡರಾದ ಮಲ್ಲಪ್ಪ ಸೋಮಗೊಂಡ, ಈರಣ್ಣ ಕಾಮನ್ನವರ, ಅಶೋಕ ಮೆಟಗುಡ್ಡ, ಸೋಮಶೇಖರ ಸಿದ್ಲಿಂಗಪ್ಪನವರ ಸೇರಿದಂತೆ ಅನೇಕರು ಹಾಜರಿದ್ದರು.

ಕ್ರಿಕೆಟ್ ಪಂದ್ಯಾವಳಿಗೆ ಶಾಸಕ ವಿಶ್ವಾಸ ಚಾಲನೆ



ಯರಗಟ್ಟಿ: ವಿಶ್ವಾಸಣ್ಣಾ ಅಭಿಮಾನಿ ಬಳಗದ ವತಿಯಿಂದ ಐಪಿಎಲ್ ಮಾದರಿಯಲ್ಲಿ ಆಯೋಜಿಸಲಾಗಿರುವ ವಿಶ್ವಾಸ ಟ್ರೋಫಿ-2026 ಕ್ರಿಕೆಟ್ ಪಂದ್ಯಾವಳಿಗೆ ಶಾಸಕ ವಿಶ್ವಾಸ ವೈದ್ಯ ಹಾಗೂ ಅವರ ಸಹೋದರ ಅಶ್ವತ ವೈದ್ಯ ಚಾಲನೆ ನೀಡಿ ಪಂದ್ಯಾವಳಿಯನ್ನು ಉದ್ಘಾಟಿಸಿದರು.

ಈ ವೇಳೆ ಅಶ್ವತ ವೈದ್ಯ ಮಾತನಾಡಿ, ಕ್ರೀಡೆ ಯುವಕರ ಜೀವನದಲ್ಲಿ ಶಿಸ್ತು, ಏಕತೆ ಹಾಗೂ ಆರೋಗ್ಯಕರ ಮನೋಭಾವ ಬೆಳೆಸುವ ಪ್ರಮುಖ ಸಾಧನವಾಗಿದೆ. ವಿಶ್ವಾಸಣ್ಣಾ ಅಭಿಮಾನಿ ಬಳಗವು ಯುವ ಪ್ರತಿಭೆಗಳಿಗೆ ಉತ್ತಮ ವೇದಿಕೆ ಕಲ್ಪಿಸಿರುವುದು ಶ್ಲಾಘನೀಯ. ಗ್ರಾಮೀಣ ಭಾಗದಲ್ಲಿಯೂ ಐಪಿಎಲ್ ಮಾದರಿ ಪಂದ್ಯಾವಳಿ ಆಯೋಜಿಸುವ ಮೂಲಕ ಕ್ರೀಡಾ ಸಂಸ್ಕೃತಿ ಬೆಳೆಸುತ್ತಿರುವುದು ಸಂತಸದ ವಿಷಯ ಎಂದರು.

ಪ್ರಕಾಶ ವಾಲಿ ಮಾತನಾಡಿ ಯುವಕರು ಕ್ರೀಡೆ ಜೊತೆಗೆ ಶಿಕ್ಷಣ ಹಾಗೂ ಸಾಮಾಜಿಕ ಜವಾಬ್ದಾರಿಗಳಲ್ಲಿಯೂ ತೊಡಗಿಸಿಕೊಂಡು ಉತ್ತಮ ನಾಗರಿಕರಾಗಿ ಬೆಳೆಯಬೇಕು. ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡಾ ಮನೋಭಾವದಿಂದ ಭಾಗವಹಿಸುವುದು ಮುಖ್ಯ ಎಂದರು.

ಈ ವೇಳೆ ಎಪಿಎಂಸಿ ಅಧ್ಯಕ್ಷ ನೀಲಕಂಠ ಶಿದಬಸನ್ನವರ, ಕರವೇ ಅಧ್ಯಕ್ಷ ರಫೀಕ್ ಡಿ.ಕೆ, ಮಲಿಕಸಾಬ್ ಬಾಗವಾನ್, ರಮೇಶ ದೇವರಡ್ಡಿ, ನಿಖಿಲ ಪಾಟೀಲ, ಹಣಮಂತ ಹಾರುಗೊಪ್ಪ, ಸಲೀಂ ಜಮಾದಾರ, ಸುರೇಶ ಭಜಂತ್ರಿ, ರಾಜು ಬಿರ್ಜೆ, ಸಮೀರ ನದಾಫ್, ರಫೀಕ್ ದಿಲಾವರನಾಯ್ಕ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಉದ್ಯಾನವನ ನಿರ್ವಹಣೆಯಿಂದ ಹಸಿರೀಕರಣ ಹೆಚ್ಚಳ: ಪ್ರಕಾಶ

ಸಂಕೇಶ್ವರ: ಅಮೃತ್ ಮಿತ್ರ 2.0 ಯೋಜನೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆ, ಡೇ ನಲ್ಮ ಅಭಿಯಾನದಡಿ ಪಟ್ಟಣದ ಹಿಡ್ಕೋ ಕಾಲೋನಿ ಉದ್ಯಾನವ ನಿರ್ವಹಣೆಗೆ ಜ್ಞಾನ ದೀಪ ಮಹಿಳಾ ಸ್ವಸಹಾಯ ಸಂಘವು ಆಯ್ಕೆಯಾಗಿದೆ ಎಂದು ಮುಖ್ಯಾಧಿಕಾರಿ ಪ್ರಕಾಶ ಮಠದ ತಿಳಿಸಿದರು.

ಶುಕ್ರವಾರ ಪಟ್ಟಣದ ಹಿಡ್ಕೊ ಕಾಲೋನಿಯ ಸಾರ್ವಜನಿಕ ಉದ್ಯಾನವನ ನಿರ್ವಹಣೆ ಕಾರ್ಯದಲ್ಲಿ ಸಸಿಗೆ ನೀರು ನಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಆರ್ಥಿಕವಾಗಿ ಸದೃಡವಾಗಲು ಈ ಯೋಜನೆ ಸಹಕಾರವಾಗಲಿದ್ದು, ಉದ್ಯಾನವನ ನಿರ್ವಹಣೆಯಿಂದ ಹಸಿರೀಕರಣ ಹೆಚ್ಚಾಗಲಿದ್ದು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದರು.

ಈ ವೇಳೆ ಸಮುದಾಯ ಸಂಘಟನಾಧಿಕಾರಿ ಸಪ್ನಾ ಕುಡಬಾಳೆ, ಮಹಿಳಾ ಸ್ವ ಸಹಾಯ ಸಂಘದ ಮಾಧವೀ ಉಂಡಾಳೆ, ಅಂಬಿಕಾ ಸಂಸುದ್ದಿ ಸೇರಿದಂತೆ ಅನೇಕ ಸದಸ್ಯರು ಹಾಜರಿದ್ದರು.



ಸಾಯಿಬಾಬಾ ಮೂರ್ತಿ ಪ್ರತಿಷ್ಠಾನೆ

ಬೆಳಗಾವಿ: ಜಿಲ್ಲೆಯ ಖಾನಾಪೂರ ಪಟ್ಟಣದ ದುರ್ಗಾದೇವಿ ನಗರದಲ್ಲಿ ನೂತನವಾಗಿ, ನಿರ್ಮಿಸಲಾಗಿರುವ ಸಾಯಿ ಬಾಬಾ ದೇವಸ್ಥಾನದ ಮೂರ್ತಿ ಪ್ರತಿಷ್ಠಾನೆ ಹಾಗೂ ಉದ್ಘಾಟನೆ ಸಮಾರಂಭವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ದುರ್ಗಾನಗರದಲ್ಲಿ ಮೂರು ದಿನಗಳ ಕಾಲ ನಡೆದ ಧಾರ್ಮಿಕ ಮಹೋತ್ಸವದಲ್ಲಿ ಹೋಮ-ಹವನ, ಕಳಸಾರೋಹಣ ಹಾಗೂ ಭವ್ಯ ಮೆರವಣಿಗೆಯಂತಹ ವಿವಿಧ ವಿಧಿವಿಧಾನಗಳು ಭಕ್ತಿಪೂರ್ವಕವಾಗಿ ಜರುಗಿದವು. ಬಿಜೆಪಿ ಶಾಸಕ ವಿಠ್ಠಲ ಹಲಗೇಕರ್ ಮೂರ್ತಿ ಪ್ರತಿಷ್ಠಾಪನೆ ನೆರವೇರಿಸಿ, ಭಕ್ತಿಯಿಂದ ದೇವರಿಗೆ ನಮಸ್ಕರಿಸಿದರು.

ಬಳಿಕ ಮಾತನಾಡಿದ ಅವರು, ಗ್ರಾಮಸ್ಥರ ಏಕತೆ ಮತ್ತು ಸೇವಾಭಾವವನ್ನು ಶ್ಲಾಘಿಸಿದರು. ಈ ದೇವಸ್ಥಾನವು ಕೇವಲ ಪೂಜಾ ಸ್ಥಳವಲ್ಲದೆ, ಶಾಂತಿ ಮತ್ತು ಸೌಹಾರ್ದತೆ ಕೇಂದ್ರವಾಗಲಿದೆ ಎಂದು ವಿಶ್ವಸವನ್ನು ವ್ಯಕ್ತಪಡಿಸಿದರು.

ಈ ವೇಳೆ ಅಧ್ಯಕ್ಷತೆ ಅಮೃತ ಪಾಟೀಲ ವಹಿಸಿದ್ದರು. ಪ್ರಮೋದ ಕೋಚೇರಿ, ಸಂಜಯ ಕುಬಲ್ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು.

ಮಹಾಪ್ರಸಾದ ವ್ಯವಸ್ಥೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಪ್ರಸಾದವನ್ನು ಭಕ್ತಿಯಿಂಧ ಸ್ವೀಕರಿಸಿದರು.

ಈ ವೇಳೆ ಸ್ಥಳೀಯ ನಾಗರಿಕರ ಮತ್ತು ಕಾರ್ಯಕರ್ತರ ಶಿಸ್ತುಬದ್ಧ ಸಹಕಾರದಿಂದ ಈ ಬೃಹತ್ ಧಾರ್ಮಿಕ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು.

ಗ್ರಾಹಕರ ಕುಂದು ಕೊರತೆ ಸಭೆ ಇಂದು

ಸವದತ್ತಿ: ಇಲ್ಲಿಯ ಹೆಸ್ಕಾಂ ಉಪ ವಿಭಾಗ ಕಚೇರಿಯಲ್ಲಿ ಮೇ 16ರಂದು ಮಧ್ಯಾಹ್ನ 3ರಿಂದ ಸಂಜೆ 5.30 ರವರೆಗೆ ಕಾರ್ಯ ಮತ್ತು ಪಾಲನೆ ಅಧೀಕ್ಷಕ ಅಭಿಯಂತರ ಅಧ್ಯಕ್ಷತೆಯಲ್ಲಿ ಗ್ರಾಹಕರ ಕುಂದು ಕೊರತೆ ಹಾಗೂ ವಿಚಾರಣಾ ಸಭೆ ನಡೆಯಲಿದೆ. ಆದ್ದರಿಂದ ಸಾರ್ವಜನಿಕರು ನಮ್ಮ ಇಲಾಖೆಗೆ ಸಂಬಂಧಿಸಿದ ಯಾವುದೇ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ ಎಂದು ಸವದತ್ತಿ ಕಾರ್ಯ ಮತ್ತು ಪಾಲನೆ ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಚಿಕ್ಕೋಡಿ: ತಾಲೂಕು ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಅಂಗನವಾಡಿ ಸಹಾಯಕಿಯರ ಹುದ್ದೆ ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಳಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಿಂದ ಅರ್ಜಿ ನಮೂನೆ ಪಡೆದುಕೊಂಡು ಭರ್ತಿಮಾಡಿ ಜೂನ್ 16ರ ಸಂಜೆ 5.30ರೊಳಗಾಗಿ ಸಲ್ಲಿಸಬಹುದು. ನಿಗದಿತ ದಿನಾಂಕ, ಸಮಯದೊಳಗೆ ಎಲ್ಲ ದಾಖಲಾತಿಗಳೊದಿಗೆ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಖುದ್ದಾಗಿ ಅಥವಾ ಸಂಬಂಧಪಟ್ಟ ಶಿಶು ಅಭಿವೃದ್ಧಿ ಕಛೇರಿಗೆ ತಲುಪುವಂತೆ ನೊಂದಾಯಿತ ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿಗೆ ಸಂಪರ್ಕಿಸಬಹುದು ಎಂದು ಚಿಕ್ಕೋಡಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ವಿಭಾಗ ಕಾರ್ಯಾಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ–581301.
ದೂರವಾಣಿ: 08382–228935 ಫ್ಯಾಕ್ಸ್: 229735 E-mail: eerdwsd.uk@gmail.com
ನಂ: ಕಾ.ನಿ.ಇಂ/ಗ್ರಾ.ಕು.ನೀ.&ನೈ.ವಿ.ಕಾ/JJM/ಟೆಂಡರ್ ಪ್ರಕಟಣೆ/2026–27/141
ದಿನಾಂಕ: 14/05/2026

ಕೆ.ಪಿ.ಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಉತ್ತರ ಕನ್ನಡ ಜಿಲ್ಲೆ ಇವರಿಂದ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಅರ್ಹ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ, ಟೆಂಡರ್ ವಿವರಗಳು ಈ ಕೆಳಗಿನಂತಿದೆ.

ಕಾಮಗಾರಿ ಹೆಸರು: RWSSD/2025-26/WS/WORK_INDENT9716/CALL-3

(1) ಟೆಂಡರ್ ದಾಖಲಾತಿಗಳನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ: 15/05/2026 ರಿಂದ 22/05/2026 ರ 16.30 ಘಂಟೆವರೆಗೆ (2) ಟೆಂಡರುಗಳನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 22/05/2026 ರ 16.30 ಗಂಟೆವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ: 25/05/2026 ರಂದು 17:00 ಘಂಟೆಯ ನಂತರ. ಉಳಿದ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಕಾರವಾರ (ಉ. ಕ. ಜಿಲ್ಲೆ).

DIPR/KWR/KSMCA/133/ 25-27 dt 14.05.2026

ಕರ್ನಾಟಕ ಸರ್ಕಾರ

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾಧಿಕಾರಿಗಳ ಕಾರ್ಯಾಲಯ

ಕೊಠಡಿ ಸಂಖ್ಯೆ–001, ಕಾರವಾರ, ಉತ್ತರ ಕನ್ನಡ, ಫೋನ್: 08382–226588, 226589
ಇ–ಮೇಲ್: dobcmuttarakannada@gmail.com & dobcw-karwar@kar.gov.in
ಸಂಖ್ಯೆ: ಬಿಸಿಡಬ್ಲ್ಯೂಡಿ/ಲೆಕ್ಕಪತ್ರ/ಸಿಆರ್–01/2026–27 ದಿನಾಂಕ: 13–05–2026

ಇ–ಟೆಂಡರ್ ಪ್ರಕಟಣೆ

ಜುಲೈ–2026 ರಿಂದ ಜೂನ–2027 ಅಥವಾ ಮುಂದಿನ ಆದೇಶದವರೆಗೆ ಉತ್ತರಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿರುವ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು ಹಾಗೂ ಕಛೇರಿಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ ಟೈಪಿಸ್ಟ್, ಜವಾನ ಹಾಗೂ ವಾಹನ ಚಾಲಕ ಹುದ್ದೆಗಳ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯಲು ಇ–ಟೆಂಡರ್ ಕರೆಯಲಾಗಿದ್ದು, ಆಸಕ್ತ ಟೆಂಡರ್‌ದಾರರು ಕೊನೆಯ ದಿನಾಂಕ: 12–06–2026 ರ ಸಂಜೆ 4.00 ಗಂಟೆಯೊಳಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರಮೆಂಟ್ ವಿಳಾಸ: kppp.karnataka.gov.inನಲ್ಲಿ ಪಡೆಯಬಹುದಾಗಿದೆ.

ವೇಳಾಪಟ್ಟಿ (Calender of Events): (1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಸಂ/ಬಿಸಿಡಬ್ಲ್ಯೂಡಿ/ಲೆಕ್ಕಪತ್ರ/ಟೆಂಡರ್/ಸಿಆರ್–01/2026–27 ದಿನಾಂಕ: (2) ಟೆಂಡರ್‌ಗಿಟ್ಟ ಅಂದಾಜು ಮೊತ್ತ: ರೂ. 823.25 ಲಕ್ಷ (3) ಇಎಂಡಿ ಮೊತ್ತ ರೂ. 8,23,248/– (4) ಟೆಂಡರ್ ಫಾರ್ಮ ಅಪ್‌ಲೋಡ ಮಾಡಲು ಪ್ರಾರಂಭಿಸುವ ದಿನಾಂಕ: ದಿ: 13–05–2026 (5) ಪೂರ್ವಭಾವಿ ಸಭೆ ದಿನಾಂಕ ಮತ್ತು ಸ್ಥಳ ದಿ: 20–05–2026 ರ ಸಂಜೆ 4.00, ಸ್ಥಳ: ಜಿಲ್ಲಾ ಅಧಿಕಾರಿಗಳ ಕಛೇರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಡಿ.ಸಿ. ಆಫೀಸ್ ಕಾಂಪ್ಲೆಕ್ಸ್, ರೂಂ. ನಂ.–1, ಕಾರವಾರ, ಉತ್ತರ ಕನ್ನಡ. ದೂರವಾಣಿ ಸಂಖ್ಯೆ: 226589 (6) ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ. ದಿ: 12–06–2026 ರ ಸಂಜೆ 4.00 ಗಂಟೆಯೊಳಗೆ. (7) ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ ದಿ: 15–06–2026 ಬೆಳಿಗ್ಗೆ 11.00 ಗಂಟೆ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) (8) ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ ದಿ: 18–06–2026 ರ ಬೆಳಿಗ್ಗೆ 11.00 ಗಂಟೆ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) (9) ಹೆಚ್ಚಿನ ಮಾಹಿತಿ ಹಾಗೂ ನಿಗದಿತ ಅರ್ಜಿ ನಮೂನೆಗಳಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: kppp.karnataka.gov.in ಅಥವಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉತ್ತರ ಕನ್ನಡ, ಕಾರವಾರ, ಡಿ.ಸಿ. ಆಫೀಸ್ ಕಾಂಪ್ಲೆಕ್ಸ್, ರೂಂ. ನಂ.–1, ಕಾರವಾರ, ಉತ್ತರ ಕನ್ನಡ, ದೂರವಾಣಿ ಸಂಖ್ಯೆ: 226589

ಸಹಿ/– ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉತ್ತರ ಕನ್ನಡ

DIPR/KWR/KSMCA/130/ 26-27 Dt. 14.05.2026

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಕಚೇರಿ, ಹುಬ್ಬಳ್ಳಿ
e-mail Id: projecthdmc1@gmail.com
ನಂ. ಎಚ್.ಡಿ.ಎಂ.ಸಿ/100/01/work/ಟೆಂ.ಪ್ರ/2026–27 ದಿನಾಂಕ: 15–05–2026

ಇ-ಟೆಂಡರ್ ಅಧಿಸೂಚನೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp) ಮುಖಾಂತರ ಮಾತ್ರ)

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000ರ ಪ್ರಕಾರ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ನಿಯಮಗಳನ್ವಯ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಇಚ್ಛೆಯುಳ್ಳ ಸರ್ಕಾರಿ ಇಲಾಖೆಯಲ್ಲಿ (KPWD/ಇತರೆ) ನೊಂದಾಯಿತರಾದ ಅರ್ಹ ಗುತ್ತಿಗೆದಾರರು/ಸಂಸ್ಥೆಯವರಿಂದ Work ಟೆಂಡರ್‌ನ್ನು ಏಕ–ವಿದ್ಯುನ್ಮಾನ ಮತ್ತು ದ್ವಿ–ವಿದ್ಯುನ್ಮಾನ ಟೆಂಡರ್ ಪದ್ಧತಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp) ಮುಖಾಂತರ ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್‌ನ ಸಂಪೂರ್ಣ ವಿವರಗಳಿಗಾಗಿ / ದಾಖಲೆಗಳಿಗಾಗಿ ಅಂತರ್‌ಜಾಲ ವಿಳಾಸ http://www.kppp.karnataka.gov.in ದಲ್ಲಿ ದಿನಾಂಕ: 18–05–2026 ರಿಂದ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ವಿಭಾಗ ಕಚೇರಿಗೆ ಕಚೇರಿ ವೇಳೆಯಲ್ಲಿ ಭೇಟಿ ನೀಡಿ ಪಡೆಯಬಹುದು.

Sl.No	Indent No	Category
1	DMA/2026-27/OW/WORK_INDENT57801	Others
2	DMA/2026-27/OW/WORK_INDENT57802	Others
3	DMA/2026-27/OW/WORK_INDENT57803	Others
4	DMA/2026-27/OW/WORK_INDENT57805	Others
5	DMA/2026-27/OW/WORK_INDENT57806	CAT-II(A)
6	DMA/2026-27/OW/WORK_INDENT57807	Others
7	DMA/2026-27/OW/WORK_INDENT57808	SC
8	DMA/2026-27/OW/WORK_INDENT57839	Others
9	DMA/2025-26/RD/WORK_INDENT55084	Others
10	DMA/2024-25/OW/WORK_INDENT37827/CALL-5	Others
11	DMA/2026-27/OW/WORK_INDENT57840	Others
12	DMA/2026-27/IND6272	Others
13	DMA/2024-25/RD/WORK_INDENT31334/CALL-4	Others
14	DMA/2026-27/OW/WORK_INDENT57838	Others
15	DMA/2025-26/OW/WORK_INDENT55087	CAT-II(A)
16	DMA/2025-26/RD/WORK_INDENT56159	Others
17	DMA/2025-26/RD/WORK_INDENT54919	Others
18	DMA/2026-27/BD/WORK_INDENT58027	Others
19	DMA/2025-26/OW/WORK_INDENT54166	Others
20	DMA/2026-27/IND6264	Others
21	DMA/2026-27/IND6267	Others

ಕಾಮಗಾರಿಗಳ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 04–06–2026 ರಂದು 16.00.00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05–06–2026 ರಂದು ಅಪರಾಹ್ನ 16.30.00 ಗಂಟೆಯ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 06–06–2026 ರಂದು ತೆರೆಯಲಾಗುವುದು ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25–05–2026 ರಂದು 16.00.00 ಗಂಟೆವರೆಗೆ, ಸಂಭಾವ್ಯ ಬಿಡ್‌ದಾರರ ಪೂರ್ವಭಾವಿ ಸಭೆಯನ್ನು ದಿನಾಂಕ: 22–05–2026 ರಂದು 11.00.00 ಗಂಟೆಗೆ, ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹು.ಧಾ.ಮ.ಪಾ ಸರ್. ಸಿದ್ದಪ್ಪ ಕಂಬಳಿ ರಸ್ತೆ, ಹುಬ್ಬಳ್ಳಿ ಇವರ ಕಚೇರಿಯಲ್ಲಿ ನಡೆಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/176/ ಮಣಿಪಾಲ್/2026–27

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.

ಐ.ಎಸ್.ಆರ್ ರಸ್ತೆ, ಚಿತ್ತವಾಡ್ಗಿ ಹೊಸಪೇಟೆ–583 201,
ದೂರವಾಣಿ ಸಂಖ್ಯೆ: 08394–227749
E-mail:hospethuda@gmail.com
ಸಂಖ್ಯೆ:ಹೊನಅಪ್ರಾ/ಎ1/ಮ.ಯೋ(ಪ–2)/2026–27 ದಿನಾಂಕ:14.05.2026.

CORRIGENDUM

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧ್ಯಾದೇಶ 1999–2000 ರ ಪ್ರಕಾರ ಕಾಯ್ದೆ 2000 ನಿಯಮದಂತೆ, ಹೊಸಪೇಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಮಹಾಯೋಜನೆ(ಪ–2) ತಯಾರಿಸುವ ಸಂಬಂಧ ಇ–ಪ್ರಕ್ಯೂರ್ಮೆಂಟ್ ಮುಖಾಂತರ ಇಂಡೆಂಟ್ ಸಂ.HUDA/2025-26/SE0009/CALL-2 ದಿನಾಂಕ 28.4.2026 ರಂದು ಟೆಂಡರ್ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಯ ಟೆಂಡರ್ ದಸ್ತಾವೇಜ್‌ನಲ್ಲಿ ಕೆಳಕಂಡ ನ್ಯೂನತೆಗಳಿದ್ದು, ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

ಕ್ರ.ಸಂ	ನ್ಯೂನತೆ	ಓದಿಕೊಳ್ಳುವುದು
1.	254.24(Revised 432.14) Sq.m	254.55 ಚ.ಕಿ.ಮೀ
2.	ಇ.ಎಂ.ಡಿ.ಮೊತ್ತ ರೂ 2,47,500/–	ಇ.ಎಂ.ಡಿ.ಮೊತ್ತ ರೂ 2,40,000/–
3.	ಹಿಂದಿನ ಬಿಡ್ ದಸ್ತಾವೇಜ್‌ನಲ್ಲಿ HUDA/2025-26/SE0015/CALL-2	HUDA/2025-26/SE0009/CALL-2

ಸಹಿ/–ಆಯುಕ್ತರು, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/78

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಚೇರಿ ನಂ.2
ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್. ತಾ॥ ಗಂಗಾವತಿ, ಜಿ॥ ಕೊಪ್ಪಳ.
ಸಂ:ಕಾನಿಅ.2/ಕನೀನಿನಿ/ತಾಂಶಾ/ಸಇ–4/ಟೆಂಡರ್/2026–27/193 ದಿನಾಂಕ:13–05–2026

ಅಲ್ಪಾವಧಿ–ಟೆಂಡರ್ ಪ್ರಕಟಣೆ ಕಾಲ–2

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್ ಕಛೇರಿಯಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ https://kppp.karnataka.gov.in ಮುಖಾಂತರ ಈ ವಿಭಾಗದಡಿ ಬರುವ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 2701 ರಡಿಯಲ್ಲಿ ಕಾಲುವೆ ದುರಸ್ತಿಗಾಗಿ 21 ಕಾಮಗಾರಿಗಳನ್ನು ಶೇಕಡವಾರು ಟೆಂಡರ್ ಎರಡು ಲಕೋಟೆಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ಟೆಂಡರಿಗಿಟ್ಟ ಮೊತ್ತ, ಇಎಮ್‌ಡಿ ಇತರೆ ಹೆಚ್ಚಿನ ವಿವರಗಳನ್ನು https://kppp.karnataka.gov.in ಜಾಲದಿಂದ ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25–05–2026 ರ ಸಾಯಂಕಾಲ 4:30 ಗಂಟೆಯವರೆಗೆ ಮತ್ತು ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: 26–05–2026 ರಂದು ಸಾಯಂಕಾಲ 5:30 ಗಂಟೆಗೆ ಮತ್ತು ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ: 29–05–2026 ರಂದು ಬೆಳಿಗ್ಗೆ 10:30 ಗಂಟೆಗೆ ಅಥವಾ ತಾಂತ್ರಿಕ್ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದೆಂದು ನಿಗದಿಪಡಿಸಲಾಗಿರುತ್ತದೆ. ಟೆಂಡರ್‌ನ್ನು ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಗೊಳಿಸುವ ಅಧಿಕಾರವಿರುತ್ತದೆ. ಇತರೆ ಮಾಹಿತಿಗಳನ್ನು ಸದರಿ ಕಚೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು
ಕನೀನಿನಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್.
ತಾ॥ಗಂಗಾವತಿ, ಜಿ॥ಕೊಪ್ಪಳ.

ವಾ.ಸಾ.ಸಂ.ಇ/ಕೊಪ್ಪಳ/85/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಧಾರವಾಡ

ಕಾರ್ಯನಿರ್ವಾಹಕ ಇಂಜನೀಯರರು, ಪಂಚಾಯತ್ ರಾಜ್ ಇಂಜನೀಯಿರಿಂಗ್ ವಿಭಾಗ, ಧಾರವಾಡ.
ಕ್ರ.ಸಂ.ಪಂ.ರಾ.ಇಂವಿ.ಧಾ/ಸ.ಇಂ.–2/2026–2027/418 ದಿನಾಂಕ: 14.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ – 01/2026–27 (ಇ–ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: No.FD 876 Exp-12/2017, Bangalore, date: 15-09-2017 ರನ್ವಯ ವಿವಿಧ ಯೋಜನೆಯಡಿ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಲೋಕೋಪಯೋಗಿ/ ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ KW-1, KW-2 ಮತ್ತು KW-3 ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ–ಪ್ರೊಕ್ಯೂರಮೆಂಟ್‌ನ https://kppp.karnataka.gov.in/ ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers: General : 26430, 26529, 26530, 26433, 26434, 26435, 26526, 26438, 26445,26420, 24812, 24801, 25384, 25388, 25375, 25386, 26253, 26335, 24379/Call-2, 24430/Call-2, 18445/Call-4, 26428, 26570.
CAT-1 : 26436,
CAT-II (A) : 26432, 26525, 26528, 25380, 25382, 25377, 26062,
SC Category : 26531, 26427, 25381, 24112,
ST Category : 24348, 26563

ಕ್ಯಾಲೆಂಡರ್ ಆಫ್ ಇವೆಂಟ್ಸ್:
1) ಟೆಂಡರ್ ದಾಖಲೆಗಳನ್ನು ದಿನಾಂಕ: 18–05–2026 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: 26–05–2026 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.
2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27–05–2026 ರ ಸಾಯಂಕಾಲ 4.30 ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.
3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 01–06–2026 ರ ಬೆಳಿಗ್ಗೆ 11.00 ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/ EMD ಮೊತ್ತ ಇತ್ಯಾದಿ ವಿವರಗಳಿಗೆ https://kppp.karnataka.gov.in/ ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ಬಿ.ಎಸ್.ಗೌಡರ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.

ವಾ.ಸಾ.ಸಂ.ಇ/ಧಾರವಾಡ/178/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರಕಾರ (ಕರ್ನಾಟಕ ಮೃಗಾಲಯ ಪ್ರಾಧಿಕಾರ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ / ಉಪ ನಿರ್ದೇಶಕರವರ ಕಾರ್ಯಾಲಯ ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಕಲಬುರಗಿ

ಕಚೇರಿ ದೂರವಾಣಿ ಸಂಖ್ಯೆ : 08472-256601, e-mail: dcf_tgulbarga@yahoo.co.in
ಸಂಖ್ಯೆ :ಉನಿ/ಮ.ಉ.ವ.ಮ.ಕಿ.ಮೃ./ಹೊ.ಗು.ನೌ/ಟೆಂಡರ್/ಸಿಆರ್–2026–27 ದಿನಾಂಕ : 14.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

(Karnataka Public Procurement Portal ನಡಿಯಲ್ಲಿ ಮಾತ್ರ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರವರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಮಾನವ ಸಂಪನ್ಮೂಲ ಒದಗಿಸುವ ಟೆಂಡರನ್ನು Karnataka Public Procurement Portal ನಡಿಯಲ್ಲಿ ಆಹ್ವಾನಿಸಲಾಗಿದ್ದು, ಸದರಿ ವಿವರ ಈ ಕೆಳಗಿನಂತಿವೆ.

ಕ್ರ.ಸಂ. ವಿವಿರ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರವರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ರವರಿಂದ ಇ–ಟೆಂಡರ್ ಅಹ್ವಾನಿಸಲಾಗಿದೆ. 1) ಕಾಮಗಾರಿ : ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಮಾನವ ಸಂಪನ್ಮೂಲ ಒದಗಿಸುವ ಟೆಂಡರ್ New Zoological park Madbool Kalaburagi, 2) ಟೆಂಡರ್‌ಗಿಟ್ಟ ಮೊತ್ತ : ಕನಿಷ್ಠ : 4.750/– ಗರಿಷ್ಠ : 68.093/– 3) ಲೆಕ್ಕ ಶೀರ್ಷಿಕೆ : ZAK, 4) ಅರ್ಹತೆ : As per tender documents 5) ಟೆಂಡರಿಗೆ ಸಂಬಂಧಿಸಿದಂತೆ ಪ್ರಶ್ನೆಗಳು ಮತ್ತು ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ : 22.05.2026 ಸಾಯಂಕಾಲ 4.00 ಗಂಟೆಗೆ 6) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲಸ್ಲಿಸಲು ಕೊನೆಯ ದಿನಾಂಕ : 29.05.2026 ಸಾಯಂಕಾಲ 4.00 ಗಂಟೆಗೆ, 7) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 30.05.2026 ರಂದು ಸಾಯಂಕಾಲ 4.30 ಗಂಟೆಗೆ, 8) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 01.06.2026 ರಂದು ಬೆಳಿಗ್ಗೆ 11.00 ಗಂಟೆಗೆ 9) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ, ಎಸ್.ಬಿ. ಟೆಂಪಲ್ ರೋಡ್ ಕಲಬುರಗಿ. ಅಂತರಜಾಲ ತಾಣದ ವಿಳಾಸ : http://kppp.karnataka.gov.in

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/
ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು
ಕಿರು ಮೃಗಾಲಯ, ಕಲಬುರಗಿ

ವಾ.ಸಾ.ಸಂ.ಇ./ಕಲಬುರಗಿ/125/ ದೇಶಪಾಂಡೆ ಪಬ್ಲಿಸಿಟಿ/2026–27

ಕರ್ನಾಟಕ ಸರಕಾರ

ತೋಟಗಾರಿಕೆ ಜಂಟಿ ನಿರ್ದೇಶಕರು, ಜಿಲ್ಲಾಪಂಚಾಯತ, ಜಿಲ್ಲಾ ಆಡಳಿತ ಭವನ, ನವನಗರ , ಬಾಗಲಕೋಟೆ

E-mail: jdhzpbgk@gmail.com Phone No: 9448999233
ಸಂ: ತೋಜಂನಿ/ಜಿಪಂ/ಬಾ/ವಿನಿ–1/e-proc/2026–27 ದಿನಾಂಕ: 15.05.2026

ಪತ್ರಿಕಾ ಪ್ರಕಟಣೆ

ತೋಟಗಾರಿಕೆ ಜಂಟಿ ನಿರ್ದೇಶಕರು, (ಜಿ.ಪಂ) ಬಾಗಲಕೋಟೆ ಇವರು ಕೆಪಿಪಿಪಿ ಪೋರ್ಟಲ್ ಮೂಲಕ ಅರ್ಹ ಮಾನವ ಸಂಪನ್ಮೂಲ ಸೇವೆ ಪೂರೈಸುವ ಸರ್ಕಾರ/ಸರ್ಕಾರೇತರ ಏಜೆನ್ಸಿ/ಸಂಸ್ಥೆಗಳಿಂದ ರೂ.8.93 ಲಕ್ಷ ಒಂದು ವರ್ಷದ ಅವಧಿಗೆ ಬಾಹ್ಯ ಮೂಲದಿಂದ ಗಣಕಯಂತ್ರ ನಿರ್ವಾಹಕರು, ವಾಹನ ಚಾಲಕ, ಹಾಗೂ ಅಟೆಂಡರ್ ಹುದ್ದೆಗಳ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆದುಕೊಳ್ಳಲು ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದ್ದು (ಟೆಂಡರ್ ಸಂಖ್ಯೆ: KSHD/2026-27/SEO561), ಅಲ್ಪಾವಧಿ ಇ–ಟೆಂಡರ್ ಮೂಲಕ ಬಿಡ್‌ದಾರರು ಅರ್ಜಿಗಳನ್ನು ಅಪಲೋಡ್ ಮಾಡಲು ದಿನಾಂಕ: 26–05–2026 ಮಧ್ಯಾಹ್ನ 12.00 ಗಂಟೆವರೆಗೆ ಕಾಲಾವಕಾಶವಿದ್ದು, ಹೆಚ್ಚಿನ ವಿವರಗಳನ್ನು https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆಯಬಹುದು.

ತೋಟಗಾರಿಕೆ ಜಂಟಿ ನಿರ್ದೇಶಕರು
(ಜಿಪಂ) ಬಾಗಲಕೋಟೆ

ವಾ.ಸಾ.ಸಂ.ಇ/ಬಾಗಲಕೋಟೆ/44/ದೇಶಪಾಂಡೆಪಬ್ಲಿಸಿಟಿ/2026–27

ಮಂಗಳೂರು ಮಹಾನಗರಪಾಲಿಕೆ

DMA/2026-27/WORK INDENT NO.58145, 58107 ದಿನಾಂಕ: 14-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: DMA/2026-27/WORK INDENT NO.58145, 58107 ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. 2 ಕಾಮಗಾರಿಗಳ ಒಟ್ಟು ಮೊತ್ತ ರೂಪಾಯಿ 70.80 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25–05–2026 ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಂಗಳೂರು ಮಹಾನಗರಪಾಲಿಕೆ

DIPR/DK/KSMCA/209/26-27 dt: 15.05.2026

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ರಾಮನಗರ ಉಪ ವಿಭಾಗ, ರಾಮನಗರ.
ಸಂಖ್ಯೆ : ಸ.ಅ.ಸಂ./ರಾ.ಉ.ವಿ./ಇ–ಟೆಂಡರ್/ಸಿ.ಆರ್.–02/2026–27
ದಿನಾಂಕ : 14–05–2026

ಇ-ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ಮತ್ತು ನೋಂದಾಯಿತ ಅರ್ಹ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ರಾಮನಗರ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ 2025–26 ನೇ ಸಾಲಿನಲ್ಲಿ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಲೆಕ್ಕ ಶೀರ್ಷಿಕೆ : 2406-04-103-1-01-CAMPA CA-140-Minor Works ರಡಿ ರಾಮನಗರ ವಿಭಾಗದ ವ್ಯಾಪ್ತಿಯ ಚನ್ನಪಟ್ಟಣ ಮತ್ತು ಸಾತನೂರು ವಲಯ ವ್ಯಾಪ್ತಿಯಲ್ಲಿ Excavation of Elephant Proof Trenches ಕಾಮಗಾರಿಯನ್ನು ಕೈಗೊಳ್ಳಲು ಅರಣ್ಯ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.karnataka.gov.in ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ : 29–05–2026 ರ ಅಪರಾಹ್ನ 4.00 ಗಂಟೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 30–05–2026 ರ ಅಪರಾಹ್ನ 4.30 ಗಂಟೆಗೆ, ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 03–06–2026 ರ ಸಂಜೆ 5.00 ಗಂಟೆಗೆ, ಒಂದು ವೇಳೆ ದಿನಾಂಕ : 29–05–2026 ರಂದು ಇ–ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಎರಡನೇ ಬಾರಿ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ಮರು ಸಲ್ಲಿಸಲು ಕೊನೆಯ ದಿನಾಂಕ : 15–06–2026 ರ ಅಪರಾಹ್ನ 4.00 ಗಂಟೆಯ ವರೆಗೆ ಭಾಗವಹಿಸಬಹುದಾಗಿದೆ. (ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸುವುದಿಲ್ಲ). ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16–06–2026 ರ ಸಂಜೆ 4.30 ಗಂಟೆಗೆ ತೆರೆಯಲಾಗವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : 19–06–2026 ರ ಸಂಜೆ 5.00 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು.

ಆಸಕ್ತಿಯುಳ್ಳವರು ಕಛೇರಿ ವೇಳೆಯಲ್ಲಿ ಮತ್ತು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್‌ನ ಅಗತ್ಯ ಮಾಹಿತಿಗಳನ್ನು ಪಡೆದುಕೊಂಡು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ಉಪ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/54/ಮಣಿಪಾಲ್/2026–27

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ

ದೂರವಾಣಿ: 08384–226381 ಇ–ಮೇಲ್: ee_zpedsirsi@yahoo.co.in
ಕ್ರ.ಸಂ: ಪಂ.ರಾ.ಇಂ:ವಿಶಿ:ಉಗ್ರಾಣ/ಯಂತ್ರೋಪಕರಣ/ಟೆಂಡರ್–2/2026–27/287 ದಿನಾಂಕ: 14–05–2026

ಅಲ್ಪಾವಧಿ ಟೆಂಡರ ಪ್ರಕಟಣೆ–2/2026–27

ವಿಷಯ: 2024–25 ನೇ ಸಾಲಿನ ಮಾನ್ಯ ಯಲ್ಲಾಪುರ ವಿಧಾನ ಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಶಿರಸಿ ತಾ. ಬನವಾಸಿ ಗ್ರಾ. ಪಂ. ಬನವಾಸಿ ಗ್ರಾಮದ ಪದವಿಪೂರ್ವ ಕಾಲೇಜಿಗೆ ಕಂಪ್ಯೂಟರ ಹಾಗೂ ಪಿಠೋಪಕರಣ ಖರೀದಿ ಕುರಿತು.

ಮೇಲಿನ ವಿಷಯಕ್ಕೆ ಅನುಸಾರವಾಗಿ ಲೆಕ್ಕಶೀರ್ಷಿಕೆ 2024–25 ನೇ ಸಾಲಿನ ಮಾನ್ಯ ಯಲ್ಲಾಪುರ ವಿಧಾನ ಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ವ್ಯಾಪ್ತಿಯ ಶಿರಸಿ ತಾ. ಬನವಾಸಿ ಗ್ರಾ. ಪಂ. ಬನವಾಸಿ ಗ್ರಾಮದ ಪದವಿಪೂರ್ವ ಕಾಲೇಜಿಗೆ ಕಂಪ್ಯೂಟರ ಹಾಗೂ ಪಿಠೋಪಕರಣ ಖರೀದಿ ಬಗ್ಗೆ ದರವನ್ನು ಎಲ್ಲಾ ದಾಖಲೆ ಪ್ರತಿಯೊಂದಿಗೆ ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ "ಶಿರಸಿ ತಾ. ಬನವಾಸಿ ಗ್ರಾ. ಪಂ. ಬನವಾಸಿ ಗ್ರಾಮದ ಪದವಿಪೂರ್ವ ಕಾಲೇಜಿಗೆ ಕಂಪ್ಯೂಟರ ಹಾಗೂ ಪಿಠೋಪಕರಣ ಖರೀದಿ ಬಗ್ಗೆ. ಎಂದು ನಮೂದಿಸಿ ಈ ಕಚೇರಿಗೆ ದಿನಾಂಕ: 22–05–2026 ಸಾಯಂಕಾಲ 5.00 ಗಂಟೆಯೊಳಗೆ ಭರ್ತಿ ಮಾಡಿದ ಟೆಂಡರ್ ಸಲ್ಲಿಸುವುದು. ಟೆಂಡರ್ ಸಲ್ಲಿಸುವವರು ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಅಥವಾ ನೋಟಿಸ್ ಬೋರ್ಡ್‌ದಿಂದ ಪಡೆಯಬಹುದು. ದೂರವಾಣಿ ಸಂಖ್ಯೆ: 08384–226381. ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: ಲೆಕ್ಕಶೀರ್ಷಿಕೆ: 2024–25 ನೇ ಸಾಲಿನ ಮಾನ್ಯ ಯಲ್ಲಾಪುರ ವಿಧಾನ ಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ (1) ಶಿರಸಿ ತಾ. ಬನವಾಸಿ ಗ್ರಾ. ಪಂ. ಬನವಾಸಿ ಗ್ರಾಮದ ಪದವಿಪೂರ್ವ ಕಾಲೇಜಿಗೆ ಕಂಪ್ಯೂಟರ ಹಾಗೂ ಪಿಠೋಪಕರಣ ಖರೀದಿ, ಅಂದಾಜು ಮೊತ್ತ: 2.00 ಲಕ್ಷ, ನಿಗದಿಪಡಿಸಿದ ಕಾಲಮಿತಿ/ರಜಾ ದಿನ ಹೊರತು ಪಡಿಸಿ: 8 ದಿನಗಳು, ಟೆಂಡರ್ ಫಾರ್ಮ ಮೊತ್ತ (ಡಿ.ಡಿ. ಮುಖಾಂತರ ಮಾತ್ರ): 500.00, ಮುಂಗಡ ಠೇವಣಿ (ಡಿ.ಡಿ. ಮುಖಾಂತರ ಮಾತ್ರ): 5000.00

(1) ಟೆಂಡರ್ ಫಾರ್ಮಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 19–05–2026 ಸಾಯಂಕಾಲ 4.00 ಗಂಟೆವರೆಗೆ (ಡಿ.ಡಿ. ಮುಖಾಂತರ ರೂ. 500.00 ಅರ್ಜಿ ಫಾರ್ಮ ಹಣ ಹಿಂದಿರುಗಿಸಲಾಗುವುದಿಲ್ಲ.) (ರಜಾ ದಿನಗಳನ್ನು ಹೊರತುಪಡಿಸಿ) (2) ಟೆಂಡರ್ ಫಾರ್ಮಗಳನ್ನು ಈ ಕಛೇರಿಯಿಂದ ವಿತರಿಸುವ ಕೊನೆಯ ದಿನಾಂಕ: 20–05–2026 ರಂದು ಮುಂಜಾನೆ 11.00 ರಿಂದ ದಿ: 22–05–2026 ರ ಮುಂಜಾನೆ 11.00 ಗಂಟೆವರೆಗೆ (ರಜಾ ದಿನಗಳನ್ನು ಹೊರತುಪಡಿಸಿ) (3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 22–05–2026 ಸಾಯಂಕಾಲ 5.00 ಗಂಟೆವರೆಗೆ (ರಜಾ ದಿನಗಳನ್ನು ಹೊರತುಪಡಿಸಿ) (4) ಟೆಂಡರ್ ತೆರೆಯುವ ದಿನಾಂಕ: 22–05–2026 ಸಾಯಂಕಾಲ 5.00 ಗಂಟೆ ನಂತರ (ಸಾಧ್ಯವಾದಲ್ಲಿ)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ.
ಉತ್ತರ ಕನ್ನಡ ಜಿಲ್ಲೆ.

DIPR:KWR:KSMCA/136/26-27 dt 15.05.2026

ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್

ನೋಂದಾಯಿತ ಕಚೇರಿ: ಟೈಮ್ಸ್ ಸ್ಕ್ವೇರ್, ಯುನಿಟ್ ನಂ. 3ಬಿ, 2ನೇ ಮಹಡಿ, ಮಿತ್ತಲ್ ಇಂಡಸ್ಟ್ರಿಯಲ್ ಎಸ್ಟೇಟ್ ಎದುರು, ಅಂಧೇರಿ– ಕುರ್ಲಾ ರಸ್ತೆ, ಮರೋಲ್ ನಾಕಾ, ಅಂಧೇರಿ ಪೂರ್ವ, ಮುಂಬೈ– 400059./ ಶಾಖಾ ಕಚೇರಿ: 2/4, ತಿರೂರು ಪಾರ್ಕ್, ಮೋಡಿ ಹಾಸ್ಪೆಲ್ ಪಕ್ಕ, ವಿದ್ಯಾನಗರ, ಹುಬ್ಬಳ್ಳಿ– 580031

ನಿಯಮ 8(1)ರ ಅಡಿಯಲ್ಲಿ ಸ್ವಾಧೀನ ನೋಟಿಸ್

ಈ ಕೆಳಗೆ ಸಹಿ ಮಾಡಿರುವ ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ & ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002– ಇನ್ನು ಮುಂದೆ ಕಾಯ್ದೆ ಎಂದು ಕರೆಯಲಾಗುವುದು– ಮತ್ತು ಸೆಕ್ಷನ್ 13(12) ರ ಅಡಿಯಲ್ಲಿ ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್ಸ್–2002ರ ನಿಯಮಾವಳಿ 3ರ ಅನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಂ (ಬಿ) ನಲ್ಲಿ ಹೆಸರಿಸಿರುವ ಸಾಲಗಾರರು ಮತ್ತ ಈ ಕೆಳಗೆ ಕಲಂ (ಸಿ) ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಗಳಂದು ಮತ್ತು ಕಲಂ (ಡಿ) ಅಡಿಯಲ್ಲಿ ಸೂಚಿಸಿರುವ ಬಾಕಿ ಮೊತ್ತವನ್ನು ಈ ನೋಟಿಸ್/ಗಳನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಪಾವತಿಸುವಂತೆ ಡಿಮ್ಯಾಂಡ್ ನೋಟಿಸ್ ನೀಡಿ ಗಮನ ಸೆಳೆಯಲಾಗಿತ್ತು.

ಸಾಲಗಾರರು ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಸಾಮಾನ್ಯವಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕಲಂ (ಇ) ದಿಯಲ್ಲಿ ಈ ಕೆಳಗೆ ಹೆಸರಿಸಿದ ಆಯಾ ದಿನಾಂಕದಂದು ಅಂದರೆ ಕಲಂ (ಎಫ್)ನಲ್ಲಿ ಹೆಸರಿಸಿದ ದಿನಾಂಕದಂದು ಕಂಪನಿಗೆ ಅಡಮಾನ ಮಾಡಲಾದ ಸ್ಥಿರಾಸ್ತಿಗಳನ್ನು, ಕೆಳಗೆ ಸಹಿ ಮಾಡಿದವರು ಮೇಲೆ ಹೇಳಿದ ಕಾಯ್ದೆಯ ಸೆಕ್ಷನ್ 13(4) ಮತ್ತು ಅದರಡಿ ರೂಪಿಸಲಾದ ನಿಯಮಾವಳಿಯ ನಿಯಮ 3 ರ ಅನ್ವಯ ವಶಕ್ಕೆ ಪಡೆದಿರುತ್ತಾರೆ.

ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಜನಸಾಮಾನ್ಯರಿಗೆ ಸಾಮಾನ್ಯವಾಗಿ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಈ ಕೆಳಗೆ ಕಲಂ (ಇ) ನಲ್ಲಿ ಹೆಸರಿಸಿರುವ ಈ ಆಸ್ತಿಯ ಸಂಬಂಧ ಯಾವುದೇ ವಹಿವಾಟು ನಡೆಸಬಾರದು ಹಾಗೂ ಈ ಆಸ್ತಿಗೆ ಸಂಬಂಧಿಸಿದ ಯಾವುದೇ ವ್ಯವಹಾರವು ಕಲಂ (ಡಿ) ನಲ್ಲಿ ಹೆಸರಿಸಿರುವ ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್‌ನ ಮೊತ್ತ, ಬಡ್ಡಿ ಹಾಗೂ ಇತರ ಶುಲ್ಕಗಳಿಗೆ ಅನುಸಾರವಾಗಿರುತ್ತದೆ. ಕಾಯ್ದೆಯ ಸೆಕ್ಷನ್ 13(8) ಅನ್ವಯ ವೆಚ್ಚಗಳು, ಶುಲ್ಕಗಳು ಮತ್ತು ಖರ್ಚುಗಳ ಸಹಿತ ಮಾರಾಟ ಅಧಿಸೂಚನೆಗಿಂತ ಮುನ್ನ ಸಂಪೂರ್ಣ ಮೊತ್ತವನ್ನು ಪಾವತಿಸಿ ಭದ್ರತಾ ಆಸ್ತಿಗಳನ್ನು ಮರು ಸ್ವಾಧೀನಪಡಿಸಿಕೊಳ್ಳಬಹುದಾಗಿದೆ.

ಕ್ರಮ ಸಂಖ್ಯೆ (ಎ)	ಸಾಲಗಾರರ ಹೆಸರು ಮತ್ತು ವಿಳಾಸ & ಸಾಲ ಖಾತೆ ಸಂಖ್ಯೆ (ಬಿ)	ಡಿಮ್ಯಾಂಡ್ ನೋಟಿಸ್ ದಿನಾಂಕ (ಸಿ)	ಬಾಕಿ ಇರುವ ಮೊತ್ತ (ಡಿ)	ಸ್ಥಿರಾಸ್ತಿಯ ವಿವರಣೆ (ಇ)	ಸ್ವಾಧೀನ ದಿನಾಂಕ (ಎಫ್)
1.	ಸಾಲ ಖಾತೆ ಸಂಖ್ಯೆಗಳು ವಿಟಿ0002853 1.ಶ್ರೀ ಪ್ರೀತಮ್ ಕಿರಾಣಿ ಅಂಗಡಿ (ಸಾಲಗಾರರು) 2. ಪೂಜಾ ನಿಂಗಪ್ಪ ನಿಂಗಪ್ಪ ಡಾಂಗೆ, ನಿಂಗಪ್ಪ ಕಲ್ಲಪ್ಪ ದಾಂಡೆ ಮತ್ತು ಪಾರ್ವತಿ ಕಲ್ಲಪ್ಪ ಡಾಂಗೆ (ಸಹ ಸಾಲಗಾರರು) ವಿಳಾಸ: ಮಲ್ವಾಡಿ ಶಿವಾಜಿ ಗಲ್ಲಿ, ಹಳಿಯಾಳ, ಕರ್ನಾಟಕ, ಉತ್ತರ ಕನ್ನಡ, ಕರ್ನಾಟಕ–581329 ಮತ್ತು ವಾಸದ ವಿಳಾಸ: # 119, ಮಲ್ವಾಡಿ, ಮಲ್ವಾಡಿ, ವಿಟಿಸಿ: ಮಲ್ವಾಡಿ, ಅಂಚೆ ಚಿಬ್ಬಲಗೇರಿ, ಉಪಜಿಲ್ಲೆ: ಹಳಿಯಾಳ, ಉತ್ತರಕನ್ನಡ, ಕರ್ನಾಟಕ– 581329	08-07-2025	ದಿನಾಂಕ: 08.07.2025ರಂತೆ ಇದ್ದಂತೆ ರೂ. 15,94,106.85/-	ನಿರ್ಮಾಣವಾದ ಕಟ್ಟಡಗಳ ಸಹಿತ ವಸತಿ ಆಸ್ತಿಯಲ್ಲಿರುವ ಎಲ್ಲ ತುಂಡು ಮತ್ತು ತುಣುಕುಗಳು, ವಿಸ್ತೀರ್ಣ: 148.20 ಚದರ ಮೀಟರ್, ಮನೆ ಸಂಖ್ಯೆ 1527003006400230, ವಿಳಾಸ: ಮಲ್ವಾಡಿ ಶಿವಾಜಿ ಗಲ್ಲಿ, ಅಂಚೆ ಹಳಿಯಾಳ, ಚಿಬ್ಬಲಗೇರಿ– 581329 ಆಸ್ತಿ ಸಂಖ್ಯೆ 182 ಮತ್ತು ವಿಳಾಸ: ಮಲ್ವಾಡಿ ಗ್ರಾಮ, ಮುರ್ಕವಾಡ ಹೋಬಳಿ, ಹಳಿಯಾಳ ತಾಲೂಕು, ಉತ್ತರಕನ್ನಡ– 581329	14.05.2026 ಪ್ರಕಾರ

ದಿನಾಂಕ: 16/05/2026 ಸ್ಥಳ: ಉತ್ತರ ಕನ್ನಡ

ಅಧಿಕೃತ ಅಧಿಕಾರಿ ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಲಬುರಗಿ ಶಿಶು ಅಭಿವೃದ್ಧಿ ಯೋಜನೆ ಆಳಂದ

ಸಂಖ್ಯೆ: ಶಿಅಯೋ/ಐಸಿಡಿಯಸ್.ಬಾಹ್ಯ/ಟೆಂಡರ್/2026–27 ದಿನಾಂಕ : 05–05–2026

: ಸಂಕ್ಷಿಪ್ತ ಪ್ರಕಟಣೆ :

ವಿಷಯ: 2026–27ನೇ ಸಾಲಿಗೆ ಆಳಂದ ಶಿಶು ಅಭಿವೃದ್ಧಿ ಯೋಜನಾ ಕಛೇರಿಗೆ ಐ.ಸಿ.ಡಿ.ಎಸ್ ಯೋಜನೆಯಡಿ 01 ಜವಾನ ಹುದ್ದೆಗಳ ಸೇವೆ ಪಡೆಯಲು ಏಪ್ರೀಲ್–26 ರಿಂದ ಮಾರ್ಚ್– 2027 ರವರೆಗೆ ಸೇವೆ ಒದಗಿಸಲು ದರಪಟ್ಟಿ ಅಹ್ವಾನಿಸುವ ಕುರಿತು.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆಳಂದ ಶಿಶು ಅಭಿವೃದ್ಧಿ ಯೋಜನೆ ಕಛೇರಿಗೆ ಐ.ಸಿ.ಡಿ.ಎಸ್ ಯೋಜನೆಯಡಿ 01 ಜವಾನ ಹುದ್ದೆಗಳ ಸೇವೆಯ ಅವಶ್ಯಕತೆ ಇದ್ದು, ಸ್ಥಳೀಯ ಸಂಸ್ಥೆಗಳಿಂದ ಸ್ಪರ್ಧಾತ್ಮಕ ದರಗಳು ಅಹ್ವಾನಿಸಲಾಗಿದೆ, ಆದ್ದರಿಂದ 01 ಜವಾನ ಹುದ್ದೆಗಳ ಸೇವೆ ಒದಗಿಸಲು ಇಚ್ಛೆಯುಳ್ಳ ಸರಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳು, ದಿನಾಂಕ:11–05–2026 ರಿಂದ ದಿನಾಂಕ:25–05–2026ರ, 15 ದಿನಗಳೊಳಗಾಗಿ, ಕಛೇರಿ ವೇಳೆಯಲ್ಲಿ ಸೀಲ್ ಮಾಡಿದ ದರಪಟ್ಟಿಗಳನ್ನು ಸೇವಾ ಶುಲ್ಕ ವೆಚ್ಚವನ್ನು ಒಳಗೊಂಡಂತೆ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಗೆ ತಲಪುವಂತೆ ಸಲ್ಲಿಸಲು ಸೂಚಿಸಲಾಗಿದೆ. ನಿಗದಿತ ದಿನಾಂಕದ ನಂತರ ಬಂದ ದರಪಟ್ಟಿಯನ್ನು ಸ್ವೀಕರಿಸಲಾಗುವುದಿಲ್ಲ.

ಸೇವೆಯ ವಿವರ: ಬಾಹ್ಯಮೂಲ ಸಿಬ್ಬಂದಿ ವಿವರ ಸೇವೆ ಒದಗಿಸಬೇಕಾದ ಹುದ್ದೆಗಳು : ಜವಾನ 01

ಷರತ್ತುಗಳು: 1. ಆಸಕ್ತಿಯುಳ್ಳ ಅರ್ಹ ಬಾಹ್ಯಮೂಲ ಸಿಬ್ಬಂದಿ ಒದಗಿಸುವ ಸಂಸ್ಥೆಯವರು ಅನುಬಂಧ(1) & (2) ಗಳೊಂದಿಗೆ ಸೂಕ್ತ ದಾಖಲಾತಿಗಳು ಹಾಗೂ ದರಪಟ್ಟಿಯನ್ನು ದಿನಾಂಕ: 25–05–2026ರ 1:00ಗಂಟೆಯ ಒಳಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಆಳಂದ ಕಾರ್ಯಾಲಯಕ್ಕೆ ಸಲ್ಲಿಸಬೇಕು. 2. ದರ ಪಟ್ಟಿ ಸಲ್ಲಿಸುವವರು ಸಲ್ಲಿಸಿರುವ ದರಪಟ್ಟಿಯಲ್ಲಿ ಮೂಲ ಗೌರವಧನ (ಕಾರ್ಮಿಕ ಇಲಾಖೆ ನಿಗದಿಪಡಿಸಿರುವ), EPF, ESI, ಸೇವಾ ಶುಲ್ಕವನ್ನು, ಮತ್ತು GST ಒಳಗೊಂಡಿರಬೇಕು ಸರಿಯಾದ ಮೊತ್ತ ನಮುದಿಸಿರಬೇಕು. 3. ಇ.ಎಂ.ಡಿ. ಮೊತ್ತ ರೂ 5000=00 ಠೇವಣಿ ಇಡತಕ್ಕದ್ದು, 4. ಸಲ್ಲಿಸಿದ ದರಪಟ್ಟಿಯನ್ನು ದಿನಾಂಕ:26–05–2026 ರಂದು 01:00 ಗಂಟೆಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಆಳಂದ ಹಾಜರಿರುವ ಟೆಂಡರ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. 5. ದರಪಟ್ಟಿ ಸಲ್ಲಿಸುವ ವಿಳಾಸ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಆಳಂದ, ಕೊಠಡಿ ಸಂಖ್ಯೆ: 07, ಮೊದಲನೇ ಮಹಡಿ, ತಾಲ್ಲೂಕಾ ಆಡಳಿತ ಸೌಧ, ಆಳಂದ ಪಿನ ಕೋಡ್:585302, 6. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಆಳಂದ ಇಲ್ಲಿಗೆ ಸಂಪರ್ಕಿಸಬಹುದು.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಆಳಂದ, ಜಿ. ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/118/ಕೆ.ಎಸ್.ಎಂ.ಸಿ.&ಎ/2026–27

ಭೋಜಶಾಲೆ-ಕಮಾಲ್ ಮೌಲಾ ಸಮುಚ್ಚಯ ಪ್ರಕರಣ

ಹಿಂದುಪಕ್ಷದ ವಾದಗಳಿಗೆ ನ್ಯಾಯಾಲಯ ಮನ್ನಣೆ

ಭೋಪಾಲ್: ಹಲವು ದಶಕಗಳಿಂದ ರಾಷ್ಟ್ರ ಮಟ್ಟದಲ್ಲಿ ವಿವಾದಕ್ಕೆ ಕಾರಣವಾಗಿದ್ದ ಮಧ್ಯಪ್ರದೇಶದ ಧಾರ ಜಿಲ್ಲೆಯ ಭೋಜಶಾಲೆ-ಕಮಾಲ್ ಮೌಲಾ ಸಮುಚ್ಚಯದ ಕುರಿತಾಗಿ ಮಧ್ಯಪ್ರದೇಶ ಹೈಕೋರ್ಟ್‌ನಲ್ಲಿ ಹಿಂದುಪಕ್ಷದ ಪರ ವಕೀಲ ವಿಷ್ಣು ಶಂಕರ್ ಜೈನ್, 'ಭೋಜಶಾಲೆ ಮೂಲತಃ ಸರಸ್ವತಿ ದೇವಾಲಯ. ಇಲ್ಲಿ ಪೂಜೆ ಸಲ್ಲಿಸುವ ಮೂಲಭೂತ ಹಕ್ಕು ಹಿಂದೂಗಳಿಗೆ ಮಾತ್ರ ಸೇರಿದೆ' ಎಂದು ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದರು. ಅವರು ಸಂಸ್ಕೃತ ಮತ್ತು ಪಾಲಿ ಭಾಷೆಯ ಶಾಸನಗಳು, ದೇವಾಲಯದ ಕಂಬಗಳು, ಮಂಟಪದ ಅವಶೇಷಗಳು, ಮೂರ್ತಿಗಳ ಭಾಗಗಳು ಸೇರಿದಂತೆ ಹಲವು ಪುರಾತತ್ವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ರಾಜಾ ಭೋಜನ ಕಾಲದಲ್ಲಿ ನಿರ್ಮಾಣಗೊಂಡ ಈ ವಿದ್ಯಾಕೇಂದ್ರವನ್ನು ನಂತರದ ಆಕ್ರಮಣಗಳ ಸಂದರ್ಭದಲ್ಲಿ ಧ್ವಂಸಗೊಳಿಸಿ ಅದರ ಅವಶೇಷಗಳನ್ನೇ ಬಳಸಿ ಮಸೀದಿ ರೂಪ ನೀಡಲಾಗಿದೆ ಎಂಬುದು ಹಿಂದೂ ಸಂಘಟನೆಗಳ ಪ್ರಮುಖ ವಾದವಾಗಿತ್ತು.

ಮುಸ್ಲಿಂಪಕ್ಷ ಎತ್ತಿದ್ದ ಪ್ರಶ್ನೆಗಳು: ಮುಸ್ಲಿಂ ಪಕ್ಷದ ಹಿರಿಯ ವಕೀಲ ಸಲ್ಮಾನ್ ಖುರ್ಷೀದ್, 'ಸರಸ್ವತಿ ದೇವಾಲಯವನ್ನು ಧ್ವಂಸ ಮಾಡಿ ಮಸೀದಿ ನಿರ್ಮಿಸಲಾಗಿದೆ ಎಂಬುದಕ್ಕೆ ನೇರ ಸಾಕ್ಷ್ಯ ಇಲ್ಲ' ಎಂದು ವಾದಿಸಿದ್ದರು. ಎಎಸ್‌ಐ ಸಮೀಕ್ಷೆಯ ಪ್ರಕ್ರಿಯೆಯ ಮೇಲೆಯೂ ಅವರು ಅನುಮಾನ ವ್ಯಕ್ತಪಡಿಸಿದ್ದರು. ಕಾರ್ಬನ್ ಡೇಟಿಂಗ್ ನಡೆಸದಿರುವುದು, ಪತ್ತೆಯಾದ ಪುರಾತತ್ವ ವಸ್ತುಗಳು ಅಸಾಮಾನ್ಯವಾಗಿ ಸ್ವಚ್ಛ ಸ್ಥಿತಿಯಲ್ಲಿ ದೊರೆತಿರುವುದು, ಸಮೀಕ್ಷೆ ವೇಳೆ ಕೆಲ ನಿರ್ಮಾಣ ಭಾಗಗಳನ್ನು ತೆರವುಗೊಳಿಸಿರುವುದು ಸೇರಿದಂತೆ ಹಲವು ಅಂಶಗಳನ್ನು ಅವರು ಪ್ರಶ್ನಿಸಿದ್ದರು. ಸರಸ್ವತಿ ಮೂರ್ತಿಗಳ ಅಸ್ತಿತ್ವವನ್ನೇ ದೇವಾಲಯದ ಅಂತಿಮ ಸಾಕ್ಷ್ಯವೆಂದು ಪರಿಗಣಿಸಲಾಗುವುದಿಲ್ಲ, ವಿದ್ಯಾಕೇಂದ್ರಗಳಲ್ಲಿಯೂ ಸರಸ್ವತಿ ಪ್ರತಿಮೆಗಳು ಸಾಮಾನ್ಯವಾಗಿವೆ ಎಂದೂ ಅವರು ವಾದಿಸಿದರು.

ರಾಜಾ ಭೋಜನ ಸಂಪರ್ಕವೇ ವಿವಾದದ ಕೇಂದ್ರಬಿಂದು

ಭೋಜಶಾಲೆ ಕುರಿತ ಹಿಂದೂಪಕ್ಷದ ಪ್ರಮುಖ ಆಧಾರ ರಾಜಾ ಭೋಜನ ಇತಿಹಾಸವಾಗಿದೆ. ಸುಮಾರು ಕ್ರಿ.ಶ. 1000ರಿಂದ 1055ರ ಅವಧಿಯಲ್ಲಿ ಆಡಳಿತ ನಡೆಸಿದ ಪರಮಾರ ರಾಜವಂಶದ ರಾಜಾ ಭೋಜರನ್ನು ಸಂಸ್ಕೃತ ವಿದ್ಯಾಭ್ಯಾಸ, ದೇವಾಲಯ ನಿರ್ಮಾಣ ಮತ್ತು ಜ್ಞಾನ ಪರಂಪರೆಯ ಮಹಾನ್ ಪೋಷಕರಾಗಿ ಪರಿಗಣಿಸಲಾಗುತ್ತದೆ. ಹಿಂದೂ ಸಂಘಟನೆಗಳ ಪ್ರಕಾರ ಭೋಜಶಾಲೆ ಕೇವಲ ದೇವಾಲಯವಾಗಿರಲಿಲ್ಲ, ಅದು ಸಂಸ್ಕೃತ ಅಧ್ಯಯನದ ಪ್ರಮುಖ ಪೀಠವಾಗಿತ್ತು. ವಾಗ್ದೇವಿ ಸರಸ್ವತಿಯ ಆರಾಧನೆ ಇಲ್ಲಿ ನಡೆಯುತ್ತಿತ್ತು ಎನ್ನುವುದು ಅವರ ವಾದ.



ಎಎಸ್‌ಐ ಸಮೀಕ್ಷೆ ಏನು ಹೇಳಿತ್ತು?

2024ರಲ್ಲಿ ಹೈಕೋರ್ಟ್ ಆದೇಶದ ಮೇರೆಗೆ ನಡೆದ ವೈಜ್ಞಾನಿಕ ಸಮೀಕ್ಷೆ ಈ ಪ್ರಕರಣದಲ್ಲಿ ನಿರ್ಣಾಯಕ ಹಂತವೆಂದು ಪರಿಗಣಿಸಲಾಯಿತು. ಸುಮಾರು 100 ದಿನಗಳ ಕಾಲ ನಡೆದ ಅಧ್ಯಯನದ ಬಳಿಕ 2,189 ಪುಟಗಳ ವರದಿಯನ್ನು ಎಎಸ್‌ಐ ನ್ಯಾಯಾಲಯಕ್ಕೆ ಸಲ್ಲಿಸಿತ್ತು. ಈ ಸಮೀಕ್ಷೆಯಲ್ಲಿ 1,700ಕ್ಕೂ ಹೆಚ್ಚು ಪುರಾತತ್ವ ವಸ್ತುಗಳು ಪತ್ತೆಯಾಗಿದ್ದವು. ಹಿಂದೂ ದೇವತೆಗಳ ಮೂರ್ತಿಗಳ ಅವಶೇಷಗಳು, 'ಶ್ರೀ ಸರಸ್ವತ್ಯೈ ನಮಃ' ಎಂಬ ಸಂಸ್ಕೃತ ಶಾಸನಗಳು, ದೇವಾಲಯ ಶೈಲಿಯ ಕಲ್ಲಿನ ಭಾಗಗಳು ಮತ್ತು ಹಿಂದಿನ ನಿರ್ಮಾಣದ ವಸ್ತುಗಳನ್ನು ಮರುಬಳಕೆ ಮಾಡಿರುವ ಗುರುತುಗಳು ಪತ್ತೆಯಾಗಿದ್ದವು. ಪರ್ಷಿಯನ್ ಹಾಗೂ ಅರೇಬಿಕ್ ಶಾಸನಗಳೂ ದೊರೆತಿದ್ದವು. 'ಈಗಿನ ಕಟ್ಟಡವು ಹಿಂದಿನ ದೇವಾಲಯದ ಭಾಗಗಳನ್ನು ಬಳಸಿ ನಿರ್ಮಿಸಲಾಗಿದೆ' ಎಂಬುದನ್ನು ಎಎಸ್‌ಐ ವರದಿ ಉಲ್ಲೇಖಿಸಿತ್ತು. ಆದರೆ ಮುಸ್ಲಿಂ ಪಕ್ಷ ಈ ವರದಿಯ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಿತ್ತು.

ಕಾಲರೇಖೆ

- 11ನೇ ಶತಮಾನ: ರಾಜಾ ಭೋಜ ಸಂಸ್ಕೃತ ವಿದ್ಯಾಕೇಂದ್ರ ಸ್ಥಾಪನೆ
- 13ನೇ ಶತಮಾನ: ಕಮಾಲುದ್ದೀನ್ ಚಿಶ್ತಿ ಧಾರಕ್ಕೆ ಆಗಮನ
- 1305: ಖಿಲ್ಜಿ ದಾಳಿಯ ಬಳಿಕ ದೇವಾಲಯ ಧ್ವಂಸ ಆರೋಪ
- 1902-03: ಸಂಸ್ಕೃತ ಶಾಸನಗಳ ಪತ್ತೆ
- 1951: ಎಎಸ್‌ಐ ರಾಷ್ಟ್ರೀಯ ಸ್ಮಾರಕ ಘೋಷಣೆ
- 1987: ನೆಲದ ದುರಸ್ತಿ ವೇಳೆ ಹಿಂದೂ ಮೂರ್ತಿಗಳ ಪತ್ತೆ
- 2003: ಮಂಗಳವಾರ ಪೂಜೆ, ಶುಕ್ರವಾರ ನಮಾಜ್ ವ್ಯವಸ್ಥೆ ಜಾರಿ
- 2024: ಹೈಕೋರ್ಟ್ ಆದೇಶದ ಮೇರೆಗೆ ವೈಜ್ಞಾನಿಕ ಸಮೀಕ್ಷೆ
- 2026: ಭೋಜಶಾಲೆ ದೇವಾಲಯವೆಂದು ಹೈಕೋರ್ಟ್ ಘೋಷಣೆ

ಸುಪ್ರೀಂ ಕೋರ್ಟ್‌ನಲ್ಲಿ ಹಿಂದು ಸಂಘಟನೆಗಳಿಂದ ಕೆವಿಯಟ್



ಹೊಸದಿಲ್ಲಿ: ಮಧ್ಯಪ್ರದೇಶದ ಧಾರ್ ಜಿಲ್ಲೆಯ ಐತಿಹಾಸಿಕ ಭೋಜಶಾಲೆ-ಕಮಾಲ್ ಮೌಲಾ ಮಸೀದಿ ವಿವಾದದಲ್ಲಿ ಮಧ್ಯಪ್ರದೇಶ ಹೈಕೋರ್ಟ್ ನೀಡಿರುವ ಮಹತ್ವದ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಕೆಯಾಗುವ ಸಾಧ್ಯತೆ ನಡುವೆಯೇ ಹಿಂದು ಪರದ ಅರ್ಜಿದಾರರು ಶುಕ್ರವಾರ ಕೆವಿಯಟ್ ಅರ್ಜಿ ಸಲ್ಲಿಸಿದ್ದಾರೆ. ಈ ಮೂಲಕ, ಹೈಕೋರ್ಟ್ ತೀರ್ಪು ಪ್ರಶ್ನಿಸಿ ಯಾವುದೇ ಅರ್ಜಿ ಬಂದಲ್ಲಿ ತಮ್ಮ ವಾದ ಆಲಿಸದೇ ಸುಪ್ರೀಂ ಕೋರ್ಟ್ ಯಾವುದೇ ಮಧ್ಯಂತರ ಆದೇಶ ನೀಡಬಾರದು ಎಂದು ಮನವಿ ಮಾಡಿದ್ದಾರೆ. ಅರ್ಜಿದಾರ ಜಿತೇಂದ್ರ ಸಿಂಗ್ ವಿಶೇನ್ ಪರ ವಕೀಲ ಬರೂಣ್ ಕುಮಾರ್ ಸಿನ್ಹಾ ಸುಪ್ರೀಂ ಕೋರ್ಟ್‌ನಲ್ಲಿ ಕೆವಿಯಟ್ ಸಲ್ಲಿಸಿದ್ದಾರೆ. 'ಈ ಪ್ರಕರಣದಲ್ಲಿ ನಮಗೆ ನೋಟಿಸ್ ನೀಡದೇ ಯಾವುದೇ ಆದೇಶ ಹೊರಡಿಸಬಾರದು' ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಸಂಸ್ಕೃತ ಅಧ್ಯಯನದ ಜಾಗತಿಕ ಕೇಂದ್ರವಾಗಲಿ



ಭೋಜಶಾಲೆ ಕೇವಲ ವಾಗ್ದೇವಿಯ ಆರಾಧನಾ ಸ್ಥಳವಾಗಿರದೇ, ಪ್ರಾಚೀನ ಕಾಲದಂತೆ ಸಂಸ್ಕೃತ ಮತ್ತು ಧಾರ್ಮಿಕ ಗ್ರಂಥಗಳ ಅಧ್ಯಯನದ ಜಾಗತಿಕ ಕೇಂದ್ರವಾಗಿ ಮರುಸ್ಥಾಪನೆ ಯಾಗಬೇಕು ಎಂದು ಅಲೋಕ್ ಕುಮಾರ್ ಆಶಯ ವ್ಯಕ್ತಪಡಿಸಿದರು. 'ಈ ಗುರಿ ಸಾಧನೆಗೆ ಸಮಾಜ ಮತ್ತು ಸರ್ಕಾರ ಒಟ್ಟಾಗಿ ಕೆಲಸ ಮಾಡಬೇಕು. ಈ ಪವಿತ್ರ ಕ್ಷೇತ್ರದ ಆಧ್ಯಾತ್ಮಿಕ ಶಕ್ತಿ ವಿಶ್ವದಾದ್ಯಂತ ದೈವಿಕ ಬೆಳಕನ್ನು ಹರಡಲಿದೆ ಎಂದು ಹೇಳಿದರು.

ಭೋಜಶಾಲೆ ತೀರ್ಪು: ವಿಹಿಂಪ ಸ್ವಾಗತ

ಭೋಜಶಾಲೆ ಕುರಿತ ತೀರ್ಪನ್ನು ವಿಶ್ವ ಹಿಂದೂ ಪರಿಷತ್ (ವಿಹಿಂಪ) ಶುಕ್ರವಾರ ಸ್ವಾಗತಿಸಿದೆ. ಈ ತೀರ್ಪು ಭಾರತದ ಸಾಂಸ್ಕೃತಿಕ ಚೇತನ, ಸನಾತನ ಪರಂಪರೆ ಹಾಗೂ ಐತಿಹಾಸಿಕ ಸತ್ಯಕ್ಕೆ ದೊರೆತ ಮಹತ್ವದ ಮಾನ್ಯತೆ ಎಂದು ವಿಹಿಂಪ ಅಭಿಪ್ರಾಯಪಟ್ಟಿದೆ. ಭೋಜಶಾಲೆ ಸಂಕೀರ್ಣವು ದೇವಿ ಸರಸ್ವತಿಗೆ ಸಮರ್ಪಿತ ಹಿಂದೂ ದೇವಾಲಯ ಎಂಬುದಾಗಿ ಹೈಕೋರ್ಟ್ ಘೋಷಿಸಿರುವುದು ಹಿಂದೂಪಕ್ಷಕ್ಕೆ ದೊಡ್ಡ ಜಯವಾಗಿದೆ. ಅಲ್ಲದೆ ಕೇಂದ್ರ ಸರ್ಕಾರ ಹಾಗೂ ಭಾರತೀಯ ಪುರಾತತ್ವ ಸಮೀಕ್ಷಾ ಇಲಾಖೆ (ಎಎಸ್‌ಐ) ಇದರ ಆಡಳಿತ ಮತ್ತು ನಿರ್ವಹಣೆ ಕುರಿತು ತೀರ್ಮಾನ ಕೈಗೊಳ್ಳಬಹುದೆಂದೂ ನ್ಯಾಯಾಲಯ ಹೇಳಿದೆ. ಈ ಕುರಿತು ಪ್ರತಿಕ್ರಿಯಿಸಿದ ವಿಹಿಂಪ ಅಂತಾರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್, 'ಭೋಜಶಾಲೆಯಲ್ಲಿ ಹಿಂದೂಗಳಿಗೆ ನಿರಂತರ ಹಾಗೂ ಅಡೆತಡೆಯಿಲ್ಲದ ಪೂಜೆಗೆ ಹಕ್ಕು ದೊರೆತಿದೆ' ಎಂದು ಹೇಳಿದರು.

2003ರ ಎಎಸ್‌ಐ ಆದೇಶ ರದ್ದು



2003ರಲ್ಲಿ ಎಎಸ್‌ಐ ಹೊರಡಿಸಿದ್ದ ಆದೇಶದಂತೆ, ಮಂಗಳವಾರ ಹಿಂದೂಗಳಿಗೆ ಪೂಜೆ ಹಾಗೂ ಶುಕ್ರವಾರ ಮುಸ್ಲಿಮರಿಗೆ ನಮಾಜ್‌ಗೆ ಅವಕಾಶ ನೀಡಲಾಗುತ್ತಿತ್ತು. ಇದೀಗ ಆ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಧಾರ್ ಜಿಲ್ಲೆಯ ಈ ಎಎಸ್‌ಐ ಸಂರಕ್ಷಿತ ಸ್ಮಾರಕದ ಧಾರ್ಮಿಕ ಸ್ವರೂಪ ಕುರಿತ ವಿವಾದ ಹಲವು ವರ್ಷಗಳಿಂದ ಮುಂದುವರಿದಿತ್ತು. ಹಿಂದೂಪಕ್ಷ ಇದನ್ನು ವಾಗ್ದೇವಿ ದೇವಾಲಯವೆಂದು ವಾದಿಸಿದ್ದರೆ, ಮುಸ್ಲಿಂಪಕ್ಷ ಕಮಾಲ್ ಮೌಲಾ ಮಸೀದಿ ಎಂದು ಹೇಳುತ್ತಿತ್ತು. ಜೈನ ಸಮುದಾಯದ ಅರ್ಜಿದಾರರು ಇದನ್ನು ಮಧ್ಯಯುಗೀನ ಜೈನ ದೇವಾಲಯ ಹಾಗೂ ಗುರುಕುಲ ಎಂದು ಪ್ರತಿಪಾದಿಸಿದ್ದರು.

ಸರಸ್ವತಿ ವಿಗ್ರಹ ವಾಪಸ್ ತನ್ನಿ

ಭೋಜಶಾಲೆಯ ಮೂಲ ಸರಸ್ವತಿ ವಿಗ್ರಹವನ್ನು, ಪ್ರಸ್ತುತ ಬ್ರಿಟಿಷ್ ಮ್ಯೂಸಿಯಂನಲ್ಲಿ ಇರುವ ಮೂರ್ತಿಯನ್ನು ಭಾರತಕ್ಕೆ ಮರಳಿ ತರಬೇಕೆಂಬ ಮನವಿಯನ್ನು ಪರಿಗಣಿಸಬೇಕೆಂದು ನ್ಯಾಯಾಲಯ ನೀಡಿರುವ ಸೂಚನೆಯನ್ನು ಕೂಡ ವಿಹಿಂಪ ಸ್ವಾಗತಿಸಿದೆ. ಆ ವಿಗ್ರಹವು ಭಾರತದ ಸಾಂಸ್ಕೃತಿಕ ಆತ್ಮದ ಪ್ರತೀಕ. ಅದನ್ನು ಭೋಜಶಾಲೆಯ ಮೂಲಸ್ಥಳದಲ್ಲೇ ಮರುಸ್ಥಾಪಿಸಬೇಕು ಎಂದು ಅಲೋಕ್ ಕುಮಾರ್ ಒತ್ತಾಯಿಸಿದರು.

ಎಎಸ್‌ಐ ವರದಿಯಲ್ಲಿ ಏನಿತ್ತು?

ಹೈಕೋರ್ಟ್ ಆದೇಶದ ಮೇರೆಗೆ 2024ರಲ್ಲಿ ಎಎಸ್‌ಐ ವೈಜ್ಞಾನಿಕ ಸಮೀಕ್ಷೆ ನಡೆಸಿತ್ತು. ಸುಮಾರು 98 ದಿನಗಳ ಸಮೀಕ್ಷೆಯ ಬಳಿಕ 2,000ಕ್ಕೂ ಅಧಿಕ ಪುಟಗಳ ವರದಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಆ ವರದಿ ಪ್ರಕಾರ ಪರಮಾರ ರಾಜರ ಕಾಲದ ಭವ್ಯ ರಚನೆ ಮೊದಲು ಅಸ್ತಿತ್ವದಲ್ಲಿತ್ತು. ನಂತರದ ನಿರ್ಮಾಣದಲ್ಲಿ ದೇವಾಲಯದ ಅವಶೇಷಗಳನ್ನು ಮರುಬಳಕೆ ಮಾಡಲಾಗಿದೆ. ಸಂಸ್ಕೃತ ಶಿಕ್ಷಣ ಕೇಂದ್ರ ಹಾಗೂ ಸರಸ್ವತಿ ದೇವಿಯ ಆರಾಧನೆ ನಡೆದಿರುವ ಸೂಚನೆಗಳು ಕಂಡುಬಂದಿವೆ ಎಂದು ಉಲ್ಲೇಖಿಸಲಾಗಿತ್ತು. ಹಿಂದೂ ಪರ ವಕೀಲರು ಸಮೀಕ್ಷೆಯಲ್ಲಿ ಪತ್ತೆಯಾದ ನಾಣ್ಯಗಳು, ಶಿಲ್ಪಗಳು ಹಾಗೂ ಶಾಸನಗಳು ದೇವಾಲಯ ಅಸ್ತಿತ್ವವನ್ನು ಸಾಬೀತುಪಡಿಸುತ್ತವೆ ಎಂದು ವಾದಿಸಿತ್ತು.



ಚೆನ್ನೈ ಸೂಪರ್ ಕಿಂಗ್ಸ್ 187/5 | ವೇಗಿ ಆಕಾಶ್ ಸಿಂಗ್ ಆರ್ಭಟ

ಮಿಂಚಿದ ಕಾರ್ತಿಕ್ ಶರ್ಮಾ

ಲಖನೌ: ಕುಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಕಾರ್ತಿಕ್ ಶರ್ಮಾ ಆಸರೆಯಾಗಿದ್ದು, ಗೆಲ್ಲಲೇಬೇಕಿರುವ ಪಂದ್ಯದಲ್ಲಿ ಲಖನೌ ವಿರುದ್ಧ ಸ್ಪರ್ಧಾತ್ಮಕ ಗುರಿ ನಿರ್ಮಿಸಿದೆ. ಮೊದಲಿಗೆ ತೀವ್ರ ಕುಸಿತ ಕಂಡ ಚೆನ್ನೈ ಮಧ್ಯಮ ಓವರ್‌ಗಳಲ್ಲಿ ಚೇತರಿಸಿಕೊಂಡಿತು.

ಕಾರ್ತಿಕ್ ಶರ್ಮಾ 71 ರನ್‌ಗಳ ಮೂಲಕ ಮಿಂಚಿದರು. ಡೇವಾಲ್ಡ್ ಬ್ರೇವಿಸ್ ಕೂಡ ಒಂದಿಷ್ಟು ರನ್ ಜೋಡಿಸಿದರು. ಕೊನೆ ಓವರ್‌ಗಳಲ್ಲಿ ದುಬೆ(32★) ಉತ್ತಮ ಫಿನಿಶ್ ಕೊಟ್ಟ ನಂತರ ಚೆನ್ನೈ 20 ಓವರ್‌ಗಳಲ್ಲಿ 187 ರನ್ ಗಳಿಸಿದೆ. ಲಖನೌ 5 ವಿಕೆಟ್ ಪಡೆಯಿತು.

ಆಕಾಶ್ ಸಿಂಗ್ ಮಿಂಚಿನಾಟ: ಟಾಸ್ ಸೋತ ಚೆನ್ನೈ ಬ್ಯಾಟಿಂಗ್‌ಗಿಳಿಯಿತು. ಸಂಜು ದೊಡ್ಡ ಇನ್ನಿಂಗ್ಸ್ ಎಚ್ಚರಿಕೆ ನೀಡಿದರು. ಆದರೆ ಇದೇ ಪಂದ್ಯದ ಮೂಲಕ ಐಪಿಎಲ್‌ಗೆ ಪದಾರ್ಪಣೆ ಮಾಡಿದ ಆಕಾಶ್ ಸಿಂಗ್ ಕಡಿವಾಣ ಹಾಕಿದರು. 9 ರನ್ ಗಳಿಸಿದ್ದ ರುತುರಾಜ್ ವಿಕೆಟ್ ಒಪ್ಪಿಸಿದ ನಂತರ ಪಂದ್ಯದ ತಿರುವು ಬದಲಾಯಿತು. ಮೊದಲ ಬಾರಿಗೆ ಆಕಾಶ್ ಬರೆದು ತಂದಿದ್ದ ಚೀಟಿ ತೋರಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಉರ್ವಿಲ್ ಪಟೇಲ್ ಸ್ಟ್ರೈಕ್ ಪಡೆದು ಸೆಟ್ ಆಗುವ ಮುನ್ನವೇ 20 ಬಾಲ್‌ಗಳಲ್ಲಿ 20 ರನ್ ಗಳಿಸಿದ್ದ ಸಂಜು ಸ್ಯಾಮ್ಸನ್ ಔಟಾದರು. ಆಗ ಎರಡನೇ ಬಾರಿ ಚೀಟಿ ಪ್ರದರ್ಶಿಸಿದರು. ನಾಲ್ಕನೇ ಕ್ರಮಾಂಕದಲ್ಲಿ ಬಂದ ಕಾರ್ತಿಕ್ ಶರ್ಮಾ ಸೆಟ್ ಆಗುವತ್ತ ಸಾಗಿದರು. ಚೆನ್ನೈ ಪವರ್‌ಪ್ಲೇನಲ್ಲಿ 37 ರನ್ ಗಳಿಸಿತು. ಮಧ್ಯಮ ಓವರ್ ಆರಂಭದಲ್ಲೇ ಉರ್ವಿಲ್ ಒಂದು ಬೌಂಡರಿ ಬಾರಿಸಿ ವಿಕೆಟ್ ಒಪ್ಪಿಸಿದರು. ಆಕಾಶ್ ಸಿಂಗ್ ತಮ್ಮ ಸ್ಪೆಲ್ ಮುಗಿಸುವಷ್ಟರಲ್ಲಿ 3 ವಿಕೆಟ್ ಪಡೆದ ಆಕಾಶ್ ಮೂರು ಬಾರಿ ಬೇರೆ ಬೇರೆ ಚೀಟಿಗಳನ್ನು ತೋರಿಸಿದರು. ಚೆನ್ನೈ ಆಟ ನಿಧಾನಗೊಂಡಿತು. ನಾಲ್ಕನೇ ವಿಕೆಟ್‌ಗೆ ಒಂದಾದ ಬ್ರೇವಿಸ್ ಮತ್ತು ಕಾರ್ತಿಕ್ ಶರ್ಮಾ ಉತ್ತಮ ಬ್ಯಾಟಿಂಗ್ ಮಾಡಿದರು. ಒಂದಿಷ್ಟು ಓವರ್‌ಗಳವರೆಗೂ ನಿಧಾನ ಆಟವಾಡಿದ ಈ ಜೋಡಿ ಅಲ್ಲಲ್ಲಿ ಬೌಂಡರಿಗಳನ್ನೂ ಬಾರಿಸಿತು.



ಕಾರ್ತಿಕ್ ಅಬ್ಬರ

ಕಾರ್ತಿಕ್ ಶರ್ಮಾ ಒಂದು ಹಂತದಲ್ಲಿ 25 ಬಾಲ್‌ಗಳಲ್ಲಿ 25 ರನ್ ಗಳಿಸಿದ್ದರು. ಮಧ್ಯಮ ಓವರ್‌ಗಳ ಅಂತ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 35 ಬಾಲ್‌ಗಳಲ್ಲಿ 50 ರನ್ ಪೂರೈಸಿದ ಕಾರ್ತಿಕ್ ಆಟದ ಶೈಲಿ ಬದಲಾಯಿಸಿದರು. ಬ್ರೇವಿಸ್ 16 ಬಾಲ್‌ಗಳಲ್ಲಿ 25 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅತ್ತ ಕಾರ್ತಿಕ್ ಮುಂದಿನ 5 ಬಾಲ್‌ಗಳಲ್ಲಿ 70ರ ಗಡಿ ದಾಟಿದರು. ಒಟ್ಟು 42 ಬಾಲ್ ಎದುರಿಸಿದ ಕಾರ್ತಿಕ್ 6 ಬೌಂಡರಿ, 5ಸಿಕ್ಸರ್‌ನೊಂದಿಗೆ 71 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಮಧ್ಯಮ ಓವರ್‌ಗಳಲ್ಲಿ ಚೆನ್ನೈ 3 ವಿಕೆಟ್ ಕಳೆದುಕೊಂಡು 105 ರನ್ ಗಳಿಸಿತು. ಬಳಿಕ ಬಂದ ಶಿವಂ ದುಬೆ ಕೊನೆ ಓವರ್‌ವರೆಗೂ ಕಾಯ್ದು ಕೊನೆಯ ಓವರ್‌ನಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಪ್ರಶಾಂತ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಡೆತ್ ಓವರ್‌ನಲ್ಲಿ ಚೆನ್ನೈ 45 ರನ್ ಗಳಿಸಿತು. ದುಬೆ 32 ರನ್ ಗಳಿಸಿದರು.

ವಿಶ್ವಕಪ್ ಆಡಲು ಸಿದ್ಧ: ವಿರಾಟ್ ಕೊಹ್ಲಿ

ಹೊಸದಿಲ್ಲಿ: ನನ್ನ ಸಾಮರ್ಥ್ಯವನ್ನು ನಾನು ಸಾಬೀತು ಪಡಿಸಲ್ಲ, ನನಗೆ ಕ್ರಿಕೆಟ್ ಆಡುವುದೆಂದರೆ ಇಷ್ಟ, ಅದಕ್ಕಾಗೇ ಆಡುತ್ತೇನೆ. ಮುಂದಿನ ವರ್ಷದ ವಿಶ್ವಕಪ್‌ಗಾಗಿ ನಾನು ಸಿದ್ಧ ಎಂದು ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ತಿಳಿಸಿದರು.

ವಿಶ್ವಕಪ್‌ನಲ್ಲಿ ರೋಹಿತ್ ಹಾಗೂ ವಿರಾಟ್ ಆಡಲಿದ್ದಾರಾ ಎಂಬ ಪ್ರಶ್ನೆ ಮೂಡುತ್ತಿರುವ ಮಧ್ಯೆ ಇತ್ತೀಚೆಗೆ ನಡೆದ ಸಂದರ್ಶನವೊಂದರಲ್ಲಿ ವಿರಾಟ್ ಕೊಹ್ಲಿ ಆಡುವ ಆಸೆ ಬಗ್ಗೆ ವ್ಯಕ್ತಪಡಿಸಿದ್ದಾರೆ. ನಾನು ತಂಡಕ್ಕೆ ಏನಾದರೂ ಕೊಡಬಹುದಾದರೆ ಅದಕ್ಕೆ ಸಿದ್ಧ. ವಿಶ್ವಕಪ್ ಆಡುವುದು ವಿಶೇಷ. ಇಲ್ಲಿಯವರೆಗೂ ಯಾವುದೇ ಮಾತಿಗು ತಲೆ ಕೆಡಿಸಿಕೊಳ್ಳದೆ, ಶ್ರಮಿಸಿದ್ದೇನೆ. ನಾನು ನನ್ನ ಪರಿಶ್ರಮದ ಮೇಲೆ ಭರವಸೆ ಇಟ್ಟಿದ್ದೇನೆ. ಪಂದ್ಯವಾಡುವ ಮುನ್ನವೂ ನಾನು ಶ್ರಮಿಸುತ್ತೇನೆ, ಪಂದ್ಯದ ವೇಳೆಯೂ ಶ್ರಮಿಸುತ್ತೇನೆ. ಆಟ ನನಗೆ ಎಲ್ಲವನ್ನೂ ಕೊಟ್ಟಿದೆ. ನನಗೆ ಆಡುವುದೆಂದರೆ ಇಷ್ಟ. ಅದಕ್ಕಾಗೇ ನಾನು ಮೈದಾನಕ್ಕೆ ಹೋಗುವ ಮುನ್ನವೇ ಅಪ್ರೋಚ್ ಮತ್ತು ಬೇಕಾದ ಮನಸ್ಥಿತಿಯೊಂದಿಗೆ ಹೋಗುತ್ತೇನೆ. ಯಾರಿಗೂ ಸಾಬೀತು ಮಾಡಲು ಹೋಗಲ್ಲ. ವಿಶ್ವಕಪ್ ವಿಚಾರದಲ್ಲಿ ನಾನು ದೇಶಕ್ಕಾಗಿ ಆಡಲು ಸಿದ್ಧನಿದ್ದೇನೆ ಎಂದಿದ್ದಾರೆ.

ತಿಲಕ್ ಆಟಕ್ಕೆ ಪಂಜಾಬ್ ತತ್ತರ



ಧರ್ಮಶಾಲಾ: ಮೊದಲಾರ್ಧ ಐಪಿಎಲ್‌ನಲ್ಲಿ ಆರು ಸತತ ಗೆಲುವು ಸಾಧಿಸಿದ್ದ ಪಂಜಾಬ್ ಕಿಂಗ್ಸ್ ದ್ವಿತಿಯಾರ್ಧದಲ್ಲಿ ಸತತ ಐದನೇ ಸೋಲು ಕಂಡಿದೆ. ತಿಲಕ್ ವರ್ಮಾ, ವಿಲ್ ಜ್ಯಾಕ್ಸ್ ಅವರ ಬ್ಯಾಟಿಂಗ್ ನೆರವಿನೊಂದಿಗೆ ಪಂಜಾಬ್ ನೀಡಿದ್ದ 201 ರನ್ ಗುರಿಯನ್ನು ಪೇರಿಸಿತು. ಇದರೊಂದಿಗೆ ಪಂಜಾಬ್ ಕಿಂಗ್ಸ್ ಪ್ಲೇಆಫ್ ವಿಚಾರದಲ್ಲಿ ಹಿಂದೆ ಬಿದ್ದರೆ, ಚೆನ್ನೈ ಹಾಗೂ ರಾಜಸ್ಥಾನ ತಂಡಗಳಿಗೆ ಲಾಭ ಸಿಕ್ಕಿದೆ.

ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 200 ರನ್ ಗಳಿಸಿತು. ಪ್ರಭಸಿಮ್ರನ್ (57; 32ಎ, 6ಬೌ, 4ಸಿ) ಭದ್ರ ಬುನಾದಿ ಹಾಕಿಕೊಟ್ಟರು. ಮಧ್ಯಮ ಕ್ರಮಾಂಕದಲ್ಲಿ ಅಜ್ಮತುಲ್ಲಾ ಓಮರ್‌ಝೈ (38; 17ಎ, 2 ಬೌ, 4ಸಿ) ಸ್ಕೋರ್ ಹಿಗ್ಗಿಸಿದರು. ಶಾರ್ದೂಲ್ ಠಾಕೂರ್(4-0-39-4), ದೀಪಕ್ ಚಾಹರ್(4-0-36-2) ಮತ್ತು ಬಾಷ್, ಬಾವಾ ತಲಾ 1ರಂತೆ ಮುಂಬೈ 8 ವಿಕೆಟ್ ಪಡೆಯಿತು. ಗುರಿ ಬೆನ್ನತ್ತಿದ ಮುಂಬೈ 19.5 ಓವರ್‌ಗಳಲ್ಲಿ 205 ರನ್ ಗಳಿಸಿತು. ರೋಹಿತ್ ಶರ್ಮಾ(25, ರಯಾನ್ (48; 28ಎ, 4ಬೌ, 4ಸಿ) ಭದ್ರ ಬುನಾದಿ ಹಾಕಿಕೊಟ್ಟರೆ, ಮಧ್ಯಮ ಕ್ರಮಾಂಕದಲ್ಲಿ ತಿಲಕ್ ವರ್ಮಾ(75*; 33ಎ, 6ಬೌ, 3ಸಿ) ಆಟದೊಂದಿಗೆ ಪಂದ್ಯ ಗೆಲ್ಲಿಸಿದರು. ಅವರಿಗೆ ವಿಲ್ ಜ್ಯಾಕ್ಸ್(25*, 10ಎ, 2ಬೌ, 2ಸಿ) ಸಾಥ್ ಕೊಟ್ಟರು. ಪಂಜಾಬ್ ಪರ ಓಮರ್‌ಝೈ(4-0-36-2), ಚಾಹಲ್ ಮತ್ತು ಯಾನ್ಸನ್ ತಲಾ ಒಂದು ಸೇರಿ ಪಂಜಾಬ್ 4 ವಿಕೆಟ್ ಪಡೆಯಿತು.

ಇಂದು ಗುಜರಾತ್ ಕೆಕೆಆರ್ ಪಂದ್ಯ

ಕೋಲ್ಕತ್ತಾ: ಅಳಿವು-ಉಳಿವು ಪಂದ್ಯದಲ್ಲಿ ಕೆಕೆಆರ್ ತಂಡವು ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ. ಬೆಂಗಳೂರು ವಿರುದ್ಧದ ಪಂದ್ಯದಲ್ಲಿ ಸೋತ ನಂತರ ಕೆಕೆಆರ್ ಗೆಲುವುಗಳ ಸರಪಳಿಗೆ ಬ್ರೇಕ್ ಬಿದ್ದಿದೆ. ಇತ್ತ ಗುಜರಾತ್ ಟೈಟಾನ್ಸ್ ಗೆಲುವಿನ ನಾಗಾಲೋಟದೊಂದಿಗೆ ಎರಡನೇ ಸ್ಥಾನದಲ್ಲಿದ್ದು, ಪ್ಲೇಆಫ್ ಬಹುತೇಕ ಖಚಿತವಾದಂತಿದೆ. ಈ ಪಂದ್ಯ ಗೆದ್ದರೆ ಗುಜರಾತ್ ನಾಲ್ಕರಲ್ಲಿ ಖಚಿತವಾಗಲಿದ್ದು, ಮೊದಲೆರಡರ ಸ್ಥಾನ ಭದ್ರವಾಗಿರಲಿದೆ.



ಬ್ಯಾಟಿಂಗ್ ಬಲ ಹೊಂದಿರುವ ಗುಜರಾತ್ ಅತ್ಯುತ್ತಮ ಬೌಲಿಂಗ್ ದಾಳಿಯನ್ನೂ ಹೊಂದಿದೆ. ಇತ್ತ ಕೆಕೆಆರ್ ಪರ ಸುನಿಲ್ ನರೈನ್, ಕಾರ್ತಿಕ್ ತ್ಯಾಗಿ ಲಯದಲ್ಲಿದ್ದರೆ ಬ್ಯಾಟಿಂಗ್‌ನಲ್ಲಿ ಅಲೆನ್, ರಘುವಂಶಿ, ರಿಂಕು ಸಿಂಗ್ ಸೇರಿದಂತೆ ಪ್ರಮುಖ ಬ್ಯಾಟಿಗರು ಮಿಂಚಿದ್ದಾರೆ. ಕೋಲ್ಕತ್ತಾದ ಈಡನ್ ಗಾರ್ಡರ್‌ನಲ್ಲಿ ಪಂದ್ಯ ನಡೆಯಲಿದೆ. ಬ್ಯಾಟರ್‌ಗಳಿಗೆ ಅನುವು ಮಾಡಿಕೊಡುವ ಪಿಚ್‌ನಲ್ಲಿ ಮಿಂಚುವವರ್ಯಾರು ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡಿದೆ. ಕೆಕೆಆರ್ ಸೋತರೆ ಹೊರಬೀಳಲಿದ್ದು, ಗುಜರಾತ್ ಸೋತರೆ ಹಿನ್ನಡೆ ಅನುಭವಿಸಲಿದೆ.

ಸಾತ್ವಿಕ್-ಚಿರಾಗ್ ಸೆಮಿಗೆ, ಪಿ.ವಿ ಸಿಂಧುಗೆ ಸೋಲು

ಬ್ಯಾಂಕಾಕ್: ಭಾರತದ ಅಗ್ರ ಜೋಡಿ, ಪಂದ್ಯಾವಳಿಯ ಪ್ರಮುಖ ಆಟಗಾರರಾದ ಸಾತ್ವಿಕ್ ಸಾಯಿ ರಾಜ್ ಮತ್ತು ಚಿರಾಗ್ ಶೆಟ್ಟಿ ಇಲ್ಲಿ ನಡೆಯು ತ್ತಿರುವ ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್ ಸೂಪರ್ 500 ಪಂದ್ಯಾವಳಿಯ ಸೆಮಿಫೈನಲ್‌ಗೆ ಪ್ರವೇಶಿಸಿದ್ದಾರೆ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜಪಾನ್‌ನ ಟಾಕುಮಿ ನುಮೊರಾ ಮತ್ತು ಯೂಚಿ ಶಿಮೊಗಾಮಿ ಅವರೊಂದಿಗೆ ಗೆದ್ದರು.

ಶುಕ್ರವಾರ ನಡೆದ ಪಂದ್ಯದಲ್ಲಿ 21-12, 21-13ರಿಂದ ಗೆದ್ದ ಈ ಜೋಡಿ ಪದಕ ಗೆಲ್ಲುವ ನಿರೀಕ್ಷೆಯಲ್ಲಿದೆ. ಮೊದಲನೇ ಸೆಟ್‌ನಿಂದ ಹಿಡಿದು ಪಂದ್ಯ ಗೆಲ್ಲುವ ತನಕ ಪಂದ್ಯದಲ್ಲಿ ಬಿಗಿ ಹಿಡಿತ ಸಾಧಿಸಿತ್ತು. ಆದರೆ ಮತ್ತೊಂದು ಪಂದ್ಯದಲ್ಲಿ ಭಾರತದ ಶಟ್ಲರ್ ಪಿ.ವಿ ಸಿಂಧು ಸೋಲಿನೊಂದಿಗೆ ಅಭಿಯಾನ ಮುಗಿಸಿದರು. ಹಿಂದಿನ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಕ್ವಾರ್ಟರ್‌ಗೇರಿದ್ದ ಸಿಂಧು ಟಾಪ್ ಸೀಡ್‌ನ ಯಮಾಗುಚಿ ವಿರುದ್ಧ 21-19, 18-21, 15-21ರೊಂದಿಗೆ ಸೋತರು. ಮೊದಲಿನಿಂದಲೂ ಮುನ್ನಡೆ ಸಾಧಿಸಿದ್ದ ಸಿಂಧು ಮೊದಲನೇ ಸೆಟ್‌ನಲ್ಲಿ ಗೆದ್ದರೂ ಎರಡನೇ ಹಾಗೂ ಮೂರನೇ ಸೆಟ್‌ನಲ್ಲಿ ಸೋತು ಹಿನ್ನಡೆ ಅನುಭವಿಸಿದರು. ಆದಾಗ್ಯೂ ಥೈಲ್ಯಾಂಡ್ ಓಪನ್‌ನಲ್ಲಿ ವಿವಿಧ ಭಾರತೀಯ ಶಟ್ಲರ್‌ಗಳು ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಲಕ್ಷ್ಯ ಸೇನ್ ಕೂಡ ಕ್ವಾರ್ಟರ್‌ನಲ್ಲಿ ಶನಿವಾರದಂದು ಸೆಣಸಾಟ ನಡೆಸಲಿದ್ದಾರೆ.



ಸೂಪರ್ ಚೆಸ್: ಪ್ರಜ್ಞಾನಂದ ಪಂದ್ಯ ಡ್ರಾ

ಹೊಸದಿಲ್ಲಿ: ರೊಮೇನಿಯಾದ ಬುಖಾರೆಸ್ಟ್‌ನಲ್ಲಿ ನಡೆಯುತ್ತಿರುವ ಗ್ರ್ಯಾಂಡ್ ಚೆಸ್ ಟೂರ್‌ನ ಮೊದಲ ಕ್ಲಾಸಿಕಲ್ ಟೂರ್ನಿಯಾದ ಸೂಪರ್ ಚೆಸ್ ಕ್ಲಾಸಿಕ್‌ನಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ ವಿರುದ್ಧ ಡ್ರಾ ಸಾಧಿಸಿದರು.


ಆರಂಭದಲ್ಲಿ ಸಾಮಾನ್ಯ ಕ್ವೀನ್ಸ್ ಗ್ಯಾಂಬಿಟ್ ಡಿಕ್ಲೈನ್ಡ್ ಓಪನಿಂಗ್‌ನಿಂದ ನಿಧಾನವಾಗಿ ಸಾಗಿದ ಪಂದ್ಯ, ಬಳಿಕ ರೋಚಕ ತಿರುವು ಪಡೆದುಕೊಂಡಿತು. ಪಂದ್ಯ ಸುಲಭ ಡ್ರಾಗೆ ಸಾಗುವಂತೆ ಕಂಡಿತ್ತು. ಆದರೆ ಪ್ರಜ್ಞಾನಂದ ಅಲ್ಪ ಮುನ್ನಡೆ ಸಾಧಿಸಿದರು. ಇರಾನ್ ಮೂಲದ ಫ್ರೆಂಚ್ ಆಟಗಾರ ಫಿರೋಜ್ಜಾ ಮಧ್ಯಭಾಗದಲ್ಲಿ ಅತ್ಯುತ್ತಮ ಮೂವ್‌ಗಳ ಮೂಲಕ ಕಿಂಗ್ ಸೈಡ್ ಮೇಲೆ ಭಾರೀ ಒತ್ತಡ ತಂದರು.

35ನೇ ಚಲನೆಯಲ್ಲಾದ ತಪ್ಪಿನ ಬಳಿಕ ಪಂದ್ಯ ಸಮಬಲದ ರೂಕ್ ಮತ್ತು ಪಾನ್ ಅಂತ್ಯಕ್ಕೆ ತಲುಪಿತು. ಪ್ರಜ್ಞಾನಂದ ಒಂದು ಪಾನ್ ಹಿಂದೆ ಇದ್ದರೂ ನಂತರ ಡ್ರಾ ಅನಿವಾರ್ಯವಾಯಿತು. ದಿನದ ಅತಿ ದೀರ್ಘ ಪಂದ್ಯವಾಗಿದ್ದ ಇದು 60 ಚಲನೆಗಳವರೆಗೆ ನಡೆಯಿತು. ಕೊನೆಯಲ್ಲಿ ಡ್ರಾದಲ್ಲಿ ಪಂದ್ಯ ಅಂತ್ಯವಾಯಿತು.

ಇನ್ನೊಂದು ಪ್ರಮುಖ ಪಂದ್ಯದಲ್ಲಿ ಫ್ರಾನ್ಸ್‌ನ ಮ್ಯಾಕ್ಸಿಮ್ ವಶಿಯರ್-ಲಾಗ್ರಾವ್ ಮತ್ತು ನೆದರ್‌ಲ್ಯಾಂಡ್ಸ್‌ನ ಅನಿಶ್ ಗಿರಿ ಡ್ರಾ ಮಾಡಿಕೊಂಡರು. ಕ್ಯಾಟಲನ್ ಓಪನಿಂಗ್‌ನಿಂದ ಆರಂಭವಾದ ಪಂದ್ಯದಲ್ಲಿ ಗಿರಿ ಕೆಲ ಹಂತಗಳಲ್ಲಿ ಸ್ವಲ್ಪ ಮೇಲುಗೈ ಸಾಧಿಸಿದ್ದರೂ, ಅವರು ಸುರಕ್ಷಿತ ಆಟವನ್ನೇ ಆಯ್ಕೆ ಮಾಡಿಕೊಂಡು 32ನೇ ಚಲನೆಯ ಬಳಿಕ ಪುನರಾವರ್ತನೆಯ ಮೂಲಕ ಡ್ರಾ ಒಪ್ಪಿಕೊಂಡರು. ವಿಶ್ವ ಚಾಂಪಿಯನ್‌ಶಿಪ್ ಕಂಟೆಂಡರ್ ಜಾವೋಖಿರ್ ಸಿಂದಾರೋವ್ ಕಪ್ಪು ಗೂಟಗಳೊಂದಿಗೆ ರೊಮೇನಿಯಾದ ಡಿಯಾಕ್ ಬೋಗ್ಡಾನ್-ಡೇನಿಯಲ್ ವಿರುದ್ಧ ಡ್ರಾ ಮಾಡಿಕೊಂಡರು.

ಪದಬಂಧ

ರಾಜು ಸಂಗಮೇಶ ಹಿರೇಮಠ



5985

ಎಡದಿಂದ ಬಲಕ್ಕೆ

2.ಟಾರು ಬಳಿದ ಜಲನಿರೋಧಕ ಬಟ್ಟೆ (4)
4.ಹೃದಯಕ್ಕೆ ಹತ್ತಿರವಿರುವ ಭಾವನೆ (2)
5.ನೀರಾಗಿ ಕಲೆಸಿದ ಮಣ್ಣು (3)
6.ಕಟ್ಟಡಕ್ಕೆ ಅಡಿಗಲ್ಲನ್ನಿಡುವ ಸಾಂಪ್ರದಾಯಿಕ ವಿಧಿ (5)
8.ಬೀಳುತ್ತಿರುವ ಸಣ್ಣ-ಸಣ್ಣ ನೀರ ಹನಿ (3)
10.ಕಳಚು-ಸಡಿಲಿಸು ಎಂಬರ್ಥದ ಶಬ್ದ (3)
11.ದೈವಿಕ ವಂಶದಲ್ಲಿ ಹುಟ್ಟಿದವರು (5)
13.ದೇಹರಹಿತನಾದ ಮಾರ ತಿರುಗಿದ್ದಾನೆ (3)
15.ತನ್ನ ವಸ್ತುಗಳನ್ನು ಇತರರಿಗೆ ನೀಡುವವನು (2)
16.ತಮಾಷೆಗೀಡಾಗುವ ವ್ಯಕ್ತಿ (4)

ಮೇಲಿನಿಂದ ಕೆಳಕ್ಕೆ

1.ಗಣಿತದಲ್ಲಿ ಸಂಖ್ಯೆಯ ತೋರಿಸುವ ಚಿಹ್ನೆ (2)
2.ವ್ಯವಸ್ಥೆ ತಪ್ಪಿ ಗೊಂದಲವಾಗುವುದು (4)
3.ಯಾವ ಕಡೆಗೂ ಸೇರದ ಸ್ಥಿತಿ ಎಂಬರ್ಥದ ನುಡಿಗಟ್ಟು (5)
4.ಪದದ ನಡುವೆ ಇರುವ ವ್ಯಾಪಾರಿ ತಲೆಕೆಳಗಾಗಿದ್ದಾನೆ (3)
7.ಜ್ಞಾಪಕಕ್ಕೆ ಬರುವಂತೆ ಮಾಡು (4)
8.ಪಾಳೆಗಾರ-ಮಾಂಡಲಿಕನೀತ (4)
9.ಕೈಯಿಂದ ಹೊಡೆದ ಚಪ್ಪಾಳೆ (5)
10.ಬಿಡಿ, ಅವನದು ತಡೆಯಿಲ್ಲದ ಮಾತು (4)
12.ನಿಶೆ-ರಾತ್ರಿ ಎಂಬರ್ಥದ ಶಬ್ದ (3)
14.ತಂದೆ ಅಥವಾ ತಾಯಿಯ ತಾಯಿ (2)

5984 ಉತ್ತರ

ಎಡದಿಂದ ಬಲಕ್ಕೆ:

1.ತ್ರಿಪಿಟಕ 4.ಕದಪು
5.ತುಂಬುದಿಂಗಳು
7.ಪ್ರಪಾತ 8.ಕಚ್ಚು
9.ದೀಕ್ಷೆ 12.ಪಾತಕ
13.ಕಲೋಪಾಸಕ
16.ಧನಿಯ 17.ಕೆಳಮನೆ

ಮೇಲಿನಿಂದ ಕೆಳಕ್ಕೆ:

1.ತ್ರಿಪುರಾಂತಕ
2.ಕಡುಬು 3.ಬಡಗ
5.ತುಂಡು 6.ಕರುಣಾಳು
7.ಪ್ರಯಾಣಿಕ
10.ದೀಪಾರಾಧನೆ
11.ಮಿಕ 14.ಲೋಲಾಕು
15.ಸಲಿಕೆ

ಕಿರುಸುದ್ದಿ

ಪ್ರಧಾನಿ ಮೋದಿ ಕರೆಗೆ ಜನರ ಸ್ಪಂದನೆ



ಗಜೇಂದ್ರಗಡ: ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಭಾರತಕ್ಕೆ ಇಂಧನ ಕೊರತೆ ನಿಭಾಯಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಕರೆಗೆ ಜನರು ಸ್ಪಂದಿಸಿದ್ದಾರೆ ಎಂದು ಬಿಜೆಪಿಯ ಯುವ ಮುಖಂಡ ಉಮೇಶ ಚನ್ನು ಪಾಟೀಲ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರು ಸ್ವಂತ ವಾಹನಗಳ ಬಳಕೆ ಕಡಿಮೆ ಮಾಡಿದ್ದಾರೆ. ಮೋದಿ ಅವರು ಹೇಳಿದರೆ ನಾವು ಅದನ್ನು ಚಾಚೂ ತಪ್ಪದೇ ಪಾಲಿಸುತ್ತೇವೆ ಎಂದು ಜನರೇ ಹೇಳುತ್ತಿದ್ದಾರೆ. ಮೋದಿ ಅವರು ಏನೇ ಹೇಳಿದರೂ ಅದರ ಹಿಂದೆ ನಮ್ಮ ಹಾಗೂ ದೇಶದ ರಕ್ಷಣೆ ಮತ್ತು ಅಭಿವೃದ್ಧಿ, ಗೌರವ, ಆರೋಗ್ಯ ಅಡಗಿರುತ್ತದೆ. ಆದಕ್ಕಾಗಿ ಮೋದಿ ಅವರು ಹೇಳಿದ್ದನ್ನು ಪಾಲಿಸುತ್ತೇವೆ ಎಂದು ಜನರೇ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ದೇಶದ ರಕ್ಷಣೆ, ಜನರ ರಕ್ಷಣೆ, ದೇಶದ ಆರ್ಥಿಕತೆ, ದೇಶದ ಭದ್ರತೆ, ಸ್ವದೇಶಿ ಉತ್ಪನ್ನಗಳ ಬಳಕೆಯ ಹೆಚ್ಚಳ, ಮಿತವ್ಯಯ ಇದರಿಂದ ಸದೃಢ ಭಾರತ ನಿರ್ಮಿಸಲು ಸಾಧ್ಯ. ಪ್ರಧಾನಿ ನರೇಂದ್ರ ಮೋದಿ ಅವರ ಕರೆಗೆ ನಾವೆಲ್ಲರೂ ಸ್ಪಂದಿಸೋಣ ಎಂದರು.

ಐದು ರೌಡಿಶೀಟರ್‌ಗಳ ಗಡಿಪಾರು: ಎಸ್ಪಿ

ಗದಗ: ಜಿಲ್ಲೆಯ ಐವರು ರೌಡಿ ಶೀಟರ್‌ಗಳನ್ನು ವಿವಿಧ ಜಿಲ್ಲೆಗಳಿಗೆ ಗಡಿಪಾರು ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ತಿಳಿಸಿದ್ದಾರೆ.

ಕೊಲೆ ಪ್ರಯತ್ನ, ಗಾಂಜಾ ಮಾರಾಟದಂತಹ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ದವನಪ್ಪ, ದಾವಲ್‌ಸಾಬ್, ಮುಸ್ತಾಕ್, ಅಭಿಷೇಕ, ಸಾಹಿಲ್ ವಿರುದ್ಧ ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದ್ದವು. ಸುಧಾರಣೆಗೆ ಅವಕಾಶ ಇದ್ದರೂ, ಅವರು ಮತ್ತೆ ಅಪರಾಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಮಾಜದ ಸ್ವಾಸ್ಥ್ಯ ಹದಗೆಡಿಸುತ್ತಿದ್ದರಿಂದ ಗಡಿಪಾರು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಆರೋಪಿ ದವನಪ್ಪ ವಿರುದ್ಧ ನರಗುಂದ ಪೊಲೀಸ್ ಠಾಣೆಯಲ್ಲಿ ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರು ದೂರುಗಳು ದಾಖಲಾಗಿದ್ದವು. ಅದೇ ರೀತಿ, ದಾವಲ್ ಸಾಬ್ ವಿರುದ್ಧ ನರಗುಂದ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು, ಮುಸ್ತಾಕ್ ವಿರುದ್ಧ ಗದಗ ಶಹರ ಪೊಲೀಸ್ ಠಾಣೆಯಲ್ಲಿ ನಾಲ್ಕು ಪ್ರಕರಣಗಳು, ಅಭಿಷೇಕ್ ಮತ್ತು ಸಾಹಿಲ್ ವಿರುದ್ಧ ಗದಗ ಶಹರ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣಗಳು ದಾಖಲಾಗಿದ್ದವು ಎಂದು ತಿಳಿಸಿದರು. ಸಾಮಾಜಿಕ ಭದ್ರತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಅಪರಾಧಿಕ ಹಿನ್ನೆಲೆಯುಳ್ಳ ಐವರು ರೌಡಿ ಶೀಟರ್‌ಗಳನ್ನು ಗಡಿಪಾರು ಮಾಡುವಂತೆ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಿಂದ ಪ್ರಸ್ತಾವ ಸಲ್ಲಿಕೆಯಾಗಿದ್ದವು. ಅವುಗಳ ವಿಚಾರಣೆ ನಡೆಸಿದ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಐವರು ರೌಡಿ ಶೀಟರ್‌ಗಳನ್ನು ವಿವಿಧ ಜಿಲ್ಲೆಗಳಿಗೆ ಗಡಿಪಾರು ಮಾಡಿ ಆದೇಶಿಸಿದ್ದಾರೆ ಎಂದು ತಿಳಿಸಿದ್ದಾರೆ.

ಭರಮವ್ವ ಕಂಬಳಿ ನಿಧನ



ಶಿರಹಟ್ಟಿ: ಬಿಜೆಪಿ ಮಂಡಲದ ಓಬಿಸಿ ಮೋರ್ಚಾ ತಾಲೂಕಾಧ್ಯಕ್ಷ ರಾಮಣ್ಣ ಕಂಬಳಿ ಅವರ ಮಾತೋಶ್ರೀ ಭರಮವ್ವ ಭರಮಪ್ಪ ಕಂಬಳಿ (95) ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಶಿರಹಟ್ಟಿ ರುದ್ರ ಭೂಮಿಯಲ್ಲಿ ನಡೆಯಲಿದೆ. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಆಗಲಿದ್ದಾರೆ.ಇವರ ನಿಧನಕ್ಕೆ ಶಾಸಕ ಡಾ. ಚಂದ್ರು ಲಮಾಣಿ, ಫಕೀರೇಶ ರಟ್ಟಿಹಳ್ಳಿ, ನಾಗರಾಜ ಲಕ್ಕುಂಡಿ, ಶಿವಪ್ರಕಾಶ ಮಹಾಜನ ಶೆಟ್ಟರ್, ಶ್ರೀನಿವಾಸ ಬಾರ್ಬರ, ದೇವಪ್ಪ ಬಟ್ಟೂರ, ಸಮಾಜದ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	4980-7932
ಅಜವಾನ	9881-10172
ಅಲಸಂದಿ	3900-6269
ಕಡಲೆ	2077-6209
ಉದ್ದು	4289-5612
ಹೆಸರು	1824-6214
ಹುರಳಿ	3044-3044
ಜೋಳ	2359-4344
ಗೋವಿನಜೋಳ	1069-2012
ಮಡಕಿ	10355-10355
ಸಬ್ಬಸಗಿ	7581-7581
ಕುಸಬಿ	4019-5332
ಸೋಯಾಬಿನ್	4412-4412
ಸೂರ್ಯಕಾಂತಿ	6169-6779
ತೊಗರಿ	4589-5324
ಗೋಧಿ	2144-4712



ಗದಗ: ತಾಲೂಕಿನ ತಿಮ್ಮಾಪುರ ಗ್ರಾಮಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎಂ.ವಿ. ವೆಂಕಟೇಶ ಗ್ರಾಮದ ಕೆರೆಗೆ ಭೇಟಿ ನೀಡಿ ಕೆರೆಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಗಂಗಪ್ಪ ಎಂ., ಸಿ.ಆರ್. ಮುಂಡರಗಿ, ಊರಿನ ಹಿರಿಯರು ಉಪಸ್ಥಿತರಿದ್ದರು.

ಕನ್ನಡ ನಾಡಿನ ಅಸ್ಮಿತೆಯ ಪ್ರತೀಕವೇ ಕಸಾಪ

ಲಕ್ಷ್ಮೇಶ್ವರ: ಕನ್ನಡ ನಾಡಿನ ಅಸ್ಮಿತೆಯ ಪ್ರತೀಕವೇ ಕನ್ನಡ ಸಾಹಿತ್ಯ ಪರಿಷತ್ತು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್. ನಾಯ್ಕ ಹೇಳಿದರು.

ಅವರು ಲಕ್ಷ್ಮೇಶ್ವರದ ಸಕ್ಸಸ್ ಕ್ಲಾಸಸ್‌ನಲ್ಲಿ ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಇತ್ತೀಚೆಗೆ ಉದ್ಘಾಟಿಸಿ ಮಾತನಾಡಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಲಕ್ಷ್ಮೇಶ್ವರ ಪೌರಸೇವಾ ಸಾಧಕ ಬಸವಣ್ಣೆಪ್ಪ ನಂದೆಣ್ಣವರ, ಯಾವುದೇ ಪ್ರಶಸ್ತಿ, ಗೌರವ ಬಯಸದೇ ನಾಲ್ಕು ದಶಕಗಳ ಕಾಲ ಲಕ್ಷ್ಮೇಶ್ವರದ ಪೌರ ಸೇವೆ ಮಾಡಿದ ನಮ್ಮಂತವರನ್ನು ಗುರುತಿಸಿ ಗೌರವಿಸಿದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಸ್ತುತ್ಯಾರ್ಹ ಎಂದರು.

ಕ.ಸಾ.ಪ ಸಂ ಕಾರ್ಯದರ್ಶಿ, ಸಾಹಿತಿ ನಾಗರಾಜ ಮಜ್ಜಿಗುಡ್ಡ, ಹಿರಿಯ ಸಾಹಿತಿ ಎಸ್. ಎಫ್.ಆದಿ ಮಾತನಾಡಿದರು. ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಈಶ್ವರ ಮೆಡ್ಲೇರಿ ಪ್ರಾಸ್ತಾವಿಸಿದರು. ಮಂಜುನಾಥ ಉಮಚಗಿ ಕನ್ನಡ ಗೀತ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ರಾಜೇಶ ಶೆಟ್ಟರ, ನಾಗರಾಜ ಶರಣಾರ್ಥಿ ಉಪಸ್ಥಿತರಿದ್ದರು. ಇದೆ ವೇಳೆ ಸಾಧಕರು, ಉದ್ಘಾಟಕರು ಉಪನ್ಯಾಸಕರು, ಆತಿಥೇಯರು, ಗಾಯಕರನ್ನು ಸನ್ಮಾನಿಸಲಾಯಿತು. ಪ್ರಭು ಹಾಲಗುಂಡಿ, ಆರ್.ಎಸ್.ಪಾಟೀಲ, ವೈ.ಎಂ.ಶಿರೂರು ಉಪಸ್ಥಿತರಿದ್ದರು. ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಎಸ್.ಬಿ.ಅಣ್ಣಿಗೇರಿ ಸ್ವಾಗತಿಸಿದರು. ಶಂಕರ ಶಿಳ್ಳಿನ ವಂದಿಸಿದರು. ಪ್ರಕಾಶ ಜ್ಯೋತಿ ನಿರೂಪಿಸಿದರು.



ಲಕ್ಷ್ಮೇಶ್ವರ: ಲಕ್ಷ್ಮೇಶ್ವರದ ಸಕ್ಸಸ್ ಕ್ಲಾಸಸ್‌ನಲ್ಲಿ ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್. ನಾಯ್ಕ ಉದ್ಘಾಟಿಸಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಮೂಲಸೌಕರ್ಯ ವಂಚಿತ | ರೈತರ ಆರೋಪ

ರೈತ ಭವನ, ವಿಶ್ರಾಂತಿ ಗೃಹ ಅಗತ್ಯ

ಸಿ.ಎಸ್.ಅರಸನಾಳ

ದಿಗಂತ ವಿಶೇಷ

ಮುಂಡರಗಿ: ಮುಂಡರಗಿ ಕೃಷಿ ಉತ್ಪನ್ನ ಮಾರುಕಟ್ಟೆ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು, ಮಾರುಕಟ್ಟೆಗೆ ಬರುವ ರೈತರು ಪರದಾಡುವಂತಾಗಿದೆ ಎಂಬ ಆರೋಪ ರೈತರಿಂದ ಕೇಳಿಬರುತ್ತಿದೆ.

ಹೆಚ್ಚು ವ್ಯಾಪಾರ ವಹಿವಾಟು ಮಾಡುತ್ತಿರುವಂತಹ ಮುಂಡರಗಿ ಕೃಷಿ ಉತ್ಪನ್ನ ಮಾರುಕಟ್ಟೆಯು ಸರ್ಕಾರಕ್ಕೆ ಅಧಿಕ ವಹಿವಾಟು ನಡೆಸುವುದರ ಮೂಲಕ ಅತೀ ಹೆಚ್ಚು ಆದಾಯ ನೀಡುತ್ತಿದ್ದರೂ ಸಹ ಮಾರುಕಟ್ಟೆಗೆ ಬರುವ ರೈತರಿಗೆ ಅಗತ್ಯವಾಗಿ ಬೇಕಾಗಿರುವಂತಹ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಕೊಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಮುಂಡರಗಿ ಎ.ಪಿ.ಎಂ.ಸಿ.ಗೆ ಹೆಚ್ಚಾಗಿ ಕೊಪ್ಪಳ, ಹೂವಿನಹಡಗಲಿ, ಶಿರಹಟ್ಟಿ ತಾಲೂಕಿನ ರೈತರು ವ್ಯಾಪಾರ ವಹಿವಾಟಕ್ಕೆ ಬರುತ್ತಾರೆ. ಆದರೆ ಇಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳು ಸಿಗುತ್ತಿಲ್ಲ ಎಂದು ರೈತರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಮಾರುಕಟ್ಟೆಯಲ್ಲಿ ರೈತರಿಗಾಗಿ ಸರಿಯಾದ ಮೂತ್ರಾಲಯ ಹಾಗೂ ಶೌಚಾಲಯಗಳಿಲ್ಲ, ಇದ್ದ ಶೌಚಾಲಯದಲ್ಲಿ ಕಸ-ಕಡ್ಡಿ ಬೆಳೆದು ಹಾಳಾಗಿದೆ. ವಿಶ್ರಾಂತಿಗೆ ರೈತ ಭವನವಿಲ್ಲ, ಎಪಿಎಂಸಿಯಲ್ಲಿ ರೈತ ಭವನವಿರದಿದ್ದರೂ 2020ರಲ್ಲಿ ಎಪಿಎಂಸಿಯು 4 ಲಕ್ಷ 78 ಸಾವಿರ ರೂ. ಖರ್ಚು ಮಾಡಿ 20 ಕಾಟ್ (ಪಲ್ಲಂಗ)ಗಳನ್ನು ಖರೀದಿ ಮಾಡಿದೆ. ಖರೀದಿ ಮಾಡಿ 6 ವರ್ಷ ಕಳೆದಿದ್ದರೂ ಇದುವರೆಗೂ ರೈತ ಭವನವಾಗಿಲ್ಲ, 20 ಕಾಟ್ (ಪಲ್ಲಂಗ)ಗಳು ತುಕ್ಕು ಹಿಡಿದು ಮೂಲೆಯಲ್ಲಿ ಬಿದ್ದಿವೆ. ರೈತ ಭವನ ಇನ್ನೂ ನಿರ್ಮಾಣವಾಗಿಲ್ಲ, ಹಾಗಾಗಿ ತಂದಾಗಿನಿಂದ ಅವುಗಳನ್ನು ಬಳಕೆ ಮಾಡಲಾರದೆ ಡೆಡ್ ಸ್ಟಾಕ್ ರೂಮಿನಲ್ಲಿ ಇರಿಸಿದ್ದಾರೆ. ಎಪಿಎಂಸಿ ಗದಗ ರಸ್ತೆಗೆ ಹೊಂದುಕೊಂಡಂತೆ ಗೇಟ್ ಇದೆ. ಆದರೆ ಎಪಿಎಂಸಿ ಇನ್ನೊಂದು ಕಡೆ ಯಾವುದೇ ಗೇಟ್ ಇಲ್ಲದ ಕಾರಣ ಉಸುಕು ಸಾಗಿಸುವ ಟ್ರ್ಯಾಕ್ಟರ್‌ಗಳು ಮತ್ತು ಭಾರೀ ವಾಹನಗಳು ಎಪಿಎಂಸಿ ರಸ್ತೆಗಳಲ್ಲಿಯೇ ಚಲಿಸುತ್ತಿರುವುದರಿಂದ ರಸ್ತೆಗಳು ಹಾಳಾಗುವ ಭೀತಿ ಇದೆ.

ಎಪಿಎಂಸಿ ಮಾರುಕಟ್ಟೆಯಲ್ಲಿ ಕಾರ್ಮಿಕರಾಗಿ ಕೆಲಸ ಮಾಡುವಂತಹ ಕಾರ್ಮಿಕರಿಗೆ ವಿಶ್ರಾಂತಿ ಗೃಹ ನಿರ್ಮಾಣ ಮಾಡಿಲ್ಲ, ಮಾರುಕಟ್ಟೆಯ ಚರಂಡಿಗಳ ಸ್ವಚ್ಛತೆ ಹಾಗೂ ದುರಸ್ತಿಯಾಗಿಲ್ಲ, ರೈತರ ಬೆಳೆಗಳ ಗುಣಮಟ್ಟವನ್ನು ಅಳತೆ ಮಾಡಲು 50 ಲಕ್ಷ ರೂ. ಖರ್ಚು ಮಾಡಿ ಅಸೆಸ್ಸಿಂಗ್ ಲ್ಯಾಬೋರೇಟರಿ ಮಶೀನ್‌ನ್ನು ಸರ್ಕಾರವು ನೀಡಿದ್ದರೂ ಸಹ ಅಧಿಕಾರಿಗಳು ಆ ಮಶೀನ್‌ನ್ನು ಬಳಕೆ ಮಾಡಿಕೊಳ್ಳುತ್ತಿಲ್ಲ, ದವಸ ಧಾನ್ಯಗಳನ್ನು ಸ್ವಚ್ಛಮಾಡುವಂತಹ ಯಂತ್ರವನ್ನು ಸರ್ಕಾರವು ಮುಂಡರಗಿ ಎಪಿಎಂಸಿಗೆ ನೀಡಿದ್ದರೂ ಅಧಿಕಾರಿಗಳು ಅದನ್ನು ಬಳಕೆ ಮಾಡಿಸಿ ರೈತರಿಗೆ ಅನುಕೂಲ ಮಾಡಿಕೊಡದಿರುವುದು ವಿಪರ್ಯಾಸ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.



ಸಿಬ್ಬಂದಿ ಕೊರತೆ

ಮುಂಡರಗಿ ಎ.ಪಿ.ಎಂ.ಸಿ.ಯಲ್ಲಿ ಸಿಬ್ಬಂದಿ ಕೊರತೆ ಹೆಚ್ಚಾಗಿದ್ದು, ಬಹುತೇಕ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿಸಿಕೊಳ್ಳುತ್ತಿರುದರಿಂದ ಕೆಲವು ಸಮಸ್ಯೆಗಳು ಆಗುತ್ತಿವೆ. ಈ ವರ್ಷದ ಕ್ರಿಯಾ ಯೋಜನೆಯಲ್ಲಿ ರೈತ ಭವನಕ್ಕೆ ಹಾಗೂ ಕಾರ್ಮಿಕರ ವಿಶ್ರಾಂತಿ ಗೃಹ ನಿರ್ಮಾಣಕ್ಕೆ ಸರ್ಕಾರದ ಅನುಮೋದನೆಗೆ ಕ್ರಿಯಾಯೋಜನೆ ರೂಪಿಸಲಾಗಿದೆ. 2020ರಲ್ಲಿ ಕೋವಿಡ್-19 ಹಿನ್ನೆಲೆ ಅಂದಿನ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳು 20 ಕಾಟ್ (ಪಲ್ಲಂಗ)ಗಳನ್ನು ಖರೀದಿ ಮಾಡಿದ್ದಾರೆ. ಅದರ ಬಗ್ಗೆ ಸಂಪೂರ್ಣ ಮಾಹಿತಿ ನನಗಿಲ್ಲ ಎಂದು ಎಪಿಎಂಸಿಯ ಕಾರ್ಯದರ್ಶಿ ರಾಘವೇಂದ್ರ ತಿಳಿಸಿದ್ದಾರೆ.

> ರೈತರು ಸೂರ್ಯಕಾಂತಿ, ಗೋವಿನಜೋಳ, ತೊಗರಿ, ಶೇಂಗಾ ಇನ್ನೂ ಮುಂತಾದ ಬೆಳೆಗಳನ್ನು ತಂದು ಟೆಂಡರ್ ಒಡೆಯುವ ತನಕ ರೈತರು ಉರಿ ಬಿಸಿಲಿನಲ್ಲಿ ಕುಳಿತುಕೊಳ್ಳಬೇಕಾಗಿದೆ. ಆದ್ದರಿಂದ ಹಮಾಲರಿಗೆ ವಿಶ್ರಾಂತಿ ಗೃಹ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಅವಶ್ಯವಾಗಿದೆ. ಕಾಟ್‌ಗಳನ್ನು ಖರೀದಿ ಮಾಡಿರುವುದರ ಕುರಿತು ತನಿಖೆ ಮಾಡಬೇಕು. ಹೈಮಾಸ್ಕ್ ದೀಪಗಳನ್ನು ಅಳವಡಿಸುವ ಕಾರ್ಯ ತೀವ್ರವಾಗಿ ನಡೆಯಬೇಕು.
>
> ■ ಶಿವಾನಂದ ಇಟಗಿ, ರಾಜ್ಯ ಕಾರ್ಯದರ್ಶಿ, ಕರ್ನಾಟಕ ರೈತ ಸಂಘ

- ಫಿಲ್ಟರ್ ನೀರನ್ನು ನೀಡುವ ಒಂದು ಪ್ಲ್ಯಾಂಟ್ ಇದೆ. ಆದರೆ ಅದು ಯಾವಾಗ ಸರಿ ಇರುತ್ತದೆ, ಇರುವುದಿಲ್ಲ ತಿಳಿಯದಂತಾಗಿದೆ
- ರೈತರು ಮಾರುಕಟ್ಟೆಗೆ ತಂದ ಕಾಳುಗಳನ್ನು ಹಮಾಲರು ಅತೀ ಹೆಚ್ಚು ತಗೆದುಕೊಳ್ಳುತ್ತಿದ್ದು ಅದನ್ನು ನಿಯಂತ್ರಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂಬುದು ರೈತರ ಆರೋಪ

ಕೊಳಚೆ ಕಾಲುವೆ ಹೂಳು ತೆಗೆಯಲು ಒತ್ತಾಯ

ನರಗುಂದ: ತಾಲೂಕಿನ ಕೊಣ್ಣೂರ ಗ್ರಾಮದಲ್ಲಿನ ಕೊಳಚೆ ಕಾಲುವೆಯಲ್ಲಿನ ಹೂಳನ್ನು ತೆಗಿಸಲು ನೀರಾವರಿ ಇಲಾಖೆಯ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕೆಂದು ತಾಲೂಕು ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಅಧ್ಯಕ್ಷ ಉಮೇಶ ಮರ್ಚಪ್ಪನವರ ಆಗ್ರಹಿಸಿದರು.

ಅವರು ಪಟ್ಟಣದ ನೀರಾವರಿ ನಿಗಮದ ಕಚೇರಿಯಲ್ಲಿನ ಅಧಿಕಾರಿಗಳಿಗೆ ಮನವಿ ಅರ್ಪಿಸಿ ಮಾತನಾಡಿ, ರಾಮದುರ್ಗ ತಾಲೂಕು ಮತ್ತು ನರಗುಂದ ತಾಲೂಕಿನ ಹಲವಾರು ಗ್ರಾಮಗಳಲ್ಲಿ ತೋಟಗಾರಿಕೆ ಬೆಳೆ ಮತ್ತು ಕಾಯಿಪಲ್ಲೆಯನ್ನು ಬೆಳೆಯುತ್ತಾರೆ. ಈ ಎಲ್ಲ ಬೆಳೆಗಳಿಗೆ ಪ್ರತಿವರ್ಷ ರೈತರ ಜಮೀನುಗಳಿಗೆ ನೀರು ಪೂರೈಕೆ ಮಾಡುವ ಮುಖ್ಯ ಕಾಲುವೆಯಾಗಿದೆ. ಕಾಲುವೆಯಲ್ಲಿ ಜಾಲಿ ಕಂಟಿ, ಆಪ್, ಹುಲ್ಲು, ಕಸ ಕಡ್ಡಿ ತುಂಬಿಕೊಂಡಿದ್ದರಿಂದ ಸರಿಯಾಗಿ ರೈತರ ಜಮೀನುಗಳಿಗೆ ನೀರು ಬರುತ್ತಿಲ್ಲ, ಈಗಾಗಲೇ ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕಾಲುವೆ ಹೂಳು ತಗಿಸಬೇಕೆಂದು ಮೌಖಿಕವಾಗಿ ಮನವಿ ಮಾಡಿಕೊಂಡರು ಕೂಡ ಯಾವುದೇ ರೀತಿಯ ಪ್ರಯೋಜನವಾಗಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು. ಈ ಕೊಳಚೆ ಕಾಲುವೆಯು ರಾಮದುರ್ಗ ತಾಲೂಕಿನಿಂದ ನರಗುಂದ ತಾಲೂಕಿನ ಅನೇಕ ಗ್ರಾಮಗಳ ಮುಖಾಂತರ ರೋಣ ತಾಲೂಕಿನ ಹಲವಾರು ಗ್ರಾಮಗಳಿಗೆ ಒಟ್ಟು 35 ಕಿಮೀ ವರೆಗೆ ಈ ಕಾಲುವೆ ನೀರು ಹರಿಯುತ್ತದೆ. ರೈತರಿಗೆ ಬಹಳ ಅವಶ್ಯವಿರುವ ಕಾಲುವೆ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯ ಸಲ್ಲ, ನೀರಾವರಿ ನಿಗಮದ ಅಧಿಕಾರಿಗಳು ಈ ಕಾಲುವೆ ಹೂಳು ತೆಗೆಸದಿದ್ದರೆ ನೀರು ಪೂರೈಕೆ ಮಾಡಲು ನಾವು ಬಿಡುವುದಿಲ್ಲವೆಂದು ಎಚ್ಚರಿಕೆ ನೀಡಿದರು.

ನೀರಾವರಿ ನಿಗಮದ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರ ಜಗದೀಶ ಕುರಿ ಅವರು ರೈತರ ಮನವಿ ಸ್ವೀಕರಿಸಿ, ಈ ಕಾಲುವೆ ಹೂಳು ತೆಗೆಸಲು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಶಂಕರಗೌಡ ಶಿರಿಯಪ್ಪಗೌಡ್ರ, ತಿಮ್ಮರಡ್ಡಿ ವಾಸನ, ಸುರೇಶ ಐನಾಪೂರ, ಗುರುಶಾಂತ ನರಸಾಪೂರ, ಮುತ್ತಣ್ಣ ಬದಾಮಿ, ಸೇರಿದಂತೆ ಮುಂತಾದವರು ಇದ್ದರು.



ಜಿ.ಎಸ್.ಪಾಟೀಲರಿಗೆ ಜೈ ಭೀಮ್ ರತ್ನ ರಾಜ್ಯ ಪ್ರಶಸ್ತಿ

ನರೇಗಲ್ಲ: ಜೈ ಭೀಮ ಸೇನಾ ರಾಜ್ಯ ಸಂಘರ್ಷ ಸಮಿತಿ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಅಭಿಮಾನಿ ಬಳಗ ಮತ್ತು ಜಿ. ಎಸ್. ಪಾಟೀಲ ಅವರ ಅಭಿಮಾನಿ ಬಳಗದ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಹಾಗೂ ಡಾ. ಬಾಬು ಜಗಜೀವನ್ ರಾಂ ಅವರ 119ನೇ ಜಯಂತ್ಯುತ್ಸವ ಆಚರಣೆಯನ್ನು ಮೇ 16 ರಂದು ಸಂಜೆ 4 ಗಂಟೆಗೆ ಪಟ್ಟಣದ ಅಂಬೇಡ್ಕರ್ ಸರ್ಕಲ್ ಹಳೇ ಬಸ್ ನಿಲ್ದಾಣ ಸಮೀಪದಲ್ಲಿ ಆಯೋಜನೆ ಮಾಡಲಾಗಿದೆ ಎಂದು ಜೈ ಭೀಮ ಸೇನಾ ರಾಜ್ಯ ಸಂಘರ್ಷ ಸಮಿತಿ ರಾಜ್ಯ ಉಪಾಧ್ಯಕ್ಷ ಹಾಗೂ ಗಜೇಂದ್ರಗಡ ತಾಲೂಕು ಘಟಕ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮೈಲಾರಪ್ಪ ವೀ. ಚಳ್ಳಮರದ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕಾರ್ಯಕ್ರಮದ ಸಾನ್ನಿಧ್ಯವನ್ನು ಗದಗ ವೀರೇಶ್ವರ ಪುಣ್ಯಾಶ್ರಮ ಕಲ್ಲಯ್ಯಜ್ಜನವರು, ಹಿರೇಮಠ-ನರೇಗಲ್ಲ, ಮೂಲಿಮಠ-ಸವದತ್ತಿಯ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ರೋಣ ಬೂದಿಶ್ವರಮಠದ ಡಾ. ವಿಶ್ವನಾಥ ಸ್ವಾಮೀಜಿ, ನರೇಗಲ್ಲನ ರಹಿಮಾನ ಶಾವಲಿ ದರ್ಗಾದ ಸಯ್ಯದ್ ಮಂಜೂರ ಹುಸೇನ ಶ್ಯಾವಲಿ ಶರಣರು, ಇಟಗಿಯ ಶಿವಶರಣ ಗೆದಿಗೆಪ್ಪಜ್ಜನವರು, ಸೂಡಿ ಮರುಳು ಶಿದ್ದೇಶ್ವರ ಸ್ವಾಮೀಜಿ ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಶಾಸಕ ಹಾಗೂ ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರಿನ ಅಧ್ಯಕ್ಷ ಜಿ. ಎಸ್. ಪಾಟೀಲರು ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್. ಕೆ. ಪಾಟೀಲರು ಅಂಬೇಡ್ಕರ್ ಅವರ ಮೂರ್ತಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಕರ್ನಾಟಕ ಸರ್ಕಾರ ಬೆಂಗಳೂರಿನ ಅಬಕಾರಿ ಇಲಾಖೆಯ ಸಚಿವ ಆರ್.ಬಿ. ತಿಮ್ಮಾಪುರ ಉದ್ಘಾಟಿಸಲಿದ್ದಾರೆ. ರೋಣ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮಿಥುನ್ ಜಿ. ಪಾಟೀಲ ಅವರು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಗದಗ ಜಿಲ್ಲಾ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಕೃಷ್ಣೇಗೌಡ ಎಚ್. ಪಾಟೀಲ ಡಾ. ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಕ್ಷಯ ಐ. ಪಾಟೀಲ ಸಂವಿಧಾನ ಪೀಠಿಕೆಯ ವಾಚನ ಮಾಡಲಿದ್ದಾರೆ. ವಕ್ತಾರರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಾಗೂ ಬಿಎಂಟಿಸಿಯ ರಾಜ್ಯ ಉಪಾಧ್ಯಕ್ಷರಾದ ನಿಕೇತ್ ರಾಜ್ ಮೌರ್ಯ ಅವರು ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ್ ರಾವ್ ಅವರ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದರು.

ಶಾಸಕ ಜಿ. ಎಸ್. ಪಾಟೀಲರಿಗೆ ಜೈ ಭೀಮ್ ರತ್ನ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ನಿಸ್ವಾರ್ಥದಿಂದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಎಂಟು ಮಹನೀಯರಿಗೆ ವಿಶೇಷ ಸನ್ಮಾನ ನಡೆಯಲಿದೆ. ಅಷ್ಟೇ ಅಲ್ಲದೆ ಸರ್ಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಗೌರವಾನ್ವಿತ ಮಾದಿಗ ಸಮುದಾಯದವರಿಗೆ ಸನ್ಮಾನ ಹಾಗೂ ಎಸ್ ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಜನಮಂಗಳ ಕಾರ್ಯಕ್ರಮದಿಂದ ಸಬಲೀಕರಣ

ಲಕ್ಷ್ಮೇಶ್ವರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಡಿಯಲ್ಲಿ ಜಾರಿಗೆ ಬಂದಿರುವ ಜನಮಂಗಳ ಕಾರ್ಯಕ್ರಮವು ವಿಶಿಷ್ಟಚೇತನರು ಮತ್ತು ವಿಶೇಷ ಚೇತನರ ಸಬಲೀಕರಣ ಹಾಗೂ ಕಲ್ಯಾಣಕ್ಕಾಗಿ ರೂಪಿಸಲಾದ ಒಂದು ಮಹತ್ವದ ಯೋಜನೆ ಎಂದು ಸಂಘದ ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕಿನ ಯೋಜನಾಧಿಕಾರಿ ಪುನೀತ ಓಲೆಕಾರ ಹೇಳಿದರು.

ಅವರು ತಾಲೂಕಿನ ಬಡ್ನಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಜನಮಂಗಳ ಕಾರ್ಯಕ್ರಮದಡಿಯಲ್ಲಿ ಡಾ. ಡಿ ವೀರೇಂದ್ರ ಹೆಗ್ಗಡೆ ಅವರು ಮಂಜೂರು ಮಾಡಿದ ಬಡ್ನಿ ಗ್ರಾಮದ ರವಿ ಯಲವಗಿ

ಔಟ್ ಸೈಡ್ ವೀಲ್ ಚೇರ್ ಅನ್ನು ವಿತರಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಗ್ರಾಮದ ಶಿವಾನಂದಪ್ಪ ಅಗಸಿಬಾಗಿಲ, ವಲಯದ ಮೇಲ್ವಿಚಾರಕ ನಿಂಗಪ್ಪ ಪಾಟೀಲ, ಒಕ್ಕೂಟದ ಪದಾಧಿಕಾರಿಗಳು, ಸೇವಾ ಪ್ರತಿನಿಧಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

ಜೀವನಮಟ್ಟ ಸುಧಾರಣೆ

ಜನಸಾಮಾನ್ಯರ ಜೀವನಮಟ್ಟ ಸುಧಾರಿಸುವಲ್ಲಿ ಮಹಿಳೆಯರ ಸಬಲಿಕರಣ ಮಹಿಳಾ ಸ್ವಾವಲಂಬನೆಗೆ ಧರ್ಮಸ್ಥಳ ಸಂಘ ಸಹಕಾರಿ. ರೈತರು, ಆರ್ಥಿಕವಾಗಿ ಹಿಂದುಳಿದ ಮತ್ತು ದುರ್ಬಲ ವರ್ಗದ ಜನರ ಏಳಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಸಮುದಾಯ ಅಭಿವೃದ್ಧಿ, ಸುಜ್ಞಾನನಿಧಿ ಶಿಷ್ಯವೇತನ, ಶಾಲೆಗಳಿಗೆ ಪೀಠೋಪಕರಣ ವಿತರಣೆ, ದೇವಸ್ಥಾನ ಜೀರ್ಣೋದ್ಧಾರ, ಮದ್ಯ ವರ್ಜನ ಶಿಬಿರ, ಕೆರೆಗಳ ಹೂಳೆತ್ತುವುದು, ಶ್ರದ್ಧಾ ಕೇಂದ್ರ ಸ್ವಚ್ಛತೆ, ಮಾಸಾಶನ ಸೇರಿ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬರಲಾಗುತ್ತಿದೆ ಎಂದು ಸಂಘದ ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕಿನ ಯೋಜನಾಧಿಕಾರಿ ಪುನೀತ ಓಲೆಕಾರ ಹೇಳಿದರು.



ಗ್ರಾಹಕರ ಸಂವಾದ ಸಭೆ ಇಂದು

ನರಗುಂದ: ಪಟ್ಟಣದ ಕಾರ್ಯ ಮತ್ತು ಪಾಲನಾ ಉಪ-ವಿಭಾಗೀಯ ಕಚೇರಿ ಮಟ್ಟದಲ್ಲಿ ಗ್ರಾಹಕರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನೇರವಾಗಿ ಗ್ರಾಹಕರಿಂದ ಆಲಿಸಿ ಈ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಗ್ರಾಹಕರ ಸಂವಾದ ಸಭೆಯನ್ನು ಮೇ 16ರಂದು ಮಧ್ಯಾಹ್ನ 3ರಿಂದ 4.30ರ ವರೆಗೆ ಕಾರ್ಯ ಮತ್ತು ಪಾಲನಾ ಉಪ ವಿಭಾಗೀಯ ಕಚೇರಿ ಹುವಿಸಕಂ.ನಿ ನರಗುಂದದಲ್ಲಿ ಸಭೆ ಕರೆಯಲಾಗಿದೆ. ಉಪ-ವಿಭಾಗೀಯ ವ್ಯಾಪ್ತಿಯ ಗ್ರಾಹಕರು ತಮ್ಮ ವಿದ್ಯುತ್ ಸಮಸ್ಯೆಗಳ ಕುರಿತು ಚರ್ಚಿಸಿ ತಮ್ಮ ಸಲಹೆ ನೀಡಬಹುದೆಂದು ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹು.ವಿ.ಸ.ಕಂ.ನಿ ನರಗುಂದ ಅವರು ತಿಳಿಸಿದ್ದಾರೆ.

ಇಂದು ಜೀವನ ದರ್ಶನ

ಗದಗ: ವಿವೇಕಾನಂದ ನಗರದ ಕಾಶೀ ವಿಶ್ವನಾಥ ದೇವಸ್ಥಾನದ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಭವನದಲ್ಲಿ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯು ಮೇ 16 ರಂದು ಸಂಜೆ 6.30ಕ್ಕೆ 58ನೇ ಜೀವನ ದರ್ಶನ, ಕಾಶಿ ವಿಶ್ವನಾಥನ ಪಾಲಕಿ ಸೇವೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಏರ್ಪಡಿಸಿದೆ.

ಸಾನ್ನಿಧ್ಯ ಬನ್ನಿಕೊಪ್ಪ, ಮೈಸೂರು ಅರಮನೆ ಜಪದ ಕಟ್ಟೆಮಠದ ಡಾ.ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ ಹಿಸುವರು. ನಿವೃತ್ತ ಪ್ರಾಚಾರ್ಯ ಡಾ.ಉಮೇಶ ಪುರದ ವೃದ್ಧಾಪ್ಯದಲ್ಲಿ ಆರೋಗ್ಯ ಸಂರಕ್ಷಣೆ ಎಂಬ ವಿಷಯವಾಗಿ ಉಪನ್ಯಾಸ ನೀಡುವರು. ಅಧ್ಯಕ್ಷತೆ ಸಮಿತಿಯ ಅಧ್ಯಕ್ಷ ಎ.ಟಿ.ನರೇಗಲ್ಲ ವಹಿಸುವರು. ಉಪಾಧ್ಯಕ್ಷ ಆರ್. ಆರ್.ಕಾಶಪ್ಪನವರ ಉಪಸ್ಥಿತರಿರುವರು. ಪ್ರಸಾದ ಸೇವೆಯನ್ನು ಶಿಕ್ಷಕ ಎನ್.ವ್ಹಿ.ಪಾಟೀಲ, ಸಮಿತಿಯ ಕಾರ್ಯದರ್ಶಿ ಕೆ.ಪಿ.ಗುಳಗೌಡರ, ಕೋಶಾಧ್ಯಕ್ಷ ಎಸ್.ಎಸ್.ಪಾಳೇಗಾರ, ನಿರ್ಮಲಾ ಪಾಟೀಲ ವಹಿಸಿಕೊಂಡಿದ್ದಾರೆ. ಎಸ್‌ಎಸ್‌ಎಲ್‌ಸಿ, ಸಿಬಿಎಸ್‌ಇ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ. 90ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದ ವಿವೇಕಾನಂದ ನಗರದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವದು ಎಂದು ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯ ಕಾರ್ಯದರ್ಶಿ ಕೆ.ಪಿ.ಗುಳಗೌಡರ ತಿಳಿಸಿದ್ದಾರೆ.

ಭಾರೀ ಮಳೆಗೆ ರಸ್ತೆಗಳು ಜಲಾವೃತ

ಲಕ್ಷ್ಮೇಶ್ವರ: ಪಟ್ಟಣದಲ್ಲಿ ಬುಧವಾರ ಮತ್ತು ಗುರುವಾರ ರಾತ್ರಿ ಮಳೆರಾಯ ಅಬ್ಬರಿಸಿದ್ದು, ಬಿಸಿಲಿನ ಬೇಗೆಯಿಂದ ತತ್ತರಿಸಿದ್ದ ಜನತೆಗೆ ತಂಪನೆರೆದಿದ್ದರೂ ಸಹ ಮಳೆ, ಗಾಳಿ, ಗುಡುಗು ಸಿಡಿಲಿನ ಅಬ್ಬರಕ್ಕೆ ಜನತೆ ನಲುಗುವಂತಾಯಿತು. ಸುಮಾರು ಗಂಟೆ ಸುರಿದ ಭಾರೀ ಮಳೆಗೆ ಪಟ್ಟಣದ ಪ್ರಮುಖ ರಸ್ತೆಗಳು ಜಲಾವೃತವಾಗಿ ಕೆರೆಯಂತಾಗಿತ್ತು.

ಪಟ್ಟಣದ ಶಿಗ್ಲಿ ಕ್ರಾಸ್, ಗ್ರಂಥಾಲಯದ ಬಳಿ ಅಪಾರ ಪ್ರಮಾಣದಲ್ಲಿ ನೀರು ಹರಿದು ಬಂದು ರಸ್ತೆಗಳಲ್ಲಿ ಕೊಳಚೆ ನೀರು ಸಮೇತ ನೀರು ತುಂಬಿಕೊಂಡಿದ್ದು, ವಾಹನ ಸವಾರರು, ಜನರು ಪರದಾಡುವಂತಾಗಿತ್ತು. ಪಟ್ಟಣದ ಬಹುತೇಕ ರಸ್ತೆಗಳಲ್ಲಿ ತಗ್ಗು ಗುಂಡಿಗಳು ತುಂಬಿಕೊಂಡಿದ್ದರಿಂದ ರಸ್ತೆಯಲ್ಲಿ ಬರುವ ಸವಾರರು ಸಮಸ್ಯೆ ಎದುರಿಸುವಂತಾಗಿದೆ. ಅನೇಕ ತಗ್ಗು ಪ್ರದೇಶಗಳಲ್ಲಿನ ಮನೆಗಳಿಗೆ ನೀರು ನುಗ್ಗಿ ಜನರು ಪರದಾಡುವಂತಾಗಿದೆ.

ಇಟ್ಟಿಗೆರೆಯ ಪಕ್ಕದ ಖಾಸಗಿಯವರಿಗೆ ಸೇರಿರುವ ಜಾಗದಿಂದ ಇಟ್ಟಿಕೆರೆಗೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿತ್ತು. ಜೊತೆಗೆ ಅಲ್ಲಿರುವ ದೇವಸ್ಥಾನ ಹಾಗೂ ಮನೆಗಳಿಗೆ ನೀರು ನುಗ್ಗಿ ಅಲ್ಲಿನ ಜನರು ತೊಂದರೆ ಅನುಭವಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಪುರಸಭೆ ವತಿಯಿಂದ ಸುಮಾರು 50 ಲಕ್ಷ ರೂ.ಗಳ ವೆಚ್ಚದಲ್ಲಿ ಖಾಸಗಿ ಜಾಗ ಮತ್ತು ಕೆರೆಗೆ ಅಡ್ಡಲಾಗಿ ಬೃಹತ್ ಪ್ರಮಾಣದ ಬಂಡು ಹಾಕಿದ್ದು, ನೀರು ಕೆರೆಯನ್ನು ಸೇರಲು ಮಾರ್ಗಗಳನ್ನು ಮಾಡಲಾಗಿತ್ತು. ಆದರೆ ತರಾತುರಿಯಲ್ಲಿ ಈ ಕಾಮಗಾರಿಯು ನಡೆದಿದ್ದು ಗುಣಮಟ್ಟದಲ್ಲಿ ನಡೆದಿಲ್ಲ ಎಂದು ಕರವೇ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷ ಶರಣು ಗೋಡಿ ಆಪಾದಿಸಿದ್ದಾರೆ. ಇದೀಗ ಮಳೆಗಾಲ ಆರಂಭ ಮೊದಲಮಳೆಯ ಹೊಡೆತಕ್ಕೆ ಬಂಡು ಪೂರ್ತಿಯಾಗಿ ಬಿರುಕು ಬಿಟ್ಟಿದ್ದು, ಇನ್ನೊಂದು ಮಳೆ ಸುರಿದರೆ ಇದು ನೆಲಕಚ್ಚುವದರಲ್ಲಿ ಅನುಮಾನವಿಲ್ಲ, ಇದು ಅಪಾಯದ ಮುನ್ಸೂಚನೆಯನ್ನು ನೀಡುವಂತಿದ್ದು, ಇದೇ ರಸ್ತೆಯಲ್ಲಿ ಜನರು ಅಡ್ಡಾಡುವದರಿಂದ ಸಮಸ್ಯೆ ಎದುರಿಸುವಂತಾಗುತ್ತದೆ. ಲಕ್ಷಾಂತರ ಹಣ ವ್ಯಯಿಸಿ ಗುಣಮಟ್ಟದ ಕಾಮಗಾರಿಯಾಗದಿರುವದಕ್ಕೆ ಸಂಬಂಧಿಸಿದವರು ಕ್ರಮತೆಗೆದುಕೊಳ್ಳಬೇಕೆಂದು ಶರಣು ಗೋಡಿ ಪುರಸಭೆಯನ್ನು ಆಗ್ರಹಿಸಿದ್ದಾರೆ.



ವಿದ್ಯುತ್ ವ್ಯತ್ಯಯ

ಭಾರೀ ಮಳೆಗೆ ವಿದ್ಯುತ್ ವ್ಯತ್ಯಯ ಕೂಡಾ ಉಂಟಾಗಿದ್ದು, ಮತ್ತೆ ರಾತ್ರಿಯ ವೇಳೆಯಲ್ಲಿಯೂ ಮಳೆ ಸುರಿದಿದ್ದು, ಅಲ್ಲಲ್ಲಿ ವಿದ್ಯುತ್ ಕಂಬಗಳು, ಮರಗಿಡಗಳು ಮಳೆಗಾಳಿಯ ಅಬ್ಬರಕ್ಕೆ ನೆಲಕಚ್ಚಿದ್ದು ರಾತ್ರಿಯಿಡೀ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿತ್ತು. ರಾತ್ರಿಯಿಡೀ ಪುರಸಭೆ ಹಾಗೂ ವಿದ್ಯುತ್ ಇಲಾಖೆ ನೌಕರರು ಇವುಗಳನ್ನು ತೆರವುಗೊಳಿಸಲು ಹರಸಾಹಸಪಟ್ಟರು.



ಗುಣಮಟ್ಟದ ಕೆಲಸ ಮಾಡಿದರೆ ನಿರಂತರ ಉದ್ಯೋಗ: ಕಂದಕೂರ

ಗದಗ: ರೋಣ ತಾಲೂಕಿನ ಸವಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೊನ್ನಾಪೂರ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಅಡಿಯಲ್ಲಿ ನಡೆಯುತ್ತಿರುವ ಸಾಮೂಹಿಕ ಬದು ನಿರ್ಮಾಣ ಕಾಮಗಾರಿಗೆ ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ ಕಂದಕೂರ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ಕಾಮಗಾರಿ ಸ್ಥಳದಲ್ಲಿ ಕೆಲಸದ ಪ್ರಗತಿ, ಗುಣಮಟ್ಟ ಹಾಗೂ ಕೂಲಿಕಾರರಿಗೆ ಕಲ್ಪಿಸಲಾಗುತ್ತಿರುವ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದ ಅವರು, ಸರ್ಕಾರದ ಮಾರ್ಗಸೂಚಿ ಅನುಸಾರ ಕೂಲಿಕಾರರು ಕಡ್ಡಾಯವಾಗಿ ಅಳತೆಗೆ ತಕ್ಕಂತೆ ಕೆಲಸ ನಿರ್ವಹಿಸಬೇಕು ಎಂದು ಸೂಚಿಸಿದರು.

ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆ ಆರೋಗ್ಯದ ದೃಷ್ಟಿಯಿಂದ ಎಲ್ಲರೂ ಮುಂಜಾನೆ ಬೇಗ ಕೆಲಸಕ್ಕೆ ಹಾಜರಾಗಿ ಮಧ್ಯಾಹ್ನದೊಳಗೆ ಕೆಲಸ ಮುಗಿಸಿಕೊಳ್ಳುವಂತೆ ಸಲಹೆ ನೀಡಿದರು. ಈ ವೇಳೆ ಕೂಲಿಕಾರರು ಗ್ರಾಮದಲ್ಲಿ ನಿರಂತರವಾಗಿ ನರೇಗಾ ಕಾಮಗಾರಿಗಳನ್ನು ಆರಂಭಿಸಿ ಉದ್ಯೋಗಾವಕಾಶ ಕಲ್ಪಿಸುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯ ನಿರ್ವಾಹಕ ಅಧಿಕಾರಿಗಳು, ಗುಣಮಟ್ಟದ ಹಾಗೂ ನಿಯಮಾನುಸಾರ ಕೆಲಸ ಮಾಡಿದಲ್ಲಿ ನಿರಂತರವಾಗಿ ಕೆಲಸ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಪರಿಶೀಲನೆ ಸಂದರ್ಭದಲ್ಲಿ ಕೂಲಿಕಾರರು ಹಾಗೂ ಸಿಬ್ಬಂದಿಗೆ ಹಲವು ಪ್ರಮುಖ ಸೂಚನೆಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಪಿಡಿಒ, ಟಿಐಇಸಿ, ಡಿಇಒ, ಜಿಕೆಎಂ, ಗ್ರಾಮ ಪಂಚಾಯತ್ ಸಿಬ್ಬಂದಿ ಹಾಗೂ ಗ್ರಾಮಸ್ಥರು ಇದ್ದರು.



ಹಾಜರಾತಿ ಕಡ್ಡಾಯ

ಪ್ರತಿದಿನ ಕಡ್ಡಾಯವಾಗಿ ಎರಡು ಬಾರಿ ಎನ್‌ಎಂಎಂಎಸ್ ಆ್ಯಪ್ ಮೂಲಕ ಹಾಜರಾತಿ ದಾಖಲಿಸಬೇಕು ಎಂದು ತಿಳಿಸಲಾಯಿತು. ಕಾಯಕ ಬಂಧುಗಳು ತಮ್ಮ ವ್ಯಾಪ್ತಿಯ ಕೂಲಿಕಾರರಿಗೆ ಪ್ರತಿದಿನ ಕೆಲಸದ ಅಳತೆಯ ಕುರಿತು ಮಾಹಿತಿ ನೀಡಿ, ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸಲು ಮಾರ್ಗದರ್ಶನ ನೀಡುವಂತೆ ಸೂಚಿಸಲಾಯಿತು.

ಅಭಿವೃದ್ಧಿಗೆ ಸಹಕಾರಿ

ಎನ್‌ಎಂಆರ್ ತೆಗೆದುಕೊಂಡ ಕೂಲಿಕಾರರು ಕಡ್ಡಾಯವಾಗಿ ಕಾಮಗಾರಿ ಸ್ಥಳಕ್ಕೆ ಹಾಜರಾಗಿ ಕೆಲಸ ನಿರ್ವಹಿಸಬೇಕು ಎಂದು ಅಧಿಕಾರಿಗಳು ಸೂಚಿಸಿದರು. ನರೇಗಾ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಬದು ನಿರ್ಮಾಣ ಕಾಮಗಾರಿಗಳು ಗ್ರಾಮೀಣ ಭಾಗದಲ್ಲಿ ನೀರು ಸಂರಕ್ಷಣೆ, ಮಣ್ಣಿನ ಸದ್ಬಳಕೆ ಹಾಗೂ ರೈತರ ಭೂಮಿಯ ಅಭಿವೃದ್ಧಿಗೆ ಸಹಕಾರಿಯಾಗುತ್ತಿದ್ದು, ಗ್ರಾಮಾಭಿವೃದ್ಧಿಗೆ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದರು.

ಕಿರುಸುದ್ದಿ

ರೈಲಿನ ಎಂಜಿನ್‌ನಲ್ಲಿ ದೋಷ
ಎರಡು ಗಂಟೆ ನಿಂತಲ್ಲೇ ನಿಂತ ಯಶವಂತಪುರ-ವಿಜಯಪುರ ರೈಲು

• **ಗದಗ:** ಯಶವಂತಪುರದಿಂದ ವಿಜಯಪುರಕ್ಕೆ ಹೊರಟಿದ್ದ ರೈಲಿನ ಎಂಜಿನ್ ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಪರಿಣಾಮ ಪ್ರಯಾಣಿಕರು ಎರಡು ಗಂಟೆಗಳ ಕಾಲ ತೊಂದರೆ ಅನುಭವಿಸಿದರು.

ಯಶವಂತಪುರ– ವಿಜಯಪುರ ರೈಲು ಕೊಪ್ಪಳ ಜಿಲ್ಲೆಯ ತಳಕಲ್ ತಲುಪಿದ ವೇಳೆ ಎಂಜಿನ್ ನಲ್ಲಿ ದೋಷ ಕಂಡು ಬಂದಿತ್ತು. ಸ್ವಲ್ಪ ದೂರ ಕ್ರಮಿಸಿ ಕಣಗಿನಹಾಳ ರೈಲ್ವೆ ಯಾರ್ಡ್ ಬಳಿಗೆ ಬರುವ ವೇಳೆ ಎಂಜಿನ್ ಸ್ಥಗಿತಗೊಂಡಿತ್ತು.ಎರಡು ಗಂಟೆ ಸಮಯ ರೈಲು ನಿಂತಲ್ಲೇ ನಿಂತಿದ್ದರಿಂದ ನಿಗದಿತ ಅವಧಿಯಲ್ಲಿ ನಿಗದಿತ ಸ್ಥಳ ತಲುಪಲಾಗದೇ ಜನರು ಪರದಾಡಿದರು. ಜತೆಗೆ, ಈ ಮಾರ್ಗದಲ್ಲಿ ಓಡುವ ರೈಲುಗಳ ವೇಳಾಪಟ್ಟಿಯಲ್ಲೂ ವ್ಯತ್ಯಾಸವಾಯಿತು.ರೈಲ್ವೆ ಎಂಜಿನ್ ನಲ್ಲಿ ತಾಂತ್ರಿಕ ದೋಷ ಕಂಡು ಬಂದ ಪರಿಣಾಮ ಯಶವಂತಪುರ ವಿಜಯಪುರ ರೈಲು ಸಂಚಾರ ವಿಳಂಬವಾಯಿತು. ಜತೆಗೆ, ಇತರೆ ರೈಲುಗಳ ಓಡಾಟಕ್ಕೂ ತೊಂದರೆ ಆಯಿತು. ಗದಗ ರೈಲ್ವೆ ನಿಲ್ದಾಣದಲ್ಲಿದ್ದ ಹೆಚ್ಚುವರಿ ಎಂಜಿನ್ ಈ ರೈಲಿಗೆ ಜೋಡಿಸಿ, ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಶುಕ್ರವಾರ ಬೆಳಿಗ್ಗೆ 10.10ರ ವೇಳೆಗೆ ಸಮಸ್ಯೆ ಬಗೆಹರಿದಿದೆ ಎಂದು ನೈರುತ್ಯ ರೈಲ್ವೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕುರುಗೋಡನಲ್ಲಿ ಬರ್ಬರ ಹತ್ಯೆ

• **ಜಮಖಂಡಿ:** ತಾಲೂಕಿನ ಕುರುಗೋಡ ಗ್ರಾಮದಲ್ಲಿ ವ್ಯಕ್ತಿಯೊಬ್ಬರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. 35 ವರ್ಷದ ಸಿದ್ದಪ್ಪ ಮಲ್ಲಪ್ಪ ಬಿರಾದಾರ ಹತ್ಯೆಗೀಡಾದ ವ್ಯಕ್ತಿ. ಎಂದಿನಂತೆ ತನ್ನ ಜಮೀನಿಗೆ ಹೋಗುವಾಗ ಯಾರೋ ದುಷ್ಕರ್ಮಿಗಳು ಆತನ ತಲೆಗೆ ಕಬ್ಬಿಣದ ರಾಡ್‌ನಿಂದ ಹೊಡೆದು ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ.ಸಾವಳಗಿ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಜಿಲ್ಲಾ ಪೋಲಿಸ ವರಿಷ್ಠಾಧಿಕಾರಿ ಸಿದ್ಧಾರ್ಥ್ ಗೋಯಲ್, ಡಿವೈಎಸ್‌ಪಿ ಸಯ್ಯದ್ ರೋಷನ್ ಜಮೀರ್, ಸಿಪಿಐ ಮಲ್ಲಪ್ಪ ಮಡ್ಡಿ ಹಾಗೂ ಸಾವಳಗಿ ಪಿಎಸ್‌ಐ ಅಪ್ಪು ಐಗಾಳಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.ಕೊಲೆಯ ನಿಖರ ಕಾರಣ ಇನ್ನೂ ಬಹಿರಂಗವಾಗಿಲ್ಲ. ಆರೋಪಿಗಳ ಪತ್ತೆಗೆ ಪೊಲೀಸರು ವಿಶೇಷ ತಂಡ ರಚಿಸಿ ತನಿಖೆ ಮುಂದುವರಿಸಿದ್ದಾರೆ.

ಹೃದಯಾಘಾತದಿಂದ ಇನ್ಸ್‌ಪೆಕ್ಟರ್ ಶಿವಪ್ಪ ನಾಯಕರ ಸಾವು

• **ಬೆಳಗಾವಿ:** ಪೊಲೀಸ್ ಇಲಾಖೆಯಲ್ಲಿ ದಕ್ಷ ಅಧಿಕಾರಿಯಾಗಿ ಗುರುತಿಸಿಕೊಂಡಿದ್ದ ಸಿಟಿ ಸ್ಪೆಷಲ್ ಬ್ರಾಂಚ್ ಇನ್ಸ್‌ಪೆಕ್ಟರ್ ಶಿವಪ್ಪ ನಾಯಕರ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. 56 ವರ್ಷದ ಇವರು 2010ರ ಬ್ಯಾಚ್‌ನ ಅಧಿಕಾರಿಯಾಗಿದ್ದು, ಕಳೆದ ಹಲವು ವರ್ಷಗಳಿಂದ ಇಲಾಖೆಯಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸುತ್ತಿದ್ದರು.



ಗುರುವಾರ ರಾತ್ರಿ ವೇಳೆ ಇದ್ದಕ್ಕಿದ್ದಂತೆ ಎದೆನೋವು ಕಾಣಿಸಿಕೊಂಡಿದ್ದು, ತಕ್ಷಣವೇ ಅವರನ್ನು ನಗರದ ಜಯದೇವ ಹೃದ್ರೋಗ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರು ಸಕಾಲಕ್ಕೆ ಚಿಕಿತ್ಸೆ ನೀಡಿದರೂ ಫಲಕಾರಿಯಾಗದೆ ಶುಕ್ರವಾರ ಬೆಳಿಗ್ಗೆ ಅವರು ಕೊನೆಯುಸಿರೆಳೆದಿದ್ದಾರೆ. ಸೌಮ್ಯ ಸ್ವಭಾವದ ಶಿವಪ್ಪ ಅವರು ಕಿರಿಯ ಅಧಿಕಾರಿಗಳಿಗೆ ಸದಾ ಮಾರ್ಗದರ್ಶಕರಾಗಿದ್ದರು. ಇವರ ಅಕಾಲಿಕ ನಿಧನವು ಇಡೀ ಪೊಲೀಸ್ ವಲಯದಲ್ಲಿ ಆಘಾತ ಮತ್ತು ತೀವ್ರ ಶೋಕವನ್ನುಂಟು ಮಾಡಿದಲ್ಲದೆ ಕುಟುಂಬಸ್ಥರ ಆಕ್ರನಂದನ ಮುಗಿಲು ಮುಟ್ಟಿದೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಸೋಮಹಟ್ಟಿ ಗ್ರಾಮಕ್ಕೆ ಅವರ ಪಾರ್ಥಿವ ಶರೀರವನ್ನು ಅಂತಿಮ ವಿಧಿವಿಧಾನಗಳಿಗಾಗಿ ಸ್ವಗ್ರಾಮಕ್ಕೆ ಕೊಂಡೊಯ್ಯಲಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿಗಳು ಜಯದೇವ ಆಸ್ಪತ್ರೆಗೆ ಭೇಟಿ ನೀಡಿ ಅಂತಿಮ ದರ್ಶನ ಪಡೆದು, ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದಾರೆ.

ಡಿಎಂಕೆ ಶಾಸಕ ಉದಯನಿಧಿ ಸ್ಟಾಲಿನ್ ಹೇಳಿಕೆ ವಿರುದ್ಧ ಬೃಹತ್ ಪ್ರತಿಭಟನೆ
ಸನಾತನ ಧರ್ಮ ಸೂರ್ಯನಷ್ಟೇ ಪವಿತ್ರ, ಶಾಶ್ವತ: ಚಿಂತಾಮಣಿ ಶ್ರೀ

• **ವಿಜಯನಗರ:** ಸನಾತನ ಧರ್ಮ ಸೂರ್ಯನಷ್ಟೇ ಪವಿತ್ರ, ಶಾಶ್ವತ. ಸನಾತನ ಧರ್ಮವನ್ನು ಯಾರಿಂದಲೂ ನಾಶಪಡಿಸಲು ಸಾಧ್ಯವಿಲ್ಲ. ನಾಶಪಡಿಸುತ್ತೇವೆ ಎಂದು ಹೇಳಿಕೊಂಡವರೇ ನಾಶವಾಗಲಿದ್ದಾರೆ ಎಂದು ಚಿಂತಾಮಣಿ ಮಠದ ಶಿವಾನಂದ ಭಾರತೀ ಚಿಂತಾಮಣಿ ಸ್ವಾಮೀಜಿ ಹೇಳಿದರು.

ಸನಾತನ ಧರ್ಮ ನಾಶಪಡಿಸುವುದಾಗಿ ತಮಿಳುನಾಡಿನ ವಿಧಾನಸಭೆಯಲ್ಲೇ ಹೇಳಿಕೆ ನೀಡಿದ ಡಿಎಂಕೆ ಶಾಸಕ ಉದಯನಿಧಿ ಸ್ಟಾಲಿನ್ ವಿರುದ್ಧ ಹೊಸಪೇಟೆಯಲ್ಲಿ ಹಿಂದೂ ಸನಾತನ ಸಂರಕ್ಷಣಾ ಸಮಿತಿ ವತಿಯಿಂದ ಶುಕ್ರವಾರ ಸಂಜೆ ನಗರದ ವಡಕರಾಯ ದೇವಸ್ಥಾನದಿಂದ ಆರಂಭವಾದ ಬೃಹತ್ ಪಂಜಿನ ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಸನಾತನ ಧರ್ಮಕ್ಕೆ ಹುಟ್ಟೇ ಇಲ್ಲ, ಹೀಗಾಗಿ ಅದರ ನಾಶವೂ ಸಾಧ್ಯವಿಲ್ಲ. ಇಂದು ವಿದೇಶದಲ್ಲಿ ಸಹ ಸನಾತನ ಧರ್ಮವನ್ನು ಅನುಸರಿಸುವವರ ಸಂಖ್ಯೆ ಹೆಚ್ಚುತ್ತಿದೆ. ಹಿಂದೂಗಳು ಒಗ್ಗಟ್ಟಿನಿಂದ ಇದ್ದರೆ ಇಂತಹ ಕಿಡಿಗೇಡಿಗಳ ಹೇಳಿಕೆಯಿಂದ ವಿಚಲಿತರಾಗುವ ಪ್ರಮೇಯ ಬರುವುದಿಲ್ಲ. ಸನಾತನ ಧರ್ಮಕ್ಕೆ ಅಪಚಾರ ಎಸಗಿದಾಗ ನಾವೆಲ್ಲ ಒಗ್ಗಟ್ಟು ಪ್ರದರ್ಶಿಸಿ ಮತ್ತೆ ಇಂತಹ ದುಸ್ಸಾಹಸಕ್ಕೆ ಇಳಿಯದಂತೆ ಎಚ್ಚರಿಕೆ ನೀಡಬೇಕಾಗುತ್ತದೆ ಎಂದು ಅವರು ಹೇಳಿದರು.ಹಂಪಿ ಮಾತಂಗ ಪೀಠದ ಪೂರ್ಣಾನಂದ ಭಾರತಿ ಸ್ವಾಮೀಜಿ ಉಪಸ್ಥಿತರಿದ್ದರು.

ಸನಾತನ ಧರ್ಮ ನಾಶಪಡಿಸಲು ಸಾಧ್ಯವೇ ಇಲ್ಲ: ಪುನೀತ್ ರಾಜ್‌ಕುಮಾರ್ ವೃತ್ತದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಶಿವಮೊಗ್ಗದ ಪ್ರೇರಕ ಭಾಷಣಕಾರ ಹಾಗೂ ವೈದ್ಯ ಡಾ.ರಾಹುಲ್ ದೇವರಾಜ್ ಅವರು ಸನಾತನ ಧರ್ಮದ ಧರ್ಮವನ್ನು ನಾಶಪಡಿಸಲು ಸಾಧ್ಯವೇ ಇಲ್ಲ ಎಂದು ಖಂಡತುಂಡವಾಗಿ ಹೇಳಿದರು.

ಹಿಂದೂಗಳು ಒಗ್ಗಟ್ಟು ಪ್ರದರ್ಶಿಸುವುದು ಕಡಿಮೆ, ಅವರಲ್ಲಿ ಒಗ್ಗಟ್ಟು ಇದ್ದರೆ ನೂರಾರು ಸ್ಟಾಲಿನ್‌ಗಳು ಬಂದರೂ ಸನಾತನ ಧರ್ಮಕ್ಕೆ ಒಂದಿಷ್ಟು ಕೊಂಕು ಉಂಟುಮಾಡುವುದು ಸಹ ಸಾಧ್ಯವಿಲ್ಲ ಎಂದರು.



ಎರಡು ಮನವಿ
ರಾಷ್ಟ್ರಪತಿಗಳಿಗೆ ಹಾಗೂ ಜಿಲ್ಲಾಡಳಿತ ಉಲ್ಲೇಖಿಸಿ ಎರಡು ಮನವಿಗಳನ್ನು ಉಪವಿಭಾಗಾಧಿಕಾರಿ ಪಿ.ವಿವೇಕಾನಂದ ಅವರ ಮೂಲಕ ಕಳುಹಿಸಿಕೊಡಲಾಯಿತು.

ರಾಷ್ಟ್ರಪತಿ ಅವರಿಗೆ ಕಳುಹಿಸಿದ ಮನವಿಯಲ್ಲಿ ಉದಯನಿಧಿ ಸ್ಟಾಲಿನ್ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸಿ, ಉಗ್ರ ಶಿಕ್ಷೆ ವಿಧಿಸಬೇಕು, ಸುಪ್ರೀಂ ಕೋರ್ಟ್ ಸಹ ಶಿಕ್ಷೆ ವಿಧಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

ಜಿಲ್ಲಾಡಳಿತಕ್ಕೆ ಸಲ್ಲಿಸಿದ ಮನವಿಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸನಾತನ ಹಿಂದೂ ಧರ್ಮ ನಾಶವಾಗಬೇಕೆಂದು ಚರ್ಚೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

ಪ್ರತಿಭಟನೆಯಲ್ಲಿ ಹಿಂದೂ ಸನಾತನ ಸಂರಕ್ಷಣಾ ಸಮಿತಿಯ ಗೌರವಾಧ್ಯಕ್ಷ ಅಶೋಕ್ ಜೀರೆ, ಸಂಚಾಲಕ ಎನ್.ಎಸ್.ರೇವಣಸಿದ್ದಪ್ಪ, ಸಹ ಸಂಚಾಲಕ ಅಪ್ಪರಾವ್ ಸಾನಬಾಳ್, ಮುಖಂಡರಾದ ಸಿದ್ಧಾರ್ಥ ಸಿಂಗ್, ಸಂದೀಪ್ ಸಿಂಗ್, ರಾಯಸಂ ಶ್ರೀನಿವಾಸ್, ಶಾರದಾ ಕುಲಕರ್ಣಿ, ಸುಜಾತಾ ರೇವಣಸಿದ್ದಪ್ಪ, ಎಲ್ಲಾ ಸಮುದಾಯಗಳ ಮುಖಂಡರು ಪಾಲ್ಗೊಂಡಿದ್ದರು.

ಪಂಜಿನ ಬೃಹತ್ ಮೆರವಣಿಗೆ
ವಡಕರಾಯ ದೇವಸ್ಥಾನದಿಂದ ಆರಂಭವಾದ ಪಂಜಿನ ಮೆರವಣಿಗೆ ಮೇನ್ ಬಜಾರ್ , ದೊಡ್ಡ ಮಸೀದಿ, ಗಾಂಧಿ ಚೌಕ, ಬಸ್‌ನಿಲ್ದಾಣ ಮೂಲಕ ಪುನೀತ್ ರಾಜ್‌ಕುಮಾರ್ ವೃತ್ತ ತಲುಪಿತು. ಎಲ್ಲ ಸಮುದಾಯಗಳ ಸಾವಿರಾರು ಮಂದಿ ಇದರಲ್ಲಿ ಪಾಲ್ಗೊಂಡಿದ್ದರು. ಪಂಜಿನ ಬೃಹತ್ ಮೆರವಣಿಗೆ ವಡಕರಾಯ ದೇವಸ್ಥಾನದಿಂದ ಆರಂಭವಾದ ಪಂಜಿನ ಮೆರವಣಿಗೆ ಮೇನ್ ಬಜಾರ್ , ದೊಡ್ಡ ಮಸೀದಿ, ಗಾಂಧಿ ಚೌಕ, ಬಸ್ ನಿಲ್ದಾಣ ಮೂಲಕ ಪುನೀತ್ ರಾಜ್‌ಕುಮಾರ್ ವೃತ್ತ ತಲುಪಿತು. ಎಲ್ಲ ಸಮುದಾಯಗಳ ಸಾವಿರಾರು ಮಂದಿ ಇದರಲ್ಲಿ ಪಾಲ್ಗೊಂಡಿದ್ದರು.

ರಾಜ್ಯ ಮಹಿಳಾ ಅಧಿವೇಶನ ನಾಳೆ



• **ಹುಬ್ಬಳ್ಳಿ:** ಭಾರತೀಯ ಮಜ್ದೂರ್ ಸಂಘದ ರಾಜ್ಯ ಘಟಕದಿಂದ ಅಹಲ್ಯಾ ಬಾಯಿ ಹೋಲ್ಕರ್ ಜಯಂತಿ ಅಂಗವಾಗಿ ಮೇ 17 ರಂದು ಬೆಳಗ್ಗೆ 10 ಗಂಟೆಗೆ ಧಾರವಾಡದ ದೈವಜ್ಞ ಕಲ್ಯಾಣ ಮಂಟಪದಲ್ಲಿ ದೇಶದ ಪ್ರಗತಿಗೆ ನಾರಿ ಶಕ್ತಿ ಎಂಬ ಒಂದು ದಿನದ ರಾಜ್ಯ ಮಹಿಳಾ ಅಧಿವೇಶನ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್. ಎಲ್. ವಿಶ್ವನಾಥ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಅಧಿವೇಶನಕ್ಕೆ ಚಾಲನೆ ನೀಡಲಿದ್ದಾರೆ. ಜಿಲ್ಲಾಧಿಕಾರಿ ಸ್ನೇಹಲ್ ಆರ್., ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ್, ರಾಷ್ಟ್ರ ಸೇವಿಕಾ ಸಮಿತಿಯ ಅಖಿಲ ಭಾರತೀಯ ಸಹ ಕಾರ್ಯವಾಹಿಕಾ ಅಲಕಾ ಇನಾಂದಾರ್, ಬಿ.ಎಂ.ಎಸ್‌ನ ಕೇಂದ್ರ ಕಾರ್ಯಸಮಿತಿ ಸದಸ್ಯೆ ಭೂಲೋಕೇಶ್ವರಿ, ಬಿ.ಎಂ.ಎಸ್ ನ ದಕ್ಷಿಣ ಭಾರತದ ಸಂಘಟನಾ ಕಾರ್ಯದರ್ಶಿ ರಾಧಾಕೃಷ್ಣ ಮುಖ್ಯ ಅತಿಥಿಗಳಾಗಿ ಭಾಗವಿಸಲಿದ್ದಾರೆ ಎಂದು ತಿಳಿಸಿದರು.

ಬಿ.ಎಂ.ಎಸ್ ರಾಜ್ಯ ಅಧ್ಯಕ್ಷ ಎನ್.ಕೆ.ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಅಧಿವೇಶನದಲ್ಲಿ ಉದ್ಯೋಗ ಕ್ಷೇತ್ರದ ಪ್ರಗತಿಯಲ್ಲಿ ಮಹಿಳೆಯರ ಪಾತ್ರ ಮತ್ತು ಸವಾಲುಗಳು ಎಂಬ ವಿಷಯದಲ್ಲಿ ಸಂವಾದವನ್ನು ಮುಖ್ಯ ಅತಿಥಿಗಳು ನಡಸಿಕೊಡಲಿದ್ದಾರೆ. ನಂತರ 12.30ಕ್ಕೆ ಶೋಭಾಯಾತ್ರೆ ನಡೆಯಲಿದೆ ಎಂದರು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ 1500ಕ್ಕೂ ಹೆಚ್ಚು ಭಾರತೀಯ ಮಜ್ದೂರ ಸಂಘದ ಸಂಯೋಜನೆಗೊಂಡಿರುವ ಯುನಿಯನ್ ಗಳ ಮಹಿಳಾ ಪದಾಧಿಕಾರಿಗಳು, ಸದಸ್ಯರು, ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಅಂಗನವಾಡಿ, ಆಶಾ ಮತ್ತು ಎನ್.ಎಚ್.ಎಮ್ ಕಾರ್ಯಕರ್ತರು ಕಟ್ಟಡ ನಿರ್ಮಾಣ ಕಾರ್ಮಿಕರು, ಅಸಂಘಟಿತ ವಲಯದ ಕಾರ್ಮಿಕರು, ಅಂಚೆ ಇಲಾಖೆಯ, ಬ್ಯಾಂಕನ ಮಹಿಳಾ ನೌಕರರು, ರೈಲ್ವೆ ಇಲಾಖೆ ಮತ್ತು ರಾಜ್ಯದ ಹಲವು ಕಾರ್ಖಾನೆಗಳ ಮಹಿಳಾ ನೌಕರರು, ಇ.ಎಸ್.ಐ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನ ನೌಕರರು ಭಾಗವಿಸಲಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಅಧ್ಯಕ್ಷ ನರೇಂದ್ರ ಜಾದವ್, ಕೇಂದ್ರ ಅಸಂಘಟಿತ ವಲಯದ ಸಹ ಪ್ರಭಾರಿ ಸಿ.ಟಿ.ಪಾಟೀಲ್, ವರಿಷ್ಠ ನಾಗರೀಕ ಪರಿಸಂಘದ ಬಾಬುರಾವ್ ಮನವಾಡಿ, ರಾಧಾಕೃಷ್ಣನ್ , ಗಂಗಾಧರ್ ಇದ್ದರು.

ಬಿವೈವಿ ಭೇಟಿಯಾದ ಕರವೇ ರಾಜ್ಯಾಧ್ಯಕ್ಷ



• **ಬೆಳಗಾವಿ:** ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ಪರವಾದ ಗೊತ್ತುವಳಿ ಅಂಗೀಕರಿಸಲೇಬೇಕೆಂದು ಕಳೆದ ಮಾರ್ಚ್ 26ರಿಂದ ಹೋರಾಟ ಮಾಡುತ್ತಿರುವ ಕನ್ನಡ ಪರ ಸಂಘಟನೆಗಳ ಬೇಡಿಕೆಯನ್ನು ಈಡೇರಿಸದ ಮಹಾಪೌರರ ಮತ್ತು ಉಪ ಮಹಾಪೌರರ ನಡೆ ಖಂಡಿಸಿ ಶುಕ್ರವಾರ ಕರವೇ (ಶಿವರಾಮೇಗೌಡ ಬಣ) ರಾಜ್ಯಾಧ್ಯಕ್ಷ ಎಲ್.ಶಿವರಾಮೇಗೌಡರು ಬೆಂಗಳೂರಿನಲ್ಲಿ ಬಿವೈ ವಿಜಯೇಂದ್ರ ಅವರನ್ನು ಭೇಟಿಯಾದರು.

ನಂತರ ಬೆಳಗಾವಿ ಪಾಲಿಕೆಯಲ್ಲಿಯಲ್ಲಿ ನಡೆದಿರುವ ಬೆಳವಣಿಗೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಕರ್ನಾಟಕ ಪರವಾದ ಗೊತ್ತುವಳಿಯನ್ನು ಅಂಗೀಕರಿಸಬೇಕೆಂದು ಬೆಳಗಾವಿಯ ಮಹಾಪೌರರಿಗೆ ಮತ್ತು ಉಪ ಮಹಾಪೌರರಿಗೆ ಆದೇಶ ನೀಡಬೇಕೆಂದು ಅಗ್ರಹಿಸಿದರು.

ಬೆಳಗಾವಿಯ ಗಡಿ ವಿಚಾರ ಹಾಗೂ ಎಂಇಎಸ್ ಪುಂಡರ ಪುಂಡಾಟಿಕೆಯ ಬಗ್ಗೆ ಮಹಾನಗರ ಪಾಲಿಕೆಯಲ್ಲಿ ಕರ್ನಾಟಕದ ಪರ ಗೊತ್ತುವಳಿ ಅಂಗೀಕರಿಸುವ ವಿಚಾರದ ಬಗ್ಗೆ ಕೇಂದ್ರದ ಜೊತೆ ಮಾತುಕತೆ ಮಾಡುತ್ತೇನೆ. ಕನ್ನಡ ನಾಡು,ನುಡಿ ಮತ್ತು ಗಡಿಯ ಹಿತಾಸಕ್ತಿ ಕಾಪಾಡಲು ತಮ್ಮ ಬಿಜೆಪಿ ಪಕ್ಷ ಬದ್ಧವಾಗಿದೆ ಎಂದರು.

ಈ ವೇಳೆ ಕರವೇ ಬೆಂಗಳೂರು ನಗರ ಅಧ್ಯಕ್ಷ ಶಂಕರ,ಸಮರ ಸೇನೆಯ ಅಧ್ಯಕ್ಷ ಜಗದೀಶ್ ಗೌಡ್ರ,ರಾಜ್ಯ ಮಾಧ್ಯಮ ಸಂಚಾಲಕ ಜೈ ಕುಮಾರ, ರಾಜ್ಯ ಯುವ ಘಟಕದ ಅಧ್ಯಕ್ಷ ಕನ್ನಡ ಕುಮಾರ, ರಾಜ್ಯ ವಿದ್ಯಾರ್ಥಿ ಘಟಕದ ಅಧ್ಯಕ್ಷ ಯಲಹಂಕ ಗುರು ಸೇರಿಂದತೆ ಹಲವರು ಇದ್ದರು.

ಬೆಳಗಾವಿ ಪಾಲಿಕೆಯಲ್ಲಿ ಕರ್ನಾಟಕದ ಪರವಾಗಿ ಗೊತ್ತುವಳಿ ಅಂಗೀಕಾರಕ್ಕೆ ಮೀನಮೇಷ

ಹಿಜಾಬ್‌ಗೆ ಅನುಮತಿ | ಶ್ರೀರಾಮ ಸೇನೆಯಿಂದ ಬೃಹತ್ ಪ್ರತಿಭಟನೆ
ರಾಜ್ಯ ಸರ್ಕಾರದ ಆದೇಶ ಪ್ರತಿ ಹರಿದು ಆಕ್ರೋಶ

• **ಕಲಬುರಗಿ:** ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್‌ಗೆ ಅನುಮತಿ ನೀಡುವ ಕುರಿತು ರಾಜ್ಯ ಸರ್ಕಾರದ ನಿಲುವನ್ನು ವಿರೋಧಿಸಿ, ಈ ಸಂಬಂಧ ಹೊರಡಿಸಲಾದ ಸರ್ಕಾರದ ಆದೇಶ ಪ್ರತಿಯನ್ನು ಹರಿದು ಹಾಕುವ ಮೂಲಕ ಶ್ರೀರಾಮ ಸೇನೆ ಕಲಬುರಗಿ ಜಿಲ್ಲಾ ಘಟಕವು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಜಿಲ್ಲಾಧಿಕಾರಿ ಮೂಲಕ ಮನವಿ ಸಲ್ಲಿಸಿ ಮಾತನಾಡಿದ

ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ಲಕ್ಷ್ಮಿಕಾಂತ್ ಸ್ವಾದಿ, 2022ರಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ ತೀರ್ಪಿನಲ್ಲಿ ಹಿಜಾಬ್ ಸಮವಸ್ತ್ರದ ಅವಿಭಾಜ್ಯ ಅಂಗವಲ್ಲ ಎಂದು ಸ್ಪಷ್ಟಪಡಿಸಿರುವುದನ್ನು ಉಲ್ಲೇಖಿಸಿದರು. ಇದೀಗ ಮತ್ತೆ ಹಿಜಾಬ್‌ಗೆ ಅನುಮತಿ ನೀಡಲು ಮುಂದಾಗಿರುವುದು ನ್ಯಾಯಾಂಗದ ತೀರ್ಪಿನ ಆಶ್ಯಕ್ಕೆ ವಿರುದ್ಧವಾಗಿದೆ ಎಂದು ಆರೋಪಿಸಿದರು.

ಶಾಲೆ-ಕಾಲೇಜುಗಳ ಸಮವಸ್ತ್ರ ಹಾಗೂ ಶಿಸ್ತು ಕುರಿತು ನಿರ್ಧಾರ ಕೈಗೊಳ್ಳುವ ಅಧಿಕಾರ ಎಸ್ ಡಿ ಎಂ ಸಿ ಹಾಗೂ ಸಂಬಂಧಿತ ಸಮಿತಿಗಳಿಗೆ ಇರುವ ಸಂದರ್ಭದಲ್ಲಿ ಸರ್ಕಾರದ ಈ ನಿಲುವು ಸಮಿತಿಗಳ ಹಕ್ಕನ್ನು ಕಸಿದುಕೊಂಡಂತಾಗಿದೆ. ಜೊತೆಗೆ ಕೇವಲ ಮುಸ್ಲಿಂ ತುಷ್ಟೀಕರಣದ ರಾಜಕೀಯ ಉದ್ದೇಶದಿಂದಲೇ ಹಿಜಾಬ್‌ಗೆ ಅನುಮತಿ ನೀಡುವ ಪ್ರಯತ್ನ ನಡೆಯುತ್ತಿದೆ. ವಿದ್ಯಾರ್ಥಿಗಳಲ್ಲಿ ಧರ್ಮ, ಜಾತಿ ಹಾಗೂ ಆರ್ಥಿಕ ಭೇದಭಾವ ಕಾಣಿಸಬಾರದು ಎಂಬ ಉದ್ದೇಶದಿಂದ ಸಮವಸ್ತ್ರವ್ಯವಸ್ಥೆಜಾರಿಗೆತರಲಾಗಿದ್ದು, ಸಮವಸ್ತ್ರದ ಮೂಲ ಉದ್ದೇಶವೇ ವಿದ್ಯಾರ್ಥಿಗಳಲ್ಲಿ ಸಮಾನತೆ ಮತ್ತು ಏಕತೆ ನಿರ್ಮಿಸುವುದಾಗಿದೆ ಎಂದರು.

ಹಿಜಾಬ್ ವಿಚಾರಕ್ಕೆ ಶಿವದಾರ, ಜನಿವಾರ ಹಾಗೂ ರುದ್ರಾಕ್ಷಿ ಮುಂತಾದ ವೈಯಕ್ತಿಕ ಆಚರಣೆಗಳನ್ನು ಅನವಶ್ಯಕವಾಗಿ ಜೋಡಿಸಿ ಹಿಂದು ಸಮಾಜದ ದಿಕ್ಕು ತಪ್ಪಿಸುವ ಕಾರ್ಯ ನಡೆಯುತ್ತಿದೆ. ಇವು ಬಟ್ಟೆಯ ಒಳಭಾಗದಲ್ಲಿ ಧರಿಸುವ ವೈಯಕ್ತಿಕ ಆಚರಣೆಗಳಾಗಿದ್ದು, ಸಮವಸ್ತ್ರದ ಹೊರಾಂಗಣ ನಿಯಮಗಳಿಗೆ ಯಾವುದೇ ಸಂಬಂಧ ಇಲ್ಲ ಎಂದು ಸ್ಪಷ್ಟಪಡಿಸಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು, ಹಿಜಾಬ್‌ಗೆ ಅನುಮತಿ ನೀಡುವ ಯಾವುದೇ ಕ್ರಮ ಕೈಗೊಳ್ಳಬಾರದು ಹಾಗೂ ಸಂಬಂಧಿತ ಸುತ್ತೋಲೆ ಸರ್ಕಾರ ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಯುವ ಘಟಕ ಅಧ್ಯಕ್ಷ ವೀರೇಶ್ ಕೋರಳ್ಳಿ, ಜಿಲ್ಲಾ ಉಪಾಧ್ಯಕ್ಷ ಶಿವಕುಮಾರ ಸಗರ, ಜಿಲ್ಲಾ ಸಂಚಾಲಕ ರಾಮಸೇವಕ ಶಿವು, ಉತ್ತರ ವಲಯ ಅಧ್ಯಕ್ಷ ಗಣೇಶ್ ರಾಠೋಡ್, ಗ್ರಾಮ ಘಟಕ ಅಧ್ಯಕ್ಷ ಉದಯ ಸುಲ್ತಾನಪುರ ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು.



ನಿರಂತರ ಹೋರಾಟ
ಹಿಜಾಬ್ ಗೆ ಅವಕಾಶ ನೀಡುವ ಮೂಲಕ ಸಚಿವ ಮಧು ಬಂಗಾರಪ್ಪ ಶಾಂತವಾಗಿರುವ ರಾಜ್ಯಕ್ಕೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಮುಸ್ಲಿಂ ಓಲೈಕೆ ಕೆಲಸಕ್ಕೆ ಸಚಿವರು ಕೈ ಹಾಕಿದ್ದು, ಪರವಾಗಿಲ್ಲ, ನಾವು ಸಹ ನಾಳೆಯಿಂದ ರಾಜ್ಯಾದ್ಯಂತ ಎಲ್ಲಾ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕೇಸರಿ ಶಾಲು ಹಾಕಿಕೊಂಡು ಹೋಗುವಂತೆ ಹೇಳುತ್ತೇವೆ.ಎಲ್ಲಿಯವರೆಗೂ ಆದೇಶ ಹಿಂದಕ್ಕೆ ಪಡೆಯುವುದಿಲ್ಲ,ಅಲ್ಲಿಯವರೆಗೂ ಸುಮ್ಮನೆ ಕೂಡುವ ಪ್ರಶ್ನೆಯೇ ಇಲ್ಲ.ನಾಳೆಯಿಂದ ಕಲಬುರಗಿಯಲ್ಲಿ ಶಾಲಾ ಮಕ್ಕಳಿಗೆ ಉಚಿತವಾಗಿ ಕೇಸರಿ ಶಾಲು ಹಾಕಿ ಕಳುಹಿಸುವ ಕೆಲಸ ಮಾಡುತ್ತೇವೆ ಎಂದು ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ಲಕ್ಷ್ಮಿಕಾಂತ್ ಸ್ವಾದಿ ತಿಳಿಸಿದ್ದಾರೆ.

ಕಲಬುರಗಿ ಫೈರಿಂಗ್ ಪ್ರಕರಣ: ಮೂವರ ಬಂಧನ



• **ಕಲಬುರಗಿ:** ನಗರದ ಖದೀರ್ ಚೌಕ್ ಬಳಿ ಇಬ್ಬರ ಮೇಲೆ ಗುಂಡು ಹಾರಿಸಿ, ಮಾರಕಾಸ್ತ್ರಗಳಿಂದ ಕೊಲೆಗೆ ಯತ್ನಿಸಿದ್ದ ಪ್ರಕರಣವನ್ನು ಭೇದಿಸುವಲ್ಲಿ ಆರ್.ಜಿ. ನಗರ ಠಾಣೆಯ ಪೊಲೀಸರು ಯಶಸ್ವಿಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಉಳಿದವರಿಗಾಗಿ ಜಾಲ ಬೀಸಲಾಗಿದೆ.

ಜಿದ್ದಾ ಕಾಲೋನಿಯ ಸಿಕಂದರ್ ಪಟೇಲ್, ಮೊಹ್ಮದ್ ರೆಹಾನ್ ಮತ್ತು ಮೌಲಾಲಿ ಕಟ್ಟಾ ನಿವಾಸಿ ಯಾಸೀರ್ ಹರಫಾದ್ ನನ್ನು ವಶಕ್ಕೆ ಪಡೆಯಲಾಗಿದ್ದು, ನಗರದ ಎಂ.ಎಸ್.ಕೆ ಮಿಲ್ ನಿವಾಸಿ ನೌಷಾದ್ ಪಟೇಲ್ ಹಾಗೂ ಡಿಗ್ಗಿ ಮೈಬೂಬ್ ಗುಂಪಿನ ನಡುವೆ ಕಳೆದ ಎರಡು ವರ್ಷಗಳಿಂದ ಹಗೆತನವಿತ್ತು. ಈ ಹಿಂದೆ ಅಶೋಕ ನಗರ ಠಾಣೆಯಲ್ಲಿ ಇವರ ವಿರುದ್ಧ ದೂರು ಸಹ ದಾಖಲಾಗಿತ್ತು. ಇದೇ ವೈಷಮ್ಯವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದ ಡಿಗ್ಗಿ ಮೈಬೂಬ್ ಬೆಂಬಲಿಗರಾದ ಬಾಂಬೆ ಅಸ್ಲಂ, ಚಿಲ್ಲುಮ್, ಲಂಗಡಾ ಸದ್ದಾಂ ಮತ್ತಿತರರು ಸೇರಿ ಮೇ 12ರಂದು ರಾತ್ರಿ ನೌಷಾದ್ ಮತ್ತು ಜಿಲಾನಿ ಖದೀರ್ ಚೌಕ್ ಬಳಿ ಚಹಾ ಕುಡಿಯುತ್ತಿದ್ದಾಗ ಏಕಾಏಕಿ ಫೈರಿಂಗ್ ನಡೆಸಿ, ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು.

ಪೊಲೀಸರ ಮಿಂಚಿನ ಕಾರ್ಯಾಚರಣೆ: ನಡುರಸ್ತೆಯಲ್ಲಿ ನಡೆದ ಈ ಗ್ಯಾಂಗ್ ವಾರ್ ಮಾದರಿಯ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿದ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಅವರು ವಿಶೇಷ ತನಿಖಾ ತಂಡವನ್ನು ರಚಿಸಿದ್ದರು. ಡಿಸಿಪಿಗಳಾದ ಪ್ರವೀಣ ನಾಯಕ, ಶಾಲೂ ಹಾಗೂ ಎಸಿಪಿ ಶರಣಪ್ಪ ಸುಬೇದಾರ್ ಮಾರ್ಗದರ್ಶನದಲ್ಲಿ ಪಿಐ ವಾಜೀದ್ ಪಟೇಲ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಮೂವರನ್ನು ಸೆರೆಹಿಡಿದಿದೆ.ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.ಪ್ರಕರಣದ ಪ್ರಮುಖ ಆರೋಪಿಗಳಾದ ಬಾಂಬೆ ಅಸ್ಲಂ, ಲಂಗಡಾ ಸದ್ದಾಂ ಸೇರಿ ತಲೆಮರೆಸಿಕೊಂಡಿರುವ ಇತರ ಆರೋಪಿಗಳ ಪತ್ತೆಗಾಗಿ ಪೊಲೀಸರು ವ್ಯಾಪಕ ಶೋಧ ಕಾರ್ಯ ಮುಂದುವರಿಸಿದ್ದಾರೆ.

ಮೋರಟಗಿಯಲ್ಲಿ ಮೇಲ್ಛಾವಣಿ ಕುಸಿದು ನಾಲ್ವರು ಸಾವು
ಮುಗಿಲು ಮುಟ್ಟಿದ ತಾಯಿಯ ಆಕ್ರಂದನ

• **ಸಿಂದಗಿ:** ರಾತ್ರಿ ಎಲ್ಲರೂ ಸೇರಿಯೇ ಮಾತಾಡೀವಿ. ಮುಂಜಾನೆ ಆಗುದ್ರಾಗ ಮಗ, ಸೊಸೆ ಮತ್ತು ಮೊಮ್ಮಕ್ಕಳು ಇಲ್ಲ. ಮನೆಯ ಹಿರಿಯ ಮಗನೇ ಅವನೆ. ಹೊಲ-ಮನಿ ಇಲ್ಲ, ನನ್ನ ಗಂಡು ಮಕ್ಕಳೇ ನನಗ ಹೊಲ. ರಟ್ಟೆನೇ ನಮ್ಮ ಹೊಲ. ಸುಮ್ನ ದುಡಕ್ಕೊಂತ ಬದುಕು ಕಟ್ಟಿಕೊಂಡಿದ್ವಿ. ಆದರೆ ವಿಧಿ ಅವನ ಬಾಳಲ್ಲಿ ಆಟವಾಡಿತು ಎಂದು ಮೃತ ಗುರುನಾಥ ಬಡಿಗೇರ ಅವರ ತಾಯಿ ಶಾಂತಾಬಾಯಿ ಆಕ್ರಂದನ ಎಲ್ಲರ ಕಣ್ಣಾಲೆಯನ್ನು ಒದ್ದೆಯಾಗಿಸಿತು.

ವಿಜಯಪುರ ಜಿಲ್ಲೆಯ ಆಲಮೇಲ ತಾಲೂಕಿನ ಮೋರಟಗಿ ಗ್ರಾಮದಲ್ಲಿ ನಿನ್ನೆ ತಡರಾತ್ರಿ ಸುರಿದ ಮಳೆ ಹಾಗೂ ಗಾಳಿಗೆ ಮನೆಯ ಮೇಲ್ಛಾವಣಿ ಕುಸಿದು ಸಾವಿಗೀಡಾದ ನಾಲ್ವರ ಕುಟುಂಬಸ್ಥರ ಭೇಟಿಗೆ ಸಚಿವ ಎಂ.ಬಿ.ಪಾಟೀಲ ಹಾಗೂ ಶಾಸಕರು ಆಗಮಿಸಿದ ವೇಳೆ ತಾಯಿ ತನ್ನ ನಡೆದ ಘಟನೆ ವಿವರಿಸಿದರು.

ಈ ಘಟನೆಯಲ್ಲಿ ಮೋರಟಗಿ ಗ್ರಾಮದ ಗುರುನಾಥ ಬಡಿಗೇರ (35), ಪತ್ನಿ ಜ್ಯೋತಿ ಬಡಿಗೇರ (28) ಮತ್ತು ಮಕ್ಕಳಾದ ಕಾಳಮ್ಮ ಬಡಿಗೇರ (13) ಹಾಗೂ ಕೀರ್ತಿ ಬಡಿಗೇರ(9) ಸಾವಿಗೀಡಾಗಿದ್ದಾರೆ.ಇನ್ನೊಂದು ಮನೆಯಲ್ಲಿ ಮಲಗಿದ್ದರಿಂದ ತಾನು ಹಾಗೂ ವೀರೇಶ ಬಡಿಗೇರ (10) ಪ್ರಾಣಾಪಾಯದಿಂದ ಪಾರಾಗಿರುವುದಾಗಿ ತಿಳಿಸಿದರು.ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಚಿವ ಎಂ.ಬಿ.ಪಾಟೀಲ, ಜಿಲ್ಲಾಧಿಕಾರಿ ಡಾ.ಆನಂದ ಕೆ, ಎಸ್ಪಿ ಲಕ್ಷ್ಮಣ ನಿಂಬರಗಿ ಹಾಗೂ ಜಿಪಂ ಸಿಇಒ ರಿಷಿ ಆನಂದ ಅವರಿಂದ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡ ಸಚಿವರು, ಗುರುನಾಥ ಬಡಿಗೇರ ಅವರ ತಾಯಿ ಶಾಂತಾಬಾಯಿ ಹಾಗೂ ಸುಪುತ್ರ ವೀರೇಶ ಹಾಗೂ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಶಾಸಕ ಅಶೋಕ ಮನಗೂಳಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಮಾಜಿ ಶಾಸಕ ರಮೇಶ ಭೂಸನೂರ, ಜಿಲ್ಲಾಧಿಕಾರಿ ಆನಂದ ಕೆ., ವಿಜಯಪುರ ಎಸ್ಪಿ ಲಕ್ಷ್ಮಣ ನಿಂಬರಗಿ, ಜಿಪಂ ಮಾಜಿ ಸದಸ್ಯ ನರಸಿಂಗಸಾ ತಿವಾರಿ, ಮುಖಂಡ ಅಶೋಕ ವಾರದ, ವಿಜಯಪುರ ಡಿ.ಎಚ್.ಓ ಸಂಪತಕುಮಾರ ಗುಣಾರಿ, ತಹಶೀಲ್ದಾರ್ ಕರೆಪ್ಪ ಬೆಳ್ಳಿ ಸೇರಿದಂತೆ ಕಂದಾಯ, ಆರೋಗ್ಯ, ಜಿಪಂ, ಪೊಲೀಸ್, ಅಗ್ನಿಶಾಮಕ ದಳ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಇದ್ದರು.



> **ಸಾವಿಗೀಡಾದ ನಾಲ್ವರ ಕುಟುಂಬಕ್ಕೆ ತಲಾ ರೂ.5 ಲಕ್ಷದಂತೆ ಒಟ್ಟು ರೂ.20ಲಕ್ಷ ಪರಿಹಾರ ನೀಡಲಾಗುವುದು ಮತ್ತು ಬದುಕುಳಿದಿರುವ ಮಗ ವೀರೇಶ ಬಡಿಗೇರ ವಿದ್ಯಾಭ್ಯಾಸಕ್ಕೆ ನೆರವಾಗಲಿದೆ. ಪರಿಹಾರದ ಹಣವನ್ನು ಬಾಲಕನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಠೇವಣಿ ಇಡಲಾಗುವುದು.**
> ■ ಎಂ.ಬಿ.ಪಾಟೀಲ, ಸಚಿವ

ಡಿಕ್ಕಿ: ಉರುಳಿ ಬಿದ್ದ ಟ್ರ್ಯಾಕ್ಟರ್ | 7 ಸಾವು, 13ಕ್ಕೂ ಹೆಚ್ಚು ಜನರಿಗೆ ಗಾಯ
ಹುಲಿಗೆಮ್ಮ ದೇವಸ್ಥಾನಕ್ಕೆ ತೆರಳುತ್ತಿದ್ದ ಭಕ್ತರು

• **ಕೊಪ್ಪಳ/ವಿಜಯನಗರ :** ಟ್ಯಾಂಕರ್ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಸೇತುವೆಯಿಂದ ಟ್ರ್ಯಾಕ್ಟರ್ ಉರುಳಿ ಬಿದ್ದು, ಆರು ಜನ ಸ್ಥಳದಲ್ಲಿ ಸಾವನಪ್ಪಿ, 13 ಜನರು ಗಾಯಗೊಂಡ ಘಟನೆ ಹೊಸಪೇಟೆ ಸಮೀಪದ ಟಿಬಿ ಡ್ಯಾಂ ಬಳಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 50 ಬಳಿ ಶುಕ್ರವಾರ ನಡೆದಿದೆ.

ಟ್ರ್ಯಾಕ್ಟರ್ ನಲ್ಲಿ 35 ಕ್ಕೂ ಹೆಚ್ಚು ಜನರು ಕೊಪ್ಪಳ ಜಿಲ್ಲೆಯ ಹುಲಿಗೆಮ್ಮ ದೇವಸ್ಥಾನಕ್ಕೆ ಪ್ರಯಾಣ ಬೆಳಸಿದ್ದರು. ತುಂಗಭದ್ರಾ ನದಿಯ ಎರಡನೇ ಸೇತುವೆ ದಾಟುತ್ತಿದ್ದಂತೆ ಅಪಘಾತ ಸಂಭವಿಸಿದ್ದು, ಟ್ರ್ಯಾಕ್ಟರ್ ಸೇತುವೆ ಮೇಲಿಂದ ಸುಮಾರು 15 ಅಡಿ ಆಳದ ಪ್ರಪಾತಕ್ಕೆ ಬಿದ್ದಿದೆ. ಪರಿಣಾಮ ಐವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದು, ಇನ್ನಿಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಮುಗಿಲು ಮುಟ್ಟಿದ ಆಕ್ರಂದನ: ಹೊಸಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಮೃತರ ಸಂಬಂಧಿಕರ ಆಕ್ರಂದನ ಮುಗಿಲುಮುಟ್ಟಿತ್ತು. ದೇವರ ದರ್ಶನಕ್ಕೆಂದು ಹೋದರೆ, ನಮ್ಮವರನ್ನೇ ದೇವರು ಕರೆದುಕೊಂಡನಲ್ಲೋ ಎಂದು ಪರಸ್ಪರ ತಬ್ಬಿಕೊಂಡು ಕಣ್ಣೀರು ಹಾಕುವ ದೃಶ್ಯ ಮನಕಲುಕುವಂತಿತ್ತು. ಸ್ಥಳಕ್ಕೆ ಐಜಿಪಿ ಡಾ.ಹರ್ಷ,ವಿಜಯನಗರ ಎಸ್ಪಿ ಜಾಹ್ನವಿ ಎಸ್. ಕೊಪ್ಪಳ ಎಸ್ಪಿ ಎಲ್.ಅರಸಿದ್ದಿ ಭೇಟಿ ನೀಡಿ ಪರಿಶೀಲಿಸಿದರು.

5 ಲಕ್ಷ ಪರಿಹಾರ: ಘಟನೆ ಬಗ್ಗೆ ಸುದ್ದಿ ತಿಳಿಯುತ್ತಿದ್ದಂತೆ ಹೊಸಪೇಟೆ ಆಸ್ಪತ್ರೆಗೆ ಧಾವಿಸಿದ ಸಂಸದ ಈ.ತುಕಾರಾಂ ಮೃತರ ಸಂಬಂಧಿಕರಿಗೆ ಸಾಂತ್ವನ ಹೇಳಿ, ಗಾಯಾಳುಗಳ ಆರೋಗ್ಯ ವಿಚಾರಿಸಿದರು.



ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರೆ ಮಾಡಿದ ಸಂಸದ ತುಕಾರಾಂ ಘಟನೆ ಬಗ್ಗೆ ಮಾಹಿತಿ ನೀಡಿದರು.

ಮೃತರ ಕುಟುಂಬಸ್ಥರಿಗೆ ತಲಾ 5 ಲಕ್ಷ ರೂ. ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ ಎಂದು ಸಂಸದ ತುಕಾರಾಂ ಸುದ್ದಿಗಾರರಿಗೆ ತಿಳಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಿವಿಧೆಡೆ ಮಳೆ: ಹಲವೆಡೆ ಹಾನಿ

ಗೋಕರ್ಣ : ಗುರುವಾರ ರಾತ್ರಿ ಈ ಭಾಗದಲ್ಲಿ ಗಾಳಿ, ಗುಡುಗು, ಸಿಡಿಲಿನ ಅಬ್ಬರದೊಂದಿಗೆ ಮಳೆಯ ಸಿಂಚನವಾಗಿದ್ದು,ಬಿಸಿಲಿನ ಬೇಗೆಗೆ ತುಸು ತಂಪೆರೆದಿದೆ. ಮಧ್ಯರಾತ್ರಿಯಿಂದ ಪ್ರಾರಂಭವಾದ ಮಳೆ ನಾಲ್ಕು ತಾಸುಗಳ ಕಾಲ ಸುರಿದಿದೆ. ವಿವಿಧೆಡೆ ಸಣ್ಣ ಅವಘಡಗಳು ಸಂಭವಿಸಿದ್ದು, ಯಾವುದೇ ಜೀವಾಪಾಯವಾಗಿಲ್ಲ.



ಮೊರಬಾದ ಯಾದವ ದಾನು ಹಳ್ಳೇರ ಎಂಬುವವರ ವಾಸ್ತವ್ಯದ ಮನೆಯ ಹತ್ತಿರದ ವಿದ್ಯುತ್ ಕಂಬಕ್ಕೆ ಸಿಡಿಲು ಬಡಿದು ಕಂಬ ಮುರಿದು ಮನೆಯ ಮೇಲೆ ಬಿದ್ದು ಭಾಗಶಃ ಹಾನಿಯಾಗಿದೆ. ಇದರಂತೆ ಗಾಳಿಯ ರಭಸಕ್ಕೆ ಇಲ್ಲಿನ ಚಿನ್ನದಕೇರಿಯ ನಿವಾಸಿ ಲಂಬೋಧರ ಆಚಾರಿ ಎಂಬುವವರ ಮನೆಯ ಶೌಚಾಲಯದ ಮೇಲೆ ಮರದ ಟೊಂಗೆ ಮುರಿದು ಬಿದ್ದು ಹಾನಿಯಾಗಿದೆ. ಇನ್ನೂ ಹಲವು ಕಡೆ ಮನೆಯ ಮೇಲ್ಛಾವಣೆಗಳಿಗೆ ಮುಚ್ಚಿದ ತಗಡು ಹಾರಿಬಿದ್ದಿದ್ದು, ಕೆಲವೆಡೆ ಮರ, ಗಿಡಗಳು ಧರಾಶಾಹಿ ಆಗಿದೆ. ಹಾನಿಯಾದ ಪ್ರದೇಶಕ್ಕೆ ಸ್ಥಳೀಯ ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೋರಾಟ ಸಮಿತಿಗೆ ಸಂಪೂರ್ಣ ಬೆಂಬಲ

ಬನವಾಸಿ: ಇಲ್ಲಿಯ ಇತಿಹಾಸ ಪ್ರಸಿದ್ಧ ಮಧುಕೇಶ್ವರ ದೇವಸ್ಥಾನ ಅನೇಕ ವರ್ಷಗಳಿಂದ ಸೋರುತ್ತಿರುವುದು ಭಕ್ತಾದಿಗಳ ಮನಸ್ಸಿನಲ್ಲಿ ಹೇಳಿಕೊಳ್ಳಲಾರದಷ್ಟು ದೊಡ್ಡ ಬೇಸರ ಇದೆ. ಇತ್ತೀಚಿಗೆ ಅದರ ಕಿಚ್ಚು ಭಕ್ತಾದಿಗಳಲ್ಲಿ ಇನ್ನೂ ಹೆಚ್ಚಾಗಿದೆ ಎಂದು ಬನವಾಸಿ ರೈತ ಪ್ರಮುಖರು ಹಾಗೂ ಬನವಾಸಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಗಜಾನನ ಎಂ. ಗೌಡರು ಭಾಷಿ ಹೇಳಿದ್ದಾರೆ.



ದೇವಸ್ಥಾನ ಸಂರಕ್ಷಣೆ ಮಾಡಬೇಕಾದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಬನವಾಸಿ ದೇವಸ್ಥಾನ ಉಳಿವಿಗಾಗಿ ಹೋರಾಟಕ್ಕೆ ಕರೆ ನೀಡಿದ ಬನವಾಸಿ ನೂತನ ತಾಲೂಕು ರಚನಾ ಹೋರಾಟ ಸಮಿತಿಗೆ ನಾವು ಬೆಂಬಲಿಸುತ್ತೇವೆ ಎಂದು ಹೇಳಿದ್ದಾರೆ. ಹೋರಾಟ ಸಮಿತಿ ಕರೆ ನೀಡಿದ ಅರೆ ಬೆತ್ತಲೆ ಪ್ರತಿಭಟನೆಗೆ ಬೆಂಬಲಿಸಿ ದೇವಸ್ಥಾನ ದುರಸ್ತಿಯಾಗಿ ಸೋರುವಿಕೆ ನಿಲ್ಲುವರೆಗೂ ಹೊರಾಡುತ್ತೇವೆ ಎಂದು ಗೌಡ ಸೊಸೈಟಿ ಉಪಾಧ್ಯಕ್ಷರಾದ ಸುಭಾಷ್ ಕಾಟೇನಹಳ್ಳಿ, ಸದಸ್ಯರುಗಳಾದ ಶಂಕರ ಕೆ. ಗೌಡ,ವಿನಯಕುಮಾರ್ ಗೌಡ, ಅಶೋಕ ಬಿ. ನಾಯಕ, ಪ್ರಭಾಕರ್ ಬಿ. ಗೌಡ, ಪ್ರೇಮಕುಮಾರ್ ನಾಯಕ, ಪ್ರವೀಣ ಗೌಡ, ಅಕ್ಷತಾ ಸವಣೂರ, ಭಾರತಿ ನಾಯಕ, ರಘು ನಾಯಕ, ಹುಲ್ಯಪ್ಪ ಚನ್ನಯ್ಯ ಸೇರಿದಂತೆ ಸದಸ್ಯರು, ರೈತ ಬಾಂದವರು ಬನವಾಸಿ ನೂತನ ತಾಲೂಕು ರಚನೆ ಹೋರಾಟ ಸಮೀತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ ಎಪ್.ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಅವರ ನೇತೃತ್ವದಲ್ಲಿ ನಡೆಯುವ ಪ್ರತಿಭಟನೆಗೆ ಕೈ ಜೋಡಿಸಲೀದ್ದಾರೆ ಎಂದು ಹೇಳಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61099	71899
ಬಿಳಿಗೋಟು	26081	37199
ಕೆಂಪುಗೋಟು	28899	37158
ಬೆಟ್ಟೆ	38899	48699
ರಾಶಿ	51600	53100
ಚಾಲಿ	44200	48200
ಬಿ.ಕಾಳುಮೆಣಸು	78000	86555

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58800	58800
ರಾಶಿ	50169	57499
ಬೆಟ್ಟೆ	38101	50210
ಕೆಂಪುಗೋಟು	18899	37711
ಬಿಳಿಗೋಟು	17012	38399
ಚಾಲಿ	38419	48211
ಕೋಕಾ	13510	34316
ಕಾಳುಮೆಣಸು	60099	68099



ಭಟ್ಕಳ : ಪಟ್ಟಣದ ಬೋಯಿರಕೇರಿಯ ಪುರಾತನ ಪಶುಪತಿ ದೇವಸ್ಥಾನದ ನಿಧಿ ಕುಂಭ ಸಮರ್ಪಣಾ ಕಾರ್ಯಕ್ರಮ ನಡೆಯಿತು. ಗೋಕರ್ಣದ ವೇ.ಮೂ ಶ್ರೀನಿವಾಸ ಅಡಿಗ ಇವರ ನೇತೃತ್ವದಲ್ಲಿ ಅರ್ಚಕ ರಾಘವೇಂದ್ರ ಭಟ್ಟ ಮತ್ತು ಪುರೋಹಿತರ ತಂಡವು ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ಮಾಡಿದ ನಂತರ ನೂತನ ಶಿಲಾಮಯ ದೇವಾಲಯದ ಗರ್ಭಗುಡಿಯಲ್ಲಿ ನಿಧಿ ಕುಂಭ ಸಮರ್ಪಣೆಯ ಕಾರ್ಯ ನಡೆಯಿತು.

ಕೆರೆ ಅಭಿವೃದ್ಧಿಗೆ ಸಾರ್ವಜನಿಕರ ಒತ್ತಾಯ

ಗೋಕರ್ಣ: ಸರ್ಕಾರಿ ಕೆರೆಯಲ್ಲಿ ಬಿದ್ದ ಮರವನ್ನು ಕುಮಟಾ ತಹಶೀಲ್ದಾರ ನೇತೃತ್ವದಲ್ಲಿ ತೆರವುಗೊಳಿಸಿ ಕೆರೆ ಅಭಿವೃದ್ಧಿಗೊಳಿಸಲು ಸೂಚಿಸಿದ ಘಟನೆ ಇಲ್ಲಿನ ಗುಂಬಳೆಯಲ್ಲಿ ಶುಕ್ರವಾರ ನಡೆದಿದೆ.

ಸಾಕಷ್ಟು ಜಲ ಮೂಲವಿರುವ ಗುಂಬಳೆಯ ಸರ್ಕಾರಿ ಕೆರೆಯಲ್ಲಿ ಬೃಹತ್ ಮರ ಬಿದ್ದಿತ್ತು, ಅಲ್ಲದೆ ಕೆರೆಯ ಸ್ವಚ್ಛತೆಯ ಬಗ್ಗೆ ಸ್ಥಳೀಯರು ಗ್ರಾಪಂಕ್ಕೆ ಮನವಿ ಮಾಡಿದ್ದರು. ಆದರೆ ಕೆರೆ ಪಕ್ಕದ ಖಾಸಗಿ ಜಾಗದವರು ಈ ಕಾರ್ಯಕ್ಕೆ ಅಡ್ಡಿಪಡಿಸುತ್ತಿದ್ದರು. ಈ ಕುರಿತು ಸಾಕಷ್ಟು ಬಾರಿ ಗ್ರಾಮ ಪಂಚಾಯತಕ್ಕೆ ತಿಳಿಸದರೂ ಯಾವುದೇ ಕ್ರಮವಾಗಿರಲಿಲ್ಲ, ಇದಕ್ಕೆ ಪಕ್ಕದ ಜಾಗದವರು ತೀವ್ರ ವಿರೋಧ ಎನ್ನಲಾಗಿತ್ತು. ಈ ಕುರಿತು ತಹಶೀಲ್ದಾರರಿಗೆ ಸಾರ್ವಜನಿಕರು ಮನವಿ ಮಾಡಿದ್ದರು. ತಹಶೀಲ್ದಾರ ಶ್ರೀಕೃಷ್ಣ ಕಾಮಕರ್ ಖುದ್ದು ಸ್ಥಳಕ್ಕೆ ಆಗಮಿಸಿ ಮರ ತೆಗೆದು ಸ್ವಚ್ಛಗೊಳಿಸಲು ಸ್ಥಳಿಯ ಆಡಳಿತಕ್ಕೆ ತಿಳಿಸಿದ್ದಾರೆ. ಇದರಂತೆ ಗ್ರಾಪಂ ಸ್ವಚ್ಛತಾ ಸಿಬ್ಬಂದಿಯಿಂದ ತೆರವು ಕಾರ್ಯ ನಡೆದಿದ್ದು, ಮುಂದಿನ ದಿನದಿನದಲ್ಲಿ ಕೆರೆಗೆ ಕಾಯಕಲ್ಪ ನೀಡುತ್ತಾರೆಯೇ ಎಂಬುದು ಕಾದು ನೋಡಬೇಕಿದೆ. ಈ ಕೆರೆ ಸರಿಪಡಿಸಿದರೆ ಇಲ್ಲಿನ ಸುತ್ತಮುತ್ತಲಿನಲ್ಲಿ ಬೇಸಿಗೆಯಲ್ಲಿ ಉಂಟಾಗುವ ನೀರಿನ ಅಭಾವದ ಸಮಸ್ಯೆಯನ್ನ ಬಗೆಹರಿಸಬಹುದಾಗಿದೆ. ಈ ವೇಳೆ ಗ್ರಾಪಂ ಅಧಿಕಾರಿಗಳು, ಸ್ಥಳೀಯ ಕಂದಾಯ ಇಲಾಖೆ ಅಧಿಕಾರಿಗಳು , ಸಾರ್ವಜನಿಕರು ಉಪಸ್ಥಿತರಿದ್ದರು. ಪಿಐ ಶ್ರೀಧರ ಎಸ್.ಆರ್. ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೂಬಸ್ತ ಕಲ್ಪಿಸಲಾಗಿತ್ತು.



ಗೋಕರ್ಣ: ಸರ್ಕಾರಿ ಕೆರೆಯಲ್ಲಿ ಬಿದ್ದ ಮರವನ್ನು ಕುಮಟಾ ತಹಶೀಲ್ದಾರ ನೇತೃತ್ವದಲ್ಲಿ ತೆರವುಗೊಳಿಸಿ ಕೆರೆ ಅಭಿವೃದ್ಧಿಗೊಳಿಸಲು ಸೂಚಿಸಿದ ಘಟನೆ ಇಲ್ಲಿನ ಗುಂಬಳೆಯಲ್ಲಿ ಶುಕ್ರವಾರ ನಡೆದಿದೆ.

ಇದುವರೆಗೂ ಐವರ ಬಲಿ : ದಡದತ್ತ ಹೋಗದಂತೆ ಎಚ್ಚರಿಕೆ

ಕಾಳಿ ನದಿಯಲ್ಲಿ ಮೊಸಳೆ ಹಾವಳಿ

▸ಸಂದೇಶ್ ಎಸ್.ಜೈನ್

ದಾಂಡೇಲಿ: ತಿಂಗಳಲ್ಲಿ ಎರಡ್ಮೂರು ಬಾರಿಯಾದರೂ ಸುದ್ದಿಗೆ ಆಹಾರವಾಗುವ ಮೂಲಕ ದಾಂಡೇಲಿ ನಗರದ ಕಾಳಿ ನದಿಯ ಮೊಸಳೆಗಳು ಗಮನ ಸೆಳೆಯುತ್ತಿರುವುದು ಸಾಮಾನ್ಯವಾಗಿದೆ. ಐವರನ್ನು ಬಲಿ ಪಡೆದಿರುವ ದಾಂಡೇಲಿಯ ಮೊಸಳೆಗಳು ನರಭಕ್ಷಕ ಎಂಬ ಹಣೆಪಟ್ಟಿಗೂ ಗುರಿಯಾಗಿಸಿಕೊಂಡಿದೆ. ಆದರೆ ಅರಣ್ಯ ಇಲಾಖೆ, ನಗರಸಭೆ, ತಾಲೂಕಾಡಳಿತ ವಿಶೇಷ ಮುತುವರ್ಜಿ ವಹಿಸಿ ಮುನ್ನೆಚ್ಚರಿಕೆ ಕ್ರಮ ಕೈಗೊಂಡ ನಂತರ ಮೊಸಳೆಗಳಿಂದಾಗುವ ದಾಳಿ ತಕ್ಕ ಮಟ್ಟಿಗೆ ಕಡಿಮೆಯಾಗಿದ್ದರೂ, ಐವರನ್ನು ಬಲಿ ತೆಗೆದುಕೊಂಡಿರುವುದರಿಂದ ಭಯ ಮಾತ್ರ ಇನ್ನೂ ಕಡಿಮೆಯಾಗಿಲ್ಲ. ಇನ್ನೂ ನಮ್ಮ ಜನರು ಕೂಡ ಭಯದ ನಡುವೆಯೂ ನದಿಗಿಳಿಯುವುದನ್ನು ಮಾತ್ರ ಕಡಿಮೆಗೊಳಿಸಿಲ್ಲ.

ಅದು ಏನೇ ಇರಲಿ ಮೊನ್ನೆ ಮೊನ್ನೆ ಪ್ರವಾಸಿ ಮಂದಿರದ ಹತ್ತಿರ ಬರೋಬ್ಬರಿ 40 ಮರಿಗಳಿಗೆ ಜನ್ಮ ನೀಡಿದ ಮೊಸಳೆಯ ಸುದ್ದಿ ಒಂದೆಡೆಯಾದರೇ, ಇದೀಗ ನಗರದ ಹಳಿಯಾಳ ರಸ್ತೆಯ ಅಲೈಡ್ ಪ್ರದೇಶದ ಕಾಳಿ ನದಿಯ ದಂಡೆಯಲ್ಲಿ ಗುರುವಾರ ತಡರಾತ್ರಿ ಮತ್ತು ಶುಕ್ರವಾರ ನಸುಕಿನ ವೇಳೆ ತಾಯಿ ಮೊಸಳೆಯೊಂದು ಐದಾರು ಮರಿಗಳನ್ನು ಆರೈಕೆ ಮಾಡುತ್ತಿರುವುದು ಕಂಡು ಬಂದಿದೆ. ಇದು ಒಂದು ರೀತಿಯಲ್ಲಿ ಸ್ಥಳೀಯರಲ್ಲಿ ಆತಂಕಕ್ಕೂ ಕಾರಣವಾಗಿದೆ. ಕಾಳಿ ನದಿಯಲ್ಲಿ ಲೆಕ್ಕಕ್ಕೆ ಸಿಗಲಾರದಷ್ಟು ಮೊಸಳೆಗಳಿವೆ ಎಂಬ ಮಾತಿದೆ, ಅದು ಹೌದು ಕೂಡ. ಈಗಲೇ ಸಹಸ್ರ ಸಂಖ್ಯೆಯಲ್ಲಿ ಮೊಸಳೆಗಳಿದ್ದು ಇನ್ನೂ ಈ ಮೊಸಳೆಗಳು ಮೊಟ್ಟೆಯಿಟ್ಟು ಮರಿಗಳಾಗುತ್ತಾ ಹೋದರೇ ಕಾಳಿ ನದಿಯಲ್ಲಿ ನೀರಿಗಿಂತ ಮೊಸಳೆಗಳ ಸಂಖ್ಯೆ ಜಾಸ್ತಿ ಆಗಬಹುದು.



- ಕಾಳಿ ನದಿಯಲ್ಲಿ ಲೆಕ್ಕಕ್ಕೆ ಸಿಗಲಾರದಷ್ಟು ಮೊಸಳೆ
- ಗುರುವಾರ ತಡರಾತ್ರಿ ಮತ್ತು ಶುಕ್ರವಾರ ನಸುಕಿನ ವೇಳೆ ಕಂಡು ಬಂದ ಐದಾರು ಮರಿಗಳ ಆರೈಕೆ ಮಾಡುತ್ತಿರುವ ತಾಯಿ ಮೊಸಳೆ

ಇನ್ನೂ ಬಹುತೇಕ ಮೀನೆ ಇದಕ್ಕೆ ಆಹಾರವಾಗಿರುವುದರಿಂದ, ಮೊಸಳೆಗಳ ಸಂಖ್ಯೆ ಅಧಿಕವಾಗಿ ಮೀನಿನ ಸಂಖ್ಯೆ ಕಡಿಮೆಗೊಂಡು, ಅವುಗಳಿಗೆಆಹಾರದಸಮಸ್ಯೆಎದುರಾಗಿ,ಮೊಸಳೆಗಳು ದಾಂಡೇಲಿಯಿಂದ ಗಣೇಶ ಗುಡಿಯವರಿಗೆ ಹೋಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಆಹಾರದ ಸಮಸ್ಯೆ ತಲೆದೊರಿದರೆ ಜನವಸತಿ ಪ್ರದೇಶಕ್ಕೂ ನುಗ್ಗುವ ಸಾಧ್ಯತೆಯೂ ಇದೆ. ಭವಿಷ್ಯದ ದಿನಗಳಲ್ಲಿ ಏನಾಗಬಹುದು ಎನ್ನುವುದನ್ನು ಕಾಲವೇ ನಿರ್ಣಯಿಸಬೇಕಾಗಿದೆ.ಏನೇ ಇರಲಿ ಸದ್ಯದ ಮಟ್ಟಿಗೆ ಕಾಳಿ ನದಿಯ ಕಡೆಗೆ ಅಥವಾ ನದಿ ದಡದತ್ತ ಹೋಗದಿರುವುದೇ ಉತ್ತಮ ಎನ್ನುವುದನ್ನು ಜನರು ಅರಿತುಕೊಳ್ಳಬೇಕಾಗಿದೆ.ಅವಘಡ ನಡೆದು ಪಶ್ಚಾತಾಪ ಪಡುವುದಕ್ಕಿಂತ, ಅನಾಹುತ ನಡೆಯುವ ಮುನ್ನವೇ ಎಚ್ಚೆತ್ತುಕೊಳ್ಳುವುದು ಅತೀ ಮುಖ್ಯ.



ಸಮಾನ ಕೆಲಸಕ್ಕೆ ಸಮಾನ ವೇತನ ನೀಡಿ

ಕಾರವಾರ: ತಮ್ಮ ಕೆಲಸಕ್ಕೆ ಸಮಾನ ಕೂಲಿ, ಸಮಾನ ವೇತನ ನೀಡಬೇಕು ಹಾಗೂ ನಮ್ಮ ನ್ಯಾಯಯುತ ಬೇಡಿಕೆಯನ್ನು ಈಡೇರಿಸುವಂತೆ ಆಗ್ರಹಿಸಿ ನಾವು ಪ್ರತಿಭಟನೆಯನ್ನು ನಡೆಸುತ್ತಿದ್ದು, ನಮ್ಮ ಬೇಡಿಕೆಗೆ ಸ್ಪಂದಿಸುವದನ್ನು ಬಿಟ್ಟು ನಮ್ಮ ಮೇಲೆ ಶಿಸ್ತು ಕ್ರಮಕ್ಕೆ ಮುಂದಾಗಿರುವದನ್ನು ಖಂಡಿಸುತ್ತೇವೆ ಎಂದು ಪರವಾನಗೆ ಪಡೆದ ಭೂ ಮಾಪಕರ ಜಿಲ್ಲಾಧ್ಯಕ್ಷ ಸೂರಜ ಹೇಳಿದರು.

ಅವರು ಪತ್ರಿಕಾಭವನದಲ್ಲಿ ನಡೆದ ಪತ್ರಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಾದ್ಯಂತ 6 ಸಾವಿರ ಪರವಾನಗೆ ಪಡೆದ ಭೂಮಾಪಕರು ಇದ್ದು, ನಮ್ಮ ನ್ಯಾಯಯುತ ಬೇಡಿಕೆಗಾಗಿ 80 ದಿನಗಳಿಂದ ನಾವು ಪ್ರತಿಭಟನೆಯನ್ನು ಮಾಡುತ್ತ ಬಂದಿದ್ದೇವೆ. ನಮಗೆ ಉಳಿದ ಗುತ್ತಿಗೆ ಸಿಬ್ಬಂದಿಗಳಂತೆ ಯಾವುದೇ ರೀತಿಯ ರಜಾ ಸೌಲಭ್ಯಗಳು, ಆರೋಗ್ಯ ಸೇವೆಗಳು, ವಿಮಾ ಸೇವೆಗಳು ಇಲ್ಲದಾಗಿದೆ. ಇವೆಲ್ಲವನ್ನು ಸೇರಿಸಿ ನಾವು ನಮ್ಮ ಕೆಲಸಕ್ಕೆ ಅನುಗುಣವಾಗಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಿ ನಮಗೆ ಕಾಯಂಗೊಳಿಸಿ ಎಂದು ಇಲಾಖೆ ಮತ್ತು ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ. ನಮ್ಮ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವ ಬಗ್ಗೆ ದಾವಣಗೇರಿಯಲ್ಲಿ ರಾಜ್ಯ ಮಟ್ಟದ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಪ್ರದಾನ ಕಾರ್ಯಕರ್ಶಿ ಮಿಥುನ ನಾಯ್ಕ ಮಾತನಾಡಿ, ಭೂಮಾಪನ ಇಲಾಖೆ ನಮ್ಮ ಬೇಡಿಕೆಗೆ ಸ್ಪಂದಿಸುವ ಬದಲು ದಿನೆ ದಿನೆ ದಬ್ಬಾಳಿಕೆ ನಡೆಸುತ್ತಿದೆ. ನಾವು ಮುಷ್ಕರಕ್ಕೆ ಪರವಾನಗಿ ಕೋರಿ ಅನುಮತಿ ನೀಡಿದ ಮೇಲೆ ಪ್ರತಿಭಟನೆಗೆ ಮುಂದಾಗಿದ್ದೇವೆ. ನಮ್ಮ ಬೇಡಿಕೆ ಕುರಿತು ಮಾತುಕತೆ ನಡೆಸುವ ಯಾವ ಆಸಕ್ತಿಯನ್ನು ಇಲಾಖೆ ತೋರಿಸುತ್ತಿಲ್ಲ, ಬದಲಿಗೆ ಈಗ ನಮ್ಮ ಸದಸ್ಯರಾದ ಹೊಸದಾಗಿ ಸೇರಿರುವವರಿಗೆ ಕೆಲಸಕ್ಕೆ ಬರುವಂತೆ ಒತ್ತಕ್ಷಿ ಹಾಕಿ ಉಳಿದವರಿಗೆ ಶೋಕಾಸ ನೀಡಲು ಮುಂದಾಗಿದ್ದಾರೆ. ಅಲ್ಲದೆ ನಮ್ಮ ಜಿಲ್ಲಾಧ್ಯಕ್ಷ ಸೂರಜ್ ಅವರಿಗೆ ಅಮಾನತ್‌ನ ನೋಟಿಸನ್ನು ಗುರುವಾರ ಸಂಜೆ ಕಳುಹಿಸಿದ್ದಾರೆ. ನೋಟಿಸ ಜಾರಿ ಮಾಡುವಲ್ಲಿಯೂ ಕೂಡ ಯಾವುದೇ ನಿಯಮ ಪಾಲನೆ ಮಾಡಿಲ್ಲ, ಲಿಖಿತವಾಗಿ ಕೂಡ ನೀಡಿಲ್ಲ, ಕೇವಲ ಮೊಬಾಯಲ್ ವಾಟ್ಸಪ್ ಮೂಲಕ ಕಳುಹಿಸಲಾಗಿದೆ. ಇದನ್ನು ನಾವು ಖಂಡಿಸುತ್ತೇವೆ ಎಂದರು.

ಸಂಘದ ಮಹಿಳಾ ಪದಾಧಿಕಾರಿ ಮಲ್ಲಿಕಾ ನಾಯ್ಕ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಹನುಮೇಶ, ಈಶ್ವರಯ್ಯ ಹಾಗೂ ಜಿಲ್ಲೆಯ ವಿವಿಧ ತಾಲೂಕಿನಿಂದ ಬಂದಿರುವ ಪರವಾನಗೆ ಭೂಮಾಪಕರು ಹಾಜರಿದ್ದರು.



ನಾಳೆ ಸಿದ್ದಿನಾಸನ ಜಾತ್ರಾಮಹೋತ್ಸವ



ಅಂಕೋಲಾ: ತಾಲೂಕಿನ ಗಡಿಭಾಗದ ಸಾತನಬೈಲಿನಲ್ಲಿ ಬುಡಕಟ್ಟು ಸಿದ್ದಿ ಸಮುದಾಯದ ಆರಾಧ್ಯ ದೇವರಾಗಿರುವ ಸಿದ್ದಿನಾಸನ ಜಾತ್ರಾ ಮಹೋತ್ಸವ ಮೇ 17ರಂದು ಭಾನುವಾರ ಹಲವಾರು ವಿಶೇಷತೆಗಳೊಂದಿಗೆ ನಡೆಯಲಿದೆ.

ಉತ್ತರ ಕನ್ನಡ ಜಿಲ್ಲೆಯ ಕೆಲವೇ ಸ್ಥಳಗಳಲ್ಲಿ ವಾಸವಾಗಿರುವ ಆಫ್ರಿಕನ್ ಮೂಲದ ಬುಡಕಟ್ಟು ಜನಾಂಗದ ಜಾತ್ರೆಯಲ್ಲಿ ಜಿಲ್ಲೆಯ ಸಿದ್ದಿ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ದೈವೀ ರೂಪದಲ್ಲಿ ಆರಾಧಿಸಲ್ಪಡುವ ವೀರ ಪುರಷನ ಜಾತ್ರೆ ನಡೆಸಿ ವಿವಿಧ ಬಗೆಯ ಹರಕೆಗಳನ್ನು ಸಲ್ಲಿಸುವ ಸಂಪ್ರದಾಯ ಸಿದ್ದಿ ಸಮುದಾಯದ ಜನರಿಂದ ಆಚರಿಸಲ್ಪಡುತ್ತ ಬಂದಿದ್ದು ಸಾತನಬೈಲಿನ ಸಿದ್ದಿನಾಸ ದೇವರ ಮೇಲುಸ್ತುವಾರಿ ಸಮಿತಿಯ ವತಿಯಿಂದ ನಡೆಯುವ ಜಾತ್ರಾ ಮಹೋತ್ಸವದ ಪ್ರಯುಕ್ತ ಬೆಳಗ್ಗೆ 10.30 ರಿಂದ ಮಧ್ಯಾಹ್ನ 4 ಗಂಟೆಯ ವರೆಗೆ ದೇವರ ಪೂಜೆ

ಪ್ರಸಾದವಿತರಣೆಕಾರ್ಯಕ್ರಮ ಇರಲಿದ್ದು ಸಂಜೆ 4 ರಿಂದ ರಾತ್ರಿ 12 ಗಂಟೆಯವರೆಗೆ ಅನ್ನಸಂತರ್ಪಣೆ ಸಾಗಲಿದೆ.

ರಾತ್ರಿ 7 ಗಂಟೆಯಿಂದ 8 ಗಂಟೆ ವರೆಗೆ ಮಹಾಪೂಜೆ,ಮಂಗಲಾರತಿ,

ಪ್ರಸಾದ ವಿತರಣೆ ನಡೆಯಲಿದ್ದು ನಂತರ ಸಭಾ ಕಾರ್ಯಕ್ರಮ ದೇವರ ಫಲಾವಳಿಗಳ ಸವಾಲು ನಡೆಯಲಿದೆ.

ರಾತ್ರಿ 10.30 ರಿಂದ ಸಿದ್ದಿ ಸಮುದಾಯದವರ ಸಾಂಸ್ಕೃತಿಕ ಕಾರ್ಯಕ್ರಮ ವಿಶೇಷವಾಗಿ ಡಮಾಮಿ ನೃತ್ಯ ನಡೆಯಲಿದೆ.

ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸುವ ತಂಡಗಳು ತಮಗೆ ನೀಡಿರುವ 15 ನಿಮಿಷಗಳ ಕಾಲಾವಕಾಶದಲ್ಲಿ ಪ್ರದರ್ಶನ ನೀಡಬೇಕಿದ್ದು ಇದು ಯಾವುದೇ ರೀತಿಯ ಸ್ಪರ್ಧೆ ಆಗಿರದೇ ಭಾಗವಹಿಸುವ ಎಲ್ಲ ತಂಡಗಳಿಗೂ ಗೌರವ ಕಾಣಿಕೆ ನೀಡಲಾಗುತ್ತದೆ.ಕಾರ್ಯಕ್ರಮದ ಸಂದರ್ಭದಲ್ಲಿ ಮದ್ಯಪಾನ,ಸರಾಯಿ ಮಾರಾಟವನ್ನು ಕಡ್ಡಾಯವಾಗಿ ನಿಷೇಧಿಸುವ ಮೂಲಕ ಸಂಘಟಕರು ಶಾಂತಿ ಸುವ್ಯವಸ್ಥೆಗೆ ದಾರಿ ಮಾಡಿಕೊಟ್ಟಿರುವುದು ವಿಶೇಷವಾಗಿದ್ದು ಸರಾಯಿ ಮಾರಾಟ ಮಾಡುವವರಿಗೆ ದಂಡ ಮತ್ತು ಕಾನೂನು ಕ್ರಮ ಕೈಗೊಳ್ಳುವ ಸೂಚನೆ ನೀಡಲಾಗಿದೆ.

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವಂತೆ ಸಂಘಟಕರು ಕೋರಿದ್ದಾರೆ.

ಯುವಕರು ದುಶ್ಚಟದ ದಾಸರಾಗದಿರಲಿ

ಹಳಿಯಾಳ : ವಿಶ್ವ ರೆಡ್ ಕ್ರಾಸ್ ದಿನದ ಅಂಗವಾಗಿ ಮೇ 15ರಂದು ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾ ವಿದ್ಯಾಲಯದಲ್ಲಿ ಮಾದಕ ವ್ಯಸನ ದುಷ್ಪರಿಣಾಮ ಕುರಿತಾಗಿ ಅರಿವು ಮೂಡಿಸುವ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿಗಳಾಗಿ ಹಳಿಯಾಳದ ಸಿವಿಲ್ ನ್ಯಾಯಾಧೀಶರಾದ ಸುಜಾತಾ ಪಾಟೀಲ್ ಮಾತನಾಡಿ, ವಿದ್ಯಾರ್ಥಿಗಳು ಮಾದಕ ವಸ್ತುಗಳ ದಾಸರಾಗಿ ಸಮಾಜ ಘಾತುಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬಾರದು. ಉತ್ತಮ ಸಮಾಜ ನಿರ್ಮಾಣ ಯುವಜನತೆಯ ಕೈಲ್ಲಿದ್ದು, ನಾಗರೀಕರಾಗಿ ಸ್ವಾಸ್ತ್ಯ ಸಮಾಜ ನಿರ್ಮಿಸೋಣ ಎಂದರು.

ಗೌರವ ಅತಿಥಿಗಳಾದ ಹಳಿಯಾಳ ಪಟ್ಟಣ ಪೊಲೀಸ್ ಠಾಣೆ ಯ ಸಿಪಿಐ ಜಯಪಾಲ್ ಪಾಟೀಲ್ ಮಾತನಾಡಿ, ಮಾದಕ ವಸ್ತು ಮಾರಾಟ ಹಾಗೂ ಸೇವನೆಯಲ್ಲಿ ತೊಡಗಿದ್ದಲ್ಲಿ ತಲೆದಂಡ ತೆರಬೇಕಾಗುವುದು ಎಂದು ಕಿವಿಮಾತು ಹೇಳಿದರು. ಮಕ್ಕಳ ಕಲ್ಯಾಣ ಸಮಿತಿ ಕಾರವಾರದ ಸದಸ್ಯೆ ರಾಧಾರಾಣಿ ಕೊಳಂಬಿ ಮಾತನಾಡಿ, ಮಾದಕ ವಸ್ತುಗಳ ಸೇವನೆಯಿಂದ ಯುವಜನತೆ ದಾರಿತಪ್ಪುತ್ತಿದ್ದು, ಸಮಾಜದಲ್ಲಿ ಕ್ರೌರ್ಯ ಹಾಗೂ ಅಶಾಂತಿ ಅಧಿಕವಾಗುತ್ತಿದೆ. ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ಆರೋಗ್ಯ ಹೊಂದಿ ದೇಶ ಕಟ್ಟುವ ಕೆಲಸದಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.



ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾ.ಡಾ.ವಿ.ಎ ಕುಲಕರ್ಣಿ ಒಳ್ಳೆಯ ಹವ್ಯಾಸಗಳಿಂದ ಉತ್ತಮ ಭವಿಷ್ಯ ರೂಪಿಸಿಕೊಂಡು, ಮಾದರಿ ಜೀವನ ನಡೆಸುವಂತೆ ಹೇಳಿದರು.

ಡಾ. ನಾಗರಾಜ ಭಟ್, ಡಾ. ಸ್ನೇಹ ಕುಲಕರ್ಣಿ, ಪ್ರೊ.ಲಕ್ಷ್ಮಿ ಹಟ್ಟಿ ಹೋಳಿ ಕಾರ್ಯಕ್ರಮ ಆಯೋಜಿಸಿದ್ದರು. ಪ್ರೊ.ಜ್ಯೋತಿ ಕಮ್ಮಾರ್ ಸಂಯೋಜಿಸಿದ್ದರು. ರೆಡ್ ಕ್ರಾಸ್ ಹಾಗೂ ರೆಡ್ ರಿಬ್ಬನ್ ಮತ್ತು ಐಕ್ಯೂಎಸಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 150ಕ್ಕೂ ಅಧಿಕ ವಿದ್ಯಾರ್ಥಿಗಳ ಉಪಸ್ಥಿತರಿದ್ದರು.

ತಪ್ಪಿತಸ್ಥರಿಗೆ ಶಿಕ್ಷೆ ನೀಡಲು ಒತ್ತಾಯ

ಶಿರಸಿ: ತಾಲೂಕಿನ ಪಶ್ಚಿಮ ಭಾಗದ ಪ್ರಮುಖ ಸಹಕಾರಿ ಸಂಸ್ಥೆಯಾದ ಕಾಳಂಗಿ ಸೇವಾ ಸಹಕಾರಿ ಸಂಘದಲ್ಲಿ ನಡೆದಿದೆ ಎನ್ನಲಾದ 8 ರಿಂದ10 ಕೋಟಿ ರೂಪಾಯಿಗಳ ಬೃಹತ್ ಅವ್ಯವಹಾರವನ್ನು ಖಂಡಿಸಿ, ರೈತರ ಹಿತ ರಕ್ಷಣಾ ವೇದಿಕೆ ನೇತೃತ್ವದಲ್ಲಿ ಶುಕ್ರವಾರ ದಾಸನಕೊಪ್ಪದ ಸಂಘದ ಆವರಣದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಬಸವರಾಜ ನಂದಿಕೇಶ್ವರಮಠ ಮಾತನಾಡಿ, ಹಾಲಿ ಆಡಳಿತ ಮಂಡಳಿ ಹಾಗೂ ಮುಖ್ಯ ಕಾರ್ಯನಿರ್ವಾಹಕರು ಶಾಮೀಲಾಗಿ ಸದಸ್ಯರಲ್ಲದವರ ಹೆಸರಲ್ಲೂ ಸಾಲ ಪಡೆದಿದ್ದಾರೆ. ಠೇವಣಿದಾರರ ಹಣವನ್ನು ಬೇರೆಯವರ ಖಾತೆಗೆ ವರ್ಗಾಯಿಸಿ ವಂಚಿಸಲಾಗಿದೆ. ತಪ್ಪಿತಸ್ಥರನ್ನು ಜೈಲಿಗಟ್ಟಬೇಕು ಹಾಗೂ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಆಗ್ರಹಿಸಿದರು. ಮಾಜಿ ನಿರ್ದೇಶಕ ಅಕ್ಷಯ ಜಕಲಣ್ಣನವರ್ ಮಾತನಾಡಿದರು.ಸ್ಥಳಕ್ಕೆ ಆಗಮಿಸಿದ ಸಹಕಾರಿ ಉಪ ನಿಬಂಧಕಿ ಡಾ. ತೇಜಸ್ವಿನಿ ಹಾಗೂ ಸಹಾಯಕ ನಿಬಂಧಕ ಅಜಿತ ಶಿರಹಟ್ಟಿಪ್ರತಿಭಟನಾಕಾರರಮನವೊಲಿಸಲುಯತ್ನಿಸಿದರು. ಅಧಿಕಾರಿಗಳು ಮಾಹಿತಿ ತರಲು ರೈತರನ್ನು ಎರಡು ಗಂಟೆ ಕಾಯಿಸಿದ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಯಿತು. ಬಳಿಕ ಉತ್ತರಿಸಿದ ಡಾ. ತೇಜಸ್ವಿನಿ, ಮುಂಡಗೋಡ ಸಹಕಾರಿ ಅಭಿವೃದ್ಧಿ ಅಧಿಕಾರಿಯನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿದ್ದು, ಶನಿವಾರ ಬೆಳಗ್ಗೆ 10.30ಕ್ಕೆ ಪ್ರಾಥಮಿಕ ವರದಿ ಸಲ್ಲಿಕೆಯಾಗಲಿದೆ. ಸೋಮವಾರ ಸಹಕಾರಿ ಕಾಯ್ದೆ ಕಲಂ 64ರ ಅಡಿಯಲ್ಲಿ ಸಮಗ್ರ ತನಿಖೆಗೆ ಆದೇಶಿಸಲಾಗುವುದು. ಎರಡು ತಿಂಗಳೊಳಗೆ ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಕ್ರಮ ಕೈಗೊಳ್ಳಲಾಗುವುದುಎಂದು ಭರವಸೆ ನೀಡಿದರು. ಅಜಿತ ಶಿರಹಟ್ಟಿ ಮಾತನಾಡಿ, ಈಗಾಗಲೇ ಸಿಬ್ಬಂದಿಯನ್ನು ಅಮಾನತುಗೊಳಿಸಿ ಆಸ್ತಿ ಮೇಲೆ ಬೋಜಾ ಹಾಕಲಾಗಿದೆ ಎಂದರು. ವೃತ್ತಿಪರ ಲೆಕ್ಕ ಪರಿಶೋಧನೆಗೆ ಆಗ್ರಹಿಸಿ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಯುನೆಸ್ಕೋ ಸಂಸ್ಥೆಯ ನಿರ್ದೇಶನ ಹೋರಾಟಕ್ಕೆ ಬಲ: ಎನ್.ವಿ.ಹೆಗಡೆ

ಸಿದ್ದಾಪುರ: ವಿಶ್ವ ಪರಂಪರೆಯ ಸಂರಕ್ಷಣೆಗೆ ಸಂಬಂಧಿಸಿದ ನಿಯಮಗಳನ್ನು ಪಾಲಿಸುವಂತೆ ಯುನೆಸ್ಕೋ ಸಂಸ್ಥೆಯು ಕೇಂದ್ರ ಸರ್ಕಾರಕ್ಕೆ ನೀಡಿದ ಮಾರ್ಗದರ್ಶನ ಅಘನಾಶಿನಿ ನದಿ ಜೋಡಣೆ ವಿರೋಧಿ ಹೋರಾಟಕ್ಕೆ ಬಲ ತಂದಿದೆ ಎಂದು ಜಿಪಂ ಮಾಜಿ ಸದಸ್ಯ ಹಾಗೂ ಹಿಂದಿನ ಬೇಡ್ತಿ-ಅಘನಾಶಿನಿ ಕೊಳ್ಳ ಮುಳುಗಡೆ ಯೋಜನೆ ವಿರೋಧಿ ಸಮಿತಿ ಕಾರ್ಯದರ್ಶಿ ಎನ್.ವಿ.ಹೆಗಡೆ ಮುತ್ತಿಗೆ ಹೇಳಿದರು.

ಅವರು ಶುಕ್ರವಾರ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಅಧ್ಯಕ್ಷತೆಯಲ್ಲಿ ಪಟ್ಟಣದ ರಾಘವೇಂದ್ರ ಮಠದ ಸಭಾ ಮಂಟಪದಲ್ಲಿ ಜರುಗಿದ ಅಘನಾಶಿನಿ ನದಿ ಜೋಡಣೆ ವಿರೋಧಿ ಸಭೆಯಲ್ಲಿ ಯೋಜನೆ ಕುರಿತು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯು ಸಲ್ಲಿಸಿದ ಆಕ್ಷೇಪಕ್ಕೆ, ಯುನೆಸ್ಕೋ ವಿಶ್ವ ಪರಂಪರೆಯ ಕೇಂದ್ರದಿಂದ ಬಂದಿರುವ ಉತ್ತರದ ಪ್ರತಿಯನ್ನು ಪ್ರದರ್ಶಿಸಿ ಮಾತನಾಡಿದರು.

ಯಾವುದೇ ಅಭಿವೃದ್ಧಿ ಅಥವಾ ನದಿ ಜೋಡಣೆ ಯೋಜನೆಯು ವಿಶ್ವ ಪರಂಪರೆಯ ಸಂರಕ್ಷಣಾ ಚೌಕಟ್ಟುಗಳ ಅಡಿಯಲ್ಲಿ ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಬೇಕು. ಯೋಜನೆಯಿಂದ ಪರಿಸರ ಸಮತೋಲನಕ್ಕೆ ಹಾನಿಯಾಗಬಾರದು ಎಂದು ಯುನೆಸ್ಕೋ ಉತ್ತರಿಸಿದೆ. ಅಘನಾಶಿನಿ ನದಿ ಉಳುವಿಗೆ ತಾಂತ್ರಿಕ ಮತ್ತು ಕಾನೂನಾತ್ಮಕ ಹೋರಾಟವನ್ನು ಸಾಂಘಿಕ ಸಂಘಟನೆ ಮೂಲಕ ಮುಂದುವರೆಸಿಕೊಂಡು ಹೋಗಬೇಕು ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಕೆ.ಟಿ.ನಾಯ್ಕ ಸ್ವಾಗತಿಸಿದರು. ಮಾಬ್ಲೇಶ್ವರ ನಾಯ್ಕ ಬೇಡ್ಕಣಿ ಪ್ರಾಸ್ತಾವಿಕ ಮಾತನಾಡಿದರು. ಯೋಜನೆಗಳ ಕುರಿತು ಎಮ್.ಎಸ್.ನಾಯ್ಕ ನರಮುಂಡಗೆ, ಸಂಕೇತ ನಾಯ್ಕ ಹಲಗೇರಿ, ವಿದ್ಯಾ ನಾಯ್ಕ ಹಾರ್ಸಿಕಟ್ಟಾ, ರಾಜು ನಾಯ್ಕ ಕ್ಯಾದಗಿ, ದಿವಾಕರ ನಾಯ್ಕ ಬಾಳೆಜಡ್ಡಿ ಮಾತನಾಡಿದರು.

ಹರಿಹರ ನಾಯ್ಕ ತಂಡಾಗುಂಡಿ, ಶ್ರೀಧರ ಹೆಗಡೆ ಕೆರೆಮನೆ, ಎಮ್.ಆರ್.ನಾಯ್ಕ ಬೇಡ್ಕಣಿ ಉಪಸ್ಥಿತರಿದ್ದರು. ಸುಧಾಕರ ಮಡಿವಾಳ ಬಿಳಗಿ, ಮಂಜು ಹುತ್ಗಾರ, ರಾಮಚಂದ್ರ ನಾಯ್ಕ ತ್ಯಾಗಲಿಮನೆ, ತಿಮ್ಮಪ್ಪ ನಾಯ್ಕ ವಾಟಗಾರ, ಅಬ್ದುಲ್ ಸುಭಾನ ಅರೆಂದೂರು, ಉಮೇಶ ನಾಯ್ಕ ತ್ಯಾಗಲಿ, ಥಾರ್ತಿಸ್ ಫರ್ನಾಂಡಿಸ್, ಚೌಡು ಗೌಡ ಕಿತ್ಲೊಳ್ಳಿ, ದಿನೇಶ ನಾಯ್ಕ ಹಾರ್ಸಿಕಟ್ಟಾ, ರಾಜು ನಾಯ್ಕ ಕಿರಕೋಡ, ಮಂಜುನಾಥ ಶಿವಾನಂದ ಹೆಮ್ಮನಬೈಲ್, ಭಾಸ್ಕರ ನಾಯ್ಕ ಕುರಗೇತೋಟ, ಮಂಜುನಾಥ ನಾಯ್ಕ ಬಿದ್ರಕಾನ, ರವಿ ನಾಯ್ಕ ಹಂಜಗಿ, ಮಂಜುನಾಥ ಮಡಿವಾಳ ಕಿಲಾರ ಉಪಸ್ಥಿತರಿದ್ದರು.



ರವೀಂದ್ರಗೆ ಅಭಿನಂದನೆ

ಜನ ಮತ್ತು ಪರಿಸರ ವಿರೋಧಿಯಾದ ಅಘನಾಶಿನಿ-ವೇದಾವತಿ ನದಿ ಜೋಡಣೆ ಯೋಜನೆ ವಿರೋಧಿಸಿ, ಯುನೆಸ್ಕೋ ವಿಶ್ವ ಪರಂಪರೆಯ ಕೇಂದ್ರಕ್ಕೆ ಆಕ್ಷೇಪ ಪತ್ರವನ್ನು ಸಲ್ಲಿಸಿ, ವಿಶ್ವ ಪರಂಪರೆಯ ಸಮಾವೇಶದ ಮಾರ್ಗಸೂಚಿ ಪಾಲನೆ ಮಾಡುವಂತೆ ಭಾರತ ಸರ್ಕಾರಕ್ಕೆ ವಿಶ್ವ ಪರಂಪರೆಯ ಸಮಾವೇಶದ ಕಾರ್ಯದರ್ಶಿಗಳು ನಿರ್ದೇಶನ ನೀಡುವಂತೆ ಮಾಡುವಲ್ಲಿ ಯಶಸ್ವಿಯಾದ ಹೋರಾಟಗಾರ ರವೀಂದ್ರ ನಾಯ್ಕ ಅವರಿಗೆ ಸಭೆಯು ಅಭಿನಂದನೆ ಸಲ್ಲಿಸಿತು.

ಮರ ತೆರವು ವಿಳಂಬ: ವಾಹನ ಸಂಚಾರಕ್ಕೆ ತೊಡಕು

▸ಸುಧೀರ ನಾಯರ್

ದಿಗಂತ ವಿಶೇಷ

ಬನವಾಸಿ: ಇಲ್ಲಿನ ಕಾಂಗ್ರೆಸ್ ಕಚೇರಿಯ ಮುಂಭಾಗ ಶಿರಸಿ-ಹೊಸನಗರ ರಾಜ್ಯ ಹೆದ್ದಾರಿ ಪಕ್ಕದಲ್ಲಿನ ಅಪಾಯಕಾರಿ ಮರವನ್ನು ತೆರವು ಮಾಡುವಂತೆ ಸ್ಥಳೀಯರು ಹಾಗೂ ವಾಹನ ಸವಾರರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮನವಿ ಮಾಡುತ್ತಿದ್ದಾರೆ.

ಶಿರಸಿ-ಹೊಸನಗರ ರಾಜ್ಯ ಹೆದ್ದಾರಿಯಾಗಿರುವ ಈ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಓಡಾಡುತ್ತದೆ. ಕಾಂಗ್ರೆಸ್ ಕಚೇರಿಯ ಮುಂಭಾಗದಲ್ಲಿ ರಾಜ್ಯ ಹೆದ್ದಾರಿಯ ಪಕ್ಕದಲ್ಲಿರುವ ಬೃಹತ್ ಪ್ರಮಾಣದ ನಂದಿ ಮರವೊಂದು ರಸ್ತೆಗೆ ತಾಗಿಕೊಂಡಿದೆ. ಒಂದು ಕಡೆ ತಿರುವು, ಇನ್ನೊಂದೆಡೆ ಮರದಿಂದಾಗಿ ಎದುರಿಗೆ ಬರುವ ವಾಹನಗಳು ಕಾಣದೇ ವಾಹನ ಸವಾರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಈ ಮರದಿಂದಾಗಿ ಹಲವಾರು ಅಪಘಾತಗಳು ಸಂಭವಿಸಿದ್ದು, ಹಲವು ಸಾವು ನೋವುಗಳು ಸಂಭವಿಸಿದೆ. ಕಳೆದ ಮೂರು ವರ್ಷಗಳ ಹಿಂದೆ ಪಿಕಪ್ ವಾಹನವೊಂದು ಎದುರುಗಡೆ ಬಂದ ವಾಹನ ಮತ್ತು ಮರವನ್ನು ತಪ್ಪಿಸಲು ಹೋಗಿ ನಡೆದುಕೊಂಡು ಬರುತ್ತಿದ್ದ ಏಳು ಜನ ಬಡಕೂಲಿ ಕಾರ್ಮಿಕರಿಗೆ ಡಿಕ್ಕಿ ಹೊಡೆದು ಇಬ್ಬರು ಸಾವನ್ನಪ್ಪಿ, ಐವರು ಗಂಭೀರ ಗಾಯಗೊಂಡಿದ್ದರು. ಇತ್ತೀಚೆಗೆ ಕಾರೊಂದು ಮರಕ್ಕೆ ಡಿಕ್ಕಿ ಹೊಡೆದು ಇಬ್ಬರೂ ಗಂಭೀರವಾಗಿ ಗಾಯಗೊಂಡಿದ್ದರು.



ಲೋಕೋಪಯೋಗಿ ಇಲಾಖೆಯು ರೇಡಿಯಂ ಸ್ಟಿಕ್ಕರ್ ಅಳವಡಿಸದ ಕಾರಣ ರಾತ್ರಿಯಲ್ಲಿ ಈ ಮರ ವಾಹನ ಸವಾರರಿಗೆ ಗೋಚರಿಸದೇ ಹಲವು ಅಪಘಾತಗಳು ಸಂಭವಿಸಿವೆ. ಸಾರ್ವಜನಿಕರ, ವಾಹನ ಸವಾರ ಹಿತರಕ್ಷಣೆಯಿಂದಾಗಿ ಈ ಅಪಾಯಕಾರಿ ಮರವನ್ನು ಅರಣ್ಯ ಇಲಾಖೆ ತೆರವು ಮಾಡಬೇಕೆಂದು ಸ್ಥಳೀಯರ ಆಗ್ರಹವಾಗಿದೆ.

> ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಅಪಾಯಕಾರಿ ಮರವಿರುವುದು ಗಮನಕ್ಕೆ ಬಂದಿದೆ. ಮರ ತೆರವು ಮಾಡುವ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇನೆ.
> ■ ಭವ್ಯ ನಾಯ್, ವಲಯ ಅರಣ್ಯಾಧಿಕಾರಿ

> ಅಪಾಯಕಾರಿ ಮರದಿಂದ ಹಲವು ಸಾವು ನೋವುಗಳು ಸಂಭವಿಸಿದೆ. ಮುಂದೆಯೂ ಈ ಅಪಾಯಕಾರಿ ಮರದಿಂದ ಅನಾಹುತ ತಪ್ಪಿದ್ದಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ಮರವನ್ನು ಶೀಘ್ರವಾಗಿ ತೆರವುಗೊಳಿಸಬೇಕು.
> ■ ಸುನೀಲ್ ಲಟೋರಿ, ಸ್ಥಳೀಯ ನಿವಾಸಿ

ಕಿರುಸುದ್ದಿ

ನೀರಿನ ತೆರಿಗೆ ಭರಿಸಲು ಸೂಚನೆ

ಹಾವೇರಿ : ಬೇಸಿಗೆ ಕಾಲವಿದ್ದು, ನೀರಿನ ಅಭಾವವಿರುವುದರಿಂದ ಒಂದು ಗಂಟೆ ಮಾತ್ರ ಸೀಮಿತವಾಗಿ ನೀರು ಪೂರೈಸಲಾಗುವುದು. ಹಾವೇರಿ ನಗರಸಭೆ ವ್ಯಾಪ್ತಿಯ ಸಾರ್ವಜನಿಕರು ತಮ್ಮ ನೀರಿನ ಸಂಪರ್ಕದ ತೆರಿಗೆಯನ್ನು ತಕ್ಷಣವೇ ನಗರಸಭೆಗೆ ಭರಿಸಿ, ಮುಂದಿನ ಮೂರು ದಿನಗಳಲ್ಲಿ ನೊಂದಾಯಿಸಿಕೊಳ್ಳಬೇಕು. ಇಲ್ಲವಾದಲ್ಲಿ ನೀರಿನ ಸಂಪರ್ಕವನ್ನು ಕಡಿತಗೊಳಿಸಲಾಗುವುದು ಎಂದು ಹಾವೇರಿ ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ. ಸರ್ಕಾರವು ತೆರಿಗೆ ಭರಣ ಮಾಡಲು 31 ಮೇ 2026ರವರೆಗೂ ಶೇ.5ರಷ್ಟು ರಿಯಾಯಿತಿ ವಿಸ್ತರಿಸಿ ಆದೇಶ ಹೊರಡಿಸಿದ್ದು, ಎಸ್.ಎ.ಎಸ್ ಹಾಗೂ ನೀರಿನ ತೆರಿಗೆಗಳನ್ನು ಸಕಾಲದಲ್ಲಿ ಪಾವತಿಸಿ ನಗರದ ಅಭಿವೃದ್ಧಿಗೆ ಸಹಕರಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಪರಿವರ್ತಕ ಕಳ್ಳತನ

ಹಾವೇರಿ: ಇಲ್ಲಿಯ ದೇವಗಿರಿ ಸಮೀಪದ ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಹೊಂದಿಕೊಂಡಿರುವ ಜಮೀನಿನಲ್ಲಿ ಅಳವಡಿಸಿದ್ದ ವಿದ್ಯುತ್ ಪರಿವರ್ತಕ ಹಾಗೂ ಅದರಲ್ಲಿದ್ದ ಆಯಿಲ್ ವೈಂಡಿಂಗ್‌ನ್ನು ಕಳ್ಳರು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ನಡೆದಿದೆ. ದೇವಗಿರಿಯ ಸಚಿನ್ ಕಬ್ಬೂರ ಹಾಗೂ ಪಂಪಣ್ಣ ಹೋಳಿಕಟ್ಟಿ ಇವರ ಜಮೀನಿನಲ್ಲಿ ಅಳವಡಿಸಿದ್ದ 25 ಕೆವಿ ಪರಿವರ್ತಕದಲ್ಲಿದ್ದ ಆಯಿಲ್ ಹಾಗೂ ವೈಂಡಿಂಗ್‌ಗಳನ್ನು ಕಳುವು ಮಾಡಲಾಗಿದೆ. ಸುಮಾರು 1.85ಲಕ್ಷ ರೂ.ಮೌಲ್ಯದ ಪರಿವರ್ತಕ ಹಾಗೂ ಆಯಿಲ್ ವೈಂಡಿಂಗ್‌ನ್ನು ಕಳುವು ಮಾಡಿಕೊಂಡು ಹೋಗಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

30 ಕುರಿ ಕದ್ದೊಯ್ದ ಕಳ್ಳರು

ಹಾವೇರಿ: ಕುರಿ ಶೆಡ್ಡಿಗೆ ಅಳವಡಿಕೆ ಮಾಡಿದ್ದ ಜಾಲರಿಯನ್ನು ತೆಗೆದು ಶೆಡ್‌ನಲ್ಲಿದ್ದ ಸುಮಾರು 3.60ಲಕ್ಷ ರೂ.ಮೌಲ್ಯದ 30 ಕುರಿಗಳನ್ನು ಕಳ್ಳರು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ಹಿರೇಕೆರೂರು ತಾಲೂಕು ಲಿಂಗಾಪುರ ಗ್ರಾಮದಲ್ಲಿ ನಡೆದಿದೆ.ಲಿಂಗಾಪುರ ಗ್ರಾಮದ ಜಯಪ್ಪ ಮಲ್ಲೇಶಪ್ಪ ದೊಡ್ಡಗೋಣೆಪ್ಪನವರ ಎಂಬುವವರಿಗೆ ಸೇರಿದ ಕುರಿಗಳು ಇವಾಗಿವೆ. ಕುರಿಗಾಹಿ ಜಯಪ್ಪ ತನ್ನ 1 ಎಕರೆ 10 ಗುಂಟೆ ಜಮೀನಿನಲ್ಲಿ ಮನೆ ನಿರ್ಮಿಸಿಕೊಂಡು ಕುರಿ ಸಾಕಾಣಿಕೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಎರಡು ತಿಂಗಳು ಹಿಂದೆಯಷ್ಟೇ ಹರಪನಹಳ್ಳಿಯಿಂದ 30 ಗಂಡು ಕುರಿಗಳನ್ನು ಹಾಗೂ ರಾಣೇಬೆನ್ನೂರಿನಿಂದ 23 ಗಂಡು ಕುರಿಗಳನ್ನು ಮಾರಾಟಕ್ಕೆ ತೆಗೆದುಕೊಂಡು ಬಂದು ಕುರಿ ಸಾಕಾಣಿಕೆಯಲ್ಲಿ ತೊಡಗಿದ್ದರು. ಮೇ.13ರ ರಾತ್ರಿ ವೇಳೆ ಯಾರೋ ಕಳ್ಳರು ಕುರಿ ಶೆಡ್‌ಗೆ ಹಾಕಿದ್ದ ಜಾಲರಿಯನ್ನು ಬಿಚ್ಚಿ, ಶೆಡ್‌ನೊಳಗೆ ಇದ್ದ 3,60,000ರೂ.ಮೌಲ್ಯದ ಒಟ್ಟು 30 ಕುರಿಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದಾರೆ. ಹಂಸಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾನಪದ ಸಂಭ್ರಮ ಇಂದು

ಧಾರವಾಡ: ನಗರದ ಮರಾಠಾ ವಿದ್ಯಾ ಪ್ರಸಾರಕ ಮಂಡಳದ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ಕಲಾ–ವಾಣಿಜ್ಯ, ವಿಜ್ಞಾನ ಪದವಿ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಹಳ್ಳಿ ಸೊಗಡಿನ ಜಾನಪದ ಸಂಭ್ರಮ ಮೇ 16ರ ಬೆಳಗ್ಗೆ 10.30ಕ್ಕೆ ಕಾಲೇಜಿನ ಆವರಣದಲ್ಲಿ ನಡೆಯಲಿದೆ. ವಿದ್ಯಾರ್ಥಿಗಳ ಪೂರ್ಣಕುಂಭ ಹಾಗೂ ಜೋಡೆತ್ತಿನ ಮೆರವಣಿಗೆ, ಹಳ್ಳಿಯ ಜಾನಪದ ಹಬ್ಬಗಳ ವೈಭವ ಗಮನ ಸೆಳೆಯಲಿದೆ. ಈ ಕಾರ್ಯಕ್ರಮಕ್ಕೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಡಾ.ಪಾರ್ವತೆವ್ವ ಸಿದ್ದಪ್ಪ ಹೊಂಗಲ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಮಂಡಳದ ಪದಾಧಿಕಾರಿಗಳು, ಸಮಾಜದ ಗಣ್ಯರು ಪಾಲ್ಗೊಳ್ಳಲ್ಲಿದ್ದಾರೆ ಎಂದು ಪ್ರಾಚಾರ್ಯರಾದ ಪ್ರೊ. ಎಂ.ಎಸ್.ಗಾಣಿಗೇರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಬೃಹತ್ ರಕ್ತದಾನ ಶಿಬಿರ

ಹುಬ್ಬಳ್ಳಿ: ರಾಷ್ಟ್ರೀಯ ಸ್ವಯಂಸೇವಕ ಸಂಘ, ನವೀನ ಪಾರ್ಕ್ ನಿವಾಸಿಗಳ ಸಂಘ ಹಾಗೂ ರಾಷ್ಟ್ರೋತ್ಥಾನ ರಕ್ತ ಕೇಂದ್ರ ಸಹಯೋಗದಲ್ಲಿ ಮೇ 17ರಂದು ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ರ ವರೆಗೆ ನವೀನ ಪಾರ್ಕ್‌ನ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಶಿಬಿರ ನಡೆಯಲಿದೆ ಎಂದು ರಕ್ತ ಕೇಂದ್ರ ಸಂಚಾಲಕ ದತ್ತ ಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.



ಗದಗ: ತಾಲೂಕಿನ ತಿಮ್ಮಾಪುರ ಗ್ರಾಮಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎಂ.ವಿ. ವೆಂಕಟೇಶ ಗ್ರಾಮದ ಕೆರೆಗೆ ಭೇಟಿ ನೀಡಿ ಕೆರೆಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಗಂಗಪ್ಪ ಎಂ., ಸಿ.ಆರ್. ಮುಂಡರಗಿ, ಊರಿನ ಹಿರಿಯರು ಉಪಸ್ಥಿತರಿದ್ದರು.

ಮೇ 18ರಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಸಭೆ

ರಾಣೆಬೆನ್ನೂರ: ಖಾಸಗಿ ಶಿಕ್ಷಣ ಸಂಸ್ಥೆಯವರು ನಿಯಮ ಬಾಹಿರವಾಗಿ ಡೋನೆಷನ್ ತೆಗೆದುಕೊಳ್ಳುತ್ತಿರುವುದನ್ನು ತಡೆಗಟ್ಟುವ ನಿಮಿತ್ತ ಮೇ 18ರಂದು ಬೆಳಗ್ಗೆ 10 ಗಂಟೆಗೆ ನಗರದ ತಾಪಂ ಸಭಾಭವನದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಸಭೆ ಕರೆದಿದ್ದು, ಅದಕ್ಕೆ ಎಲ್ಲರೂ ಹಾಜರಾಗಬೇಕು. ಡೋನೆಷನ್ ನಿಲ್ಲಿಸುವ ಕುರಿತು ಸ್ಪಷ್ಟ ನಿಲುವು ತಿಳಿಸಬೇಕು. ಇಲ್ಲವಾದರೆ ಮುಂದಿನ ಹೋರಾಟ ಮಾಡಲಾಗುವುದು ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಪಾಟೀಲ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಡೋನೆಷನ್ ತೆಗೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಸಂಟನೆ ವತಿಯಿಂದ ಪ್ರತಿಭಟನೆ ಕಾರಣ ತಹಶಿಲ್ದಾರ ಸಭೆ ಕರೆದಿದ್ದಾರೆ. ಈ ಸಭೆಗೆ ಎಲ್ಲ ಸಂಘಸಂಸ್ಥೆಯವರು, ವಿವಿಧ ಮಠಾಧೀಶರು ಬರಲಿದ್ದಾರೆ. ಸಭೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಯವರು ತಮ್ಮ ಶಾಲಾ ಕಾಲೇಜ್ಗಳ ಶುಲ್ಕ ಕುರಿತು ಅಧಿಕೃತವಾಗಿ ಪ್ರಕಟಿಸಬೇಕು. ಜತೆಗೆ ಮುಂದಿನ ನಿಲುವು ಕುರಿತು ಸ್ಪಷ್ಟಪಡಿಸಬೇಕು. ಇಲ್ಲವಾದರೆ ಮುಂದಿನ ದಿನದಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರಮುಖರಾದ ಹೊನ್ನಪ್ಪ ಮರಿಯಮ್ಮನವರ, ನಿತ್ಯಾನಂದ ಕುಂದಾಪುರ, ಮಲ್ಲೇಶಪ್ಪ ಮದ್ಲೇರ, ರಾಜೇಶ್ವರಿ ಪಾಟೀಲ್, ಜಮಾಲಸಾಬ ಶೇತಸನದಿ, ಬೀರಪ್ಪ ಕುರುಬರ, ಶಿವಾಜಿ ಮರಾಠ, ನಾಗರತ್ನಮ್ಮ ರಡ್ಡೇರ, ಗದಿಗೆವ್ವ ಕುರುಬರ, ಜಗದೀಶ ಕೆರೂಡಿ ಮತ್ತಿತರರಿದ್ದರು.



ರಾಣೆಬೆನ್ನೂರ: ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಪಾಟೀಲ ಮಾತನಾಡಿ, ಮೇ 18ರಂದು ಬೆಳಗ್ಗೆ 10 ಗಂಟೆಗೆ ನಗರದ ತಾಪಂ ಸಭಾಭವನದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಸಭೆ ಕರೆಯಲಾಗಿದೆ ಎಂದು ತಿಳಿಸಿದರು.

ಮೇ 18ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ–2 | ಎಡಿಸಿ ಡಾ.ನಾಗರಾಜ ಸೂಚನೆ

ನಕಲು ಮುಕ್ತ, ಪಾರದರ್ಶಕ ಪರೀಕ್ಷೆ ನಡೆಸಿ

ಹಾವೇರಿ: ಎಸ್ಸೆಸ್ಸೆಲ್ಸಿ ಪರೀಕ್ಷೆ–2 ಮೇ 18ರಿಂದ ಮೇ 25ರವರೆಗೆ ಜಿಲ್ಲೆಯ ಏಳು ಕೇಂದ್ರಗಳಲ್ಲಿ ನಡೆಯಲಿದ್ದು, ನಕಲು ಮುಕ್ತ ಹಾಗೂ ಪಾರದರ್ಶಕ ಪರೀಕ್ಷೆ ನಡೆಸಬೇಕು. ವ್ಯವಸ್ಥಿತ ಹಾಗೂ ಶಾಂತತೆಯಿಂದ ಪರೀಕ್ಷೆ ನಡೆಸಲು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಡಿಸಿ ಕಚೇರಿ ಸಭಾಂಗಣದಲ್ಲಿ ಜರುಗಿದ ಎಸ್ಸೆಸ್ಸೆಲ್ಸಿ ಪರೀಕ್ಷೆ–2 ಪೂರ್ವ ಸಿದ್ಧತಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಪರೀಕ್ಷಾ ಕಾರ್ಯಕ್ಕೆ ನಿಯೋಜಿಸತ ವಿವಿಧ ಇಲಾಖೆ ಅಧಿಕಾರಿಗಳು, ಮಾರ್ಗಾಧಿಕಾರಿಗಳು, ವೀಕ್ಷಕರು, ಕೊಠಡಿ ಮೇಲ್ವಿಚಾರಕರು ತಮ್ಮ ಕರ್ತವ್ಯಗಳಲ್ಲಿ ಯಾವುದೇ ಲೋಪವಾಗದಂತೆ ಜವಾಬ್ದಾರಿಯಿಂದ ಹಾಗೂ ಸಮನ್ವಯದಿಂದ ಕಾರ್ಯನಿರ್ವಹಿಸಿ. ಎಲ್ಲರೂ ಪರೀಕ್ಷಾ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಿ. ಪರೀಕ್ಷಾ ಕೇಂದ್ರದ ಹೊರ ವಲಯ ಹಾಗೂ ಕೊಠಡಿಯ ಒಳಗೆ ಶಿಸ್ತುಬದ್ಧವಾಗಿ ಪರೀಕ್ಷಾ ನಿಯಮಗಳ ಉಲ್ಲಂಘನೆಯಾಗದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಸಿ ಎಂದರು.

ತ್ರಿ ಸದಸ್ಯ ಕಮಿಟಿ: ಪ್ರಶ್ನೆ ಪತ್ರಿಕೆ ಬಂಡಲ್ ತೆಗೆದುಕೊಂಡು ಹೋಗಲು ಪ್ರತಿ ತಾಲೂಕಿಗೂ ತ್ರಿಸದಸ್ಯ ಸಮಿತಿ ರಚಿಸಲಾಗಿದೆ. ಪೊಲೀಸ್ ಬಂದೋಬಸ್ತ್‌ನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಆಯಾ ತಾಲೂಕಿಗೆ ನಿಗದಿಪಡಿಸಿದ ಸಮಯಕ್ಕೆ ಅನುಗುಣವಾಗಿ ತೆಗೆದುಕೊಂಡು ಹೋಗಬೇಕು ಎಂದು ಸೂಚನೆ ನೀಡಿದರು.

ಸ್ವಚ್ಛತೆಗೆ ಆದ್ಯತೆ : ಪರೀಕ್ಷಾ ಕೊಠಡಿಗಳಲ್ಲಿ ಸ್ವಚ್ಛತೆಗೆ ಆದ್ಯತೆನೀಡಬೇಕು.ವ್ಯವಸ್ಥಿತವಾಗಿಪಿಠೋಪಕರಣ, ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಇರಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯ ಹೊಂದಿರಬೇಕು ಎಂದರು.

ಪರೀಕ್ಷಾ ಕೇಂದ್ರಗಳಿಗೆ ಬಂದೋಬಸ್ತ್: ಪರೀಕ್ಷೆ ನಡೆಯುವ ಎಲ್ಲ ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಬಂದೋಬಸ್ತ್ ಒದಗಿಸಲು ಹಾಗೂ ಆರೋಗ್ಯ ಶುಶ್ರೂಷಕಿಯರನ್ನು ನಿಯೋಜನೆ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಿಸಿ ಟಿವಿ ಕಡ್ಡಾಯ : ಪ್ರಶ್ನೆ ಪತ್ರಿಕೆ ಬಂಡಲ್ ತೆರೆಯುವಾಗ ಮತ್ತು ಉತ್ತರ ಪತ್ರಿಕೆ ಬಂಡಲ್‌ಗಳನ್ನು ಕಡ್ಡಾಯವಾಗಿ ಸಿಸಿಟಿವಿ ಕಣ್ಗಾವಲಿನಲ್ಲಿ ಸೀಲ್ ಮಾಡಬೇಕು, ವೆಬ್ ಕಾಸ್ಟಿಂಗ್ ಇರುತ್ತದೆ. ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆ ಬಂಡಲ್‌ಗಳನ್ನು ಸೂಕ್ತ ಪೊಲೀಸ್ ಬಂದೋಬಸ್ತ್‌ನಲ್ಲಿ ಸಲ್ಲಿಸಬೇಕು ಎಂದು ತಿಳಿಸಿದರು.

ವಿಶೇಷ ಸಾರಿಗೆ : ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಶೇಷ ಸಾರಿಗೆ ಸೌಲಭ್ಯ ಒದಗಿಸುವಂತೆ ಎನ್.ಡಬ್ಲ್ಯೂ.ಕೆ.ಎಸ್ ಆರ್ ಟಿಸಿ ಹಾವೇರಿ ವಿಭಾಗೀಯ ನಿಯಂತ್ರಾಧಿಕಾರಿಗಳಿಗೆ ಸೂಚನೆ ನೀಡಿದರು. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ಮುಂಜಾಗ್ರತೆ ವಹಿಸಿ. ಸಿಸಿ ಟಿವಿ ವೆಬ್ ಕಾಸ್ಟಿಂಗ್ ಕೊಠಡಿಯಲ್ಲಿ ಸರಿಯಾಗಿ ನಿರ್ವಹಣೆ ಮಾಡಬೇಕು. ಎಲ್ಲ ಸ್ಕ್ರೀನ್‌ಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರಲಿ ಎಂದರು. ಇಲೆಕ್ಟ್ರಾನಿಕ್ ಉಪಕರಣಗಳ ನಿಷೇಧ: ಪರೀಕ್ಷಾರ್ಥಿಗಳು ಅಥವಾ ಕೊಠಡಿಯ ಮೇಲ್ವಿಚಾರಕರಾಗಲಿ ಪರೀಕ್ಷಾ ಕೇಂದ್ರದೊಳಗೆ ಅತ್ಯಾಧುನಿಕ ಇಲೆಕ್ಟ್ರಾನಿಕ್ ಉಪಕರಣಗಳಾದ ಮೊಬೈಲ್, ಬ್ಲೂಟೂತ್, ಪೇಜರ್, ವೈರಲೆಸ್ ಸೆಟ್ ಹಾಗೂ ರಿಸ್ಟ್ ವಾಚ್‌ಗಳನ್ನು ನಿಷೇಽಸಿದೆ. ಈ ಕುರಿತಂತೆ ಅಽಕಾರಿಗಳು ಎಚ್ಚರ ವಹಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಡಿಡಿಪಿಯು ಅಶೋಕ ಶಾಸ್ತ್ರಿ, ಬಿಇಒಗಳಾದ ಎಂ.ಎಚ್. ಪಾಟೀಲ, ಎ.ಎಸ್. ಅಡಿಗ, ಆರ್.ವಿ. ಚನ್ನಿಕಟ್ಟಿ, ಎಸ್.ಜಿ. ಕೋಟಿ, ವಿವಿಧ ಇಲಾಖೆ ಅಽಕಾರಿಗಳು ಹಾಗೂ ವಿಡಿಯೋ ಕಾನ್ಫರೆನ್ಸ್ ಮೂಲಕ ಎಲ್ಲ ತಾಲೂಕು ತಹಶೀಲ್ದಾರಗಳು ಭಾಗವಹಿಸಿದ್ದರು.

> **2,160 ವಿದ್ಯಾರ್ಥಿಗಳು**
>
> ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮೋಹನ್ ದಂಡಿನ ಅವರು ಮಾತನಾಡಿ, 667 ಹೊಸ ವಿದ್ಯಾರ್ಥಿಗಳು, 1101 ಪುನರಾವರ್ತಿತ ವಿದ್ಯಾರ್ಥಿಗಳು, 341 ಖಾಸಗಿ ಹೊಸ ಅಭ್ಯರ್ಥಿಗಳು, 51 ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು ಸೇರಿ 2,160 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, 1,681 ಗಂಡು ಮತ್ತು 479 ಹೆಣ್ಣು ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ. ಜಿಲ್ಲೆಯ ಎಲ್ಲ ತಾಲೂಕು ಕೇಂದ್ರದಲ್ಲಿ ತಲಾ ಒಂದು ಪರೀಕ್ಷಾ ಕೇಂದ್ರ (ರಟ್ಟಿಹಳ್ಳಿ ತಾಲೂಕು ಹೊರತುಪಡಿಸಿ) ಒಟ್ಟು ಏಳು ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ: ಶಾಸಕ

ಹಾನಗಲ್ಲ: ನೀರಿಲ್ಲದ ಬದುಕನ್ನು ಊಹಿಸುವುದೂ ಸಹ ಅಸಾಧ್ಯ. ಹಾಗಾಗಿ ಜೀವ ಜಲದ ಸುರಕ್ಷಣೆ ನಮ್ಮೆಲ್ಲರ ಹೊಣೆಯಾಗಬೇಕಿದೆ. ಮುಂದಿನ ಜನಾಂಗಕ್ಕೆ ನೀರನ್ನು ಉಳಿಸಬೇಕಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಹುಣಸಿಕಟ್ಟಿ ಗ್ರಾಮದಲ್ಲಿ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ನಮ್ಮೂರು ನಮ್ಮ ಕೆರೆ ಯೋಜನೆಯಡಿ 20 ಲಕ್ಷ ರೂ. ವೆಚ್ಚದಲ್ಲಿ ಹೂಳೆತ್ತಲಾದ ಚುಂಚಲಕಟ್ಟಿ ಕೆರೆಯನ್ನು ಸಮುದಾಯಕ್ಕೆ ಹಸ್ತಾಂತರಿಸಿ ಅವರು ಮಾತನಾಡಿದರು. ಕಾಲ ಬದಲಾದಂತೆ ಕೆರೆ, ಕಟ್ಟೆಗಳನ್ನು ಮುಚ್ಚಲಾಗುತ್ತಿದೆ. ಕಾಲುವೆಗಳನ್ನು ಅತಿಕ್ರಮಿಸಿ ನೀರು ಸರಾಗವಾಗಿ ಹರಿದು ಜಲಮೂಲ ಸೇರುವುದನ್ನು ತಡೆಯಲಾಗಿದೆ. ನೀರಿನ ಅಪವ್ಯಯವೂ ಹೆಚ್ಚುತ್ತಿದೆ. ಇವೆಲ್ಲ ಕಾರಣಗಳಿಂದ ಸಂಕಷ್ಟ ತಲೆದೋರಿದೆ. ಸಮಸ್ಯೆ ಸೃಷ್ಟಿಯಾದ ಸಂದರ್ಭದಲ್ಲಿ ವ್ಯಥೆ ಪಡೆಯುವ ಬದಲಿಗೆ ನೀರಿನ ವಿಷಯದಲ್ಲಿ ಸಮಸ್ಯೆ ಸೃಷ್ಟಿಯಾಗದಂತೆ ಜಾಗರೂಕತೆ ವಹಿಸಬೇಕಿದೆ ಎಂದು ಹೇಳಿದ ಅವರು ಸಮಾಜದ ಎಲ್ಲ ವರ್ಗದ ಜನರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವ ಮಹತ್ವದ ಕಾರ್ಯದಲ್ಲಿ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತೊಡಗಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಕಾಳಜಿ ವಹಿಸಿದ್ದು, ಹತ್ತು ಹಲವು ಸಮಾಜೋಪಯೋಗಿ ಸೇವಾ ಕಾರ್ಯಗಳ ಮೂಲಕ ಮಾದರಿಯಾಗಿದೆ ಎಂದರು.

ಯೋಜನೆಯ ಪ್ರಾದೇಶಿಕ ನಿರ್ದೇಶಕಿ ದಯಾಶೀಲ ಮಾತನಾಡಿ, ಕಳೆದ 15, 16 ವರ್ಷಗಳ ಹಿಂದೆ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಪರಿಕಲ್ಪನೆಯಲ್ಲಿ ನಮ್ಮೂರು ನಮ್ಮ ಕೆರೆ ಯೋಜನೆ ಜಾರಿಗೆ ಬಂದಿದ್ದು, ರಾಜ್ಯವ್ಯಾಪಿ ಇದುವರೆಗೆ 997 ಕೆರೆಗಳನ್ನು ಹೂಳೆತ್ತಿ ಜೀರ್ಣೋದ್ಧಾರಗೊಳಿಸಲಾಗಿದೆ. ಈ ಪೈಕಿ ಹಾವೇರಿ ಜಿಲ್ಲೆಯಲ್ಲಿ ಅತೀ ಹೆಚ್ಚು ಒಟ್ಟು 48 ಕೆರೆಗಳನ್ನು ಸಂರಕ್ಷಿಸಲಾಗಿದೆ. ಸಣ್ಣ ಉಳಿತಾಯದಿಂದ ದೊಡ್ಡ ಬದಲಾವಣೆ ಸಾಧ್ಯ ಎನ್ನುವುದನ್ನು ನಿರೂಪಿಸಿರುವ ಯೋಜನೆ ಸಂಕಷ್ಟದ ಸಮಯದಲ್ಲಿ ಬಡ ಮತ್ತು ದುರ್ಬಲ ಕುಟುಂಬಗಳಿಗೆ ನೆರವಾಗುವ ಮಾನವೀಯ ಕಾರ್ಯದಲ್ಲಿ ತೊಡಗಿದೆ. ಗ್ರಾಮ ಅಭಿವೃದ್ಧಿ ಆದರೆ ದೇಶ ಅಭಿವೃದ್ಧಿ ಆಗಲಿದೆ ಎನ್ನುವ ಸಂದೇಶ ಸಾರಿದೆ ಎಂದರು.

ಯೋಜನೆಯ ಯೋಜನಾಧಿಕಾರಿ ರಘುರಾಮ್ ನಾಯ್ಕ, ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರಾದ ವಾಸುದೇವ ಮೂಡಿ, ನಾರಾಯಣ ಬಿ., ಪಿಡಿಒ ರಾಮಣ್ಣ ಹನಕನಹಳ್ಳಿ, ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಮಹೇಶ ಕುಲಕರ್ಣಿ, ಸದಸ್ಯ ಗಂಗಾಧರ ಪ್ಯಾಟಿ, ಸಿದ್ದಲಿಂಗಪ್ಪ ಕಮಡೊಳ್ಳಿ, ರವಿ ಮ್ಯಾಗೇರಿ, ಕೆ.ಎಸ್.ಕೋರಿಶೆಟ್ಟರ, ನಿಂಗರಾಜ ಮಾಳವಾಡ ಸೇರಿದಂತೆ ಇನ್ನೂ ಹಲವರು ಇದ್ದರು.



ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿದ ಶಾಸಕ

ಬ್ಯಾಡಗಿ: ಕ್ಷೇತ್ರದ ಜನತೆ ಹಾಗೂ ರಾಜ್ಯದ ಜನತೆ ನಮಗೆ ಅಧಿಕಾರ ನೀಡಿ ಸೇವೆ ಮಾಡಲು ಆಶೀರ್ವಾದ ಮಾಡಿದ ಜನರ ಋಣ ತೀರಿಸಲು ನಮ್ಮ ಸರ್ಕಾರ ಆರನೆಯ ಭೂ ಗ್ಯಾರಂಟಿ ಯೋಜನೆ, ನೀಡಿದ್ದು ಗ್ರಾಮೀಣ ಪ್ರದೇಶದ ಬಡ ಜನರು ಕಳೆದ 50 ವರ್ಷಗಳಿಂದ ಪಟ್ಟ ಖಾತೆ ಇಲ್ಲದವರಿಗೆ ಇಂದು ಈ ಯೋಜನೆ ಮೂಲಕ ದಾಖಲಾತಿ ನಡೆಯುತ್ತಿದೆ ಎಂದು ಶಾಸಕ ಶಿವಣ್ಣನವರ ಹೇಳಿದರು.

ಶುಕ್ರವಾರ ತಾಲೂಕಿನ ಹಿರೇಹಳ್ಳಿ ಗ್ರಾಮದಲ್ಲಿ ಕಾಗಿನೆಲೆ ಹೋಬಳಿ ಗ್ರಾಮಗಳಲ್ಲಿನ ಒಟ್ಟು 1,257 ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ನೀಡುವ ಮೂಲಕ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ ಹಕ್ಕುಪತ್ರ ವಿತರಣೆ ಚಾಲನೆ ನೀಡಿದ್ದು, ತಾಲೂಕಿನ ಕಂದಾಯ ಇಲಾಖೆಯ ನೇತೃತ್ವದಲ್ಲಿ ಇಂದು ಹಕ್ಕುಪತ್ರ ವಿತರಿಸಲಾಯಿತು. ಗ್ರಾಮಸ್ಥರಿಗೆ ಮೂಲ ಸೌಕರ್ಯ ಹಾಗೂ ಸರ್ಕಾರದ ಜಾರಿಯಲ್ಲಿರುವ ಅನೇಕ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ನಮ್ಮ ಸರ್ಕಾರ ನಮ್ಮ ಆಡಳಿತ ಪ್ರಾಮಾಣಿಕ ಪ್ರಯತ್ನ ಮಾಡಿದೆ ಎಂದು ಹೇಳಿದರು.

ತಹಶೀಲ್ದಾರ್ ಚಂದ್ರಶೇಖರ್ ನಾಯಕ್, ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಮಲ್ಲಿಕಾರ್ಜುನ್, ಯೋಜನಾಧಿಕಾರಿ ಎಂ.ಎ. ಅಗಸರ ಹಾಗೂ ಮುಖಂಡರಾದ ರುದ್ರಣ್ಣ ಹೊಂಕಣದ, ಕಾಗಿನೆಲೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವನ ಗೌಡ ಪಾಟೀಲ್, ಮಾರುತಿ ಅಚಿಗೇರಿ, ಚಿನ್ನಮ್ಮ ಎಮ್ಮೇರ, ಎನ್.ಎಂ.ಕೆಂಪಗೊಂಡರ, ಬಿಎಮ್ ಗೌರಪುರ, ಮಂಜನ್ ಗೌಡ ಲಿಂಗನಗೌಡ, ಎಂ.ಎನ್ .ಪಾಟೀಲ್. ನಾಗನಗೌಡ ಪಾಟೀಲ್, ಜಿಎಂ ಬನ್ನಿಹಳ್ಳಿ, ಎಸ್.ಎಂ.ಮಲ್ಲಾಡದ ಗ್ರಾಮ ಲೆಕ್ಕಾಧಿಕಾರಿ ರಾಮನ್ ಗೌಡ್ ಹಾಗೂ ಫಲಾನುಭವಿಗಳು ಪಕ್ಷದ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.



ವೇತನ ನೀಡಲು ಕಾರ್ಮಿಕರ ಒತ್ತಾಯ

ರಾಣೇಬೆನ್ನೂರ: ನಮಗೆ ದುಡಿದ ಸಂಬಳ ನೀಡಿಲ್ಲ, ದಯವಿಟ್ಟು ಸಂಬಳ ಒದಗಿಸಬೇಕು. ನಾಲ್ಕೈದು ವರ್ಷಗಳಿಂದ ದುಡಿದರೂ ಈವರೆಗೂ ಪಿಎಫ್ ನೀಡಿಲ್ಲ, ನಮಗೆ ನ್ಯಾಯ ಒದಗಿಸಿಕೊಡಬೇಕು ಎಂದು ಆಗ್ರಹಿಸಿ ಬೈರನಪಾದ ಜಿ.ಎಂ. ಶುಗರ್ಸ್ ಭದ್ರತಾ ಸಿಬ್ಬಂದಿ ಶುಕ್ರವಾರ ನಗರದ ಕಾರ್ಮಿಕ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನಾವು ನ್ಯಾಷನಲ್ ಡಿಷನ್ಸ್ ಸೋರ್ಸ್ ಪೆ.ಲಿ. (ಎನ್ಡಿಎ)ನಲ್ಲಿ ನೇಮಕಗೊಂಡು ಬೈರನಪಾದ ಜಿ.ಎಂ. ಶುಗರ್ಸ್‌ನಲ್ಲಿ ಭದ್ರತಾ ಸಿಬ್ಬಂದಿಯಾಗಿ ಕಳೆದ ನಾಲ್ಕೈದು ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ಆದರೆ, ನಮ್ಮನ್ನು ನೇಮಕ ಮಾಡಿಕೊಂಡ ಕಂಪನಿಯವರು ಈವರೆಗೂ ಪಿಎಫ್ ಸೌಲಭ್ಯ ಕಲ್ಪಿಸಿಲ್ಲ. ಇದೀಗ ಅವರ ಗುತ್ತಿಗೆ ರದ್ದುಗೊಂಡಿದೆ. ಆದ್ದರಿಂದ ಎನ್ಡಿಎನವರು ನಮಗೆ ನೀಡಬೇಕಾದ ಒಂದೂವರೆ ತಿಂಗಳ ಸಂಬಳ ಸಹ ನೀಡುತ್ತಿಲ್ಲ, ಅಲ್ಲದೆ ಪಿಎಫ್ ಬಗ್ಗೆ ಮಾಹಿತಿ ಕೇಳಿದರೂ ನೀಡುತ್ತಿಲ್ಲ. ಸಂಬಳ ಕೇಳಲು ಹೋದರೆ ಕೊಡುವುದಿಲ್ಲ, ಏನೂ ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ ಎಂದು ಬೈದು ವಾಪಸ್ ಕಳುಹಿಸುತ್ತಿದ್ದಾರೆ. ಆದ್ದರಿಂದ ನಮಗೆ ನ್ಯಾಯ ಒದಗಿಸಿಕೊಡಬೇಕು ಎಂದು ಒತ್ತಾಯಿಸಿದರು. ಕಾರ್ಮಿಕ ನಿರೀಕ್ಷಕ ಬೀರಾದಾರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಕಾರ್ಮಿಕರಾದ ಬಸವರಾಜ ಆರ್.ಕೆ., ನಾಗರಾಜ ಎಚ್.ಕೆ., ಶ್ರೀ ನಿವಾಸ ಆರ್.ಜಿ., ನಿಂಗರೆಡ್ಡಿ ಕೆ., ವಿನಾಯಕ ಆರ್.ಸಿ., ಮಲ್ಲಿಕಾರ್ಜುನ, ವೀರಯ್ಯ ಕೆ., ಆಕಾಶ ಬಿ.ಟಿ. ಮತ್ತಿತರರು ಪಾಲ್ಗೊಂಡಿದ್ದರು.



ಶಿಕ್ಷಣ ಸಂಸ್ಥೆ ಕಟ್ಟುವುದು ಸುಲಭವಲ್ಲ: ಶಾಸಕ ಲಮಾಣಿ

ಹಾವೇರಿ: ನರ್ಸಿಂಗ್, ಪ್ಯಾರಾ ಮೆಡಿಕಲ್‌ನಂತಹ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವುದು ಸುಲಭದ ಕೆಲಸವಲ್ಲ. ಡಾಂಗೆ ಶಿಕ್ಷಣ ಸಂಸ್ಥೆಯು ಅನೇಕ ಸವಾಲುಗಳನ್ನು ಎದುರಿಸಿ ಆರೋಗ್ಯ ಕ್ಷೇತ್ರದಲ್ಲಿ ಜಿಲ್ಲೆಯನ್ನು ಅಭಿವೃದ್ಧಿ ಪಡಿಸುವಲ್ಲಿ ದಾಪುಗಾಲು ಇಟ್ಟಿದೆ ಎಂದು ವಿಧಾನಸಭೆ ಉಪ ಸಭಾಧ್ಯಕ್ಷ ಶಾಸಕ ರುದ್ರಪ್ಪ ಲಮಾಣಿ ಹೇಳಿದರು.

ನಗರದ ಗುರು ಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಡಾಂಗೆ ಶಿಕ್ಷಣ ಸಂಸ್ಥೆಯ ಆರನೇ ವರ್ಷದ ವಾರ್ಷಿಕೋತ್ಸವ ಸಮಾರಂಭ, 2026–2 7ನೇ ಸಾಲಿನ ದೀಪಧಾರಣೆ ಹಾಗೂ ಪದವಿ ಪ್ರಧಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನಗರಾಭಿವೃದ್ಧಿ ಪ್ರಾಕಾರದ ಅಧ್ಯಕ್ಷ ಎಸ್‌ಎಫ್‌ಎನ್ ಗಾಜೀಗೌಡ್ರ ಮಾತನಾಡಿ, ಕಳೆದ ಆರು ವರ್ಷಗಳಿಂದ ಉತ್ತಮ ಶಿಕ್ಷಣ ಸಂಸ್ಥೆಯನ್ನು ಆರಂಭಿಸುವುದರೊಂದಿಗೆ ಡಾ.ಸಂಜಯ ಡಾಂಗೆ ನೂರಾರು ವಿದ್ಯಾರ್ಥಿಗಳ ಬದುಕಿಗೆ ದಾರಿ ದೀಪವಾಗಿದ್ದಾರೆ ಎಂದರು.

ಡಾಂಗೆ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಡಾಸಂಜಯ ಡಾಂಗೆ ಮಾತನಾಡಿ, ಜಿಲ್ಲೆಯ ಜನತೆಗೆ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಸಂಸ್ಥೆ ಕಟ್ಟಲಾಗಿದೆ. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ನಮ್ಮಲ್ಲಿ ಕಲಿತ ವಿದ್ಯಾರ್ಥಿಗಳು ಸೇವೆ ಸಲ್ಲಿಸುತ್ತಿರುವುದು ಹೆಮ್ಮೆ ಎನಿಸುತ್ತಿದೆ. ಸಂಸ್ಥೆಯು ಗುಣಮಟ್ಟದ ಶಿಕ್ಷಣ ಕೊಡುತ್ತಿದ್ದು, ಬೇರೆ ಜಿಲ್ಲೆಯಿಂದಲೂ ವಿದ್ಯಾರ್ಥಿಗಳು ಬಂದು ಶಿಕ್ಷಣ ಪಡೆಯುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಹುಕ್ಕೇರಿಮಠದ ಡಾ.ಸದಾಶಿವ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಂ. ಹಿರೇಮಠ, ಜಿಲ್ಲಾಸ್ಪತ್ರೆ ಶಸ್ತ್ರಚಿಕಿತ್ಸಕ ಡಾ.ಪಿ.ಆರ್. ಹಾವನೂರ, ತಾಲೂಕ ಆರೋಗ್ಯಾಧಿಕಾರಿ ಡಾ.ಪ್ರಭಾಕರ ಕುಂದೂರ, ವರ್ತಕ ಪಿ.ಡಿ. ಶಿರೂರ, ಡಾ. ನರೇಶ ಭಾಟಿ, ವಿನಯ್ ಕುಲಕರ್ಣಿ, ಸರಸ್ವತಿ ವೈ.ಎಚ್ ಇತರರು ಇದ್ದರು.



ಮುಖ್ಯರಸ್ತೆ ಅಗಲೀಕರಣ: 7ನೇ ದಿನವೂ ಕಟ್ಟಡಗಳ ತೆರವು

ಬ್ಯಾಡಗಿ : ಪಟ್ಟಣದ ಬಹುನಿರೀಕ್ಷಿತ ಮುಖ್ಯರಸ್ತೆ ಅಗಲೀಕರಣ ಕಾಮಗಾರಿಯ ಅಂಗವಾಗಿ ನಡೆಯುತ್ತಿರುವ ಕಟ್ಟಡ ತೆರವು ಕಾರ್ಯಾಚರಣೆ 7ನೇ ದಿನ ಶುಕ್ರವಾರವೂ ಯಾವುದೇ ಅಡಚಣೆಗಳಿಲ್ಲದೆ ಸರಾಗವಾಗಿ ಮುಂದುವರಿಯಿತು.

ಕಳೆದೊಂದು ವಾರದಿಂದ ಬ್ಯಾಡಗಿಯಲ್ಲೇ ಮೊಕ್ಕಾಂ ಹೂಡಿರುವ ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ಹಾಗೂ ಪುರಸಭೆ ಮುಖ್ಯಾಧಿಕಾರಿ ವಿನಯಕುಮಾರ ಹೊಳೆಪ್ಪಗೋಳ ನೇತೃತ್ವದಲ್ಲಿ ಶುಕ್ರವಾರವೂ ಜೆಸಿಬಿಗಳ ಸಹಾಯದಿಂದ ಕಟ್ಟಡ ತೆರವು ಕಾರ್ಯಾಚರಣೆ ನಡೆಯಿತು.

ಮುಖ್ಯರಸ್ತೆಯ ಎರಡೂ ಬದಿಯಲ್ಲಿದ್ದ ಬಹುತೇಕ ಹಳೆಯ ಹಾಗೂ ಅಗಲೀಕರಣಕ್ಕೆ ಅಡ್ಡಿಯಾಗಿದ್ದ ಕಟ್ಟಡಗಳನ್ನು ನೆಲಸಮಗೊಳಿಸಲಾಗಿದ್ದು, ಮುಖ್ಯರಸ್ತೆಯಲ್ಲಿ ಕೆಲವೇ ಕೆಲವು ಕಟ್ಟಡ ತೆರವು ಮಾಡುವುದು ಮಾತ್ರ ಬಾಕಿ ಉಳಿದಂತಾಗಿದೆ. ಇನ್ನೇನು ಸೋಮವಾರ ಒಳಗೇ ಬಹುತೇಕ ಕಟ್ಟಡಗಳು ತೆರವು ಕಾರ್ಯ ಮುಕ್ತಾಯವಾಗಲಿದೆ ಎಂಬ ನಿರೀಕ್ಷೆ ಹೆಚ್ಚಾಗಿದೆ.

ಇನ್ನೂ ಪಟ್ಟಣದ ಅಭಿವೃದ್ಧಿಯತ್ತ ಜಿಲ್ಲಾಡಳಿತ ದಿಟ್ಟ ಹೆಜ್ಜೆ ಇಟ್ಟಿದ್ದು, ಎಲ್ಲರಿಂದ ಮೆಚ್ಚುಗೆ ಮಾತುಗಳು ಕೇಳಿಬರುತ್ತಿವೆ. ಕೆಲವು ಕಟ್ಟಡ ಮಾಲೀಕರಿಗೆ ತಾವೇ ಸ್ವಯಂ ಪ್ರೇರಿತವಾಗಿ ಕಟ್ಟಡ ತೆರವುಗೊಳಿಸಿಕೊಳ್ಳಲು ಜಿಲ್ಲಾಡಳಿತದಿಂದ ಕಾಲಾವಕಾಶ ನೀಡಲಾಗಿತ್ತು. ಆದರೆ ಹಲವು ದಿನಗಳ ಅವಕಾಶ ನೀಡಿದರೂ ತೆರವು ಕಾರ್ಯ ಕೈಗೊಳ್ಳದ ಕೆಲವರ ಕಟ್ಟಡಗಳನ್ನು ಜಿಲ್ಲಾಽಕಾರಿಗಳೇ ಖುದ್ದು ನಿಂತು ನೇರವಾಗಿ ಯಂತ್ರೋಪಕರಣಗಳ ಮೂಲಕ ತೆರವುಗೊಳಿಸಿದ್ದು ವಿಶೇಷವಾಗಿತ್ತು.

ಕಾರ್ಯಾಚರಣೆಯ ವೇಳೆ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಯಿತು. ಸಿಪಿಐ ಪಿಎಸ್ಐ ಹಾಗೂ ಇತರೆ ಅಧಿಕಾರಿಗಳು ಸ್ಥಳದಲ್ಲೇ ಇದ್ದು ಪರಿಸ್ಥಿತಿ ನಿಭಾಯಿಸಿದರು.



> ಕಟ್ಟಡ ಅವಶೇಷ ತೆರವು ಕಾರ್ಯ ಸಹ ತ್ವರಿತಗತಿಯಲ್ಲಿ ಮಾಡಲಾಗುತ್ತಿದೆ, ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಜಾಗೃತೆಯಿಂದ ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ, ಅವರಿಗೆ ಕಟ್ಟಡ ಮಾಲೀಕರು ಸಹಕಾರ ನೀಡಿ, ಇನ್ನೂ ಕಟ್ಟಡ ತೆರವು ಗೊಳಿಸಿದವರು ಬೇಗನೆ ತೆರವು ಮಾಡಿಕೊಳ್ಳಿ ಕೊನೆಯ ಅವಕಾಶ.
>
> ■ ವಿನಯಕುಮಾರ ಹೊಳೆಪ್ಪಗೋಳ ಮುಖ್ಯಾಧಿಕಾರಿ

> ಹಲವರಿಗೆ ತಮ್ಮ ಕಟ್ಟಡ ತಾವೇ ತೆರವುಗೊಳಿಸಲು ಅವಕಾಶ ನೀಡಿದರು, ಅವರು ತೆರವು ಮಾಡಿಕೊಂಡಿಲ್ಲ ಇನ್ನು ಮುಂದೇ ಕಾಯುವ ಸ್ಥಿತಿ ಎಲ್ಲವನ್ನ ತೆರವು ಮಾಡಿಕೊಳ್ಳಿ ನಾಳೆಯಿಂದ ನಾವೇ ಎಲ್ಲವನ್ನು ತೆರವುಗೊಳಿಸುತ್ತೇವೆ, ಮುಂದಿನ ದಿನಗಳಲ್ಲಿ ರಸ್ತೆ ನಿರ್ಮಾಣದ ವಿವಿಧ ಕಾಮಗಾರಿಗಳಿಗೆ ಕೈ ಹಾಕಬೇಕಿದೆ, ಎಲ್ಲರೂ ಸಹಕಾರ ನೀಡಿದಲ್ಲಿ ಅದಷ್ಟು ಬೇಗ ರಸ್ತೆ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು.
>
> ■ ವಿಜಯ ಮಹಾಂತೇಶ ದಾನಮ್ಮನವರ ಜಿಲ್ಲಾಧಿಕಾರಿ

ಡೊನೇಷನ್ ಹಾವಳಿ ವಿರೋಧಿಸಿ ಎಸ್‌ಎಫ್‌ಐ ಮನವಿ

ಹಾವೇರಿ: ಡೊನೇಷನ್ ಹಾವಳಿ ವಿರೋಽಸಿ, ಶುಲ್ಕ ನಿಯಂತ್ರಣ ಕಾಯ್ದೆ ಸಮರ್ಪಕ ಜಾರಿಗಾಗಿ ಡೆರಾ ಕಮಿಟಿ ಸಭೆಯನ್ನು ಕರೆಯಲು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿ ಪದಾಧಿಕಾರಿಗಳು ಶುಕ್ರವಾರ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರಿಗೆ ಮನವಿ ಸಲ್ಲಿಸಿದರು.

2026–27ನೇ ಸಾಲಿನಲ್ಲಿ ರಾಜ್ಯಾದ್ಯಂತ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ಈಗಾಗಲೇ ಪ್ರವೇಶಾತಿ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿದ್ದು, ಈ ಸಂದರ್ಭದಲ್ಲಿ ಜಿಲ್ಲಾ ಶಿಕ್ಷಣ ಪ್ರಾಧಿಕಾರ ಸಭೆ ಸೇರಿ, ಖಾಸಗಿ ಶಾಲೆಗಳ ಡೊನೇಷನ್ ಹಾವಳಿ ಕುರಿತು ಪಾಲಕರಿಗೆ ಮಾಹಿತಿ ನೀಡಬೇಕಾಗಿತ್ತು. ಜಿಲ್ಲೆಗಳಲ್ಲಿ ಜಿಲ್ಲಾಽಕಾರಿಗಳ ಅಧ್ಯಕ್ಷತೆಯಲ್ಲಿ ಇರುವಂತಹ ಸಮಿತಿಯು ಸಭೆ ಸೇರಿ ಖಾಸಗಿ ಶಾಲೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡದಿರುವ ಕಾರಣ 1983ರ ಶಿಕ್ಷಣ ಕಾಯ್ದೆ ಮತ್ತು 2009ರ ಆರ್‌ಟಿಇ ಕಾಯ್ದೆಯನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡುವುದರ ಮೂಲಕ ಹಗಲು ದರೋಡೆ ಮಾಡಿರುತ್ತಾರೆ.

ಬಹುತೇಕ ಖಾಸಗಿ ಶಾಲೆಗಳಲ್ಲಿ ಲಕ್ಷಾಂತರ ರೂಪಾಯಿಗಳವರೆಗೂ ಹಣವಸೂಲಿ ಮಾಡುವುದರ ಮೂಲಕ ಹಗಲು ದರೋಡೆ ಮಾಡುತ್ತಿದ್ದಾರೆ. ಸರ್ಕಾರದ ನಿಯಮಗಳ ಪ್ರಕಾರ ಸರ್ಕಾರ ನಿಗದಿಪಡಿಸಿದಂತೆ ಅನುದಾನಿತ ಶಿಕ್ಷಣ ಸಂಸ್ಥೆಗಳು ಹಾಗೂ ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿ ಶುಲ್ಕ (ಡೆವಲಪ್ ಮೆಂಟ್ ಫೀ) ನ್ನು ಸಂಗ್ರಹಿಸಲು ಅವಕಾಶವಿದೆ. ಈ ಹಣವನ್ನು ಒತ್ತಾಯದ ಮೂಲಕ ಸಂಗ್ರಹಿಸುವಂತಿಲ್ಲ, ಇದಕ್ಕೂ ಹೆಚ್ಚು ಸಂಗ್ರಹಿಸುವುದು, ತರಗತಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸುವುದು ಕಾನೂನಿನ ಪ್ರಕಾರ ಅಪರಾಧ ಎಂದರು.

ಡೊನೇಷನ್ ನಿಯಂತ್ರಣಕ್ಕೆ ಜಿಲ್ಲಾ ಶಿಕ್ಷಣ ರೆಗ್ಯುಲೆಟಿಂಗ್ ಪ್ರಾಧಿಕಾರ (ಡೊನೇಷನ್ ವಿರೋಧಿ ಸಮಿತಿ)ವನ್ನು ತಕ್ಷಣ ರಚಿಸಬೇಕು. ವಂತಿಗೆ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮಕೈಗೊಳ್ಳಬೇಕು. ಶಿಕ್ಷಣ ಸಂಸ್ಥೆಗಳು ಪ್ರತಿ ತಿಂಗಳಿಗೊಮ್ಮೆ ಪಾಲಕರ ಸಭೆ ಕರೆದು ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸುವಂತೆ ನಿರ್ದೇಶಿಸಬೇಕು. ನಿಯಮ ಮೀರಿ ಡೊನೇಷನ್ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗೆ ಶಿಕ್ಷಣ ಹಕ್ಕು ಕಾಯ್ದೆಯ ಪ್ರಕಾರ ದಂಡ ಮತ್ತು ಶಿಕ್ಷೆಗೊಳಪಡಿಸಬೇಕು ಎಂದು ಒತ್ತಾಯಿಸಿ ಮನವಿ ಸಲ್ಲಿಸಲಾಯಿತು. ಮನವಿ ಪತ್ರವನ್ನು ಸ್ವೀಕರಿಸಿದ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಡೊನೇಷನ್ ಹಾವಳಿ ಕುರಿತು ಪರಿಶೀಲನೆ ನಡೆಸುತ್ತೇವೆ, ಸಭೆ ಕರೆಯುವ ಕುರಿತು ಮಾತನಾಡುತ್ತೇನೆ. ಪಾಲಕರು ಮುಂದೆ ಬಂದು ದೂರು ನೀಡುವಂತಾಗಲಿ ಎಂದರು. ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಬಸವರಾಜ ಎಸ್, ಮುಖಂಡರಾದ ಅರುಣ್ ನಗವತ್, ಕೃಷ್ಣ ನಾಯ್ಕ್, ಸಂಗೀತಾ ಮೊಟ್ಟಳ್ಳಿ, ಶಂಭು ಸವದತ್ತಿ, ಪರಶುರಾಮ ಎಸ್, ಉಪಸ್ಥಿತರಿದ್ದರು.



ಕಿರುಸುದ್ದಿ

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬಾಗಲಕೋಟೆ: ಗದ್ದನಕೇರಿಯ 33/11 ಕೆವಿ ವಿದ್ಯುತ್ ವಿತರಣಾ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡ ಪ್ರಯುಕ್ತ ಮೇ 16 ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ವಿದ್ಯುತ್ ಕೇಂದ್ರದಿಂದ ಸರಬರಾಜು ಆಗುವ 11 ಕೆವಿ ಮಾರ್ಗವ್ಯಾಪ್ತಿಯಲ್ಲಿ ಬರುವ ಸೊಕನಾದಗಿ, ಛಬ್ಬಿ, ಛಬ್ಬಿ ಆರ್.ಸಿ, ಆನದಿನ್ನಿ, ಯಡಹಳ್ಳಿ, ಗದ್ದನಕೇರಿ ಕ್ರಾಸ್ ಹಾಗೂ ಗ್ರಾ.ಪಂ ವ್ಯಾಪ್ತಿಯ ಗ್ರಾಮಗಳು, ಐಪಿ ಪ್ರದೇಶಗಳು, ಬಿ.ಎಸ್.ಎನ್.ಎಲ್ ಕಚೇರಿ, ಬಾದಾಮಿ ಜಾಕವೆಲ್, ಬಿಟಿಡಿಎ ಜಾಕವೆಲ್, ಆನಗವಾಡಿ ಜಾಕವೆಲ್ ಹಾಗೂ ನಗರ, ಗ್ರಾಮ,ಕೃಷಿ ಪ್ರದೇಶಗಳ ವಿದ್ಯುತ್ ಸರಬರಾಜುವಿನಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಬನಶಂಕರಿದೇವಿಗೆ ಅಲಂಕಾರ



ಬಾದಾಮಿ: ಸಮೀಪದ ಬನಶಂಕರಿ ದೇವಿ ಅವತರಿಸಿದ ದಿನದ ನಿಮಿತ್ತ ಶುಕ್ರವಾರ ಬನಶಂಕರಿ ದೇವಿಗೆ ವಿಶೇಷ ಅಲಂಕಾರ, ಪೂಜೆ ಮಾಡಲಾಯಿತು. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದರು.

ನಂದಿಕೇಶ್ವರ ಉತ್ಸವ ಮುಂದೂಡಿಕೆ

ಬಾದಾಮಿ: ಸಮೃದ್ಧ ಭಾರತ ವರ್ಷ ನವದೆಹಲಿ ನಮ್ಮ ಬಾದಾಮಿ ನಮ್ಮ ಹೆಮ್ಮೆ, ಜಿಲ್ಲಾಡಳಿತ, ಬಾಗಲಕೋಟೆ, ಅಗಸ್ತ್ಯ ಬಾದಾಮಿ, ಗ್ರಾಮೀಣ ಪ್ರವಾಸೋದ್ಯಮ ಪ್ರಸ್ತಾವಿತ ಪೈಲಟ್ ಯೋಜನೆ ನಂದಿಕೇಶ್ವರ ಉತ್ಸವ-2026 ಕಾರ್ಯಕ್ರಮವನ್ನು ಮೇ 15ರಿಂದ 18 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಆಡಳಿತಾತ್ಮಕ ಹಾಗೂ ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮವನ್ನು ಜೂನ್ ಮೂರನೇ ವಾರಕ್ಕೆ ಮುಂದೂಡಲಾಗಿದೆ. ಕಾರ್ಯಕ್ರಮದ ವಿವರಗಳನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು ಎಂದು ಕಾರ್ಯಕ್ರಮದ ಸಂಘಟಕ ಎಸ್.ಡಿ.ಜೋಗಿನ ತಿಳಿಸಿದ್ದಾರೆ.

ಕಾರಜೋಳ ಹೇಳಿಕೆಗೆ ಆಕ್ರೋಶ

ಬಾದಾಮಿ: ಅಕ್ಕಿ ಕೊಡೋದು ಅಭಿವೃದ್ಧಿ ಅಲ್ಲ ಎನ್ನುವ ಸಂಸದ ಗೋವಿಂದ ಕಾರಜೋಳ ಹೇಳಿಕೆಗೆ ಕೆಪಿಸಿಸಿ ರಾಜ್ಯ ವಕ್ತಾರ ಮಹಾಂತೇಶ ಹಟ್ಟಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಅವರು ಅಕ್ಕಿ ಕೊಡುವುದು ಅಭಿವೃದ್ಧಿ ಅಲ್ಲ ಎನ್ನುವ ಬಿಜೆಪಿ ಪಕ್ಷದವರು ಕಳೆದ ಪಂಚರಾಜ್ಯ ಚುನಾವಣೆಯಲ್ಲಿ ಗ್ಯಾರಂಟಿ ಯೋಜನೆ ಘೋಷಣೆ ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿ ಗ್ಯಾರಂಟಿ ಅನುಷ್ಠಾನದಲ್ಲಿ ರಾಜ್ಯ ದಿವಾಳಿ ಆಗುತ್ತದೆ ಎಂದು ಟೀಕೆ ಮಾಡುವ ಬಿಜೆಪಿ ಪಕ್ಷದವರು ಬೇರೆ ರಾಜ್ಯದಲ್ಲಿ ಗ್ಯಾರಂಟಿ ಯೋಜನೆ ಜಾರಿಗೆ ತಂದು ಇಬ್ಬಗೆ ನೀತಿ ಅನುಸರಿಸುತ್ತಿದ್ದಾರೆ. ನಮ್ಮ ಗ್ಯಾರಂಟಿ ಯೋಜನೆ ಕಾಪಿ ಮಾಡಿ ಪ.ಬಂಗಾಳದಲ್ಲಿ ಗೆದ್ದಿದ್ದಾರೆ. ಗ್ಯಾರಂಟಿ ಯೋಜನೆ ಟೀಕೆ ಮಾಡುವ ಬಿಜೆಪಿಯ ಕಾರಜೋಳ ಅವರೇ ನಿಮ್ಮಲ್ಲಿ ಬದ್ಧತೆ ಇದ್ದರೆ ಗ್ಯಾರಂಟಿ ಘೋಷಣೆ ಮಾಡದೇ ಗೆಲ್ಲಬೇಕಾಗಿತ್ತು. ಇದನ್ನು ಸಹಿಸದ ಬಿಜೆಪಿ ಪಕ್ಷದವರು ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ.

ಮಲಘಾನಗೆ ಪಿಎಚ್‌ಡಿ



ಮುಧೋಳ: ಬಾಗಲಕೋಟೆ ಬಿವಿವಿ ಸಂಘದ ನಗರದ ಎಸ್.ಆರ್.ಕಂಠಿ ಮಹಾವಿದ್ಯಾಲಯದ ಎಂಕಾಂ ಹಳೆಯ ವಿದ್ಯಾರ್ಥಿ ಮಹಮ್ಮದರಫೀಕ ಎ. ಮಲಘಾನ ಅವರಿಗೆ ರಾಜಸ್ಥಾನ ಜುಂಜುನು ಜಗದೀಶ ಪ್ರಸಾದ್ ಜಬರ್ಮಲ್ ತಿಬ್ರೆವಾಲಾ ವಿಶ್ವವಿದ್ಯಾಲಯವು 2025-26ನೇ ಸಾಲಿಗೆ ಪಿಎಚ್‌ಡಿ ಪದವಿ ನೀಡಿದೆ.ಹಿರಿಯ ಪ್ರಾಧ್ಯಾಪಕ ಡಾ.ಎಸ್.ಎಸ್.ನಾಯ್ಕವಾಡಿ ಮಹಾವಿದ್ಯಾಲಯದ ಎಂ.ಕಾಂ ವಿಭಾಗದ ಮುಖ್ಯಸ್ಥ ಡಾ.ಡಿ.ಆರ್.ಭೂಥಡಾ ಅವರ ಸಹ ಮಾರ್ಗದರ್ಶನದಲ್ಲಿ ಪದವಿ ಕಾಲೇಜಿನ ಹೂಡಿಕೆಯ ನಡವಳಿಕೆಯ ಅಧ್ಯಯನ, ಕರ್ನಾಟಕ ರಾಜ್ಯದ ಸ್ಟಾಕ್ ಮಾರ್ಕೆಟ್ನಲ್ಲಿರುವ ವಿದ್ಯಾರ್ಥಿಗಳು ಬಾಗಲಕೋಟೆ ಜಿಲ್ಲೆಗೆ ವಿಶೇಷ ಉಲ್ಲೇಖ ಎಂಬ ಶೀರ್ಷಿಕೆಯಲ್ಲಿ ಮಹಾ ಪ್ರಬಂಧ ಮಂಡಿಸಿರುವದಕ್ಕೆ ಪಿಎಚ್‌ಡಿ ದೊರೆತಿದೆ. ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಎನ್. ಅಥಣಿ, ಸಂಘದ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಎಸ್.ಸೂಳಿಭಾವಿ, ಬಿವಿವಿ ಸಂಘದ ಆಡಳಿತಾಧಿಕಾರಿ ಡಾ.ವಿಜಯಕುಮಾರ ಎಸ್.ಕಟಗಿಹಳ್ಳಿಮಠ, ಸಂಘದ ಪದವಿ ಕಾಲೇಜುಗಳ ಗುಣಮಟ್ಟ ಭರವಸೆಯಕೋಶದ ಮುಖ್ಯ ಸಲಹೆಗಾರ್ತಿ ಡಾ.ಮೀನಾ ಆರ್.ಚಂದಾವರಕರ, ಪ್ರಾಚಾರ್ಯ ಡಾ.ಮಲ್ಲಿಕಾರ್ಜುನ ಆರ್.ಜರಂಕುಂಟಿ, ಐಕ್ಯೂಎಸಿ ಸಂಯೋಜಕ ಪ್ರೊ.ಅಜ್ಜಪ್ಪಕಡೂರ ಅಭಿನಂದಿಸಿದ್ದಾರೆ.



ಜಮಖಂಡಿ: ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಪರೀಕ್ಷೆ ರದ್ದು ಖಂಡಿಸಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದಿಂದ ನಗರದ ದೇಸಾಯಿ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಗ್ರೇಡ್-2 ತಹಶೀಲ್ದಾರ್ ಬಸವರಾಜ ಸಿಂಧೂರ ಅವರಿಗೆ ಮನವಿ ಸಲ್ಲಿಸಿದರು.

ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ

ಜಮಖಂಡಿ: ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಪರೀಕ್ಷೆ ರದ್ದು ಖಂಡಿಸಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದಿಂದ ನಗರದ ದೇಸಾಯಿ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಗ್ರೇಡ್-2 ತಹಶೀಲ್ದಾರ್ ಬಸವರಾಜ ಸಿಂಧೂರ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾಧ್ಯಕ್ಷ ವಿಜಯ ತಿಪ್ಪರೆಡ್ಡಿ ಮಾತನಾಡಿ, ನೀಟ್ ಹಗರಣದ ವಿರುದ್ಧ ನಾವು ಪ್ರತಿಭಟನೆ ನಡೆಸಿದ್ದೇವೆ. ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡುವ ರೀತಿಯಲ್ಲಿ ಪರೀಕ್ಷಾ ವ್ಯವಸ್ಥೆ ನಡೆಯುತ್ತದೆ. 2024ರಲ್ಲಿ ಸಮಿತಿ ರಚನೆ ಮಾಡಿದ್ದರು. ಆದರ ವರದಿಯನ್ನು ಕೇಂದ್ರ ಸರ್ಕಾರ ಜಾರಿಗೆ ತರಲಿಲ್ಲ, ಇದೇ ನಿರ್ಲಕ್ಷ್ಯದಿಂದ ಈ ಬಾರಿ ನಡೆದ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಬಡ ವಿದ್ಯಾರ್ಥಿಗಳ ಪೋಷಕರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ. ವರ್ಷಗಟ್ಟಲೇ ಓದಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಇದು ದೊಡ್ಡ ಅನ್ಯಾಯವಾಗಿದೆ. ಕೇಂದ್ರ ಸರ್ಕಾರಕ್ಕೆ ನಾಚಿಕೆ ಇದ್ದರೆ ಪ್ರಧಾನಿ ಹಾಗೂ ಕೇಂದ್ರ ಶಿಕ್ಷಣ ಸಚಿವರು ರಾಜಿನಾಮೆ ನೀಡಬೇಕು ಎಂದು ಆಗ್ರಹಿಸಿದರು. ರಮೇಶ ಅಮಾತಿ ಮಾತನಾಡಿದರು. ಸಿದ್ದು ಧನಗರ, ಅವಿನಾಶ ಚಿನಗುಂಡಿ, ಆನಂದ ಕಾಂಬಳೆ, ವಿಜಯ ಮಾಂಗ, ವಿಕಾಸ ಬೆಳಗಲಿ, ಶಿವರಾಜ ಮಂಟೂರ, ಅರ್ಪಿತಾ ಪಾಟೀಲ, ವರದಾ ಕುಲಕರ್ಣಿ, ವಿನೋದ ನಾವಿ, ಸಂಗಮೇಶ ಹೊಸಕೋಟಿ, ಪೂಜಾ ಹವಾಲ್ದಾರ ಅನೇಕ ಕಾರ್ಯಕರ್ತರು ಭಾಗಿಯಾಗಿದ್ದರು.



ರಬಕವಿ-ಬನಹಟ್ಟಿ: ಸಮೀಪದ ಆಸಂಗಿ ಗ್ರಾಮದ ಆರಾಧ್ಯದೇವಿ ಲಕ್ಕವ್ವತಾಯಿ ಉಡಿ ತುಂಬುವ ಹಾಗೂ ನೈವೇದ್ಯ ಜಾತ್ರೆ ಸಡಗರದಿಂದ ಜರುಗಿತು. ಸಮಿತಿ ಹಿರಿಯರಾದ ಯಮನಪ್ಪ ಪದ್ದಿ, ಹರ್ಷವರ್ಧನ ಪಟವರ್ಧನ, ವಿರುಪಾಕ್ಷಯ್ಯ ಡುಮಕಿಮಠ, ದೊಂಡಿಬಾ ಗಾಯಕವಾಡ, ರಾಜು ಮಠದ, ಪುಲಕೇಶಿ ದಢೂತಿ, ಪ್ರಕಾಶ ಫಕೀರಪೂರ, ಪಾಂಡು ಸಾಲಗುಡೆ, ಜ್ಯೋತಿಬಾ ಸಾಲಗುಡೆ, ಬಸವರಾಜ ಶಿರಗೂರ, ಅಪ್ಪಸಿ ಜಾಧವ, ಮಹಾದೇವ ದಿವಾನದಾರ, ಸಿದ್ದಪ್ಪ ಗಾಯಕವಾಡ, ಮಹಾದೇವ ನಾಯಕವಾಡಿ ಇದ್ದರು.

ರೇಲ್ವೆ ರಾಷ್ಟ್ರೀಯ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಯೋಜನೆ ಚರ್ಚೆ

ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ

ಬಾಗಲಕೋಟೆ: ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ರೈಲ್ವೆ ಹಾಗೂ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆಸಂಬಂಧಿಸಿದಭೂಸ್ವಾಧೀನ ಪ್ರಕ್ರಿಯೆ ಕುರಿತು ಸಂಸದ ಪಿ.ಸಿ.ಗದ್ದಿಗೌಡರ ಹಾಗೂ ಜಿಲ್ಲಾಧಿಕಾರಿ ಸಂಗಪ್ಪ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶುಕ್ರವಾರ ಚರ್ಚೆ ನಡೆಸಲಾಯಿತು.



ರಾಷ್ಟ್ರೀಯ ಹೆದ್ದಾರಿ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಹಾಗೂ ರೈಲ್ವೆ ಯೋಜನೆಗಳ ವ್ಯಾಪ್ತಿಗೆ ಬೇಕಾಗುವ ಭೂಮಿ ಭೂಸ್ವಾಧೀನ ಹಾಗೂ ಬಾಕಿ ಪ್ರಕರಣಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಯೋಜನೆಗಳ ಅನುಷ್ಠಾನಕ್ಕೆ ಬೇಕಾಗುವ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಯೋಜನೆ ಅನುಷ್ಠಾನದಲ್ಲಿ ಕೆಲವೊಂದು ತೊಂದರೆಗಳು ಎದುರಾಗುವುದು ಸಹಜ. ಆದರೆ ಅವಗಳನ್ನು ಪರಿಹರಿಸಿಕೊಂಡು ಕಾಮಗಾರಿ ಕೆಲಸ ಪೂರ್ಣಗೊಳಿಸುವಲ್ಲಿ ಅಧಿಕಾರಿಗಳ ಪಾತ್ರ ಮಹತ್ವವಾಗಿದೆ. ಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತಿಲ್ಲ, ಇದರಿಂದ ಯೋಜನೆಗಳ ಅನುಷ್ಠಾನದಲ್ಲಿ ಕುಂಟಿತವಾಗುತ್ತಿದೆ. ಬಾಗಲಕೋಟೆ-ಕುಡಚಿ ರೇಲ್ವೆ ಮಾರ್ಗಕ್ಕಾಗಿ ಭೂಸ್ವಾಧೀನ ಕಾರ್ಯ ಪ್ರಾರಂಭವಾಗಿ ಹಲವು ವರ್ಷಗಳು ಕಳೆದಿವೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿಲ್ಲ, ಇದಕ್ಕೆ ಕಾರಣಗಳೇನು ಎಂಬ ಬಗ್ಗೆ ಪ್ರಶ್ನೆಗಳನ್ನು ಹಾಕಲಾಯಿತು.

ಯೋಜನೆ ಅನುಷ್ಠಾದಲ್ಲಿ ವಿಳಂಬ ಏಕೆ, ನ್ಯಾಯಾಲಯ ಪ್ರಕರಣಗಳು ಇದ್ದಲ್ಲಿ ಅವು ಯಾವ ಹಂತದಲ್ಲಿವೆ ಎಂಬ ಮಾಹಿತಿಯನ್ನು ಅಧಿಕಾರಿಗಳಿಗೆ ಕೇಳಲಾಯಿತು. ಯೋಜನೆ ಅನುಷ್ಠಾನಕ್ಕೆ ಹಿಂದೆಟು ಹಾಕುತ್ತಿರುವುದು ಬೇಜವಾಬ್ದಾರಿತನ ಎದ್ದು ತೋರುತ್ತಿದೆ. ಇದರಿಂದ ಸರಿಯಾಗಿ ಕೆಲಸ ಆಗುತ್ತಿಲ್ಲ. ನಿಮ್ಮ ವರ್ತನೆ ಬದಲಾಯಿಸಿಕೊಳ್ಳುವಂತೆ ರೇಲ್ವೆ ಇಲಾಖೆಯ ಕಾರ್ಯಪಾಲಕ ಅಭಿಯಂತರ ರಾಜು ನಾಯಕಗೆ ಸೂಚನೆ ನೀಡಲಾಯಿತು.

ರಬಕವಿ-ಬನಹಟ್ಟಿ ಭಾಗದಲ್ಲಿ 25 ಕಿ.ಮೀ ಬಗ್ಗೆ ಪ್ರಸ್ತಾವನೆ ನೀಡಿಲ್ಲ, ಲೋಕಾಪೂರದಿಂದ ದಾದನಟ್ಟಿ ವರೆಗಿನ ರೇಲ್ವೆ ಮಾರ್ಗದಲ್ಲಿ 6.6 ಕಿ.ಮೀ ಕೆಲಸ ಆಗುತ್ತಿಲ್ಲ, ಇದಕ್ಕೆ ಕಾರಣವೇನು. ದಾದನಟ್ಟಿಯಿಂದ ಯಾದವಾಡ ಮಾರ್ಗದ ಬಗ್ಗೆ ಹಾರಿಕೆ ಉತ್ತರ ಕೊಡುವುತ್ತಿರುವ ಅಧಿಕಾರಿಗಳ ಮೇಲೆ ಸಂಸದರು ಅಸಮಾಧಾನ ವ್ಯಕ್ತಪಡಿಸಿ, ವಾರದಲ್ಲಿ ಪ್ರಗತಿ ತೋರಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು.

ಗದ್ದನಕೇರಿಯಿಂದ ಶಿರೂರವರೆಗಿನ ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ 2.7 ಕಿ.ಮೀ ರಸ್ತೆ ನಿರ್ಮಾಣ ಕಾಮಗಾರಿ ಮಾತ್ರ ಬಾಕಿ ಇರುತ್ತದೆ. ಇದು ಕೂಡಾ ಶೀಘ್ರದಲ್ಲಿ ಪೂರ್ಣಗೊಳಿಸಬೇಕು. ಅಲ್ಲದೇ ಪಟ್ಟದಕಲ್ಲದಿಂದ ಶಿರೂರವರೆಗಿನ ರಸ್ತೆ ನಿರ್ಮಾಣದಲ್ಲಿ ಅರಣ್ಯ ಇಲಾಖೆಯಿಂದ ವಿಳಂಬವಾಗಿದೆ ಎಂದು ಸಂಬಂಧಿಸಿದ ಅಧಿಕಾರಿಗಳು ತಿಳಿಸಿದರೆ, ಅಧಿಕಾರಿಗಳಿಗೆ ಜನರ ತೊಂದರೆ ಅರ್ಥವಾಗುತ್ತಿಲ್ಲ. ಸರಿಯಾಗಿ ಕೆಲಸ ನಿರ್ವಹಿಸುವಂತೆ ತಿಳಿಸಲಾಯಿತು. ಜಿಲ್ಲೆಯಲ್ಲಿ ಹಾದು ಹೋಗುವ ಭಾರತ ಮಾಲಾ ಪ್ರೋಜೆಕ್ಟ ಬಗ್ಗೆಯೂ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಭೂ ದಾಖಲೆ ಇಲಾಖೆಯ ಉಪನಿರ್ದೇಶಕ ರವಿಕುಮಾರ ಎಂ, ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರ ದುರ್ಗಾದಾಸ ಸೇರಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಯೋಜನೆಯ ಪ್ರೋಜೆಕ್ಟ ಡೈರೆಕ್ಟರ, ಎಸ್‌ಎಲ್‌ಎಒ ಹಾಗೂ ಇತರರು ಇದ್ದರು.

ಮಾನವೀಯತೆ ಮೌಲ್ಯಗಳು ಮುಖ್ಯ: ಶ್ರೀ

ಬೀಳಗಿ: ನಮ್ಮಲ್ಲಿ ಯಾವುದೇ ಭೇದಭಾವ ಇಲ್ಲದೇ ಜಾತಿ, ಧರ್ಮ, ಸಂಸ್ಕೃತಿ, ಪರಂಪರೆ ಉಳಿಯಬೇಕಾದರೆ ಮಾನವೀಯತೆ ಮೌಲ್ಯಗಳು ಬಹಳ ಮುಖ್ಯ ಎಂದು ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಕಂಬಾರ ಗಲ್ಲಿ ಶುಕ್ರವಾರ ಹುಸೇನಪೀರ ದೇವಸ್ಥಾನದ ಲೋಕಾರ್ಪಣೆ ಹಾಗೂ ಸಮುದಾಭವನ ಲೋಕಾರ್ಪಣೆ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬೀಳಗಿಯಲ್ಲಿ ಭಾವೈಕ್ಯಕ್ಕೆ ಇನ್ನೊಂದು ಹೆಸರು ಹುಸೇನಪೀರ ದೇವಸ್ಥಾನ. ಇಲ್ಲಿಯ ಜನರ ಭಕ್ತಿಗೆ ಆ ದೇವರು ಮೆಚ್ಚಿ ಎಲ್ಲವನ್ನು ಅನುಗ್ರಹಿಸಿದ್ದರಿಂದ ಇಲ್ಲಿ ಭಕ್ತಿಯ ಭಾವೈಕ್ಯ ಧಾರ್ಮಿಕ ಸಮ್ಮೇಳನಗಳ ಕಾರ್ಯಕ್ರಮಗಳೇ ಸಾಕ್ಷಿ ಎಂದರು.

ಇಲ್ಲಿ ಹಿಂದು, ಮುಸ್ಲಿಂ ಎನ್ನುವ ಯಾವುದೇ ಭೇದಭಾವ ಇಲ್ಲದೇ ಎಲ್ಲರೂ ಪ್ರೀತಿ, ವಿಶ್ವಾಸ, ನಂಬಿಕೆ, ಸಹೋದರತೆಯಿಂದ ಹಬ್ಬ ಹರಿದಿನ ಆಚರಣೆ ಮಾಡುವ ಪರಂಪರೆಯು ಬೀಳಗಿ ಭಕ್ತರು ಮಾಡುತ್ತಾ ಬಂದಿರುತ್ತಾರೆ. ಯಾರಲ್ಲಿ ದೇವರ ಮೇಲೆ ನಂಬಿಕೆ ವಿಶ್ವಾಸ ಇದೆ ಅಲ್ಲಿ ಎಲ್ಲವನ್ನು ಪಡೆಯಲು ಸಾಧ್ಯ ಎಂದರು. ಹೈದ್ರಾಬಾದ್-ತೆಲಂಗಾಣ ಜಗದ್ಗುರು ಸೂಫಿ ಸಯ್ಯದಬಾಷಾ ಸಾಹೇಬರು ಭಾವೈಕ್ಯ ಪ್ರವಚನ ನೀಡಿ, ಹಿಂದು, ಮುಸ್ಲಿಂ ಒಂದಾದರೆ ಜಗತ್ತೆ ಬೆರಗಾಗುತ್ತದೆ. ಭಾರತ ಒಂದು ಅಭಿವೃದ್ಧಿ ಹಾಗೂ ಸ್ವಾತಂತ್ರ್ಯ ದೇಶವಾಗಲಿದೆ. ನಾವು ಜಾಗೃತರಾಗಿ ನಮ್ಮಲ್ಲಿರುವ ಕಲ್ಮಶಗಳನ್ನು ಹೊರಹಾಕಿ ನಾವುಗಳು ಒಂದು ಎನ್ನುವ ಭಾವನೆಗಳು ಬಂದರೆ ಮಾತ್ರ ಸಮೃದ್ಧ ದೇಶ ಕಟ್ಟಲು ಸಾಧ್ಯ. ಜಾತಿ ಬೇಧಭಾವ ಮರೆತು ಹಿಂದು, ಮುಸ್ಲಿಂ ಒಂದೇ ಎನ್ನುವ ಭಾವನೆ ನಮ್ಮಲ್ಲಿ ಬರಬೇಕಾಗಿದೆ. ಜಾತಿ ಬೇರೆ ಇರಬಹುದು. ಆದರೆ ದೇವರು ಒಬ್ಬನೆ ನಾಮ ಹಲವು ಎಂದರು.ಕಲ್ಮಠದ ಗುರುಪಾದ ಶಿವಾಚಾರ್ಯ ಸ್ವಾಮೀಜಿ, ಅನ್ನಪೂರ್ಣೇಶ್ವರಿ ಬೃಹನ್ಮಠದ ಶಿವಾನಂದ ದೇವರು ಮಾತನಾಡಿದರು. ನಿವೃತ್ತಿ ಶಿಕ್ಷಕ ಶಿವಾನಂದ ಯಾಳವಾರಮಠ ಪ್ರಾಸ್ತಾವಿಕ ಮಾತನಾಡಿದರು.

ಸೊಮಪ್ಪಯ್ಯನಮಠದ ಚನ್ನಬಸವ ಸ್ವಾಮಿಗಳು, ಹುಚ್ಚಪ್ಪಯ್ಯನಮಠದ ಸಿದ್ದಯ್ಯ ಸ್ವಾಮಿಗಳು, ಪಂಡಿತ ಮಹಮದ್ ಸುಬಾನಿ ಹಾಗೂ ಶ್ರೀಶೈಲ ದಳವಾಯಿ, ಶಾಹೀರ ಬೀಳಗಿ, ಸಂಗಪ್ಪ ಆವಟಿ, ಶಂಕರ ಬುಡ್ಡರ, ಶ್ರೀಶೈಲ ಉಪ್ಪಾರ, ಗುರಪ್ಪಾ ಕುಂಬಾರ, ಗಣಪತಿ ಬುಡ್ಡರ, ಲಕ್ಷ್ಮಣ ದಳವಾಯಿ, ಸಂಗಪ್ಪ ಕಂದಗಲ್ಲ, ಸಿದ್ದಪ್ಪ ದಳವಾಯಿ ಮುತ್ತಿತರಿದ್ದರು.



ಮೇ 20ರಂದು ಔಷಧ ಅಂಗಡಿಗಳು ಬಂದ್

ಬಾಗಲಕೋಟೆ: ಔಷಧ ವ್ಯಾಪಾರಿಗಳ ಉಳಿವು ಮತ್ತು ಸಾರ್ವಜನಿಕರ ಆರೋಗ್ಯ ಹಿತಾಸಕ್ತಿಯನ್ನು ಕಾಪಾಡುವುದು ಹಾಗೂ ನಕಲಿ ಔಷಧಗಳನ್ನು ತಡೆಗಟ್ಟಬೇಕು ಎಂದು ಒತ್ತಾಯಿಸಿ ಮೇ.20ರಂದು ದೇಶಾದ್ಯಂತ ಬಂದ್‌ಗೆ ಕರೆ ನೀಡಿದ್ದು, ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘ ಕೂಡ ಬೆಂಬಲ ಸೂಚಿಸಿದೆ ಎಂದು ಔಷಧ ವ್ಯಾಪಾರಸ್ಥರ ಸಂಘದ ಜಿಲ್ಲಾಧ್ಯಕ್ಷ ಅಶೋಕ ಬಿಜ್ಜಳ ತಿಳಿಸಿದರು.



ನವನಗರದ ಪತ್ರಿಕಾಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾತ್ಕಾಲಿಕ ಕೋವಿಡ್-ಅವಧಿಯ ಅಧಿಸೂಚನೆ ಜಿಎಸ್‌ಆರ್.220(ಇ)ಅನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಬೇಕು. ಇ?ಫಾರ್ಮಸಿ ಸಂಬಂಧಿತ ಅಧಿಸೂಚನೆ ಜಿ.ಎಸ್.ಆರ್.8178(ಇ) ಅನ್ನು ಹಿಂಪಡೆಯಬೇಕು. ಕಾರ್ಪೋರೇಟ್‌ಗಳಿಂದ ಅನ್ಯಾಯದ ಆಳವಾದ ರಿಯಾಯ್ತಿಯನ್ನು ನಿಲ್ಲಿಸಲು ಲೆವೆಲ್ ಪ್ಲೇಯಿಂಗ್ ಫೀಲ್ಡ್ ನೀತಿಯನ್ನು ಪರಿಚಯಿಸಬೇಕುಎಂದು ಒತ್ತಾಯಿಸಿದರು. ಔಷಧವ್ಯಾಪಾರಿಗಳಸಂಘದಜಿಲ್ಲಾಪ್ರಧಾನ ಕಾರ್ಯದರ್ಶಿ ಬಿ.ಆರ್.ಕಟ್ಟಿ ಮಾತನಾಡಿ, ಪ್ರತಿಭಟನೆ ನಡೆಸುತ್ತಿರುವುದು ವ್ಯಾಪಾರದ ವಿಷಯವಲ್ಲ, ರೋಗಿಗಳ ಸುರಕ್ಷತೆಯ ವಿಷಯವಾಗಿದೆ. ಮೇ.20ರೊಳಗೆ ಸರ್ಕಾರ ಬೇಡಿಕೆಗಳ ಬಗ್ಗೆ ಯಾವುದೇ ನಿರ್ದಿಷ್ಟ ನಿರ್ಧಾರ ತೆಗೆದುಕೊಳ್ಳದಿದ್ದರೆ ಅನಿರ್ದಿಷ್ಟ ಆಂದೋಲನ ಪ್ರಾರಂಭಿಸಲಾಗುತ್ತಿದೆ ಎಂದು ಹೇಳಿದರು.

ಅನಗತ್ಯವಾಗಿ ಅದನ್ನು ಇಂದಿಗೂ ಮುಂದುವರಿಸಲಾಗಿದೆ. ಇದು ತರ್ಕಬದ್ಧವಲ್ಲ. ಈ ನಿಯಮವು ಔಷಧ ನಿಯಮಾವಳಿ 65ರ ಕಟ್ಟುನಿಟ್ಟಾದ ನಿಬಂಧನೆಗಳನ್ನು ದುರ್ಬಲಗೊಳಿಸುತ್ತಿದೆ. ಡಿಜಿಟಲ್ ವೇದಿಕೆಗಳು ನಿಯಂತ್ರಕ ಸುರಕ್ಷತಾ ಕ್ರಮಗಳನ್ನು ಉಲ್ಲಂಘಿಸಲು ಇದರ ಲಾಭವನ್ನು ಪಡೆದುಕೊಳ್ಳುತ್ತಿದೆ ಎಂದು ಆರೋಪಿಸಿದರು.

ದೇಶಾದ್ಯಂತ ಮೇ.20ರಂದು ಔಷಧ ಅಂಗಡಿಗಳನ್ನು ಬಂದ್ ಮಾಡಿ ಪ್ರತಿಭಟನೆ ನಡಸಲಾಗುವುದು. ಒಂದು ದಿನ ರೋಗಿಗಳಿಗೆ ನಿತ್ಯ ಸಿಗುವಂತಹ ಔಷಧಗಳಿಗೆ ತೊಂದರೆಯಾಗಲಿದೆ. ತುರ್ತು ಔಷಧಗಳನ್ನು ಜೀವನಕ್ಕೆ ತೊಂದರೆಯಾಗದಂತೆ ಪೂರೈಸಲು ಕ್ರಮ ವಹಿಸಲಾಗಿದೆ ಎಂದು ಹೇಳಿದರು. ದೊಡ್ಡ ಕಾರ್ಪೋರೇಟ್ ಸಂಸ್ಥೆಗಳು ತೀವ್ರ ರಿಯಾಯ್ತಿ ನೀಡುವ ಮೂಲಕ ಮಾರುಕಟ್ಟೆ ಸಮತೋಲನ ಹಾಳು ಮಾಡುತ್ತಿವೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಣ್ಣ ಔಷಧ ವ್ಯಾಪಾರಿಗಳು ವಹಿವಾಟು ನಡೆಸುವುದು ಕಷ್ಟಕರವಾಗಿದೆ. ಇದರಿಂದ ಜೀವರಕ್ಷಕ ಔಷಧಗಳು ಸರಿಯಾದ ಸಮಯಕ್ಕೆ ಸಿಗದೇ ಅಮೂಲ್ಯ ಪ್ರಾಣಗಳು ಹಾನಿಯಾಗುವ ಅಪಾಯ ಸೃಷ್ಟಿಸುತ್ತದೆ ಎಂದು ಆರೋಪಿಸಿದರು. ಗುರುದತ್ತ ಗುಳೇದ, ಪ್ರಭು ಬೀಳಗಿ ಇದ್ದರು.

ಗಾಳಿ ಮಳೆಯ ರಭಸಕ್ಕೆ ಶಾಲೆ ತಡೆಗೋಡೆ, ಮೇಲ್ಛಾವಣಿ ಧ್ವಂಸ

ರನ್ನ ಬೆಳಗಲಿ: ಪಟ್ಟಣದ ಮಿರ್ಜಿ ರಸ್ತೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ತೋಟ ನಂ.1 (ಗುಂಡ ಬಸವೇಶ್ವರ ತೋಟ)ದಲ್ಲಿ ಇತ್ತೀಚಿಗೆ ಗಾಳಿ ಮಳೆಯಪ್ರಭಾವದಿಂದಶಾಲೆಯ ಆವರಣದಲ್ಲಿದ್ದ ಬೃಹದಾಕಾರದ ಹತ್ತಿ ಮರ ಉರಳಿ ಸುಮಾರು 4 ಲಕ್ಷ ರೂ.ಮೌಲ್ಯದ ಶಾಲಾ ರಕ್ಷಣಾ ಗೋಡೆ, ಶಾಲೆಯ ಮೇಲ್ಛಾವಣಿ ಧ್ವಂಸಗೊಂಡಿದೆ. ಸರ್ಕಾರ ಶಾಲಾ ಪ್ರಾರಂಭದ ಅವಧಿಯ ಪೂರ್ವದಲ್ಲಿಯೇ ಶಾಲೆಯ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಎಸ್‌ಡಿಎಂಸಿ ಅಧ್ಯಕ್ಷ ಸಿಂಗಾಡಪ್ಪ ಹೊಸೂರ ಮಾಹಿತಿ ನೀಡಿದರು. ವಾರ್ಡ್ ಪ್ರತಿನಿಧಿ ಸಾವಿತ್ರಿ ಸಂಗಪ್ಪ ರಾಮದುರ್ಗ ಮಾತನಾಡಿ,



ಮುಧೋಳ ತಾಲೂಕಿನಲ್ಲಿ ಅತ್ಯುತ್ತಮ ಕಿರಿಯ ಪ್ರಾಥಮಿಕ ಮಾದರಿ ಶಾಲೆಯಾಗುವಲ್ಲಿ ಎಸ್‌ಡಿಎಂಸಿ ಅವರ ಪಾತ್ರ ಮುಖ್ಯವಾಗಿದೆ. ಪ್ರಕೃತಿ ವಿಕೋಪದಿಂದ ಶಾಲೆಯು ಮೂಲಭೂತ ಸಂಪತ್ತನ್ನು ಕಳೆದುಕೊಂಡಿದೆ. ಶಾಲೆಪ್ರಾರಂಭದ ಮುನ್ನ ಶಾಲೆಯ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು. ಲಕ್ಷ್ಮೀ ರಾಮದುರ್ಗ,ಆನಂದ ಪಾಟೀಲ, ವಿಠ್ಠಲ ಚೈನಾಪುರ, ಕಾಳಪ್ಪ ಅಮಾತಿ, ಮಹಾನಂದ ಕಡಪಟ್ಟಿ, ಪ್ರಿಯಾಂಕ ವಗ್ಗನ್ನವರ, ಪರಮಾನಂದ ಸೆರಮಣಿ, ಬಸಪ್ಪ ರಾಮದುರ್ಗ, ಮಲ್ಲಪ್ಪ ಕಳ್ಳಿಬಡ್ಡಿ, ಪದ್ಮಶ್ರೀ ಆಲ್ಗೋರ, ಸುಮತಿ ಅಲಗೂರು, ಯಮನಪ್ಪ ಉಸಳಿ, ಶಕುಂತಲಾ ಕಡಪಟ್ಟಿ, ಲಕ್ಷ್ಮಿ ಹಳ್ಳಿಗಿಡದ, ಪರಮಾನಂದ ಕಡಪಟ್ಟಿ, ಸದಾಶಿವ ಕಡಕೊಳ, ಮಾಯಪ್ಪ ಹಂಚಿನಾಳ, ಸಚಿನ್ ಅಲ್ಲೂರ ಇದ್ದರು.

ನರ್ಸ್‌ಗಳ ಸೇವೆ ಗೌರವಿಸಿ



ಮಹಾಲಿಂಗಪುರ: ನರ್ಸ್‌ಗಳು ಆರೋಗ್ಯ ಕ್ಷೇತ್ರದ ಬೆನ್ನೆಲುಬು. ಅವರ ನಿಸ್ವಾರ್ಥ ಸೇವೆ ಗೌರವಿಸಿದಾಗ ವಿಶ್ವ ನರ್ಸ್ ದಿನಾಚರಣೆಗೆ ಅರ್ಥ ಬರುತ್ತದೆ ಎಂದು ವೈದ್ಯ ಡಾ.ಅಶೋಕ ಹೇಳಿದರು.

ಸಮೀಪದ ಚಿಮ್ಮಡದ ಪ್ರಭುಲಿಂಗೇಶ್ವರ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನರ್ಸ್‌ಗಳ ಸೇವಾ ಮನೋಭಾವ ಹಾಗೂ ಸಮಾಜದಲ್ಲಿ ಅವರ ಮಹತ್ವದ ಕುರಿತು ಮಾತನಾಡಿದರು. ಮೋಹನ್, ಜಯರಾಜ , ಪ್ರಿಯಾಂಕಾ, ಸೌಮ್ಯ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಭಾಷಣ ಹಾಗೂ ನರ್ಸ್ ಸೇವೆಯ ಮಹತ್ವ ಸಾರುವ ಕಾರ್ಯಕ್ರಮ ಜರುಗಿದವು.

ಪುಸ್ತಕಾವಲೋಕನ ನಾಳೆ

ರಬಕವಿ-ಬನಹಟ್ಟಿ: ಮೇ 17ರಂದು ಸಂಜೆ 6ಕ್ಕೆ ಸಮೀಪದ ಯಲ್ಲಟ್ಟಿ ಗ್ರಾಮದ ಕೊಣ್ಣೂರು ವಿಜ್ಞಾನ ಪದವಿ ಪೂರ್ವ ಕಾಲೇಜಿನ ಸಭಾಭವನದಲ್ಲಿ ತಾಲೂಕು ಕಸಾಪದಿಂದ 53ನೇ ತಿಂಗಳ ಪುಸ್ತಕಾವಲೋಕನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪ್ರೊ.ಬಸವರಾಜ ಕೊಣ್ಣೂರ ಅವರ ಕುರಿತು ಸಿದ್ಧರಾಮ ಖಾನಾಪುರ ಸಂಪಾದಿಸಿದ ಬೋಧನಾ ತಪಸ್ವಿ ಅಭಿನಂದನಾ ಕೃತಿ ಕುರಿತು ನಿವೃತ್ತ ಪ್ರಚಾರ್ಯ ಸಂಗಮೇಶ ಮಟೋಳ್ಳಿ ಮಾತನಾಡಲಿದ್ದಾರೆ.

ಪ್ರೊ.ಬಸವರಾಜ ಕೊಣ್ಣೂರ ಅಧ್ಯಕ್ಷತೆ ವಹಿಸಲಿದ್ದಾರೆ. ಶಿಕ್ಷಣ ಇಲಾಖೆಯ ವಿಶ್ರಾಂತ ನಿರ್ದೇಶಕ ಸಿದ್ಧರಾಮ ಮನಹಳ್ಳಿ, ಜಮಖಂಡಿ ಹಿರಿಯ ವಕೀಲ ಎನ್.ಎಸ್.ದೇವರವರ, ಮುಧೋಳದ ಡಾ.ಟಿ.ವಿ.ಅರಳಿಕಟ್ಟಿ, ಬನಹಟ್ಟಿ ನಗರದ ಗಟ್ಯರಾದ ಶಂಕರ ಜುಂಜಪ್ಪನವರ, ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಮಹಾಲಿಂಗಪುರ ಘಟಕದ ಅಧ್ಯಕ್ಷ ಬಸವರಾಜ ಮೇಟಿ ಉಪಸ್ಥಿತರಿರಲಿದ್ದಾರೆ ಎಂದು ತಾಲೂಕು ಘಟಕದ ಅಧ್ಯಕ್ಷ ಮ.ಕೃ.ಮೇಗಾಡಿ ತಿಳಿಸಿದರು.

ಶಾಸಕ ಉಮೇಶ ಮೇಟಿ ಕಚೇರಿ ಉದ್ಘಾಟನೆ



ಬಾಗಲಕೋಟೆ: ನವನಗರದ ಪಿಡಬ್ಲ್ಯೂ ಡಿ ಕ್ವಾಟರ್ಸ್ ಆವರಣದಲ್ಲಿ ನೂತನ ಶಾಸಕ ಉಮೇಶ ಮೇಟಿಯವರ ಜನಸಂಪರ್ಕ ಕಾರ್ಯಾಲಯವನ್ನು ಗೋ ಪೂಜೆ ಮಾಡುವ ಮೂಲಕ ಉದ್ಘಾಟಿಸಲಾಯಿತು.


ಗುರುವಾರ ಬೆಂಗಳೂರಿನಲ್ಲಿ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿ ಬಂದ ಶಾಸಕ ಉಮೇಶ ಮೇಟಿಯವರು ತಮ್ಮ ಕಾರ್ಯಾಲಯವನ್ನು ಉದ್ಘಾಟಿಸಿದರು. ಜನರ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಕಚೇರಿ ಕಾರ್ಯನಿರ್ವಹಿಸಲಿದೆ ಎಂದು ಉಮೇಶ್ ಮೇಟಿ ತಿಳಿಸಿದರು. ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಸ್.ಎನ್. ರಾಂಪೂರ, ಹಿರಿಯ ಮುಖಂಡ ಶಶಿಕಾಂತ್ ಪೂಜಾರಿ, ರಾಜು ಎಸ್. ಮನಿಕೇರಿ, ಸುರೇಶ್ ಜಿಂಗಾಡೆ, ಶಬ್ಬೀರ್, ಇಬ್ರಾಹಿಂ ಕಲಾದಗಿ, ಅಡಿವೆಪ್ಪ ಸರೂರ, ಆನಂದ್ ರಾಥೋಡ್, ನದಾಫ್, ಮಂಜುಳಾ ಭೂಸಾರಿ, ಅಮೀನ್ ಸಾಬ್ ನದಾಫ್, ಸಿದ್ದಲಿಂಗಪ್ಪ ಗುಳೇದ, ಮಾದೇವಿ ಹುಲ್ಲಪ್ಪ ಮೇಟಿ, ಈರಣ್ಣ ಹುಂಡೇಕಾರ, ರೇಣುಕ ನಾರಾಯಣಕರ್, ತೌಶಿಕ್ ಬಾಗೇವಾಡ ನಗರಸಭೆ ಸದಸ್ಯರು, ಬರ್ಮು ಪೂಜಾರಿ, ಉಮೇಶ್ ಲಮಾಣಿ, ಗುಣವಂತಿ ನಿಡೋಣಿ, ನಾಗಮಲ್ಲೇಶ್ವರಿ, ಅನ್ನಪೂರ್ಣ ಜುಮ್ಮನಾಳ, ಸಂಸದ ಗೋಡೆ ಸವಾರ ಹಾಗೂ ಯಲ್ಲಪ್ಪ ಕಲಗೋಡಿ ಇದ್ದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಪ್ರತಿಭಟನೆ

ಬಾಗಲಕೋಟೆ: ನೀಟ್, ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ನವನಗರದ ಎಪಿಎಂಸಿ ವೃತ್ತದಿಂದ ಆರಂಭಗೊಂಡ ಪ್ರತಿಭಟನಾ ರ‍್ಯಾಲಿ ಜಿಲ್ಲಾಡಳಿತ ಭವನ ತಲುಪಿ ಪ್ರತಿಭಟನೆ ಸಭೆಯಾಗಿ ಮಾರ್ಪಟ್ಟಿತು. ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದನ್ನು ವಿರೋಧಿಸಿ ಘೋಷಣೆಗಳನ್ನು ಕೂಗಿದರು. ಬೇಡಿಕೆಗಳ ಮನವಿಯನ್ನು ಸಂಸದ ಪಿ.ಸಿ.ಗದ್ದಿಗೌಡರ, ಹೆಚ್ಚುವರಿ ಜಿಲ್ಲಾಧಿಕಾರಿ ತೇಲಿಯವರಿಗೆ ಮನವಿ ಸಲ್ಲಿಸಿದರು.ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಯಾಗಿದ್ದಕ್ಕೆ ಕೇಂದ್ರ ಹಾಗೂ ಸಂಬಂಧಿತ ಅಧಿಕಾರಿಗಳ ವಿರುದ್ಧ ಎಬಿವಿಪಿ ಕಾರ್ಯಕರ್ತರ ಆಕ್ರೋಶ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಆಟವಾಡುತ್ತಿರುವ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಯಿತು. ಈ ವೇಳೆ ಮಾತನಾಡಿದ ಎಬಿವಿಪಿ ವಿಭಾಗ ಸಂಚಾಲಕ ಪ್ರಥಮೇಶ ವಾಘಮೋಡೆ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಹಾಗೂ ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.ಜಿಲ್ಲಾ ಸಂಚಾಲಕ ವಿಪುಲ್ ಪೇಟ್ಕರ್, ರವಿ ದಂಡಗಿ, ಸುಮಾ, ತರುಣ್, ಬಸವರಾಜ್, ಕಾರ್ತಿಕ, ಪುರುಷೋತ್ತಮ, ಸುದರ್ಶನ ಭಾಗವಹಿಸಿದ್ದರು.



ವೃತ್ತಿಪರ ತರಬೇತಿ ಅಗತ್ಯ



ರಬಕವಿ-ಬನಹಟ್ಟಿ: ಹಿಂದುಳಿದವರ್ಗದ ಮಕ್ಕಳಿಗೆ ಶಿಕ್ಷಣ ಮತ್ತು ವೃತ್ತಿಪರ ತರಬೇತಿ ಅತ್ಯಂತ ಅಗತ್ಯವಾಗಿದೆ. ಕೌಶಲ್ಯದ ಮೂಲಕ ಬದುಕಿಗೆ ಹೊಸ ದಿಕ್ಕು ಸಿಗುತ್ತದೆಂದು ಗ್ರಾಪಂ ಮಾಜಿ ಅಧ್ಯಕ್ಷೆ ರೇಖಾ ಕಾಂತಿ ಹೇಳಿದರು.

ತಾಲೂಕಿನ ನಾವಲಗಿ ಗ್ರಾಮದಲ್ಲಿ 'ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಶನ ಹಾಗೂ ಗ್ರಾಮ ಪಂಚಾಯಿತಿ ನಾವಲಗಿ ಇವರ ಸಂಯುಕ್ತಾಶ್ರಯದಲ್ಲಿ ಕಿಶೋರಿಯರಿಗಾಗಿ ಫ್ಯಾ?ನ್ ಡಿಸೈನಿಂಗ್ ಹಾಗೂ ವೃತ್ತಿಪರ ತರಬೇತಿಯ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಿಶೋರಿಯರಿಗೆ ಅವಕಾಶಗಳ ಕೊರತೆಯಿಂದ ಪ್ರತಿಭೆ ಹೊರ ಬರದೆ ಉಳಿಯುತ್ತದೆ. ಇಂತಹ ಸಮಾಜಮುಖಿ ಕಾರ್ಯಕ್ರಮಗಳಿಂದ ಅವರ ಬದುಕಿನಲ್ಲಿ ಹೊಸ ಭರವಸೆ ಮೂಡುತ್ತದೆಂದರು.ದಾನಪ್ಪ ಆಸಂಗಿ ಮಾತನಾಡಿ, ಗ್ರಾಮೀಣ ಭಾಗದ ಕಿಶೋರಿಯರಿಗೆ ಇಂತಹ ತರಬೇತಿಗಳಿಂದ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ತರಬೇತಿ ಪಡೆದ ಪ್ರತಿಯೊಬ್ಬ ಮಹಿಳೆಯರು ಸ್ವಾವಲಂಬನೆ ಬದುಕು ಕಟ್ಟಿಕೊಂಡು ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳಬೇಕೆಂದರು.ಜಿಲ್ಲಾ ಸಂಯೋಜಕ ಸಾಗರ ತೆಳಗಡೆ ಮಾತನಾಡಿದರು. ಹಿರಿಯರಾದ ಮುತ್ತಪ್ಪ ಅಂಗಡಿ, ದಾನಪ್ಪ ಆಸಂಗಿ, ರಾಜ್ಯ ಸಂಯೋಜಕಿ ಜೆನಿಫರ್, ಅಚಲಾ, ರೇಖಾ ಗಾಡಿ, ಸರಸ್ವತಿ, ಕಲ್ಪನಾ ಸೇರಿದಂತೆ ಅನೇಕರಿದ್ದರು.

ಬನಶಂಕರಿದೇವಿ ಪಲ್ಲಕ್ಕಿ ಮೆರವಣಿಗೆ

ಕೆರೂರ: ಬನಶಂಕರಿ ದೇವಿ ಅವತರಿಸಿದ ದಿನದ ಅಂಗವಾಗಿ ಪಟ್ಟಣದ ಬನಶಂಕರಿ ದೇವಿ ದೇವಸ್ಥಾನದಲ್ಲಿ ಭಕ್ತರು ದೇವಿಯ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಬೆಳಿಗ್ಗೆ ದೇವಸ್ಥಾನದಲ್ಲಿ ಬನಶಂಕರಿ ದೇವಿಗೆ ಮಾವಿನ ಹಣ್ಣಿನ ಅಭಿಷೇಕ, ವಿಶೇಷ ಪೂಜೆ ಹಾಗೂ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆದವು.ದೇವಿಯ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ದೇವಿಯ ಪಲ್ಲಕ್ಕಿ ಮೆರವಣಿಗೆ ನಡೆಯಿತು. ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಮಾವಿನ ಹಣ್ಣಿನ ಶಿಕರಣಿ ಹಾಗೂ ಬುಂದೆ ಕಾಳಿನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಶಾಂತಗೌಡ ಪಾಟೀಲ ದೇವಸ್ಥಾನಕ್ಕೆ ಬೇಟಿ ನೀಡಿ ದೇವಿಯ ಆಶೀರ್ವಾದ ಪಡೆದುಕೊಂಡರು. ದೇವಾಂಗ ಸಮಾಜದ ಅಧ್ಯಕ್ಷ ಸಂಕಣ್ಣ ಹೊಸಮನಿ, ದೇವಾಂಗಮಠದ ಮುದ್ದುಸಂಗ ಸ್ವಾಮೀಜಿ, ಅರ್ಚಕ ಯಂಕಣ್ಣ ಗುಡಿಸಾಗರ, ಶಿವಪ್ಪ ಹೆಬ್ಬಳ್ಳಿ, ಶಂಕ್ರಪ್ಪ ಗದಗಿನ,ರವಿ ಗದ್ದನಕೇರಿ, ಪುಂಡಲೀಕ ಕ್ವಾಣ್ಣೂರ, ಮಹೇಶ ಮುಗಳಿ, ಶರಣು ಶಜ್ಜನ, ಹನಮಂತ ಪ್ರಭಾಕರ ಇತರರು ಇದ್ದರು.



ಕಿರುಸುದ್ದಿ

ಸಿದ್ಧಿವಿನಾಯಕ ಪ್ರಥಮ ಜಾತ್ರೆ ಸಂಪನ್ನ

ವಿಜಯಪುರ: ನವರಸಪುರ ಸಿದ್ಧಾರ್ಥ ನಗರದ ಸಿದ್ಧಿವಿನಾಯಕ ದೇವಸ್ಥಾನದ ಪ್ರಥಮ ವರ್ಷದ ಜಾತ್ರಾ ಮಹೋತ್ಸವ ವೈಭವಯುತವಾಗಿ ಜರುಗಿತು. ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾ ಭಕ್ತಿಯಿಂದ ನಡೆದವು, ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಂಸ್ಕೃತಿಕ ಲೋಕವನ್ನೇ ಸೃಜಿಸಿದವು. ಜಾತ್ರಾ ಮಹೋತ್ಸವದಲ್ಲಿ ಅಭಿಷೇಕ, ಮಹಾಪೂಜೆ



ಮತ್ತು ಮಹಾಪ್ರಸಾದ ನಂತರ ಸಂಜೆ ಗಣೇಶನ ಸ್ತುತಿ–ಶ್ಲೋತ್ರಗಳ ಗೀತ–ಗಾಯನ ಕಾರ್ಯಕ್ರಮ ಜರುಗಿದವು. ಸಿದ್ಧಿವಿನಾಯಕ ದೇವಾಲಯದ ಅಧ್ಯಕ್ಷ ಅನೀಲ ಫತ್ತೇಪೂರ ಮಾತನಾಡಿ, ಸಿದ್ಧಿ ವಿನಾಯಕ ಗಣೇಶನ ರೂಪಗಳಲ್ಲಿ ಅತಿ ಮಹತ್ವದ್ದಾಗಿದೆ. ಪ್ರೊ. ಎಂ.ಎಸ್.ಖೊದ್ನಾಪೂರ ಮಾತನಾಡಿ, ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನಗಳಲ್ಲಿ ಸಮಾಜಮುಖಿ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಜನರಲ್ಲಿ ಐಕ್ಯತೆ, ಸಾಮರಸ್ಯತೆ, ಸಮಗ್ರತೆ, ಸಮಷ್ಠಿಭಾವ ಮತ್ತು ಸಮತಾಭಾವದಂತಹ ಗುಣಗಳನ್ನು ಮೂಡಿಸುವುದರಿಂದ ಸುಸ್ಥಿರ ಸಮಾಜ ನಿರ್ಮಾಣವಾಗುತ್ತದೆ. ಎಂದರು. ದೇವಸ್ಥಾನದ ಗೌರವಾಧ್ಯಕ್ಷ ಡಾ. ರಾಹುಲ ಕೆಂಭಾವಿ, ಮುಖ್ಯ ಅರ್ಚಕರಾದ ವೇ. ಬಸಯ್ಯ ಶಾಸ್ತ್ರಿಗಳು, ಭೀಮನಗೌಡ ಸಿದ್ದರೆಡ್ಡಿ, ಶಿವಕುಮಾರ ಏಗ್ಗಶೆಟ್ಟಿ, ಶಾಂತವೀರಯ್ಯ ಹಿರೇಮಠ, ವಿಜಯಕುಮಾರ ಪೂಜೇರಿ, ಭೀಮರಾಯ ಅಮ್ಮಾಜಿಗೋಳ, ಕವಿತಾ ಹನಗಂಡಿಮ ಗೀತಾ ಪೂಜಾರಿ, ಪವಿತ್ರಾ ಭೋಸಲೆ, ಆರತಿ ಘೋರ್ಪಡೆ, ಲಕ್ಷ್ಮೀಬಾಯಿ ಸೌದಿ, ಸಂಗೀತಾ ಕುಳೆ, ಭರಮಣ್ಣ ಕಡಕೋಳ, ಅಲ್ಲಮಪ್ರಭು ಶಿರಹಟ್ಟಿ, ಪ್ರೊ.ಬಿ.ಎಸ್.ಬೆಳಗಲಿ ಇದ್ದರು.

ವಿದ್ಯುತ್ ಸಂಪರ್ಕ ಟವರ್ ಬಿದ್ದು ನೀರಾವರಿಗೆ ಸಮಸ್ಯೆ

ಮುದ್ದೇಬಿಹಾಳ: ತಾಲೂಕಿನ ಚಿಮ್ಮಲಗಿ ಏತ ನೀರಾವರಿ ಪಶ್ಚಿಮ ಕಾಲುವೆ ಹಾಗೂ ಕೃಷ್ಣ ಬಲದಂಡೆ ಕಾಲುವೆಯ ನೀರಾವರಿ ಯೋಜನೆಗೆ ಸಂಪರ್ಕ ಕಲ್ಪಿಸುವ ವಿದ್ಯುತ್ ಪರಿವರ್ತಕ ಬಿದ್ದು ಸಮಸ್ಯೆಯಾಗಿ ಕಳೆದ 15 ದಿನಗಳಿಂದ ತಾಲೂಕಿನ ರೈತರ ಜಮೀನುಗಳಿಗೆ, ಕುಡಿಯುವ ನೀರಿಗೆ ಹಾಗೂ ಜಾನುವಾರುಗಳಿಗೆ ಸಮಸ್ಯೆ ಉಂಟಾಗಿದೆ. ತಾಲೂಕಿನ ಕೃಷ್ಣ ಬಲದಂಡೆ ನೀರಾವರಿ ಯೋಜನೆಯ ಕಾಲುವೆಗೆ ಪೂರಕವಾಗಿ ವೇಗವಾಗಿ ವಿದ್ಯುತ್ತನ್ನು ಒದಗಿಸಲು ಟವರ್ ಒಂದನ್ನು ಸ್ಥಾಪಿಸಲಾಗಿದೆ ಅದು ಕಳೆದ 15 ದಿನಗಳಿಂದ ಬಿದ್ದು ಹೋಗಿ ವಿದ್ಯುತ್ ಸಂಪರ್ಕ ಇಲ್ಲವಾಗಿದೆ. ಈ ಕುರಿತು ತಾಲೂಕಿನ ರೈತ ಮುಖಂಡರು ಶಾಸಕ ಸಿ ಎಸ್ ನಾಡಗೌಡ ಅವರ ಗಮನಕ್ಕೆ ತಂದಿದ್ದು ಗುರುವಾರ ಸಮಸ್ಯೆ ಗಮನಕ್ಕೆ ಬಂದ ಕೂಡಲೇ ಕೆಪಿಟಿಸಿಎಲ್ ಅಧಿಕಾರಿಗಳೊಡನೆ ಮಾತನಾಡಿ, ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಸೂಚನೆ ನೀಡಿದ್ದಾರೆ. ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಅಭಿಯಂತರರು ದೂರವಾಣಿಯಲ್ಲಿ ಮಾತನಾಡಿ ಪರಿವರ್ತಕ ದುರಸ್ತಿ ಮಾಡಲು ಎರಡು ದಿನಗಳ ಸಮಯ ಬೇಕಾಗುತ್ತದೆ ನಂತರ ಆದಷ್ಟು ಬೇಗ ಸಮಸ್ಯೆ ಸರಿಪಡಿಸಲಾಗುವುದು ಎಂದು ಶಾಸಕರ ವಿಚಾರಣೆಗೆ ಉತ್ತರಿಸಿದ್ದಾರೆ. ಬೇಸಿಗೆಯಲ್ಲಿ ಜನ ಜಾನುವಾರುಗಳಿಗೆ ಮತ್ತು ಕೃಷಿಗೆ ನೀರಿನ ಕೊರತೆಯಾಗುವುದು ಬಿಸಿಲಿನ ಬೇಗೆಯನ್ನು ಹೆಚ್ಚಿಸಿದ್ದು ಅಧಿಕಾರಿಗಳು ಕೈಗೊಳ್ಳಬೇಕಿದೆ.

ತೊಗರಿ ಖರೀದಿ ದಿನಾಂಕ ವಿಸ್ತರಣೆ ಮಾಡಿ

ವಿಜಯಪುರ: ತೊಗರಿ ಬೆಳೆಗಾರರು ಅನೇಕ ರೀತಿಯ ಸಂಕಷ್ಟ ಹಾಗೂ ತೊಗರಿ ಮಾರಾಟ ಮಾಡಲು ಅನೇಕ ರೀತಿಯ ತಾಂತ್ರಿಕ ತೊಂದರೆ ಎದುರಿಸುತ್ತಿದ್ದಾರೆ, ಹೀಗಾಗಿ ಮಾರಾಟ ಸಾಧ್ಯವಾಗದೇ ಪರದಾಟ ಅನುಭವಿಸುವಂತಾಗಿದೆ, ಈ ಹಿನ್ನಲೆಯಲ್ಲಿ ಬೆಂಬಲ ಬೆಲೆ ಅಡಿಯಲ್ಲಿ ತೊಗರಿ ಮಾರಾಟದ ದಿನವನ್ನು ಜೂ.10 ರವರೆಗೆಯಾದರೂ ವಿಸ್ತರಣೆ ಮಾಡುವಂತೆ ಕರ್ನಾಟಕ ರಾಜ್ಯ ರೈತ ಸಂಘ–ಹಸಿರು ಸೇನೆ ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ಸಂಗಮೇಶ ಸಗರ ಒತ್ತಾಯಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ರೈತರ ಹಿತಕ್ಕಾಗಿ ಬೆಂಬಲ ಬೆಲೆ ಅಡಿಯಲ್ಲಿ ತೊಗರಿ ಖರೀದಿ ದಿನಾಂಕವನ್ನು ವಿಸ್ತರಣೆ ಮಾಡಬೇಕಾಗಿರುವುದು ಅತ್ಯಂತ ಅಗತ್ಯವಾಗಿದೆ, ಹಲವಾರು ಗೊಂದಲದಿಂದ, ಚೀಲ ಸಿಗದೇ, ಸೈಟ್ ಸಮಸ್ಯೆ, ಸರ್ವರ ಸಮಸ್ಯೆ ಎಂದು ನೆಪ ಹೇಳುತ್ತಾ ಜಿಲ್ಲೆಯಲ್ಲಿ ಹಲವಾರು ರೈತರು ತೊಗರಿ ಮಾರಾಟ ಮಾಡದೇ ಇಟ್ಟುಕೊಂಡಿದ್ದಾರೆ, ಈಗ ಅವಧಿ ಮುಗಿಯಿತು ಎಂದು ಸಂಬಂಧಿಸಿದ ಅಧಿಕಾರಿಗಳು ಹೇಳುತ್ತಿರುವುದು ತೊಗರಿ ಬೆಳೆಗಾರರಿಗೆ ಆಘಾತ ತಂದಿದೆ, ಕೂಡಲೇ ಜಿಲ್ಲಾಧಿಕಾರಿಗಳು ಜೂನ್ 10ರ ವರೆಗೆ ತೊಗರಿ ಖರೀದಿ ಕೇಂದ್ರವನ್ನು ಯಾವುದೇ ಸಮಸ್ಯೆ ಇಲ್ಲದ ಹಾಗೆ ಖರೀಧಿ ಮಾಡುವಂತೆ ನಿರ್ದೇಶನ ನೀಡಬೇಕು. ಕೂಡಲೇ ರೈತ ಪರವಾದ ಈ ನಿರ್ಧಾರ ಕೈಗೊಳ್ಳಲು ವಿಳಂಬ ನೀತಿ ಅನುಸರಿಸದೇ ತ್ವರಿತ ಗತಿಯಲ್ಲಿ ಖರೀದಿ ಕೇಂದ್ರದ ಸೇವೆ ವಿಸ್ತರಣೆ ಮಾಡುವಂತೆ ಸಗರ ಒತ್ತಾಯಿಸಿದ್ದಾರೆ.



ಬಸವನಬಾಗೇವಾಡಿ: ತಾಲೂಕಿನ ಇವಣಗಿ ಗ್ರಾಮದ ವರದಾನಿ ಲಕ್ಕಮ್ಮದೇವಿ ಜಾತ್ರಾ ಮಹೋತ್ಸವ ನಿಮಿತ್ತ ಶುಕ್ರವಾರ ವಿವಿಧ ಗ್ರಾಮಗಳಿಂದ ಆಗಮಿಸಿದ ಹನ್ನೊಂದು ಪಲ್ಲಕ್ಕಿ ಉತ್ಸವ ಸಂಭ್ರಮ ಸಡಗರದಿಂದ ಜರುಗಿತು. ಬೆಳಗ್ಗೆ ದೇವಿಯ ಕರ್ತುಗದ್ದುಗೆಗೆ ಅಭಿಷೇಕ ವಿಶೇಷ ಪೂಜೆ ಸಲ್ಲಿಸಿ ನಂತರ ದೇವಿಯ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇರಿಸಿ ಗಂಗಾ ಸ್ಥಳಕ್ಕೆ ಹನ್ನೊಂದು ಪಲ್ಲಕ್ಕಿಗಳೊಂದಿಗೆ ಗೊಂಬೆಗಳೊಂದಿಗೆ ಸಕಲ ವಾದ್ಯ ವೈಭವ ಹಾಗೂ ಡೊಳ್ಳು ವಾಲಗದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ಆಗಮಿಸಿತು.

ಬಸವಪ್ರಭುದೇವರ ಧರ್ಮಸೇವೆ ಸ್ಮರಣೀಯ

ತಾಳಿಕೋಟೆ: ಪಟ್ಟಣದ ಖ್ಯಾತ ಪ್ರವಚನಕಾರ, ವಾಗ್ಮಿ ಹಾಗೂ ಲೇಖಕರಾದ ಲಿಂಗೈಕ್ಯ ಬಸವಪ್ರಭುದೇವರು ಕೈಲಾಸಪೇಟೆ ಅವರ ಸ್ಮರಣಾರ್ಥ, ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಗುರುವಾರ ಬೆಳಗ್ಗೆ ಸ್ಥಳೀಯ ಶಿವಾಜಿ ಚೌಕದಲ್ಲಿ ಭಕ್ತಿಭಾವದ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ನುಡಿನಮನ ಸಲ್ಲಿಸಿ ಮಾತನಾಡಿದ ನ್ಯಾಯವಾದಿ ಗಂಗಾಧರ ಕಸ್ತೂರಿ, ತಾಳಿಕೋಟೆಯಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಬೆಳವಣಿಗೆಗೆ ಬಸವಪ್ರಭುದೇವರ ಕೊಡುಗೆ ಅಪಾರವಾಗಿದೆ. ಅವರು ಆಧ್ಯಾತ್ಮ ಹಾಗೂ ಅನುಭಾವದ ಮೇರುಶಿಖರವಾಗಿದ್ದರಲ್ಲದೇ, ಸಮಾಜದ ಮೌಢ್ಯಗಳ ವಿರುದ್ಧ ಸದಾ ಧ್ವನಿಯೆತ್ತುತ್ತಿದ್ದರು ಎಂದು ಸ್ಮರಿಸಿದರು. ಕಾಶಿಗೆ ತೆರಳಿ ವೇದ, ಶಾಸ್ತ್ರ ಮತ್ತು ಸಂಸ್ಕೃತ ಆಳವಾಗಿ ಅಧ್ಯಯನ ಮಾಡಿದ್ದ ಅವರು ಹಲವು ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು. ತಮ್ಮ ಪುರಾಣ ಹಾಗೂ ಪ್ರವಚನಗಳಲ್ಲಿ ಹಾಸ್ಯ ಬೆರೆಸಿ, ಆಧ್ಯಾತ್ಮವನ್ನು ಜನಮಾನಸಕ್ಕೆ ಅತ್ಯಂತ ಸರಳವಾಗಿ ತಲುಪಿಸುತ್ತಿದ್ದರು. ಶರಣರ ತ್ರಿಪದಿ, ಆಧುನಿಕ ವಚನಗಳು, ಭಕ್ತಿಗೀತೆಗಳು ಹಾಗೂ ವಿಡಂಬನಾ ಕೃತಿಗಳನ್ನು ರಚಿಸುವ ಮೂಲಕ ಅವರು ಮಾಡಿದ ಸಾಹಿತ್ಯ ಸೇವೆ ಅನನ್ಯವಾಗಿದೆ'' ಎಂದು ಬಣ್ಣಿಸಿದರು. ಎಸ್.ಎಸ್.ಗಡೇದ ನುಡಿನಮನ ಸಲ್ಲಿಸಿದರು. ಪರಿಷತ್ತಿನ ಪ್ರಮುಖರಾದ ಸಾಹೇಬಗೌಡ ಬಿರಾದಾರ, ಈರಣ್ಣ ಕಲಬುರ್ಗಿ, ಕಾಶಿನಾಥ ಸಜ್ಜನ, ಜಗದೀಶ ಬಿಳೇಭಾವಿ, ಅಶೋಕ ಚಿನಗುಡಿ, ಈರಣ್ಣ ಜಿಗಜಿನ್ನಿ, ಶಿವಲಿಂಗಪ್ಪ ಪಾಳ್ಕಿ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.



ತಾಳಿಕೋಟೆ: ಪಟ್ಟಣದ ಖ್ಯಾತ ಪ್ರವಚನಕಾರ, ವಾಗ್ಮಿ ಹಾಗೂ ಲೇಖಕರಾದ ಲಿಂಗೈಕ್ಯ ಬಸವಪ್ರಭುದೇವರು ಕೈಲಾಸಪೇಟೆ ಅವರ ಸ್ಮರಣಾರ್ಥ, ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಗುರುವಾರ ಬೆಳಗ್ಗೆ ಸ್ಥಳೀಯ ಶಿವಾಜಿ ಚೌಕದಲ್ಲಿ ಭಕ್ತಿಭಾವದ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯಿತು. ಎಸ್.ಎಸ್. ಗಡೇದ ನುಡಿನಮನ ಸಲ್ಲಿಸಿದರು. ಸಾಹೇಬಗೌಡ ಬಿರಾದಾರ, ಈರಣ್ಣ ಕಲಬುರ್ಗಿ, ಕಾಶಿನಾಥ ಸಜ್ಜನ, ಜಗದೀಶ ಬಿಳೇಭಾವಿ, ಅಶೋಕ ಚಿನಗುಡಿ, ಈರಣ್ಣ ಜಿಗಜಿನ್ನಿ, ಶಿವಲಿಂಗಪ್ಪ ಪಾಳ್ಕಿ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಅಧಿಕಾರಿಗಳಿಗೆ ಸೂಚನೆ

ನರೇಗಾದಡಿ ಉದ್ಯೋಗ ಕಲ್ಪಿಸಿ

ವಿಜಯಪುರ: ಪ್ರಸ್ತುತ ಬೇಸಿಗೆ ಇರುವುದರಿಂದ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಗ್ರಾಮೀಣ ಜನರಿಗೆ ಗರಿಷ್ಠ ಕೂಲಿಕಾರರಿಗೆ ಉದ್ಯೋಗ ಒದಗಿಸಿ, ನಿಗದಿತ ಗುರಿಗೆ ತಕ್ಕಂತೆ ಮಾನವ ದಿನಗಳ ಸೃಜನೆ ಮಾಡಬೇಕು ಎಂದು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಅಧಿಕಾರಿಗಳಿಗೆ ಸೂಚಿಸಿದರು.

ಇಂಡಿ ತಾಲೂಕಿನ ಸಭಾ ಭವನದಲ್ಲಿ ಇಂಡಿ ತಾಲೂಕು ಮತ್ತು ಚಡಚಣ ತಾಲೂಕುಗಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೂಲಿಗಾಗಿ ಬೇಡಿಕೆ ಸಲ್ಲಿಸಿರುವ ಕೂಲಿಕಾರರಿಗೆ ನಿಗದಿತ ಸಮಯದಲ್ಲಿ ಕಡ್ಡಾಯವಾಗಿ ಉದ್ಯೋಗ ಕಲ್ಪಿಸಬೇಕು. ಉದ್ಯೋಗ ಮಾಡಿರುವ ಕೂಲಿಕಾರರಿಗೆ ವಿಳಂಬ ಮಾಡದೇ ಕಡ್ಡಾಯವಾಗಿ ನಿಗದಿತ ಸಮಯದಲ್ಲಿ ಕೂಲಿ ಪಾವತಿಸಬೇಕು. ನರೇಗಾ ಯೋಜನೆಯಡಿ ನೋಂದಾಯಿತ ಎಲ್ಲ ಕೂಲಿಕಾರರ ಇ–ಕೆವೈಸಿಯನ್ನು ಶೇ.100 ರಷ್ಟು ಇದೇ ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದರು.

ಈಗಾಗಲೇ ಪ್ರಗತಿ ಹಂತದ ಸಮುದಾಯಿಕ ಕಾಮಗಾರಿ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲ ಕೂಲಿಕಾರರ ಫೇಸ್ ಅಥೆಂಟಿಕೇಷನ್ ಅನ್ನು ಮಾಡಿಸಲು ಎರಡೂ ತಾಲೂಕುಗಳ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



ನಂತರ ಗ್ರಾಪಂ ಹಂತದಲ್ಲಿ ಕಡ್ಡಾಯವಾಗಿ ತೆರಿಗೆ ವಸೂಲಾತಿ ಪ್ರಗತಿ ಸಾಧಿಸಬೇಕು. ಗ್ರಾಮ ಪಂಚಾಯತಿ ಅಧಿಕಾರಿ ಹಾಗೂ ಸಿಬ್ಬಂದಿಯವರು ಪ್ರತಿದಿನ ಕಡ್ಡಾಯವಾಗಿ ಇ–ಹಾಜರಾತಿ ಮೂಲಕ ತಮ್ಮ ತಮ್ಮ ಹಾಜರಾತಿ ಸಲ್ಲಿಸಬೇಕು. ಪ್ರತಿದಿನ ಇ–ಹಾಜರಾತಿ ಪ್ರಮಾಣವು ಶೇ.100 ರಷ್ಟು ಇರುವಂತೆ ಕ್ರಮ ಕೈಗೊಳ್ಳಬೇಕು ಎಂದರು.

ಕೂಲಿಕಾರರು ಸಲ್ಲಿಸಿರುವ ನಮೂನೆ 6ನ್ನು ಕಡ್ಡಾಯವಾಗಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸ್ವೀಕರಿಸಬೇಕು. ಈಗಾಗಲೇ ಬೇಡಿಕೆ ಸಲ್ಲಿಸಿರುವ ಕೂಲಿಕಾರರಿಗೆ ನಿಯಮಾನುಸಾರ ಉದ್ಯೋಗ ಒದಗಿಸಬೇಕು ಎಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಎಲ್ಲ ಕೂಲಿಕಾರರು ಪ್ರತಿ ದಿನ ತಪ್ಪದೇ ಕೆಲಸಕ್ಕೆ ಹಾಜರಾಗಬೇಕು. ಇನ್ನುಳಿದ ಎಲ್ಲ ಕೂಲಿಕಾರರು ನಮೂನೆ 6 ರಲ್ಲಿ ಗ್ರಾಪಂಗೆ ಬೇಡಿಕೆ ಸಲ್ಲಿಸಬೇಕು. ಬಿಸಿಲಿನ ತಾಪಮಾನ ಹೆಚ್ಚುತ್ತಿರುವುದರಿಂದ ಕೆಲಸಕ್ಕೆ ಬೇಗನೆ ಬರಬೇಕು. ನಿಮಗೆ ನೀಡಿರುವ ಅಳತೆ ಪ್ರಕಾರ ಕೆಲಸ ಮಾಡಬೇಕು ಎಂದು ಕೂಲಿಕಾರರಿಗೆ ನಿರ್ದೇಶನ ನೀಡಿದರು.

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನಿರಂತರವಾಗಿ ಕೆಲಸ ಒದಗಿಸಲಾಗುತ್ತಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೂಲಿ ಕಾರ್ಮಿಕರಿಗೆ ತಿಳಿಸಿದರು.

ಇಂಡಿ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ಮಹದೇವಪ್ಪ ಏವೂರ, ಚಡಚಣ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ಅಶೋಕಕುಮಾರ ರಾಠೋಡ, ಇಂಡಿ ತಾಲೂಕಿನ ಸಹಾಯಕ ನಿರ್ದೇಶಕ ಸಂಜಯ ಖಡಗೇಕರ, ಸಹಾಯಕ ನಿರ್ದೇಶಕರು (ಪಂ.ರಾ) ಎರಡೂ ತಾಲೂಕುಗಳ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಇಂಡಿ ಮತ್ತು ಚಡಚಣ ತಾಲೂಕಿನ ನರೇಗಾ ಸಿಬ್ಬಂದಿ ಇದ್ದರು.

ಕೂಲಿಕಾರರಿಗೆ ಕಡ್ಡಾಯವಾಗಿ ಕೆಲಸ ಒದಗಿಸಿ

ದೇವರಹಿಪ್ಪರಗಿ: ಪಟ್ಟಣದ ತಾಲೂಕು ಪಂಚಾಯತಿಯಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಭಾರತಿ ಚಲುವಯ್ಯ ಅಧ್ಯಕ್ಷತೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಹಾಗೂ ಪಂಚಾಯತ್ ರಾಜ್ ಇಲಾಖೆಯ ವಿವಿಧ ವಿಷಯಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಭಾರತಿ ಚಲುವಯ್ಯ ಅವರು, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನಮೂನೆ–6 ಮೂಲಕ ಕೆಲಸದ ಬೇಡಿಕೆ ಸಲ್ಲಿಸಿದ ಪ್ರತಿಯೊಬ್ಬ ಕೂಲಿಕಾರರಿಗೂ ಕಡ್ಡಾಯವಾಗಿ ಕೆಲಸ ಒದಗಿಸಬೇಕು ಎಂದು ಪಿಡಿ ರವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಗ್ರಾಮ ಪಂಚಾಯತಿಯಲ್ಲಿ ಜಿಕೆಎಂಟಿಆರ್ಎಂ, ಬಿಎಫ್‌ಟಿ ಮನೆಮನೆಗೆ ತೆರಳಿ ನಮೂನೆ–6 ಕೆಲಸದ ಬೇಡಿಕೆ ಸ್ವೀಕರಿಸಿ, ಕೂಲಿಕಾರರಿಗೆ ಯೋಜನೆಯ ಸೌಲಭ್ಯ ತಲುಪುವಂತೆ ಕ್ರಮವಹಿಸಬೇಕು. ಇ–ಕೆವೈಸಿ ಪ್ರಗತಿಯನ್ನು ಶೇ.100ಕ್ಕೆ ತಲುಪಿಸುವಂತೆ ಸೂಚಿಸಿದ ಅವರು, ಗುರಿ ಸಾಧನೆಯಲ್ಲಿ ನಿರ್ಲಕ್ಷ್ಯ ತೋರಿದ ಜಿ.ಕೆ.ಎಂ, ಟಿ.ಆರ್.ಎಂ ಹಾಗೂ ಬಿ.ಎಫ್.ಟಿ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಲೇಬರ್ ಎಂಗೇಜ್ ಹೆಚ್ಚಿಸುವುದು, ಜೀರೋ ಎನ್‌ಎಂಆರ್ ತಡೆಗಟ್ಟುವುದು, ಮಾನವ ದಿನಗಳ ಸೃಜನೆ, ಪೇಸ್ ಅಥೆಂಟಿಕೇಶನ್ ಪ್ರಗತಿ, ಯುಕ್ತಧಾರದಲ್ಲಿ ವರ್ಕ್ ಎಂಟ್ರಿ, ಕಾಮಗಾರಿಗಳ ಪೂರ್ಣಗೊಳಿಸುವುದು ಬಾಕಿ ಕೂಲಿ ಪಾವತಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಸವಿಸ್ತಾರ ಚರ್ಚೆ ನಡೆಸಲಾಯಿತು.

ಗ್ರಾಮೀಣ ಉದ್ಯೋಗ ಸಹಾಯಕ ನಿರ್ದೇಶಕ ಶಾಂತಗೌಡ ನ್ಯಾಮಣ್ಣವರ, ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ಶಿವಾನಂದ ಮೂಲಿಮನಿ, ಶರಣಗೌಡ ಪಾಟೀಲ, ಸೊಹೇಬ ಮಾರಡಗಿ, ಅರ್ಷದ್ ಕೋಟ್ಯಾಳ, ಸಂಯೋಜಕ ಸಿದ್ದು ಕಾಂಬಳೆ, ಪವನ ಜೋಶಿ, ಕಿರಣ್ ಪಾಟೀಲ್ ಕಂಪ್ಯೂಟರ್ ಆಪರೇಟರ್‌ಗಳು, ಜಿ.ಕೆ.ಎಂ, ಬಿ.ಎಫ್.ಟಿ, ಟಿ.ಆರ್.ಎಂ ಹಾಗೂ ಗ್ರಾಪಂ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.



ಬೆಳೆ ಸಮೀಕ್ಷೆದಾರರ ಪದಾಧಿಕಾರಿಗಳ ಪದಗ್ರಹಣ

ವಿಜಯಪುರ: ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆಳೆ ಸಮೀಕ್ಷೆದಾರರು ತಮ್ಮ ಸಂಘಟನೆಯನ್ನು ಬಲಪಡಿಸಿಕೊಂಡಿದ್ದು, ಸಂಘಟನೆಯ ನೂತನ ಪದಾಧಿಕಾರಿಗಳ ಪದಗ್ರಹಣ ನಡೆಯಿತು.

ಗಗನ್ ಮಹಲ್ ಉದ್ಯಾನವನದಲ್ಲಿ ಸಮಾವೇಶಗೊಂಡ ನೂರಾರು ಬೆಳೆ ಸಮೀಕ್ಷೆದಾರರು ನೂತನ ಜವಾಬ್ದಾರಿಯನ್ನು ವಹಿಸಿಕೊಂಡರು.

ಅಖಿಲ ಕರ್ನಾಟಕ ಬೆಳೆ ಸಮೀಕ್ಷೆದಾರರ ಸಂಘಟನೆಯ ರಾಜ್ಯ ಸಮಿತಿಯ ಪದಾಧಿಕಾರಿಗಳ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ 60 ಜನ ಪದಾಧಿಕಾರಿಗಳಿಗೆ ಸಂಘಟನೆಯ ರಾಜ್ಯಾಧ್ಯಕ್ಷ ಭೀಮಪ್ಪ ತಳವಾರ ಹಾಗೂ ಸಂಸ್ಥಾಪಕ ನರಸಪ್ಪ ಅರ್ಜುನ್ ನಾವಿ ಅವರು ಪ್ರಮಾಣ ವಚನ ಬೋಧಿಸಿದರು. ಬೆಳೆ ಸಮೀಕ್ಷೆದಾರರು ಅನೇಕ ರೀತಿಯಲ್ಲಿ ಸಮಸ್ಯೆ ಎದುರಿಸುತ್ತಿದ್ದು, ಈ ಸಮಸ್ಯೆಯ ಧ್ವನಿಯಾಗಿ ಸಂಘಟನೆಯ ಪದಾಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಕೋರಲಾಯಿತು.

ರಾಜ್ಯದಲ್ಲಿ 23,720 ಜನ ಬೆಳೆ ಸಮೀಕ್ಷೆದಾರರು ಕಾರ್ಯನಿರ್ವಹಿಸುತ್ತಿದ್ದಾರೆ, ಆದರೆ ಇವರೆಲ್ಲರಿಗೂ ಉದ್ಯೋಗ ಭದ್ರತೆ ಹಾಗೂ ಅಸುರಕ್ಷತೆ ಕಾಡುತ್ತಿದೆ, ಕೆಲವೊಮ್ಮೆ ತೋಟದ ವಸ್ತಿ, ಕಾಡು ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಬೇಕಾದ ಅನಿವಾರ್ಯತೆ ಇದೆ, ಈ ವೇಳೆ ಅನೇಕ ಕಾಡು ಪ್ರಾಣಿಗಳು, ಸರಿಸೃಪಗಳು, ವಿಷಕಾರಿ ಹುಳುಗಳು ಈ ಸಮೀಕ್ಷೆದಾರರಿಗೆ ಹಾನಿ ಮಾಡುವ ಎಲ್ಲ ಸಾಧ್ಯತೆ ದಟ್ಟವಾಗಿವೆ, ಅನೇಕ ಕಡೆ ಈ ಪ್ರಕರಣಗಳು ಸಹ ಸಂಭವಿಸಿವೆ. ಹೀಗಾಗಿ ಬೆಳೆ ಸಮೀಕ್ಷೆದಾರರಿಗೆ ಸೂಕ್ತ ರೀತಿಯಲ್ಲಿ ಸೌಲಭ್ಯ, ಸುರಕ್ಷತಾ ಸಲಕರಣೆಗಳನ್ನು ಒದಗಿಸುವ ಕಾರ್ಯ ನಡೆಯಬೇಕಿದೆ.

ಬಹುಮುಖ್ಯವಾಗಿ ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ಸೇರ್ಪಡೆ ಮಾಡುವುದು ಬಹುಮುಖ್ಯ ಬೇಡಿಕೆಯಾಗಿದೆ, ಈ ಬೇಡಿಕೆ ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಸಂಘಟನೆ ಸಂಘಟಿತ ಹೋರಾಟ ಮಾಡಬೇಕಾಗಿರುವುದು ಅನಿವಾರ್ಯ ಎಂಬ ಒಟ್ಟಾಭಿಪ್ರಾಯ ಸಭೆಯಲ್ಲಿ ಮೊಳಗಿತು.

ವಿಜಯಪುರ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಸೋಮಶೇಖರ ನಾಯ್ಕೋಡಿ ಅವರ ನೇತೃತ್ವದಲ್ಲಿ ಎಲ್ಲಾ ತಾಲೂಕಿನ ಹಾಗೂ ಜಿಲ್ಲಾ ಘಟಕದ ಪದಾಧಿಕಾರಿಗಳೊಡನೆ ಜಿಲ್ಲಾಧಿಕಾರಿ ಡಾ.ಕೆ.ಆನಂದ ಅವರನ್ನು ಭೇಟಿ ನೀಡಿ ಅವರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಕೆ ಹಾಗೂ ನಂತರ ಜಂಟಿ ಕೃಷಿ ನಿರ್ದೇಶಕರ ಮುಖಾಂತರ ಕೃಷಿ ಸಚಿವರಿಗೆ ಲಿಖಿತವಾದ ಮನವಿ ಸಲ್ಲಿಸುವ ನಿರ್ಣಯ ಸ್ವೀಕರಿಸಲಾಯಿತು.



ಕುಡಿಯುವ ನೀರಿಗಾಗಿ ಆಗ್ರಹಿಸಿ ಮಹಿಳೆಯರಿಂದ ಪ್ರತಿಭಟನೆ

ನಾಲತವಾಡ: ಸುಮಾರು ಒಂದುವರೆ ತಿಂಗಳಾಯ್ತು ಕುಡಿಯುವ ನೀರಿಗಾಗಿ ಪರದಾಡುತ್ತಿದ್ದೇವೆ ಗ್ರಾಪಂ ಯವರಿಗೆ ನೀರು ಕೊಡಿ ಎಂದು ಮನವಿ ಮಾಡಿದರೂ ಕ್ಯಾರೆ ಎನ್ನುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಮಹಿಳೆಯರು ಯುವಕರು ಖಾಲಿ ಕೊಡಗಳೊಂದಿಗೆ ಪ್ರತಿಭಟಿಸಿದ ಘಟನೆ ನಾಗಬೇನಾಳ ಗ್ರಾ.ಪಂ ವ್ಯಾಪ್ತಿಯ ವೀರೇಶನಗರದಲ್ಲಿ ಗುರುವಾರ ಸಂಜೆ ನಡೆದಿದೆ.

ಗ್ರಾಮದಲ್ಲಿ ನೀರಿನ ಮೂಲವಿದೆ, ಪಕ್ಕದಲ್ಲೇ ನದಿ ಹರಿಯುತ್ತಿದೆ ಕಲ್ಲು ಎಸೆದರೆ ನದಿಗೆ ತಟ್ಟುತ್ತದೆ ಇಷ್ಟೆಲ್ಲಾ ನೀರಿದ್ದರೂ ಗ್ರಾಪಂ ಯವರ ನಿರ್ವಹಣೆ ಕೊರತೆಗೆ ನಾವು ಪರದಾಡುವಂತಾಗಿದೆ ಎಂದು ಮಹಿಳೆಯರು ಆರೋಪಿಸಿದರು. ಅಲ್ಲಲ್ಲಿ ಪೈಪುಗಳೂ ಸಹ ಹದಗೆಟ್ಟ ಪರಿಣಾಮ ನೀರು ಬರುತ್ತಿಲ್ಲ, ಸುಮಾರು ನಿವಾಸಿಗಳಿದ್ದೇವೆ ಬೇಸಿಗೆಯಲ್ಲಿ ನೀರಿಗಾಗಿ ಪರದಾಡುವಂತಾಗಿದೆ ನಮ್ಮ ಗೋಳು ಕೇಳೋರಿಲ್ಲ ಎಂದು ಅಳಲು ತೋಡಿಕೊಂಡರು. ಇನ್ನೇರಡು ದಿನಗಳಲ್ಲಿ ನಮ್ಮಲ್ಲಿ ಶಾಸ್ವತ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆ ಹರಿಸದಿದ್ದಲ್ಲಿ ಮಹಿಳೆಯರೆಲ್ಲಾ ಸೇರಿ ಯುವಕರೊಂದಿಗೆ ಗ್ರಾಪಂ ಎದುರು ಕುಳಿತುಕೊಳ್ಳುತ್ತೇವೆ ಎಂದು



ಶರಣಪ್ಪ ಸುಲ್ತಾನಪೂರ, ರವಿ ಡಂಬಳ, ವಿಜಯಲಕ್ಷ್ಮೀ ಪ್ಯಾಟಿಗೌಡ್ರ, ಮಲ್ಲಪ್ಪ ಪತ್ತೆಪೂರ, ರೇಣುಕಾ ಸುಲ್ತಾನಪೂರ, ಗಂಗಮ್ಮ ಗೌಡರ, ಗೌರಮ್ಮ ಪಾಟೀಲ, ಜಯಶ್ರೀ ಕೋಟಿ ದ್ಯಾಮವ್ವ ಭಂಗಿ ಎಚ್ಚರಿಸಿದರು.


ನೀರಿನ ಸಮಸ್ಯೆ ನೀಗಿಸುವ ಉದ್ದೇಶದಿಂದ ಮೇಲಿಂದ ಮೇಲೆ ಓಣೆಗಳಿಗೆ ಹೋಗಿದ್ದೇನೆ, ನೀರು ಬರದ ಸ್ಥಳದಲ್ಲಿ ಅಲ್ಲಿ ಟ್ಯಾಂಕರ್ ವ್ಯವಸ್ಥೆ ಮಾಡಿದ್ದೇನೆ, ಟಿಸಿ ಸುಟ್ಟ ಸಲುವಾಗಿ ನೀರು ಕೊಡಲು ಸ್ವಲ್ಪ ಅಡೆ ತಡೆ ಆಗಿತ್ತು ಹಾಗೂ ಬೇಸಿಗೆ ಇರುವ ಕಾರಣಕ್ಕೆ ಬೋರವೆಲ್ ನಲ್ಲಿ ನೀರಿನ ಕೊರತೆ ಇದೆ, ಎಂಇಎಸ್ ನೀರು ಕೊಡುತ್ತಿದ್ದೇವೆ ಎಂದು ನಾಗಬೇನಾಳ ಗ್ರಾಪಂ ಪಿಡಿಓ ಎಂ.ಎ.ಪೀರಾಪೂರ ಎಂದರು.

ಚವನಭಾವಿ ಗ್ರಾಮ ದೇವತೆಯರ ಅದ್ದೂರಿ ಜಾತ್ರೆ

ಮುದ್ದೇಬಿಹಾಳ: ತಾಲೂಕಿನ ಚವನಭಾವಿ ಗ್ರಾಮದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಜರುಗುವ ಅತ್ಯಂತ ಅಪರೂಪದ ಗದ್ದೇಮ್ಮದೇವಿ–ದ್ಯಾಮವ್ವ ದೇವಿಯರ ಅಪರೂಪದ ದೇವಿಯರ ಸಮಾಗಮ ಮತ್ತು ಬೀಳ್ಕೊಡುಗೆ ಸಮಾರಂಭವು ಗುರುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ಅದ್ದೂರಿಯಾಗಿ ನೆರವೇರಿತು.

ಈ ಬಾರಿಯೂ ಸಹ ಭಕ್ತರು ಸಕಲ ಸಿದ್ಧತೆಗಳೊಂದಿಗೆ ದೇವಿಯರ ಉತ್ಸವಕ್ಕೆ ಚಾಲನೆ ನೀಡಿದ್ದರು. ಗ್ರಾಮದ ಗಡಿಯಿಂದ ಆರಂಭವಾದ ಈ ಮೆರವಣಿಗೆಯು ಭಕ್ತಿಯ ಪರಾಕಾಷ್ಠೆಯನ್ನು ತಲುಪಿತ್ತು. ಮೆರವಣಿಗೆಯುದ್ದಕ್ಕೂ ಡೊಳ್ಳು ಕುಣಿತ ಮತ್ತು ವಿವಿಧ ಜಾನಪದ ವಾದ್ಯಗಳ ಮೇಳಗಳು ಭಕ್ತರಲ್ಲಿ ಸಂಭ್ರಮದ ಅಲೆ ಎಬ್ಬಿಸಿದವು. ಸುಮಂಗಲೆಯರು ಸಾಲಾಗಿ ನಿಂತು ದೇವಿಯರಿಗೆ ಆರತಿ ಬೆಳಗಿ, ಕಂಕಣ ಅರ್ಪಿಸಿ ಭಕ್ತಿ ಸಮರ್ಪಿಸಿದರು.

ಹಳದಿ ಮತ್ತು ಕೇಸರಿ ಪೇಟಗಳನ್ನು ಧರಿಸಿದ ಯುವಕರ ಜೈಕಾರ ಗ್ರಾಮದ ತುಂಬೆಲ್ಲಾ ಪ್ರತಿಧ್ವನಿಸಿತು. ಅತ್ಯಂತ ಪ್ರಮುಖ ಮತ್ತು ಭಾವುಕ ಘಟ್ಟವೆಂದರೆ ಅದು ಗದ್ದೇಮ್ಮದೇವಿ ಮತ್ತು ದ್ಯಾಮವ್ವದೇವಿಯರ ಮಿಲನ. ಇಬ್ಬರು ದೇವಿಯರು ಪರಸ್ಪರ ಜೊತೆಗೆ ಅಪ್ಪಿಕೊಳ್ಳುವ ಕ್ಷಣವನ್ನು



ನೋಡಲು ಭಕ್ತರು ಮುಗಿಬಿದ್ದಿದ್ದರು.

ನಂತರ ದ್ಯಾಮವ್ವದೇವಿಯು ಅಡವಿ ಹುಲಗಬಾಳ ಗ್ರಾಮದತ್ತ ಪ್ರಯಾಣ, ಗದ್ದೇಮ್ಮದೇವಿಯು ಗ್ರಾಮದ ಅಂಜನೇಯ ದೇವಸ್ಥಾನದಲ್ಲಿ ವಾಸ್ತವ್ಯ ಹೂಡಿದರು ಭಕ್ತರು ದೇವಿಯ ಆಶೀರ್ವಾದ ಪಡೆದರು. ಗುರುವಾರ ಸಂಜೆ ನಡೆದ ಈ ಅಂತಿಮ ಘಟ್ಟದ ಮೆರವಣಿಗೆಯಲ್ಲಿ ಚವನಭಾವಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಸಹಸ್ರಾರು ಭಕ್ತಾದಿಗಳು ಪಾಲ್ಗೊಂಡಿದ್ದರು.

ಪದವಿ ಕಾಲೇಜಗಳನ್ನು ಬಾಗಲಕೋಟೆ ವಿವಿಗೆ ಸೇರಿಸಲು ಆಗ್ರಹ

ವಿಜಯಪುರ: ವಿಜಯಪುರ ಜಿಲ್ಲೆಯ ಪದವಿ ಕಾಲೇಜುಗಳನ್ನು ಬಾಘಲಕೋಟ ವಿಶ್ವವಿದ್ಯಾಲಯಕ್ಕೆ ಸೇರಿಸುವಂತೆ ಆಗ್ರಹಿಸಿ ಎಬಿವಿಪಿ ಪದಾಧಿಕಾರಿಗಳು ವಿಜಯಪುರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಎಬಿವಿಪಿ ವಿಭಾಗ ಸಂಘಟನಾ ಕಾರ್ಯದರ್ಶಿ ಹರ್ಷ ನಾಯಕ ಮಾತನಾಡಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಡಿಯಲ್ಲಿರುವ ಸಂಯೋಜಿತ ಕಾಲೇಜುಗಳನ್ನು ಬಾಗಲಕೋಟೆ ಜಿಲ್ಲೆಯ ಬೇರ್ಪಡಿಸಿ ಜಮಖಂಡಿಯಲ್ಲಿ ನೂತನ ವಿಶ್ವವಿದ್ಯಾಲಯ ಸ್ಥಾಪನೆ ಮಾಡಿದರು. ಕೇವಲ 73 ಕಾಲೇಜುಗಳಿಗೆ ಜಮಖಂಡಿಯಲ್ಲಿ ವಿಶ್ವವಿದ್ಯಾಲಯ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸುಮಾರು 130 ಕ್ಕಿಂತ ಹೆಚ್ಚು ಪದವಿ ಮಹಾವಿದ್ಯಾಲಯಗಳಿದ್ದು, ಅದಕ್ಕಾಗಿ ಪ್ರಸ್ತುತ ಅಸ್ತಿತ್ವದಲ್ಲಿರುವ ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರದಲ್ಲಿರುವ ವಿಶ್ವವಿದ್ಯಾಲಯಕ್ಕೆ ವಿಜಯಪುರ ಜಿಲ್ಲೆಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಅಡಿಯಲ್ಲಿ ಬರುವ 2026–27ನೇ ಶೈಕ್ಷಣಿಕ ವರ್ಷದಿಂದ ಸಂಯೋಜಿತ ಪದವಿ ಮಹಾವಿದ್ಯಾಲಯಗಳನ್ನು ಸಂಯೋಜನೆ ಮಾಡಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಸಂಚಾಲಕ ಸಂದೀಪ ಅರಳಗುಂಡಿ ಮಾತನಾಡಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಒಂದು ದಿನದಲ್ಲಿ ಹೋಗಿ ಬರಲು ನಮ್ಮ ಬಡ ವಿದ್ಯಾರ್ಥಿಗಳಿಗೆ ಅದರಲ್ಲೂ ಮಹಿಳಾ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಹಾಗೂ ಚಡಚಣ, ಇಂಡಿ, ಸಿಂದಗಿ, ಆಲಮೇಲ ಹಾಗೂ ತಾಳಿಕೋಟೆ ನಗರಗಳಿಂದ ಬೆಳಗಾವಿಯು 300 ಕಿ.ಮೀ. ದೂರವಾಗಿದ್ದು, ಒಂದು ದಿನದಲ್ಲಿ ಮಹಾವಿದ್ಯಾಲಯದ ಕಾರ್ಯಗಳನ್ನು ಮುಗಿಸಿಕೊಂಡು ಬರಲು ಸಾಧ್ಯವಿಲ್ಲ, ಪ್ರಸ್ತುತ ಬೆಳಗಾವಿಯ ವಿಶ್ವವಿದ್ಯಾಲಯವು ಬೆಳಗಾವಿ ನಗರದ ಹೊರವಲಯದಲ್ಲಿದ್ದು, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ವಾಹನ ಸೌಲಭ್ಯದ ಕೊರತೆಯಿದೆ ಎಂದರು.

ರಾಜ್ಯ ಕಾನೂನು ವಿದ್ಯಾರ್ಥಿ ಪ್ರಮುಖ ಮಂಜುನಾಥ ಹಳ್ಳಿ ಮಾತನಾಡಿ,



ವಿದ್ಯಾರ್ಥಿಗಳಿಗೆ ಮೈಗ್ರೇಶನ್ ಪ್ರಮಾಣಪತ್ರ, ಮೂಲ ಅಂಕಪಟ್ಟಿಗಳು, ವರ್ಗಾವಣೆ ಪ್ರಮಾಣ ಪತ್ರ, ಘಟಿಕೋತ್ಸವ ಪ್ರಮಾಣಪತ್ರ ಇತರೆ ದಾಖಲೆಗಳು ಬೇಕಾದಲ್ಲಿ ಬೆಳಗಾವಿಗೆ ಹೋಗಿ ಬರುವ ಸಮಯ, ವೆಚ್ಚ ಬಹಳವಾಗುತ್ತದೆ. ಮಹಾವಿದ್ಯಾಲಯದವರು ದಾಖಲೆಗಳನ್ನು ಸಲ್ಲಿಸಲು ಖುದ್ದಾಗಿ ಬೆಳಗಾವಿಗೆ ಹೋಗಿ ಬರುವ ಸಮಯ ಮತ್ತು ವೆಚ್ಚ ಜಾಸ್ತಿಯಾಗಿದೆ. ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ಕಾಲೇಜುಗಳಿಗಿಂತ 130ಕ್ಕೂ ಹೆಚ್ಚಿನ ಪದವಿ ಮಹಾವಿದ್ಯಾಲಯಗಳು ವಿಜಯಪೂರ ಜಿಲ್ಲೆಯಲ್ಲಿವೆ. ನೂತನವಾಗಿ ಸ್ಥಾಪಿಸುತ್ತಿರುವ ಬಾಗಲಕೋಟೆ ಜಿಲ್ಲೆಯ (ಜಮಖಂಡಿ ತಾಲೂಕಿನಲ್ಲಿ) ವಿಶ್ವವಿದ್ಯಾಲಯ ದಾಟಿಯೇ ಬೆಳಗಾವಿಗೆ ಹೋಗಬೇಕು. ಮೌಲ್ಯಮಾಪನ ಕಾರ್ಯಕ್ಕೆ ತೆರಳುವ ಹಲವು ಸಿಬ್ಬಂದಿಗಳು ಖಿನ್ನತೆ ಅನುಭವಿಸಬೇಕಾಗುತ್ತದೆ ಎಂದು ಹೇಳಿದರು.

ಬಾಲಾಜಿ ಬಿರಾದಾರ, ಬಸನಗೌಡ ರೆಡ್ಡಿ, ಶಶಿಕುಮಾರ ಮಲಿಪಾಟೀಲ, ಸ್ನೇಹಾ ಚವ್ಹಾಣ,ಮಾಳಪ್ಪ ಸಿದ್ನಾತ, ಪ್ರಕಾಶ ನಾಟಿಕಾರ, ಸೌಂದರ್ಯ ಬಳೇಗಾರ,ಮಹೇಶ ಆವಳ್ಳಿ, ಗಣೇಶ ಲಿಂಗದಳ್ಳಿ, ಮಲ್ಲಿಕಾರ್ಜುನ ಆಗಸರ, ಮಹೇಶ ಬುಯ್ಯಾರ, ಶ್ರೀನಿಧಿ, ಭಾಗ್ಯಶ್ರೀ, ಪೂಜಾ ಇದ್ದರು.

ಗ್ರಾಮೀಣ ಜನತೆಗೆ ತ್ವರಿತವಾಗಿ ಪರಿಹಾರ ಕಲ್ಪಿಸಿ: ಸಿಇಒ

ವಿಜಯಪುರ: ಸಮಸ್ಯೆ ಹೊತ್ತು ಬರುವ ಗ್ರಾಮೀಣ ಜನತೆಗೆ ತ್ವರಿತ ಪರಿಹಾರ ಕಲ್ಪಿಸಬೇಕು ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಧಿರಿ ರಿಷಿ ಆನಂದ ಹೇಳಿದರು.

ಜಿಲ್ಲೆಯ ತಿಕೋಟಾ ತಾಲೂಕು ಪಂಚಾಯತಿ ಕಾರ್ಯಾಲಯದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು. ಮುಂದಿನ ದಿನಮಾನದಲ್ಲಿ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಇನ್ನೂ ಹೆಚ್ಚಿನ ಉತ್ಸಾಹದಿಂದ ಕೆಲಸ ನಿರ್ವಹಿಸಿ ತಿಕೋಟಾ ತಾಲೂಕನ್ನು ಮಾದರಿ ತಾಲೂಕನ್ನಾಗಿಸಲು ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು. ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತಮಗೆ ಒದಗಿಸಿರುವ ಸಲಕರಣೆಗಳನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳಬೇಕು. ಆ ಮೂಲಕ ಸಮಸ್ಯೆ ಹೊತ್ತು ಬರುವ ಗ್ರಾಮೀಣ ಜನರಿಗೆ ಸೂಕ್ತ ಪರಿಹಾರವನ್ನು ತ್ವರಿತವಾಗಿ ಒದಗಿಸಬೇಕು. ಜೊತೆಗೆ ಅವರೊಡನೆ ಅತ್ಯಂತ ಗೌರವಯುತವಾಗಿ ವರ್ತಿಸಬೇಕು ಎಂದರು.

ಕಾರ್ಯಾಲಯವು ಎಷ್ಟು ನಿಟ್ಟಾಗಿ ಅಚ್ಚುಕಟ್ಟಾಗಿ ಹಾಗೂ ಸ್ವಚ್ಛತೆಯಿಂದ



ಇರುತ್ತದೇಯೋ ಅಷ್ಟು ಸಿಬ್ಬಂದಿಗಳಿಗೆ ಕೆಲಸ ನಿರ್ವಹಿಸಲು ಪ್ರೇರಣೆ ಸಿಗುತ್ತದೆ. ಇಂತಹ ಒಂದು ಉತ್ತಮ ಯೋಜನೆಯನ್ನು ಹಾಕಿಕೊಂಡು ಹಳೆಯ ಕಟ್ಟಡದಲ್ಲಿಯೇ ಸಿಬ್ಬಂದಿಗೆ ಅವಶ್ಯಕವಾಗಿ ಬೇಕಾಗಿರುವ ಟೇಬಲ್,ಕುರ್ಚಿ,ಗಣಕಯಂತ್ರ,ಪ್ರಿಂಟರ್ಸ್, ಶೌಚಾಲಯ, ಕುಡಿಯುವ ನೀರು ಮತ್ತು ಉತ್ತಮ ಪರಿಸರ ಒದಗಿಸಿರುವ ತಾಲೂಕು ಪಂಚಾಯತಿಯ ಕಾರ್ಯವನ್ನು ಸಿಇಒ ಪ್ರಶಂಸಿಸಿದರು. ನಮ್ಮ ಕಾರ್ಯಾಲಯದ ಬಗ್ಗೆ ನಮಗೆಲ್ಲಾ ಹೆಮ್ಮೆಯಿರಬೇಕು ಎಂದರು.

ಮುಖ್ಯ ಯೋಜನಾಧಿಕಾರಿ ಸಿ.ಬಿ.ಕುಂಬಾರ, ತಾ.ಪಂ. ಆಡಳಿತಾಧಿಕಾರಿ ರಾಮಣ್ಣ ಅಥಣಿ, ಇಓ ಬಸವಂತರಾಯಗೌಡ ಬಿರಾದಾರ, ಸಹಾಯಕ ಲೆಕ್ಕಾಧಿಕಾರಿಗಳಾದ ಅನ್ವರಹುಸೇನ ನದಾಫ್, ತಾಲೂಕು ಯೋಜನಾಧಿಕಾರಿಗಳಾದ ಮಹಾಂತೇಶ ಬಾಗೇವಾಡಿ, ಸಹಾಯಕ ನಿರ್ದೇಶಕರಾದ ಶೋಭಕ್ಕ ಶಿಳೀನ, ಬಸವರಾಜ ಸಂಕಗೊಂಡ ಇದ್ದರು.

ತಾಲೂಕು ಐಇಸಿ ಸಂಯೋಜಕ ಕಲ್ಲಪ್ಪ ನಂದರಗಿ ನಿರೂಪಿಸಿದರು. ಪಿಡಿಓ ಶ್ರೀಶೈಲ ಹಡಪದ ಸ್ವಾಗತಿಸಿದರು. ಸರ್ವಮಂಗಲಾ ಮುಪ್ಪಯ್ಯನಮಠ ಪ್ರಾರ್ಥಿಸಿದರು.

ಕಿರುಸುದ್ದಿ

ಕಾಮಗಾರಿ ವೀಕ್ಷಣೆ ಮಾಡಿದ ಶಾಸಕ ಬಾದರ್ಲಿ

ಸಿಂಧನೂರು: ತಾಲೂಕಿನ ಸುಕ್ಷೇತ್ರ ಸಿದ್ಧಪರ್ವತ ಅಂಬಾದೇವಿ ನೂತನ ದೇವಸ್ಥಾನ ನಿರ್ಮಾಣ ಕಾರ್ಯ ಹಾಗೂ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸೇರಿದಂತೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾಮಗಾರಿಗಳನ್ನು ಶಾಸಕ ಹಂಪನಗೌಡ ಬಾದರ್ಲಿ ವೀಕ್ಷಣೆ ಮಾಡಿದರು.

ಇನ್ನೂ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕರು ತಮ್ಮ ಹಿರಿಯ ವಯಸ್ಸಿನಲ್ಲಿ ತಾಲ್ಲೂಕಿನ ವಿವಿಧ ಕಡೆ ನಡೆದ ಕಾಮಗಾರಿಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಆದಷ್ಟು ಬೇಗನೆ ಗುಣಮಟ್ಟದ ಕಾಮಗಾರಿಗಳುನ್ನು ಮುಗಿಸುವಂತೆ ತಾಕಿತು ಮಾಡಿದರು.ಕ್ಷೇತ್ರದ ಧಾರ್ಮಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ ನಮ್ಮ ಗುರಿ, ಅಂಬಾದೇವಿ ದೇವಸ್ಥಾನದ ನೂತನ ಕಾರ್ಯ ಹಾಗೂ ಕಾಲೇಜು ಕಟ್ಟಡದ ಕಾಮಗಾರಿಗಳು ಸುಗಮವಾಗಿ ನಡೆಯುತ್ತಿದ್ದು, ಆದಷ್ಟು ಬೇಗ ಇವು ಸಾರ್ವಜನಿಕರ ಸೇವೆಗೆ ಲಭ್ಯವಾಗಲಿವೆ ಎಂದರು. ತಹಶೀಲ್ದಾರ್ ಅರುಣ ಎಚ್.ದೇಸಾಯಿ, ತಾಪಂ ಇಒ ಚಂದ್ರಶೇಖರ್, ಸಿಡಿಪಿಒ ಲಿಂಗನಗೌಡ, ಅಂಬಾಮಠ ದೇವಸ್ಥಾನದ ಸಮಿತಿಯ ತಾಲೂಕು ಅಧ್ಯಕ್ಷ ರಂಗನಗೌಡ ಗೊರಬಾಳ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಪಕ್ಷದ ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

ರಕ್ತದೊತ್ತಡ ತಪಾಸಣಾ ಉಚಿತ ಶಿಬಿರ



ರಾಯಚೂರು: ವಿಶ್ವ ರಕ್ತದೊತ್ತಡ ದಿನದ ಅಂಗವಾಗಿ ನಗರದ ವಿ.ಜಿ.ಕುಲಕರ್ಣಿ ಆಸ್ಪತ್ರೆ ವತಿಯಿಂದ ಮೇ 17ರಂದು ಉಚಿತ ಹೃದಯ ರೋಗ ಹಾಗೂ ರಕ್ತದೊತ್ತಡ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ ಎಂದು ಖ್ಯಾತ ಹೃದಯ ರೋಗ ತಜ್ಞ ಡಾ.ಅಜಿತ್ ಕುಲಕರ್ಣಿ ತಿಳಿಸಿದರು.ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಿಬಿರವನ್ನು ನಗರದ ವಿಜಯ್ ಪಾಲಿಕ್ಲಿನಿಕ್ ಮತ್ತು ನರ್ಸಿಂಗ್ ಹೋಮ್ ಆಸ್ಪತ್ರೆಯಲ್ಲಿ ಮೇ 17ರ ಬೆ.9 ರಿಂದ 12.30 ರವರೆಗೆ ಸಾರ್ವಜನಿಕರಲ್ಲಿ ರಕ್ತದೊತ್ತಡ ಹಾಗೂ ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ತಪಾಸಣೆಯನ್ನು ಮಾಡಲಾಗುವುದು ಎಂದರು. ಶಿಬಿರದಲ್ಲಿ ಸಾರ್ವಜನಿಕರಿಗೆ ವಿವಿಧ ಉಚಿತ ಆರೋಗ್ಯ ತಪಾಸಣೆ ಹಾಗೂ–ವೈದ್ಯಕೀಯ ಸಲಹೆಯನ್ನು ನೀಡಲಾಗುವುದು. ಅವುಗಳಲ್ಲಿ ಇಸಿಜಿ ಮತ್ತು ರಕ್ತದೊತ್ತಡ ತಪಾಸಣೆ, ಜಿ.ಆರ್.ಬಿ.ಎಸ್ ಹಾಗೂ ಲಿಪಿಡ್ ಪ್ರೊಫೈಲ್ ಪರೀಕ್ಷೆ, ಎಚ್‌ಬಿಎಒನ್‌ಸಿ ಪರೀಕ್ಷೆ ಸೇರಿದಂತೆ ಹೃದಯ ರೋಗ ತಜ್ಞರಿಂದ ಉಚಿತ ಸಮಾಲೋಚನೆ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.ರಾಯಚೂರು ಹಾಗೂ ಸುತ್ತಮುತ್ತಲಿನ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಅಂಬರೇಶ, ಮಹೇಶ ಇದ್ದರು.

ಪ್ರವೇಶಕ್ಕೆ ಅರ್ಜಿ ಆಹ್ವಾನ

ಕೂಡ್ಲಿಗಿ: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2026–27ನೇ ಸಾಲಿಗೆ ಕೂಡ್ಲಿಗಿ ತಾಲ್ಲೂಕು ವ್ಯಾಪ್ತಿಯಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಪಡೆಯಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದಾಗಿದೆ.ಜು.31 ಅರ್ಜಿ ಸಲ್ಲಿಸಲು ಕೊನೆಯ ದಿನ ಅರ್ಜಿ ಸಲ್ಲಿಸುವ ವಿಧಾನಆಸಕ್ತ ವಿದ್ಯಾರ್ಥಿಗಳು ಇಲಾಖೆಯ ಅಧಿಕೃತ ವೆಬ್‌ಸೈಟ್ www.sw.kar.nic.in ಅಥವಾ https://swd-hmis.karnataka.gov.in ಮೂಲಕ ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.

ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

ಹಗರಿಬೊಮ್ಮನಹಳ್ಳಿ: ತಾಲೂಕು ವ್ಯಾಪ್ತಿಯ ಡಾ.ಬಿ.ಆರ್.ಅಂಬೇಡ್ಕರ್ ವಸತಿ ನಿಲಯ 2026–27ನೇ ಸಾಲಿನ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರೆ ಹಿಂದುಳಿದ ವರ್ಗದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಅರ್ಜಿ ಆಹ್ವಾನಿಸಲಾಗಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳುಜೂ.30ರೊಳಗಾಗಿ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಜು.31ರ ಒಳಗಾಗಿ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಸಿಂಧನೂರು: ತಾಲೂಕಿನ ಸುಕ್ಷೇತ್ರ ಸಿದ್ಧಪರ್ವತ ಅಂಬಾದೇವಿ ನೂತನ ದೇವಸ್ಥಾನ ನಿರ್ಮಾಣ ಕಾರ್ಯ ಹಾಗೂ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸೇರಿದಂತೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾಮಗಾರಿಗಳನ್ನು ಶಾಸಕ ಹಂಪನಗೌಡ ಬಾದರ್ಲಿ ವೀಕ್ಷಣೆ ಮಾಡಿದರು.

ಕರ್ತವ್ಯದಿಂದ ಬಿಡುಗಡೆ ಆದೇಶ: ವಿರೋಧ

ಸಿಂಧನೂರು: ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಮೇ 15ರಿಂದ ಜಾರಿಗೆ ಬರುವಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಲು ರಾಜ್ಯ ಸರ್ಕಾರ, ಕಾಲೇಜು ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ನಿರ್ಧಾರ ಕೈಗೊಂಡಿರುವುದನ್ನು ಅತಿಥಿ ಉಪನ್ಯಾಸಕರ ಸಂಘ ವಿರೋಧಿಸಿದ್ದು, ಈ ಕೂಡಲೇ ನಿರ್ಧಾರವನ್ನು ವಾಪಸ್ ಪಡೆಯಬೇಕು. ಇಲ್ಲದೇ ಹೋದರೆ ಹೋರಾಟ ಕೈಗೊಳ್ಳುವುದಾಗಿ ಎಚ್ಚರಿಸಿದೆ.

2025–26ನೇ ಸಾಲಿನ ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ಡಿ.9ರಿಂದ ಕರ್ತವ್ಯ ದಲ್ಲಿರುವ ಉಪನ್ಯಾಸಕರನ್ನು ಏಕಾಏಕಿ ಬಿಡುಗಡೆಗೊಳಿಸುತ್ತಿರುವುದು ಅಮಾನವೀಯ ಮತ್ತು ಅವೈಜ್ಞಾನಿಕ ಕ್ರಮವಾಗಿದೆ. ಸರ್ಕಾರ ಮತ್ತು ಇಲಾಖೆಯ ಆದೇಶ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಉಪನ್ಯಾಸಕರ ಸಂಘ ಆಕ್ರೋಶ ವ್ಯಕ್ತಪಡಿಸಿದೆ.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ಪ್ರಾಚಾರ್ಯ ಮಹಾಂತಪ್ಪ ಕೊಡಗಲಿ ಅವರ ಮೂಲಕ ಗುರುವಾರ ಸರ್ಕಾರ, ಕಾಲೇಜು ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಮನವಿ ರವಾನಿಸಲಾಯಿತು. ಸಂಘದ ಗೌರವಾಧ್ಯಕ್ಷ ಡಾ.ಮುದುಕಪ್ಪ, ಅಧ್ಯಕ್ಷ ಡಾ.ಮದಗಪ್ಪ, ಕಾರ್ಯಾಧ್ಯಕ್ಷ ಶಂಕರ ವಾಲೇಕಾರ, ಕಾರ್ಯದರ್ಶಿ ಡಾ.ಬಸವರಾಜ ಬಳಿಗಾರ, ವೀರೇಶ ಕನ್ನಾರಿ ಹಾಗೂ ಸಂಘದ ಎಲ್ಲಾ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.



ಸಿಂಧನೂರು: ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಮೇ 15ರಿಂದ ಜಾರಿಗೆ ಬರುವಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಲು ರಾಜ್ಯ ಸರ್ಕಾರ, ಕಾಲೇಜು ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ನಿರ್ಧಾರ ಕೈಗೊಂಡಿರುವುದನ್ನು ಅತಿಥಿ ಉಪನ್ಯಾಸಕರ ಸಂಘ ವಿರೋಧಿ ವ್ಯಕ್ತಪಡಿಸಿದೆ.

ಶರಣಬಸವ ವಿಶ್ವ ವಿದ್ಯಾಲಯದಲ್ಲಿ ಜ್ಞಾನೋತ್ಸವ ಕಲರವ

ಉದ್ಯೋಗಗಳ ಸೃಷ್ಟಿಯ ಕನಸು ಕಾಣಿ

ಕಲಬುರಗಿ: ವಿದ್ಯಾರ್ಥಿಗಳೇ ನೀವು ನಿಮ್ಮ ವೈಯಕ್ತಿಕ ಉನ್ನತಿಗಾಗಿ ಅಧ್ಯಯನ ಮಾಡಬೇಡಿ. ನಿಮ್ಮ ಅಧ್ಯಯನ ನಿಮ್ಮ ಕುಟುಂಬ, ಸಮಾಜಕ್ಕಾಗಿ ಸೀಮಿತವಾಗದೇ, ದೇಶಕ್ಕೆ ಸಹಾಯವಾಗಬೇಕು ಜೊತೆಗೆ ಉದ್ಯೋಗದ ಆಕಾಂಕ್ಷಿಯಾಗುವ ಬದಲು, ಉದ್ಯೋಗ ಸೃಷ್ಟಿ ಮಾಡುವ ಕನಸು ಕಾಣಿ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಕರೆ ನೀಡಿದರು.

ನಗರದ ಶರಣಬಸವ ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರದಂದು ಎರಡು ದಿನಗಳ ಜ್ಞಾನೋತ್ಸವ–2026ರಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಈ ಉತ್ಸವವು ನಿಮ್ಮನ್ನು ಒಳ್ಳೆಯ ವಿದ್ಯಾರ್ಥಿಗಳನ್ನಾಗಿ ಬೆಳೆಯಲು ಪ್ರೇರೇಪಿಸುತ್ತದೆ. ಶರಣಬಸವ ವಿಶ್ವವಿದ್ಯಾಲಯದಲ್ಲಿ ಆರಂಭಗೊಂಡ ಜ್ಞಾನೋತ್ಸವ–2026 ಸಾಂಸ್ಕೃತಿಕ ಉತ್ಸವವು ವಿದ್ಯಾರ್ಥಿಗಳಿಗೆ ಸ್ಫೂರ್ತಿ ಸ್ನೇಹ ಮತ್ತು ಒಗ್ಗಟ್ಟನ್ನು ಹೆಚಿಸುವಂತಹ ಕಾರ್ಯಕ್ರಮ ಪರಸ್ಪರ ಸೌಹಾರ್ದತೆಯ ಪ್ರತೀಕ ಎಂದರು.

ಕಲೆ, ವಿಜ್ಞಾನ, ವಾಣಿಜ್ಯ ಯಾವುದೇ ಕ್ಷೇತ್ರದಲ್ಲಿ ಉತ್ತಮ ಉದ್ಯೋಗ ನಿಮ್ಮದಾಗಿಸಿಕೊಳ್ಳಲು ನೀವು ಅಸಾಧಾರಣ ದೃಷ್ಟಿ ಹೊಂದಿರಬೇಕು. ನಿಮ್ಮ ಸಾಮರ್ಥ್ಯ ಅಧ್ಯಯನದಲ್ಲಿ ತೋರಿಸಿ. ಯಾವಾಗಲೂ ಕನಸುಗಳನ್ನು ನನಸಾಗಿಸಲು ಪ್ರಯತ್ನಪಡಬೇಕು. ಇಲ್ಲಿ ನಾವೀನ್ಯತೆ ಹಾಗೂ ಮಾರ್ಕೆಟಿಂಗ್ ಬಗ್ಗೆ ಅನೇಕ ಮಳಿಗೆಗಳನ್ನು ಇರಿಸಲಾಗಿದೆ. ಇದರಿಂದ ಅನೇಕ ವಿಷಯಗಳು ಕಲಿಯಲು ಸಾಧ್ಯವಾಗುತ್ತದೆ. ಯಾವಾಗಲೂ ವಿಶಾಲವಾಗಿ ಯೋಚಿಸಿ ಎಂದು ಪೊಲೀಸ್ ಆಯುಕ್ತರು ತಿಳಿಸಿದರು.

ಶರಣಬಸವೇಶ್ವರ ಸಂಸ್ಥಾನದ 9ನೇ ಮಹಾದಾಸೋಹ ಪೀಠಾಧಿಪತಿ ದೊಡ್ಡಪ್ಪ ಅಪ್ಪಾಜಿ ಜ್ಞಾನೋತ್ಸವ–2026 ಟೆಕ್ನೊ ಕಲ್ಚರಲ್ ಫೆಸ್ಟ್ ಕಾರ್ಯಕ್ರಮ ಉದ್ಘಾಟಿಸಿದರು.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಮಾತೋಶ್ರೀ ಡಾ.ದಾಕ್ಷಾಯಿಣಿ ಅವ್ವಾಜಿಯವರ ಘನ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನೆರವೇರಿತು.



ಮಳಿಗೆಗಳ ಉದ್ಘಾಟನೆ ಈ ಜ್ಞಾನೋತ್ಸವ–2026 ಟೆಕ್ನೊ ಕಲ್ಚರಲ್ ಫೆಸ್ಟ್ ಕಾರ್ಯಕ್ರಮದಲ್ಲಿ ವಿವಿಯ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಅನೇಕ ಮಳಿಗೆಗಳನ್ನು ಸ್ಥಾಪಿಸಿದ್ದರು. ಈ ಮಳಿಗೆಗಳನ್ನು ಶರಣಬಸವೇಶ್ವರ ಸಂಸ್ಥಾನದ 9ನೇ ಮಹಾದಾಸೋಹ ಪೀಠಾಧಿಪತಿ ದೊಡ್ಡಪ್ಪ ಅಪ್ಪಾಜಿಯವರ ಉದ್ಘಾಟಿಸಿದರು.

> ವಿದ್ಯಾರ್ಥಿಗಳು ಕೇವಲ ನೌಕರರಾಗದೆ, ಉದ್ಯೋಗದಾತರಾಗಿ ದೇಶಕ್ಕೆ ಕೊಡುಗೆ ನೀಡಬೇಕು. ಜ್ಞಾನ ಮತ್ತು ಸಂಸ್ಕೃತಿಯ ಪ್ರಚಾರಕರಾಗಿ ಸಮಾಜದಲ್ಲಿ ಬೆಳೆಯುವಂತೆ ಭವಿಷ್ಯದ ನಾಗರಿಕರನ್ನು ನಮ್ಮ ವಿಶ್ವವಿದ್ಯಾಲಯ ರೂಪಿಸುತ್ತಿದೆ. ಪ್ರಾಯೋಗಿಕವಾಗಿ ಉದ್ಯಮಶೀಲತೆಯ ಕೌಶಲ್ಯ ಬೆಳೆಸಲು ಈ ಜ್ಞಾನೋತ್ಸವ ವೇದಿಕೆಯಾಗಿದೆ.
> ■ ಡಾ.ದಾಕ್ಷಾಯಿಣಿ ಎಸ್.ಅಪ್ಪಾ, ಕುಲಾಧಿಪತಿ ಶರಣಬಸವ ವಿವಿ

> ಲಿಂಗೈಕ್ಯ ಅಪ್ಪಾಜಿಯವರ ಶೈಕ್ಷಣಿಕ ದಿಕ್ಸೂಚಿಯಂತೆ ನಾವು ಹೆಜ್ಜೆ ಇಡುತ್ತಿದ್ದೇವೆ. ವಿದ್ಯಾರ್ಥಿಗಳನ್ನು ತಾಂತ್ರಿಕವಾಗಿ ಸಿದ್ಧಪಡಿಸಿ, ಶಿಕ್ಷಣ ಜೊತೆಗೆ ಜೀವನದ ಮೌಲ್ಯ ಕಲಿಸಿ ಅವರ ಭವಿಷ್ಯ ರೂಪಿಸುವುದು ನಮ್ಮ ಗುರಿ. ಈ ನಿಟ್ಟಿನಲ್ಲಿ ಜ್ಞಾನೋತ್ಸವ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶಕವಾಗಲಿವೆ.
> ■ ಬಸವರಾಜ್ ದೇಶಮುಖ, ಕಾರ್ಯದರ್ಶಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ

ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ನಿರ್ದೇಶಕ ಪ್ರೊ.ವಿ.ಡಿ.ಮೈತ್ರಿ, ಕುಲಸಚಿವ (ಮೌಲ್ಯಮಾಪನ) ಡಾ.ಎಸ್.ಎಚ್.ಹೊನ್ನಳ್ಳಿ, ಡೀನ್ ಡಾ.ಶಿವಕುಮಾರ ಜವಳಿಗಿ, ಹಣಕಾಸು ಅಧಿಕಾರಿ ಡಾ.ಕಿರಣ ಮಾಕಾ ವೇದಿಕೆ ಮೇಲಿದ್ದರು. ವಿವಿಯ ಎಲ್ಲಾ ವಿಭಾಗಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಜ್ಞಾನೋತ್ಸವ–2026 ಟೆಕ್ನೊ ಕಲ್ಚರಲ್ ಫೆಸ್ಟ್ ಕಾರ್ಯಕ್ರಮದಲ್ಲಿ ಎಲ್ಲಾ ಅತಿಥಿ ಗಣ್ಯರನ್ನು ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ಲಕ್ಷ್ಮೀ ಪಾಟೀಲ ಮಾಕಾ ಸ್ವಾಗತಿಸಿದರು. ಪ್ರೊ.ಶೃತಿ ಹಾಗೂ ಪ್ರೊ.ಚೇತನಾ ನಿರೂಪಿಸಿದರು.

ವಿದ್ಯಾರ್ಥಿಗಳಿಗೆ ಪದವಿ ಕಾಲೇಜು ದಾರಿದೀಪ

ಯಲಬುರ್ಗಾ: ಇಡೀ ಜಿಲ್ಲೆಯಲ್ಲೇ ಪದವಿ ಕಾಲೇಜಿನಲ್ಲಿ ಗುಣಮಟ್ಟ ಶಿಕ್ಷಣ ನೀಡುವ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ ಎಂದು ಸ್ಥಳೀಯ ಪದವಿ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಸುಧೀರ ಕೊರ್ಲಳ್ಳಿ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ (ನ್ಯಾಕ್ ಬಿ ಗ್ರೇಟ್ ಮಾನ್ಯತೆಯನ್ನು ಪಡೆದಿದೆ) 2025–26ನೇ ಶೈಕ್ಷಣಿಕ ಸಾಲಿನ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಕಾಲೇಜು ನ್ಯಾಕ್ ಬಿ ಗ್ರೇಟ್ ಮಾನ್ಯತೆಯನ್ನು ಪಡೆದುಕೊಳ್ಳುವ ಮೂಲಕ ಇಡೀ ಜಿಲ್ಲೆಯಲ್ಲೇ ಗುಣಮಟ್ಟ ಶಿಕ್ಷಣ ನೀಡುವ ಜತೆಗೆ ಪ್ರತಿವರ್ಷ ಉತ್ತಮ ಫಲಿತಾಂಶದಿಂದ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ ಎಂದರು.

ಕೇವಲ ಪದವಿ ಪಡೆದುಕೊಳ್ಳುವದಕ್ಕಾಗಿ ಓದಿದರೆ ಸಾಲದು, ಅತಿಹೆಚ್ಚು ಅಂಕಗಳನ್ನು ಪಡೆದುಕೊಂಡು ಜೀವನದಲ್ಲಿ ಏನನ್ನಾದರೂ ಸಾಧಿಸುವ ಛಲದಿಂದ ಗುರಿಯಿಟ್ಟುಕೊಂಡು ಮುಂದೆ ಸಾಗಬೇಕು. ಅದುವೇ ನಿಜವಾದ ಜೀವನವಾಗುತ್ತದೆ ಎಂದು ಹೇಳಿದರು.

ಆರ್‌ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ಶೇಖರಗೌಡ ಉಳ್ಳಾಗಡ್ಡಿ ಮಾತನಾಡಿ, ವಿದ್ಯಾರ್ಥಿಗಳು ಪದವಿ ಹಂತದಲ್ಲಿ ಸಮಯ ವ್ಯರ್ಥ ಮಾಡಿಕೊಳ್ಳದೆ ನಿರಂತರ ಅಭ್ಯಾಸದಿಂದ ನಮ್ಮ ಮುಂದಿನ ಭವಿಷ್ಯಕ್ಕೆ ಭದ್ರ ಬುನಾದಿ ಕಟ್ಟಿಕೊಳ್ಳಲು ಹೆಚ್ಚು ಸಹಕಾರಿಯಾಗುತ್ತದೆ ಎಂದರು.

ನಿವೃತ್ತ ಡಿಡಿಪಿಐ ಶಂಕ್ರಪ್ಪ ಗಾಂಜಿ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಕೆ.ಎಚ್. ಛತ್ರದ ಸಭೆ ಅಧ್ಯಕ್ಷತೆ ವಹಿಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ಹೊಸ ಜೀವನದ ಅಧ್ಯಾಯ ಸುಖಮಯವಾಗಿರಲೆಂದರು.

ಗದಗ ಅಂತಾರಾಷ್ಟ್ರೀಯ ಜನಪದ ಕಲಾವಿದ ಗವಿಸಿದ್ದಯ್ಯ ಹಳ್ಳಿಕೇರಿಮಠ ಉಪನ್ಯಾಸ ನೀಡಿದರು. ಉಪನ್ಯಾಸಕರಾದ ವೀರೇಶ ಗಡಾದ, ಇಬ್ರಾಹಿಂ ಅವರನ್ನು ಸನ್ಮಾನಿಸಲಾಯಿತು. ಅತಿಥಿಗಳಾಗಿ ಕಾಲೇಜ ಉಪನ್ಯಾಸ ಎ.ಬಿ.ಕೆಂಚರಡ್ಡಿ, ಕಾಲೇಜು ಅಭಿವೃದ್ಧಿ ಸಮಿತಿಯ ಸರ್ವ ಸದಸ್ಯರು, ಕಾಲೇಜು ಸಿಬ್ಬಂದಿ ಇದ್ದರು.



ಕಸಾಪ ಕಟ್ಟಿದ ಮಹನೀಯರನ್ನು ಸ್ಮರಿಸಿ

ಕುಷ್ಟಗಿ: ಕನ್ನಡ ಸಾಹಿತ್ಯ ಪರಿಷತ್ ಅನ್ನು ಕಟ್ಟಿದ ಎಲ್ಲ ಮಹನೀಯರನ್ನು ಸ್ಮರಿಸಬೇಕು. ಅವರ ಕಾರ್ಯ ಶ್ಲಾಘನೀಯ ಎಂದು ಬಳ್ಳಾರಿ ವಿಭಾಗದ ಸರ್ಕಾರಿ ಅಭಿಯೋಜಕ ಬಿ.ಎಸ್ .ಪಾಟೀಲ ಹೇಳಿದರು.

ಪಟ್ಟಣದ ಬಸವ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕೊಪ್ಪಳ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಘಟಕದ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 112ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ನಾಡಿನ ಮೇರು ಪ್ರತಿಭೆ ಈ ಸಂಸ್ಥೆಯಾಗಿದೆ. ನಮ್ಮ ಸಂಸ್ಕೃತಿಕ ಪ್ರತೀಕವಾಗಿದೆ. ಕನ್ನಡವು ವಿಶ್ವ ಮಟ್ಟಕ್ಕೆ ತಲುಪುವಂತೆ ಮಾಡಿದ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ. ಇದು ಮಾತೃ ಸಂಸ್ಥೆಯಾಗಿದ್ದು, ನಮ್ಮ ಕನ್ನಡ ನೆಲ. ಜಲದ ಅಸ್ಮಿತೆಯನ್ನು ಎತ್ತಿ ಹಿಡಿಯುವಂತ ಕೆಲಸ ಮಾಡುತ್ತಾ ಬಂದಿದೆ ಎಂದರು.

ರವೀಂದ್ರ, ಬಾಕಳೆ ಪ್ರಾಸ್ತಾವಿಕವಾಗಿ ಮಾತನಾಡಿ, 112ವರ್ಷ ಗತಿಸಿದ ಸಂಸ್ಥೆ ಇದು ಕಸಾಪ ಸಂಸ್ಥೆ, ಕನ್ನಡ ಪರ ಹೋರಾಟಕ್ಕೆ ಮಾಡಿದ , ಸಾಹಿತ್ಯ ಸಂಗೀತ, ನಾಡಿನಾದ್ಯಂತ ಸಾಹಿತ್ಯ ಸೇವೆ ಮಾಡಿದ ಕೀರ್ತಿ ಇದಕ್ಕೆ ಸಲ್ಲುತ್ತದೆ ಎಂದರು.

ಕಸಾಪ ತಾಲುಕಾ ಅಧ್ಯಕ್ಷ ಲೆಂಕಪ್ಪ ವಾಲಿಕಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶರಣಪ್ಪ ತೆಮ್ಮಿನಾಳ ಅವರು ವಿಶೇಷ ಉಪನ್ಯಾಸ ನೀಡಿದರು. ಹಿರಿಯ ವಕೀಲರಾದ ಫಕೀರಪ್ಪ ಚಳಗೇರಿ ಕನ್ನಡ ಮಾತೆ ಭುವನೇಶ್ವರಿ ದೇವಿಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ನಂತರ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಶರಣಪ್ಪ ತೆಮ್ಮಿನಾಳ, ಹ.ಯ.ಈಟಿಯವರ್, ಎಸ್.ಜಿ.ಕಡೆಮನಿ, ಮಹಿಳಾ ಪ್ರತಿನಿಧಿ ಶೈಲಜಾ ಬಾಗಲಿ, ಅಬ್ದುಲ್ ಕರಿಂ ವಂಟೆಳ್ಳಿ, ಪವಾಡೆಪ್ಪ ಚೌಡ್ಕಿ, ಪರಶುರಾಮ ಬಂಡಿ, ನಿಂಗಪ್ಪ ಸಜ್ಜನ್ ಇತರರಿದ್ದರು. ಎಸ್.ಎಸ್.ಹಿರೇಮಠ ಪ್ರಾರ್ಥಿಸಿದರು. ಶುಖಮುನಿ ಗಡಗಿ ಸಂಗಡಿಗರಿಂದ ಸಾಂಸ್ಕೃತಿಕ ಜರುಗಿದವು. ವಿ.ಎಸ್.ಕಾಡಗಿಮಠ ಸ್ವಾಗತಿಸಿದರು. ಶರಣಪ್ಪ ಲೈನದ್ ನಿರ್ವಹಿಸಿದರು. ಮಹೇಶ ಹಡಪದ ವಂದಿಸಿದರು.



ಬೆಂಬಲ ಬೆಲೆಯಡಿ ಸೂರ್ಯಕಾಂತಿ ಖರೀದಿಗೆ ಸಭೆಯಲ್ಲಿ ನಿರ್ಧಾರ

ಕಲಬುರಗಿ: ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ 2025–26ನೇ ಸಾಲಿನಲ್ಲಿ ಹಿಂಗಾರು ಹಂಗಾಮಿನಲ್ಲಿ ಬೆಳೆದಿರುವ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಖರೀದಿಗೆ ಜಿಲ್ಲಾಧಿಕಾರಿ ಇಕ್ರಮ ಶರೀಫ್ ನೇತೃತ್ವದಲ್ಲಿ ಶುಕ್ರವಾರ ನಡೆದ ಜಿಲ್ಲಾ ಟಾಸ್ಕ್ ಪೋರ್ಸ್ ಸಭೆಯಲ್ಲಿ ನಿರ್ಧರಿಸಿದೆ.

ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಪ್ರತಿ ಕ್ವಿಂಟಾಲಗೆ 7,721 ರೂ. ದರ ನಿಗದಿ ಮಾಡಿದ್ದು, ಪ್ರತಿ ಎಕರೆಗೆ 4 ಕ್ವಿಂಟಲ್ ನಂತೆ ಹಾಗೂ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಲ್ ವರೆಗೆ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿಯನ್ನು ಜಿಲ್ಲೆಯ ಪ್ರತಿ ತಾಲೂಕಿಗೆ ಒಂದರಂತೆ ಒಟ್ಟು 11 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ ಪ್ರಕ್ರಿಯೆಯನ್ನು ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ರಾಜ್ಯ ಸರ್ಕಾರದ ನಿರ್ದೇಶನದಂತೆ ಕಲಬುರಗಿ ಜಿಲ್ಲೆಯಾದ್ಯಂತ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಖರೀದಿಗೆ ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿಯಮಿತ ಸಂಸ್ಥೆಯನ್ನು ರಾಜ್ಯ ಖರೀದಿ ಸಂಸ್ಥೆಯನ್ನಾಗಿ ನೇಮಿಸಲಾಗಿದ್ದು, ನೋಂದಣಿ ಕಾರ್ಯ ಜೂ.26ರ ವರೆಗೆ ಹಾಗೂ ಖರೀದಿ ಪ್ರಕ್ರಿಯೆಯು ಜು.6ರವರೆಗೆ ನಡೆಯಲಿದೆ. ಪ್ರತಿಯೊಂದು ಖರೀದಿ ಕೇಂದ್ರಗಳಲ್ಲಿ ರೈತರ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ಗುಐಆಂಖ ಬಯೋಮೆಟ್ರಿಕ್ ಪಡೆಯುವುದು ಕಡ್ಡಾಯವಾಗಿರುತ್ತದೆ. ರೈತರಿಂದ ಖರೀದಿಸಿದ ಉತ್ಪನ್ನದ ಮೌಲ್ಯವನ್ನು ಡಿಬಿಟಿ ಪೋರ್ಟಲ್ ಮೂಲಕ ರೈತರ ಬ್ಯಾಂಕ್ ಖಾತೆಗೆ ಹಣ ಪಾವತಿಸಲಾಗುವುದು.

ಜಿಲ್ಲೆಯ ರೈತ ಭಾಂದವರು ತಮ್ಮ ಸಮೀಪದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಹಿಂಗಾರು ಹಂಗಾಮಿನಲ್ಲಿ ತಾವು ಬೆಳೆದ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿಯನ್ನು ನಿಗದಿತ ಅವಧಿಯಲ್ಲಿ ಮಾರಾಟಕ್ಕೆ ನೊಂದಾಯಿಸಿಕೊಂಡು ಮಾರಾಟ ಮಾಡಲು ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಕರ್ನಾಟಕ ಸರ್ಕಾರ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿಯಮಿತ ಸಂಸ್ಥೆ– 9591812142 ಸಂಪರ್ಕಿಸಲು ಕೋರಿದೆ.

ಎನ್‌ಟಿಎ ರದ್ದತಿಗೆ ಆಗ್ರಹಿಸಿ ಪ್ರತಿಭಟನೆ

ಕೊಪ್ಪಳ: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆ ಪರೀಕ್ಷೆ ನಡೆಸುವ ಜವಾಬ್ದಾರಿ ಹೊತ್ತಿದ್ದ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ (ಎನ್ ಟಿಎ) ರದ್ದು ಮಾಡಬೇಕು ಎಂದು ಆಗ್ರಹಿಸಿ, ನಗರದ ಕೇಂದ್ರಿಯ ಬಸ್ ನಿಲ್ದಾಣದ ಮುಂದೆ ಎಐಡಿಎಸ್‌ಒ ಸಂಘಟನೆ ನೇತೃತ್ವದಲ್ಲಿ ವಿದ್ಯಾರ್ಥಿಗಳು ಶುಕ್ರವಾರ ಪ್ರತಿಭಟಿಸಿದರು.

ಕನಕದಾಸ ವೃತ್ತದಲ್ಲಿ ಜಮಾಯಿಸಿದ ನೂರಾರು ವಿದ್ಯಾರ್ಥಿಗಳು ಎನ್‌ಟಿಎ ವಿರುದ್ಧ ಘೋಷಣೆ ಕೂಗಿದರು. ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಹಿನ್ನೆಲೆ ನೀಟ್ ಪರೀಕ್ಷೆ ರದ್ದು ಮಾಡಲಾಗಿದೆ. ಇದರಿಂದ ದೇಶದ ಲಕ್ಷಾಂತರ ವಿದ್ಯಾರ್ಥಿಗಳು ಸಮಸ್ಯೆ ಎದುರಿಸುವಂತಾಗಿದೆ. ಈ ಹಿನ್ನೆಲೆ ಕೂಡಲೇ ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಕೂಡಲೇ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್ ಟಿಎ) ರದ್ದುಗೊಳಿಸಬೇಕು ಎಂದು ಆಗ್ರಹಿಸಿ/ಘೋಷಣೆ ಕೂಗಿದರು.

ಎಐಡಿಎಸ್‌ಒ ರಾಜ್ಯ ಮುಖಂಡ ತುಳಜರಾಮ್ ಎನ್.ಕೆ.ಮಾತನಾಡಿ, ಪದೇ ಪದೇ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಆಗುತ್ತಿದೆ. ಇದು ಕೇವಲ ಒಂದು ಪರೀಕ್ಷಾ ಸಂಸ್ಥೆಯ ವೈಫಲ್ಯ ಅಲ್ಲ, ಇದು ಲಕ್ಷಾಂತರ ಪ್ರಾಮಾಣಿಕ ವಿದ್ಯಾರ್ಥಿಗಳ ಕನಸಿನ ಮೇಲೆ ಎಸಗುತ್ತಿರುವ ಘೋರ ದೌರ್ಜನ್ಯ. ಕೇವಲ ಮೂರು ವರ್ಷದಲ್ಲಿ ಎರಡನೇ ಬಾರಿಗೆ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ. ಈ ಮೂಲಕ ವೈದ್ಯಕೀಯ ಶಿಕ್ಷಣ ಪಡೆಯುವ ಕನಸು ಹೊತ್ತವರ ಆಶೋತ್ತವರ ಆಶೋತ್ತರಗಳನ್ನು ಅತಿ ಹೆಚ್ಚು ಹಣ ನೀಡುವವರಿಗೆ ಹರಾಜು ಹಾಕಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಘಟನೆ ಜಿಲ್ಲಾ ಸಂಚಾಲಕ ಗಂಗರಾಜ ಅಳ್ಳಳ್ಳಿ ಮಾತನಾಡಿದರು. ಎಐಡಿಎಸ್‌ಒ ಜಿಲ್ಲಾ ಸಂಘಟನೆಕಾರ ರಾದಪ್ರದೀಪ,ಶಾರದ, ಪೋಷಕ ರಾದ ಸಿದ್ದಲಿಂಗರೆಡ್ಡಿ, ಶರಣು ಗಡ್ಡಿ, ವಿದ್ಯಾರ್ಥಿಗಳಾದ ಅಭಿಷೇಕ್, ಪಲ್ಲವಿ, ಪ್ರತಿಭಾ, ಸ್ಫೂರ್ತಿ, ಸ್ನೇಹ ಸೇರಿ ದಂತೆ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಬೇವಿನಹಳ್ಳಿ–ಸರ್ಕಾರಿ ಪ್ರೌಢಶಾಲೆಗೆ ಜಮೀನು ದಾನ

ಮುನಿರಾಬಾದ್: ಕಿರ್ಲೋಸ್ಕರ್ ಫೆರಸ್ ಇಂಡಸ್ಟ್ರೀಸ್ ಲಿಮಿಟೆಡ್ (ಕೆಎಫ್‌ಐಎಲ್) ಸಂಸ್ಥೆಯು ಸಮಾಜದ ಅಭಿವೃದ್ಧಿ ಹಾಗೂ ಶಿಕ್ಷಣಕ್ಕೆ ಪ್ರೋತ್ಸಾಹದ ಉದ್ದೇಶದಿಂದ ಬೇವಿನಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ವಿದ್ಯಾರ್ಥಿಗಳ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಅಭಿವೃದ್ಧಿಗಾಗಿ 1 ಎಕರೆ 30 ಗುಂಟೆ ಜಮೀನನ್ನು ಹಸ್ತಾಂತರಿಸಿದೆ.


ಈ ಜಮೀನನ್ನು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಶಿಕ್ಷಣದ ಮೂಲಸೌಕರ್ಯವನ್ನು ಬಲಪಡಿಸುವ ಉದ್ದೇಶದಿಂದ ನೀಡಲಾಗಿದೆ. ಈ ರೀತಿಯ ಕಾರ್ಯಕ್ರಮಗಳು ಗುಣಮಟ್ಟದ ಶಿಕ್ಷಣಕ್ಕೆ

ಸುಲಭ ಪ್ರವೇಶ ಕಲ್ಪಿಸುವಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಬೆಂಬಲ ನೀಡುವಲ್ಲಿ ಕೆಎಫ್‌ಐಎಲ್ ಸಂಸ್ಥೆಯು ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಬಿಂಬಿಸುತ್ತದೆ.ಈ ಸಂದರ್ಭದಲ್ಲಿ ಸರ್ಕಾರಿ ಪ್ರೌಢಶಾಲೆಯ ಆಡಳಿತ ಮಂಡಳಿ ಸದಸ್ಯರು, ಮಾನ್ಯ ಶಾಸಕರು, ಕೊಪ್ಪಳ, ಬೇವಿನಹಳ್ಳಿ ಗ್ರಾಮ

ಪಂಚಾಯತಿಯ ಸದಸ್ಯರು ಹಾಗೂ ಗ್ರಾಮದ ಹಿರಿಯರು ಮತ್ತು ಸ್ಥಳೀಯ ಪ್ರತಿನಿಧಿಗಳು, ಕೆಎಫ್‌ಐಎಲ್ ಸಂಸ್ಥೆಯ ಉದಾರ ಸಹಕಾರಕ್ಕೆ ಕೃತಜ್ಞತೆ ತಿಳಿಸಿರುತ್ತಾರೆ. ಈ ಜಮೀನನ್ನು ಶಾಲಾ ಮೂಲಸೌಕರ್ಯದ ಅಭಿವೃದ್ಧಿ, ಆಟದ ಮೈದಾನ ನಿರ್ಮಾಣ ಹಾಗೂ ಇತರ ಶೈಕ್ಷಣಿಕ ಉದ್ದೇಶಗಳಿಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುವುದು ಎಂದು ಅವರುತಿಳಿಸಿದ್ದಾರೆ. ಆದ್ದರಿಂದ ಇಂದಿನ ಹಾಗೂ ಭವಿಷ್ಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯೋಜನವಾಗಲಿದೆ.

ಮಾನವ ಸಂಪನ್ಮೂಲ ಉಪಾಧ್ಯಕ್ಷ ಶಿವಯ್ಯ ಬಿ.ಸ್ವಾಮಿ, ಸಂಪನ್ಮೂಲ ವಿಭಾಗ ಹಿರಿಯ ಪ್ರಧಾನ ವ್ಯವಸ್ಥಾಪಕ ಕಿರಣ್ ಶೇಜೆಕರ್, ಉಪಪ್ರಧಾನ ವ್ಯವಸ್ಥಾಪಕ ಶಶಿಕಾಂತ ಬಿರದಾರ, ಸಿಎಸ್‌ಆರ್ ವ್ಯವಸ್ಥಾಪಕ ಉದ್ಧವ್ ಕುಲಕರ್ಣಿ ಉಪಸ್ಥಿತರಿದ್ದರು.

ಗ್ರಾಮದ ಹಿರಿಯರಾದ ಬೀಮಣ್ಣ ಮೂಲಿಮನಿ, ಎಸ್.ಬಿ.ಬಸವರಾಜ, ಮಾರ್ಕಂಡಪ್ಪ ಅಜಗರ್, ಯಂಕನಗೌಡ ಪಾಟೀಲ್, ಮುದ್ದಪ್ಪ ಗೊಂದಿಹೊಸಳ್ಳಿ, ನಾಗರಾಜ ಬಿ, ಬಸವರಾಜ ಮಡ್ಡಿ, ಮಾರುತಿ ಬಿ, ಬಸವರಾಜ್ ಬಿ., ಪಂಪಣ್ಣ ಎಸ್., ಶಿವಮೂರ್ತಿ ಎಂ ಮತ್ತು ಉಪಸ್ಥಿತರಿದ್ದರು.



ಅಗ್ನಿಶಾಮಕ ಇಲಾಖೆ ಸಿಬ್ಬಂದಿಗೆ ಸನ್ಮಾನ

ಮಾನ್ವಿ: ಪಟ್ಟಣದ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿಯನ್ನು ಜಿಲ್ಲಾ ಪೊಲೀಸ್ ಅಧೀಕ್ಷಕ ಅರುಣಾಂಗ್ಷು ಗಿರಿ ಅವರು ಸನ್ಮಾನಿಸಿದರು.

ಜಿಲ್ಲೆಯ ಸಿಂಧನೂರು ನಗರದಲ್ಲಿ ಮೇ 3ರಂದು ವಿಧಾನಪರಿಷತ್ ಸದಸ್ಯ ಬಸವನಗೌಡ ಬಾದರ್ಲಿ ನೇತೃತ್ವದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಉಪಸ್ಥಿತಿಯಲ್ಲಿ ನಡೆದ ಸಾಮೂಹಿಕ ವಿವಾಹ ಹಾಗೂ ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮದ ವೇದಿಕೆ ಸ್ಥಳದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಉಂಟಾದ ಅಗ್ನಿ ಅವಘಡವನ್ನು ಕೇಲವೆ ಕ್ಷಣಗಳಲ್ಲಿ ಬೆಂಕಿಯನ್ನು ನಂದಿಸಿ ಸಾರ್ವಜನಿಕರಿಗೆ ಹಾಗೂ ಗಣ್ಯರಿಗೆ ಯಾವುದೆ ಹಾನಿಯುಂಟಾಗದಂತೆ ಉತ್ತಮವಾಗಿ ಕರ್ತ್ಯವ್ಯ ನಿರ್ವಹಿಸಿದ ಅಗ್ನಿಶಾಮಕ ಠಾಣೆಯ ಸಹಾಯಕ ಅಗ್ನಿ ಸುರಕ್ಷತಾ ಅಧಿಕಾರಿ ಖಾಜಹುಸೇನ್ ಹಾಗೂ ಸಿಬ್ಬಂದಿ ತಿರುಪತಿ, ರಾಜಸಾಬ್, ಮಂಜುನಾಥ, ನಾಗರಾಜ, ಅಮರಯ್ಯ, ಸಚೀನ್ ಅವರನ್ನು ಜಿಲ್ಲಾ ಪೊಲೀಸ್ ಇಲಾಖೆಯಿಂದ ಸನ್ಮಾನಿಸಲಾಯಿತು.



ಕುಲಪತಿ ಬಿ.ಕೆ.ರವಿಗೆ ಅಂಚೆ ಚೀಟಿ ಗೌರವ

ಕೊಪ್ಪಳ: ಇಲ್ಲಿನ ಕೊಪ್ಪಳ ವಿಶ್ವವಿದ್ಯಾಲಯದ ಮೊದಲ ಕುಲಪತಿ ಪ್ರೊ. ಬಿ.ಕೆ. ರವಿ ಗೌರವಾರ್ಥವಾಗಿ ಭಾರತೀಯ ಅಂಚೆ ಇಲಾಖೆಯಿಂದ 'ಮೈ ಸ್ಟಾಂಪ್' ಅಂಚೆ ಚೀಟಿ ಬಿಡುಗಡೆ ಮಾಡಲಾಯಿತು.

ಕೊಪ್ಪಳ ವಿವಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರೊ. ಅಲ್ಲಮಪ್ರಭು ಬೆಟ್ಟದೂರ, ಅಂಚೆ ಚೀಟಿ ಅನಾವರಣಗೊಳಿಸಿದರು.

ರಾಜ್ಯ ಚಲನಚಿತ್ರ ಅಕಾಡೆಮಿ ಸದಸ್ಯೆ ಸಾವಿತ್ರಿ ಮುಜುಮದಾರ ಮಾತನಾಡಿ, ಬಿ.ಕೆ. ರವಿ ಅವರ ಅಜ್ಜ ಅಂಚೆ ಪೇದೆಯಾಗಿದ್ದರು. ಅವರ ಸೇವೆಯ ಫಲ ಹಾಗೂ ಮೊಮ್ಮಗನ ಸಾಧನೆಗೆ ಈ ಗೌರವ ದೊರೆತಿದೆ ಎಂದು ಹೇಳಿದರು.

ಅಂಚೆ ಇಲಾಖೆ ಹಿರಿಯ ಅಧಿಕಾರಿ ಬಿ. ನಾಗರಾಜು ಮಾತನಾಡಿ, ವಿವಿಧ ಕ್ಷೇತ್ರದಲ್ಲಿಸಾಧನೆಮಾಡಿದಗಣ್ಯರನ್ನು ಗೌರವಿಸುವ ಉದ್ದೇಶದಿಂದ ಭಾರತೀಯ ಅಂಚೆ ಇಲಾಖೆ 'ಮೈ ಸ್ಟಾಂಪ್' ಸಿದ್ಧಪಡಿಸುತ್ತಿದೆ. ಬಿ.ಕೆ.ರವಿ ಅವರಂತಹ ಸಾಧಕರಿಗೆ ಈ ಗೌರವ ಲಭಿಸಿರುವುದು ಹೆಮ್ಮೆಯ ಸಂಗತಿ ಎಂದು ಅಭಿಪ್ರಾಯಪಟ್ಟರು.

ವಿಶೇಷ ಅಂಚೆ ಚೀಟಿ ಪ್ರಾಯೋಜಕರಾದ ಹಿರಿಯ ನಿವೃತ್ತ ಪೋಸ್ಟ್ ಮಾಸ್ಟರ್ ರವಿಕಾಂತ ಅವರು ಬಿ.ಕೆ.ರವಿ ಅವರನ್ನು ಸನ್ಮಾನಿಸಿ, ಅವರ ಭಾವಚಿತ್ರ ಹಾಗೂ ಮೈಸೂರು ಅರಮನೆಯ ಚಿತ್ರ ಹೊಂದಿರುವ ವಿಶೇಷ ಅಂಚೆ ಚೀಟಿ ಸಮರ್ಪಿಸಿದರು.

ವಿವಿ ಕುಲಪತಿ ಪ್ರೊ.ಎಸ್ .ವಿ.ಡಾಣಿ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ಪ್ರೊ.ರಮೇಶ ಕೆ., ಪ್ರೊ.ಓಂಕಾರಗೌಡ ಕಾಕಡೆ, ಧಾರವಾಡದ ಹಿರಿಯ ಪ್ರಾಧ್ಯಾಪಕ ಪ್ರೊ.ಚಂದೂನವರ್ ಸೇರಿ ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಇದ್ದರು.



ಕಿರುಸುದ್ದಿ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ

ವಿಜಯನಗರ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ಖಂಡಿಸಿ ಹಾಗೂ ಪರೀಕ್ಷೆಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ವಿರೋಧಿಸಿ ಎಐಡಿಎಸ್‌ಓ ಸಂಘಟನೆ ಶುಕ್ರವಾರ ಹೊಸಪೇಟೆ ತಾಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಯಿತು.

ಸಂಘಟನೆಯ ಜಿಲ್ಲಾ ಅಧ್ಯಕ್ಷ ರವಿಕಿರಣ್ ಜೆ.ಪಿ., ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಕೋಚಿಂಗ್ ಮಾಫಿಯಾದ ಕೈಗೊಂಬೆಯಾಗಿದೆ. ಮೇಲಿಂದ ಮೇಲೆ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಪ್ರಾಮಾಣಿಕ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಎನ್‌ಡಿಎ ಸಂಸ್ಥೆಯನ್ನು ಕೂಡಲೇ ವಜಾಗೊಳಿಸಬೇಕು. ಪತ್ರಿಕೆ ಸೋರಿಕೆ ಕುರಿತು ಉನ್ನತ ಮಟ್ಟದ ನ್ಯಾಯಾಂಗ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.

ಈ ಕುರಿತ ಮನವಿ ಪತ್ರವನ್ನು ಹೊಸಪೇಟೆ ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಸಲ್ಲಿಸಲಾಯಿತು.ಜಿಲ್ಲಾ ಕಾರ್ಯದರ್ಶಿ ಯು. ಉಮಾದೇವಿ, ಸಂಘಟನೆಯ ಪದಾಧಿಕಾರಿಗಳಾದ ಆಕಾಶ್, ಚಂದ್ರ ಹಾಗೂ ಅನೇಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಶಿಥಿಲಾವಸ್ಥೆಯಲ್ಲಿ ನೀರಿನ ಟ್ಯಾಂಕ್

ಸಿರುಗುಪ್ಪ: ನಗರದ ಹಳೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹಿಂದಿರುವ ಕುಡಿಯುವ ನೀರಿನ ಟ್ಯಾಂಕ್ ಶಿಥಿಲವಾಗಿದ್ದು, ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಅಪಾಯ ಎದುರಾಗುವ ಮುನ್ನ ದುರಸ್ತಿಗೊಳಿಸಬೇಕು ಎಂದು ಸುತ್ತಲಿನ ನಾಗರಿಕರು ಆಗ್ರಹಿಸಿದ್ದಾರೆ.



ಕಳೆದ ವರ್ಷಗಳಿಂದ ಈ ನೀರಿನ ಟ್ಯಾಂಕ್ ನಿರ್ಮಿಸಲಾಗಿದೆ. ಈ ಮೂಲಕವೇ ನಗರದ ನಾಗರಿಕರಿಗೆ ನೀರು ಒದಗಿಸುವ ಸೌಲಭ್ಯ ಕಲ್ಪಿಸಲಾಗಿತ್ತು. ಶಿಥಿಲಾವಸ್ಥೆ ತಲುಪಿದ ಹಿನ್ನೆಲೆ ಕಳೆದ 4-5 ವರ್ಷಗಳಿಂದ ನೀರು ಸಂಗ್ರಹ ಮಾಡುವುದನ್ನು ನಿಲ್ಲಿಸಲಾಗಿದೆ. ಟ್ಯಾಂಕ್‌ನ ಸಿಮೆಂಟು ಗಾರೆ ಉದುರಿ ಬೀಳುತ್ತಿದ್ದು, ಬೀಳುವ ಹಂತ ತಲುಪಿದೆ. ಕಬ್ಬಿಣದ ಸರಳುಗಳು ತುಕ್ಕು ಹಿಡಿದು ಸಂಪೂರ್ಣ ಹಾಳಾಗಿದೆ. ನೀರಿನ ಟ್ಯಾಂಕ್ ಸ್ಥಳ ಜನನಿಬಿಡಾದ ಸ್ಥಳವಾಗಿದ್ದು, ಅಪಾಯಕ್ಕೆ ಆಹ್ವಾನ ನೀಡುವ ಮುನ್ನವೇ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ನೀರಿನ ಟ್ಯಾಂಕ್ ತೆರವುಗೊಳಿಸಿ ಎದುರಾಗುವ ಅಪಾಯವನ್ನು ತಡೆಯಬೇಕು ಎಂದು ಸ್ಥಳೀಯರಾದ ವಿನಯ್ ಕಲ್ಮನೆ , ಶಂಭುಲಿಂಗ , ಸಿದ್ದಾರ್ಥ್ , ಚೇತನ್ ಕುಮಾರ್ ಎನ್ , ಗೋವಿಂದ್ ರಾಜ್ , ಹನುಮನ ಗೌಡ, ಮನೋಜ್ ಕುಮಾರ್ ಬಿ ಸಿ, ಅಂಬಿ ಮಿಠಾಯಿ ಆಗ್ರಹಿಸಿದ್ದಾರೆ.



ಗಾದಿಗನೂರು: ಗುರುವಾರ ರಾತ್ರಿ ಮಳೆ ಮತ್ತು ಬಿರುಗಾಳಿಗೆ ಕುಡಿಯುವ ನೀರಿನ ಘಟಕ ಸಂಪೂರ್ಣ ಹಾನಿಯಾಗಿದೆ. ಗಾದಿಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭುವನಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸಂಪೂರ್ಣ ಹಾನಿಯಾಗಿದೆ.

ನಿಧನ ಸುದ್ದಿ

ಜೈನರ ದೇವೇಂದ್ರಪ್ಪ

ಹೂವಿನಹಡಗಲಿ: ಪಟ್ಟಣದ ವಿಜಯನಗರ ಬಡಾವಣೆ ನಿವೃತ್ತ ವಿಜ್ಞಾನ ಶಿಕ್ಷಕ ಜೈನರ ದೇವೇಂದ್ರಪ್ಪ ಶುಕ್ರವಾರ ನಿಧನರಾಗಿದ್ದಾರೆ.



ಪತ್ನಿ, ಇಬ್ಬರು ಪುತ್ರ, ಪುತ್ರಿಯರು ಇದ್ದಾರೆ. ಶನಿವಾರ ಬೆಳಿಗ್ಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವಿಜಯನಗರ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ಖಂಡಿಸಿ ಹಾಗೂ ಪರೀಕ್ಷೆಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ವಿರೋಧಿಸಿ ಎಐಡಿಎಸ್‌ಓ ಸಂಘಟನೆ ಶುಕ್ರವಾರ ಹೊಸಪೇಟೆ ತಾಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಯಿತು.

ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಕುರುಗೋಡು: ಪಟ್ಟಣದ ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ಜಿ.ಮಂಜುನಾಥ ಉಪಾಧ್ಯಕ್ಷೆ ಸ್ಥಾನಕ್ಕೆ ನಾಗವೇಣಿ ಅವಿರೋಧ ಆಯ್ಕೆಯಾಗಿದ್ದಾರೆ. ಶುಕ್ರವಾರ ಪಟ್ಟಣದ ಪುರಸಭೆಯ ಕಚೇರಿಯಲ್ಲಿ ಕುರುಗೋಡು ತಹಶೀಲ್ದಾರ್ ನರಸಪ್ಪ ನೇತೃತ್ವದಲ್ಲಿ ನಡೆದ ಚುನಾವಣಾ ಪ್ರಕ್ರಿಯೆ ನಡೆಸಲಾಯಿತು.

ಇಲ್ಲಿನ ಪರಿಶಿಷ್ಟ ಜಾತಿ ಪುರುಷರಿಗೆ ಮೀಸಲಾದ ಅಧ್ಯಕ್ಷ ಸ್ಥಾನಕ್ಕೆ ಪುರಸಭೆಯ 1ನೇ ವಾರ್ಡ್‌ನ ಸದಸ್ಯೆ ಜಿ.ಮಂಜುನಾಥ ಮತ್ತು ಸಾಮಾನ್ಯ ಮಹಿಳೆಗೆ ಮೀಸಲಾದ ಉಪಾಧ್ಯಕ್ಷ ಸ್ಥಾನಕ್ಕೆ 18ನೇ ವಾರ್ಡ್ ಸದಸ್ಯ ನಾಗವೇಣಿ ಮಾತ್ರ ನಾಮಪತ್ರ ಸಲ್ಲಿಸಿದರು.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಂದು ನಾಮಪತ್ರ ಸಲ್ಲಿಸಲಾಗಿತ್ತು.

ಕಾರಣ ನಾಮಪತ್ರ ಪರಿಶೀಲಿಸಿದ ಚುನಾವಣಾ ಅಧಿಕಾರಿ ಅಂತಿಮವಾಗಿ ಇಬ್ಬರೂ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

ನಂತರ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷೆ ಕಂಪ್ಲಿ ಶಾಸಕ ಜೆ.ಎನ್. ಗಣೇಶ, ಪುರಸಭೆ ಮುಖ್ಯಾಧಿಕಾರಿ ದತ್ತಾತ್ರೇಯ ಹೆಗಡೆ ಹಾಗೂ ಪುರಸಭೆಯ ಸದಸ್ಯರು, ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹೂಮಾಲೆ ಹಾಕಿ. ಪಟಾಕಿ ಸಂಭ್ರಮಿಸಿ, ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷದಿಂದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಸಂಭ್ರಮದಲ್ಲಿ ನೂರಾರು ಕಾರ್ಯಕರ್ತ ಭಾಗಿಯಾಗಿದ್ದರು.



ಕುರುಗೋಡು: ಪಟ್ಟಣದ ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ಜಿ.ಮಂಜುನಾಥ ಉಪಾಧ್ಯಕ್ಷೆ ಸ್ಥಾನಕ್ಕೆ ನಾಗವೇಣಿ ಅವಿರೋಧ ಆಯ್ಕೆಯಾಗಿದ್ದಾರೆ. ಶುಕ್ರವಾರ ಪಟ್ಟಣದ ಪುರಸಭೆಯ ಕಚೇರಿಯಲ್ಲಿ ಕುರುಗೋಡು ತಹಶೀಲ್ದಾರ್ ನರಸಪ್ಪ ನೇತೃತ್ವದಲ್ಲಿ ನಡೆದ ಚುನಾವಣಾ ಪ್ರಕ್ರಿಯೆ ನಡೆಸಲಾಯಿತು.

ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಟಿ.ಕೃಷ್ಣಪ್ಪ ಆಕ್ರೋಶ

ನ್ಯಾಯಬೆಲೆ ಅಂಗಡಿ ಮೇಲೆ ಪೊಲೀಸರ ದಾಳಿ ಖಂಡನೀಯ

ಬಳ್ಳಾರಿ: ಸರ್ಕಾರದ ಪಡಿತರ ಧಾನ್ಯಗಳನ್ನು ನ್ಯಾಯಯುತವಾಗಿ, ಯಾವುದೇಗೊಂದಲಗಳಿಲ್ಲದೇ ವಿತರಿಸುತ್ತಿರುವ ನಮ್ಮ ನ್ಯಾಯಬೆಲೆ ಅಂಗಡಿಗಳಿಗೆ ಪೊಲೀಸರು ತನಿಖೆ ಮಾಡುವುದು, ಆಗಾಗ್ಗೆ ದಾಳಿ ನಡೆಸಿ ತಪಾಸಣೆ ಮಾಡುವುದು, ಕರ್ತವ್ಯ ನಿರತ ಅಂಗಡಿ ಮಾಲೀಕರನ್ನು ವಿಚಾರಣೆಗೆ ಒಳಪಡಿಸುವ ಅಧಿಕಾರ ಪೊಲೀಸರಿಗಿಲ್ಲ, ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ನಡೆದಿರುವುದು ಅತ್ಯಂತ ಖಂಡನೀಯ ಎಂದು ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯಾಧ್ಯಕ್ಷ ಟಿ.ಕೃಷ್ಣಪ್ಪ ಅವರು ಆಕ್ರೋಶ ವ್ಯಕ್ತಪಡಿಸಿದರು.



> ನಮ್ಮ ಸಂಘದ ರಾಜ್ಯಾಧ್ಯಕರಾದ ಟಿ.ಕೃಷ್ಣಪ್ಪ ಅವರು, ಅಂಗಡಿ ಮಾಲೀಕರ ಪರವಾಗಿ ಹಗಲಿರುಳು ಶ್ರಮಿಸುತ್ತಿದ್ದು, ನಾವೆಲ್ಲರೂ ಅವರ ಕೈ ಬಲಪಡಿಸಬೇಕು. ವಿತರಕರಿಗೆ ಈ ಹಿಂದೆ ನೀಡುತ್ತಿದ್ದ 18 ರೂ.ಕಮಿಷನ್ ಹಣವನ್ನು 150 ರೂ.ಗೆ ಹೆಚ್ಚಿಸಿದ್ದು, ನಮ್ಮ ಕೃಷ್ಣಪ್ಪ ಅವರ ಶ್ರಮ, ಹೋರಾಟದಿಂದ ಎನ್ನುವುದು ಮರೆಯಕೂಡದು.
>
> ■ **ಮೀನಳ್ಳಿ ತಾಯಣ್ಣ**, ಸಂಘದ ಜಿಲ್ಲಾಧ್ಯಕ್ಷ ಹಾಗೂ ರಾಜ್ಯ ಕಾರ್ಯಾಧ್ಯಕ್ಷ

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶುಕ್ರವಾರ ನಡೆದ ನ್ಯಾಯಬೆಲೆ ಅಂಗಡಿ ಮಾಲೀಕರ ಸಭೆಗೆ ಚಾಲನೆ ನೀಡಿ ಮಾತನಾಡಿದರು. ನ್ಯಾಯಬೆಲೆ ಅಂಗಡಿ ಮಾಲೀಕರ ಬಗ್ಗೆ ದೂರುಗಳು ಬಂದಾಗ ವಿಚಾರಣೆ ಮಾಡಿ, ನೋಟಿಸ್ ನೀಡಿ, ನಾವು ನಮ್ಮ ಅಂಗಡಿ ಮಾಲೀಕರ ಪರವಾಗಿದ್ದೇವೆ. ನಾವು ಅದನ್ನು ಎದುರಿಸುತ್ತೇವೆ. ಅದನ್ನು ಕೈಬಿಟ್ಟು ವಿನಾಕಾರಣ ನಮ್ಮ ನ್ಯಾಯಬೆಲೆ ಅಂಗಡಿಗಳಿಗೆ ತೆರಳಿ ಪೊಲೀಸರು ತನಿಖೆ ಮಾಡುವುದು, ವಿಚಾರಣೆಗೆ ಒಳಪಡಿಸುವುದು ಇಷ್ಟರಮಟ್ಟಿಗೆ ಸರಿ, ಇದನ್ನು ನಾವು ಖಂಡಿಸುತ್ತೇವೆ. ಈ ಕುರಿತು ಆಹಾರ ಇಲಾಖೆ ಸಚಿವರಾದ ಮುನಿಯಪ್ಪ ಅವರೊಂದಿಗೆ ಹಾಗೂ ಇಲಾಖೆ ಮೇಲಧಿಕಾರಿಗಳ ಗಮನಕ್ಕೆ ತಂದಿರುವೆ, ನಮ್ಮ ನ್ಯಾಯಬೆಲೆ ಅಂಗಡಿ ಮಾಲೀಕರು ಯಾವುದೇ ಕಾರಣಕ್ಕೂ ಅಧೈರ್ಯಕ್ಕೆ ಒಳಗಾಗಬೇಡಿ, ನಿಮ್ಮೊಂದಿಗೆ ನಾವಿದ್ದೇವೆ, ನಿಮ್ಮ ಸಂಘವಿದೆ. ಇದು ಬಡವರ ಸೇವೆ ಮಾಡುವ ಒಂದು ಸೌಭಾಗ್ಯದ ಕೆಲಸ, ನಾವೆಲ್ಲರೂ ತೃಪ್ತಿಯಾಗಿ ಕೆಲಸ ಮಾಡುತ್ತಿದ್ದೇವೆ. ಹೀಗಿರುವಾಗ ಪೊಲೀಸರು ವಿನಾಕಾರಣ ಅಂಗಡಿ ಮಾಲೀಕರಿಗೆ ಭಯ ಹುಟ್ಟಿಸುವ ಕೆಲಸ ಮಾಡುವುದು ಸರಿಯಲ್ಲ, ಬಳ್ಳಾರಿಯ ಘಟನೆ ಇಡೀ ರಾಜ್ಯದ ಗಮನಸೆಳೆದಿದೆ ಎಂದರು.

ಸರ್ವರ್ ಸಮಸ್ಯೆ ಸದ್ಯಕ್ಕೆ ಸರಿಹೋಗಿದೆ, ನಮ್ಮ ಮಾಲೀಕರು ಈ ಕುರಿತು ಗಮನಸೆಳೆದಾಗ ಸರ್ಕಾರದೊಂದಿಗೆ ಚರ್ಚಿಸಿ ಅದನ್ನು ಸರಿಪಡಿಸುವ ಪ್ರಯತ್ನ ಮಾಡಿರುವೆ. ನಮ್ಮ ಅಂಗಡಿ ಮಾಲೀಕರಿಗೆ ಪಾವತಿಯಾಗಬೇಕಿದ್ದ ಕಮಿಷನ್ ಹಣ ಏಕಕಾಲಕ್ಕೆ ಅವರವರ ಖಾತೆಗಳಿಗೆ ಜಮಾ ಆಗಿದೆ ಎಂದರು.

ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ವೆಂಕಟೇಶ್ ಹೆಗಡೆ, ರಾಜ್ಯ ಸಮಿತಿ ಸದಸ್ಯ ವೇಮಣ್ಣ, ಜಿಲ್ಲಾ ಉಪಾಧ್ಯಕ್ಷರಾದ ಹುಂಡೇಕರ್ ಪ್ರಕಾಶ್, ಹುಸೇನಪ್ಪ, ತಾಲೂಕು ಅಧ್ಯಕ್ಷರಾದ ಮಲ್ಲಿಕಾರ್ಜುನ ಕೊಡ್ಲಿ, ಜಗದೀಶ್ ಸ್ವಾಮಿ, ವೆಂಕಟೇಶ್, ಪಂಪಾಪತಿ, ಜಗನ್ನಾಥ ಗೌಡ್ರು, ಪಾಲಾಕ್ಷಿ ರೆಡ್ಡಿ, ಕೌಲ್ ಬಜಾರ್ ಮಾರುತಿ ಸೇರಿದಂತೆ ನ್ಯಾಯಬೆಲೆ ಅಂಗಡಿ ಮಾಲೀಕರು ಇತರರಿದ್ದರು.

ಗೈರು ಪಟ್ಟಾದಾರರ ಜಮೀನು ಸರ್ಕಾರದ ಸ್ವಾಧೀನಕ್ಕೆ ಸ್ವಾಗತಾರ್ಹ: ಶಿವಶಂಕರ

ಸಿರುಗುಪ್ಪ: ಗೈರು ಪಟ್ಟಾದಾರರ ಜಮೀನುಗಳನ್ನು ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಳ್ಳುವ ಆದೇಶವು ನಮ್ಮ ಹೋರಾಟದ ಫಲವಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ವಿ.ಎಸ್.ಶಿವಶಂಕರ ಅವರು ಹರ್ಷ ವ್ಯಕ್ತಪಡಿಸಿದರು. ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕ ಪ್ರಾಂತ ರೈತ ಸಂಘದ ಸಿರುಗುಪ್ಪ ತಾಲೂಕು ಸಮಿತಿ ವತಿಯಿಂದ ಗೈರು ಪಟ್ಟದಾರರು (ಭೂಮಿಯ ಮೂಲಾ ಪಟ್ಟದಾರರಿದ್ದು) ಗೈರು ಪಟ್ಟದಾರರ ಜಮೀನುಗಳ ಸರ್ಕಾರ ವಶಪಡಿಸಿ ಕೊಂಡು ಸಾಗುವಳಿ ದಾರರಿಗೆ ಹಕ್ಕು ಪತ್ರ ಕೊಡ ಬೇಕೆಂದು ಸುಮಾರು ವರ್ಷ ಗಳಿಂದ ಹೋರಾಟದ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸುತ್ತ ಬಂದಿದ್ದು, ಫೆ.23, 2026ರಂದು ಸಲ್ಲಿಸಿದ ಮನವಿ ವೇಳೆ ಅಪರ ಜಿಲ್ಲಾಧಿಕಾರಿಗಳು 15 ದಿನದೊಳಗೆ ನಿಮ್ಮ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದ್ದರು.

ಆದರೆ, ಈ ಭರವಸೆ ಕಾರ್ಯ ರೂಪಕ್ಕೆ ಬಾರದ ಹಿನ್ನೆಲೆ ಅನಿವಾರ್ಯವಾಗಿ ಮತ್ತೆ ಎರಡು ದಿನಗಳ ಕಾಲ ಪಾದಯಾತ್ರೆ ಮೂಲಕ ಕಚೇರಿಗೆ ಆಗಮಿಸಿ ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಜುಬೇರ್ ಅವರಿಗೆ ಮನವಿ ಸಲ್ಲಿಸಲಾಗಿತ್ತು. ಸಿರುಗುಪ್ಪ ತಾಲೂಕಿನ 5 ಹಳ್ಳಿಗಳಲ್ಲಿ ನಕಲಿ ಭೂ ಮಾಲೀಕರ ರಿಜಿಸ್ಟರ್ ಪತ್ರಗಳನ್ನು ರದ್ದು ಪಡಿಸಿ ಪಹಣಿ ಕಾಲಂ 9 ಮತ್ತು 12(2)ರಲ್ಲಿ 'ಕರ್ನಾಟಕ ಸರ್ಕಾರ' ಎಂದು ನಮೂದೆ ಮಾಡಲು ತಹಶೀಲ್ದಾರರಿಗೆ ಆದೇಶ ಮಾಡಿದ್ದಾರೆ ಎಂದು ತಿಳಿಸಿದರು.

ತಾಲೂಕಿನ ತೆಕ್ಕಲಕೋಟೆ ಹೋಬಳಿಯ 5 ಹಳ್ಳಿಗಳ ಜಮೀನುಗಳಿಗೆ ಅಪರ ಜಿಲ್ಲಾಧಿಕಾರಿಗಳು ಮಾಡಿದ ಆದೇಶಕ್ಕೆ ಅತ್ಯಂತ ಅಭಿನಂದನೆಗಳನ್ನು ಸಲ್ಲಿಸಿ, ಗುರುವಾರ ಜಮೀನಿನಲ್ಲಿ ಸಂಭ್ರಮಾಚರಣೆ ಮಾಡಲಾಯಿತು ಎಂದರು.

ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಅಧ್ಯಕ್ಷ ವಿ. ಮಾರುತಿ ಸದಸ್ಯರಾದ ಎಚ್.ಗಾಳೆಪ್ಪ, ಎಂ.ದುರುಗಪ್ಪ, ಜಿ.ತಿರುಮಲ, ಯು.ಹನುಮೇಶ್, ಗಡಿಗಿ ವಿರೇಶ್, ಗಾಳೆಪ್ಪ, ಕಾಕೇರು ಬಸಪ್ಪ, ನಾಡಿ ಗರವಿರೇಶ್, ಕಾಕೇರು ಓಬಳೇಶ, ಜಿ.ರಾಮ ವೀರೇಶ ಆರ್. ಭಾಗವಹಿಸಿದ್ದರು.



ಮಲ್ಲಮ್ಮ ಅವಿಭಕ್ತ ಕುಟುಂಬಕ್ಕೆ ಪ್ರೇರಣಾ ಶಕ್ತಿ



ಕೊಟ್ಟೂರು: ತಾಲೂಕು ಕಚೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಇಂದು ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಆಚರಿಸಲಾಯಿತು.

ಈ ವೇಳೆ ತಹಶೀಲ್ದಾರ್ ಅಮರೇಶ್ ಜಿ.ಕೆ. ಮಾತನಾಡಿ, ಕೃಷಿ ಪ್ರಧಾನವಾದ ಭಾರತೀಯ ಕುಟುಂಬದಲ್ಲಿ ಅವಿಭಕ್ತ ಕುಟುಂಬಗಳು ಒಗ್ಗಟ್ಟಿನಿಂದ ಜೀವಿಸುತ್ತಿದ್ದರು. ಇಂದು ಅವಿಭಕ್ತ ಕುಟುಂಬಗಳು ವಿರಳವಾಗುತ್ತಿವೆ. ಸಾಮಾಜಿಕ ಬದಲಾವಣೆ, ವ್ಯಕ್ತಿಯ ಸ್ವಾರ್ಥ, ಸಂಕುಚಿತ ಮನೋಭಾವನೆಯಿಂದ ಕುಟುಂಬಗಳು ಒಗ್ಗಟ್ಟನ್ನು ಮರೆದು ವಿಭಕ್ತವಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಲೋಕಜ್ಞಾನ ಕಡಿಮೆ ಇರುವ ಗಂಡ ಭರಮರೆಡ್ಡಿಯನ್ನು ವಿವಾಹವಾಗಿ ಬಂದು ಮನೆಯಲ್ಲಿ ಅತ್ತೆ, ನಾದಿನಿಯರ ಕಿರುಕುಳು ಎಷ್ಟೇ ಇದ್ದರೂ ಅವೆಲ್ಲವನ್ನೂ ಸಹಿಸಿಕೊಂಡು ಕುಟುಂಬದ ಒಗ್ಗಟ್ಟಿಗೆ ಶ್ರಮಿಸಿ ಕೊನೆಗೆ ಎಲ್ಲರ ತಪ್ಪನ್ನು ಕ್ಷಮಿಸಿ ಕ್ಷಮಾಗುಣವನ್ನು ತೋರುವ ಮೂಲಕ ಕುಟುಂಬವನ್ನು ಒಡೆಯದೇ ಉಳಿಸಲು ಶ್ರಮಿಸುವ ಮೂಲಕ ಅವಿಭಕ್ತ ಕುಟುಂಬಕ್ಕೆ ಮಲ್ಲಮ್ಮ ಪ್ರೇರಣಾ ಶಕ್ತಿಯಾಗಿದ್ದಾಳೆ ಎಂದರು.

ತಾಲೂಕು ರೆಡ್ಡಿ ಸಮಾಜದ ಮುಖಂಡ ಕೆ.ರಾಮನಗೌಡ ಮಾತನಾಡಿ, ಒಬ್ಬ ಅತ್ತಿಗೆ ಹೇಗಿರಬೇಕು ಎನ್ನುವುದಕ್ಕೆ ಮಲ್ಲಮ್ಮ ಉದಾಹರಣೆಯಾಗಿದ್ದಾಳೆ. ಜೀವನದಲ್ಲಿ ಜವಾಬ್ದಾರಿ ಇಲ್ಲದೇ ಸ್ವೇಚ್ಚಾಚಾರಿಯಾಗಿದ್ದ ಮೈದುನ ವೇಮನರೆಡ್ಡಿ ಮುತ್ತಿನ ಮೂಗುತಿಯ ಮೂಲಕ ಮುಕ್ತಿಯ ಮಾರ್ಗವನ್ನು ತೋರಿ ವೇಮನಯೋಗಿಯಾಗಿ ಪರಿವರ್ತಿಸಿದ ಮಹಾನ್ ಸಾಧ್ವಿಯಾಗಿದ್ದಾಳೆ. ಅನೇಕ ಪವಾಡಗಳನ್ನು ಮಾಡುವ ಮೂಲಕ ಮಲ್ಲಮ್ಮ ರೆಡ್ಡಿ ಸಮಾಜದ ಪೂಜ್ಯನೀಯ ವ್ಯಕ್ತಿಯಾಗಿದ್ದಾಳೆ ಎಂದರು.

ತಾಲೂಕು ರೆಡ್ಡಿ ಸಮಾಜದ ಗೌರವಾಧ್ಯಕ್ಷ ದೇವೇಮದ್ರಗೌಡ, ಉಪಾಧ್ಯಕ್ಷ ರೆಡ್ಡಿ ರಾಜಣ್ಣ, ಸುರೇಶ, ನಿರ್ದೇಶಕ ಜಿ.ನಾಗರಾಜ, ಮುಖಂಡರಾದ ಎಂ.ಮಲ್ಲಿಕಾರ್ಜುನ, ಎನ್.ರವೀಂದ್ರನಾಥ, ಎನ್.ಬಸವರಾಜ, ಕಂದಾಯ ನಿರೀಕ್ಷಕ ಶಿವಕುಮಾರ, ಗ್ರಾಮ ಆಡಳಿತ ಅಧಿಕಾರಿ ಹರೀಶ್ ಹಾಗೂ ಇತರರು ಇದ್ದರು. ಸಿ.ಮ. ಗುರುಬಸವರಾಜ ಸ್ವಾಗತಿಸಿ ನಿರೂಪಿಸಿದರು. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಅತಿಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ರೆಡ್ಡಿ ಸಮಾಜದ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಪರಿಹಾರಕ್ಕೆ ಆಗ್ರಹಿಸಿ ಜೂ.5ರಂದು ಬೃಹತ್ ಪ್ರತಿಭಟನೆ

ಕೂಡ್ಲಿಗಿ: ತಾಲೂಕಿನಲ್ಲಿ ದಲಿತರ ಮೇಲೆ ನಡೆಯುತ್ತಿರುವ ನಿರಂತರ ದೌರ್ಜನ್ಯ ಹಾಗೂ ಅಧಿಕಾರಿಗಳ ಮಿತಿಮೀರಿದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ, ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಜೂ.5ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಜಿಲ್ಲಾ ಸಂಚಾಲಕ ಎಸ್.ದುರುಗೇಶ್ ತಾಲೂಕಿನಲ್ಲಿ ದಲಿತರ ಜಮೀನು ವಿವಾದಗಳು, ಮೂಲಸೌಕರ್ಯಗಳ ಕೊರತೆ ಮತ್ತು ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಕಿವುಡಾಗಿದ್ದಾರೆ. ಸರ್ಕಾರದ ಈ ನಡೆಯನ್ನು ಖಂಡಿಸಿ ಉಗ್ರ ಹೋರಾಟ ಅನಿವಾರ್ಯವಾಗಿದೆ ಎಂದು ಎಚ್ಚರಿಸಿದರು.

ಹಾದಿ ಮತ್ತು ಕಾರ್ಯಸೂಚಿ ಜೂ.5ರಂದು ನಡೆಯಲಿರುವ ಈ ಪ್ರತಿಭಟನೆಯು ವಿಶೇಷವಾಗಿ ಗಮನ ಸೆಳೆಯಲಿದ್ದು, ಈ ಕೆಳಗಿನಂತೆ ರೂಪುರೇಷೆ ಸಿದ್ಧಪಡಿಸಲಾಗಿದೆ. ಮೆರವಣಿಗೆಯು ಪಟ್ಟಣದ ಗಾಂಧೀಜಿ ಚಿತಾಭಸ್ಮ ಸ್ಮಾರಕದಿಂದ ಮೆರವಣಿಗೆ ಆರಂಭವಾಗಲಿದೆ. ಮಾರ್ಗ ಅಂಬೇಡ್ಕರ್ ಸರ್ಕಲ್ ಹಾಗೂ ವಾಲ್ಮೀಕಿ ಸರ್ಕಲ್ ಮಾರ್ಗವಾಗಿ ಘೋಷಣೆಗಳು ಮತ್ತು ತಮಟೆ ವಾದ್ಯಗಳೊಂದಿಗೆ ಜಿಲ್ಲಾ



ಹಿರಿಯ ಮುಖಂಡರಾದ ಡಿ.ಎಂ.ಈಶ್ವರಪ್ಪ ಸಿದ್ದಾಪುರ, ಬಿ.ಹನುಮೇಶ್, ಲೋಕಿಕೆರೆ ಕರಿಬಸಪ್ಪ, ತಾಲೂಕು ಸಂಚಾಲಕ ಬಡೇಲಡಕು ದುರುಗೇಶ್, ಮತ್ತು ಪದಾಧಿಕಾರಿಗಳಾದ ಚೌಡಾಪುರ ಬಸವರಾಜ್, ಕಾನಾಮಡುಗು ಪಕೀರಪ್ಪ, ಬಿ.ಮಹೇಶ್, ಹೊಸಹಳ್ಳಿ ಕರಿಬಸಪ್ಪ ಉಪಸ್ಥಿತರಿದ್ದರು.

ಬಿಇಒ ಮಂಗಳಾ ಕೆ. ಅಧಿಕಾರ ಸ್ವೀಕಾರ

ಹೂವಿನಹಡಗಲಿ: ಶಾಲಾ ಶಿಕ್ಷಣ ಇಲಾಖೆಯ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಮಂಗಳಾ ಕೆ.ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಗ್ರೂಪ್ ಬಿ. ಸರ್ಕಾರಿ ಪ್ರೌಢಶಾಲಾ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಗ್ರೂಪ್ ಎ ಹುದ್ದೆಗೆ ಭಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಸರ್ಕಾರದ ಆದೇಶದ ಮೇರೆಗೆ ಇಂದು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಕರ್ತವ್ಯಕ್ಕೆ ಹಾಜರಾದರು.

ತಾಲೂಕು ಕ್ಷೇತ್ರ ಸಮನ್ವಯಾಧಿಕಾರಿ ಎ.ಕೋಟೆಪ್ಪ ತಾಲೂಕು ದೈಹಿಕ ಪರಿವೀಕ್ಷಕ ರಫಿ ಅಹಮದ್ ಖವಾಸ್, ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ಕೋಶಾಧ್ಯಕ್ಷ ಸೂರ್ಯಕಾಂತ್,

ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಶಿವಲಿಂಗಪ್ಪ, ರಾಜ್ಯ ಸಹ ಕಾರ್ಯದರ್ಶಿ ಗಡ್ಡಿ ಶಿವಕುಮಾರ್ ಮುಖ್ಯ ಗುರುಗಳಾದ ಪಾಂಡ್ಯನಾಯ್ಕ್, ಎಂ.ಪರಶುರಾಮು, ಕೆ.ಲಿಂಗಪ್ಪ ಸಿದ್ದೇಶ್ವರ ಎಂ., ರವೀಂದ್ರ ಪತ್ತಾರ್, ಇಸಿಒ ಮಿಟ್ಯಾನಾಯ್ಕ್, ಬಿಆರ್‌ಪಿ ಸಚಿನ್ ಆರಾಧ್ಯ ಬಸವರಾಜ ಪಟ್ಟಣ ಸಿಆರ್‌ಪಿ ವೀರೇಶ್ ಬಗಲಿ ಇತರರು ಇದ್ದರು.



ಕರ್ನಾಟಕ ಪ್ರೆಸ್ ಕ್ಲಬ್‌ನ ಗೌರವಾಧ್ಯಕ್ಷ ಎಂ.ದಯಾನಂದ ತಾಲೂಕು ಅಧ್ಯಕ್ಷ ಬಿಚ್ಚುಗತ್ತಿ ಖಾಜಾ ಹುಸೇನ್, ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಮನೋಹರ್, ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ಅಧ್ಯಕ್ಷ ಜಿ.ಎಂ.ಕಾಂತೇಶ್, ಉಪಾಧ್ಯಕ್ಷೆ

ಹನಸಿ ಮಂಗಳಾ ಕನ್ನಡ ಜಾಗೃತಿ ಸಮಿತಿ ಜಿಲ್ಲಾ ಸದಸ್ಯ ಸುರೇಶ ಅಂಗಡಿ ಇತರರು ಅಭಿನಂದನೆ ತಿಳಿಸಿದ್ದಾರೆ.

'ಸರ್ಕಾರಿ ನ್ಯಾಯಬೆಲೆ ಅಂಗಡಿ' ಪೋಸ್ಟರ್ ಬಿಡುಗಡೆ

ಬಳ್ಳಾರಿ: ನ್ಯಾಯಬೆಲೆ ಅಂಗಡಿ ಮಾಲೀಕರ ಸಮಸ್ಯೆಗಳು, ಕರ್ತವ್ಯಗಳು, ಎದುರಾದ ಸಮಸ್ಯೆಗಳ ಕುರಿತು ಸಿದ್ಧಪಡಿಸಿದ ಚಲನಚಿತ್ರವಿದು. ಸರ್ಕಾರದ ವಿರುದ್ಧ ನಿರ್ಮಿಸಿದ ಚಲನಚಿತ್ರವಲ್ಲ, ಅಂಗಡಿ ಮಾಲೀಕರ ಪರವಾಗಿರುವ ಚಿತ್ರವಿದು, ನ್ಯಾಯಬೆಲೆ ಅಂಗಡಿ ಮಾಲೀಕರು, ಕುಟುಂಬಸ್ಥರು, ಪ್ರತಿಯೊಬ್ಬರೂ ಚಿತ್ರವನ್ನು ವೀಕ್ಷಿಸಿ ಪ್ರೋತ್ಸಾಹಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯಾಧ್ಯಕ್ಷ ಟಿ.ಕೃಷ್ಣಪ್ಪ ಹೇಳಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಲನಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದರು.

ನಿರ್ಮಾಪಕರಾದ ತೇಜು ಮೂರ್ತಿ, ಬಾಮ ಹರೀಶ್, ಪದ್ಮಾವತಿ, ಚಂದ್ರು ಅವರ ನೇತೃತ್ವದಲ್ಲಿ ಅತ್ಯುತ್ತಮವಾಗಿ ನಿರ್ಮಿಸಿದ, ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಲನಚಿತ್ರದಲ್ಲಿ, ನಾನು ಪಾತ್ರವಹಿಸಿದ್ದೇನೆ. ಜೊತೆಗೆ ಹೆಸರಾಂತ ಕಲಾವಿಧಾರದ ಕುಮಾರ ಬಂಗಾರಪ್ಪ, ರಾಗಿಣಿ, ದೊಡ್ಡಣ್ಣ ಸೇರಿದಂತೆ ಸಾಕಷ್ಟು ಕಲಾವಿದರು ಅಭಿನಯಿಸಿದ್ದಾರೆ.

ಜೂ.1ರಂದು ಶಿವಮೊಗ್ಗ, ಬಳ್ಳಾರಿ, ಹಾಸನ ಜಿಲ್ಲೆಗಳಲ್ಲಿ ಆಹಾರ ಇಲಾಖೆ ಸಚಿವ ಮುನಿಯಪ್ಪ ಅವರೊಂದಿಗೆ ಒಂದೇ ದಿನ ಏಕಕಾಲಕ್ಕೆ ಉದ್ಘಾಟಿಸುವ ವ್ಯವಸ್ಥೆ ಮಾಡಲು ಚಿಂತನೆಯಿದೆ ಎಂದರು.




ಚಲನಚಿತ್ರದ ನಿರ್ಮಾಪಕ ತೇಜು ಮೂರ್ತಿ, ಬಾಮಾ ಹರೀಶ್ ಮಾತನಾಡಿದರು. ಸಂಘದ ಜಿಲ್ಲಾಧ್ಯಕ್ಷ ಹಾಗೂ ರಾಜ್ಯ ಕಾರ್ಯಾಧ್ಯಕ್ಷ ಮೀನಳ್ಳಿ ತಾಯಣ್ಣ ಮಾತನಾಡಿ, ನ್ಯಾಯಬೆಲೆ ಅಂಗಡಿ ಮಾಲೀಕರು ಈ ಚಿತ್ರವನ್ನು ಸಾಕಷ್ಟು ಕಷ್ಟಪಟ್ಟು ಚಿತ್ರೀಕರಣ ಮಾಡಿದ್ದಾರೆ, ಇದರಲ್ಲಿ ನಮ್ಮ ರಾಜ್ಯಾಧ್ಯಕ್ಷ ಟಿ.ಕೃಷ್ಣಪ್ಪ ಅವರು ಅಭಿನಯಿಸಿದ್ದಾರೆ. ಇದು ನಮ್ಮ ಕಷ್ಟ ಸುಖಗಳ ಬಗ್ಗೆ ತಯಾರಿಸಿದ ಚಿತ್ರವಿದು. ಪ್ರತಿಯೊಬ್ಬ ಅಂಗಡಿ ಮಾಲೀಕರು 25ಕ್ಕೂ ಹೆಚ್ಚು ಟಿಕೆಟ್‌ಗಳನ್ನು ಪಡೆದು ಜೂ.1ರಂದು ನಿಗದಿತ ಚಿತ್ರಮಂದಿರಗಳಲ್ಲಿ ಚಿತ್ರವನ್ನು ವೀಕ್ಷಿಸಿ ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಚಿತ್ರತಂಡದ ಪದ್ಮಾವತಿ, ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ವೆಂಕಟೇಶ್ ಹೆಗಡೆ, ರಾಜ್ಯ ಸಮಿತಿ ಸದಸ್ಯ ವೇಮಣ್ಣ, ಜಿಲ್ಲಾ ಉಪಾಧ್ಯಕ್ಷ ಹುಂಡೇಕರ್ ಪ್ರಕಾಶ್, ಹುಸೇನಪ್ಪ, ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಕೊಡ್ಲಿ, ಜಗದೀಶ್ ಸ್ವಾಮಿ, ವೆಂಕಟೇಶ್, ಪಂಪಾಪತಿ, ಜಗನ್ನಾಥ ಗೌಡ್ರು, ಪಾಲಾಕ್ಷಿ ರೆಡ್ಡಿ, ಕೌಲ್ ಬಜಾರ್ ಮಾರುತಿ ಇತರರಿದ್ದರು.

ಭವಸಾರ್ ಕ್ಷತ್ರಿಯ ಸಮಾಜ ಅಭಿವೃದ್ಧಿ ನಿಗಮ ಸ್ಥಾಪನೆಗೆ ಚೋಳಕರ್ ಆಗ್ರಹ

ಬೀದರ: ರಾಜ್ಯದಲ್ಲಿರುವ ಭವಸಾರ್ ಕ್ಷತ್ರಿಯ ಸಮಾಜದ ಸಮಗ್ರ ಅಭಿವೃದ್ಧಿಗಾಗಿ ಪ್ರತ್ಯೇಕ ಅಭಿವೃದ್ಧಿ ನಿಗಮವನ್ನು ತಕ್ಷಣ ಸ್ಥಾಪಿಸಬೇಕೆಂದು ಭವಸಾರ್ ಕ್ಷತ್ರಿಯ ಸಮಾಜದ ತಾಲೂಕು ಅಧ್ಯಕ್ಷ ಓಂಪ್ರಕಾಶ್ ಚೋಳಕರ್ ಅವರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.



ಈ ಕುರಿತು ಸಿಎಂ ಸಿದ್ದರಾಮಯ್ಯ ಅವರಿಗೆ ಜಿಲ್ಲಾಧಿಕಾರಿ ಮುಖಾಂತರ ಮನವಿಸಲ್ಲಿಸಿರುವ ಅವರು, ಭವಸಾರ್ ಕ್ಷತ್ರಿಯ ಸಮಾಜವು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಸಮಾಜವಾಗಿದ್ದು, ಸಮಾಜದ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಯೋಜನೆಗಳನ್ನು ಜಾರಿಗೆ ತರಬೇಕಾಗಿದೆ ಎಂದು ತಿಳಿಸಿದ್ದಾರೆ.

ಸಮಾಜದ ಅನೇಕ ಕುಟುಂಬಗಳು ಆರ್ಥಿಕ ಸಂಕಷ್ಟದಲ್ಲಿದ್ದು, ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ತೊಂದರೆ ಅನುಭವಿಸುತ್ತಿದ್ದಾರೆ. ಸರ್ಕಾರ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಿದಲ್ಲಿ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಆರ್ಥಿಕ ನೆರವು, ಸ್ವಯಂ ಉದ್ಯೋಗ ಯೋಜನೆಗಳು, ಸಾಲ ಸೌಲಭ್ಯಗಳು ಮತ್ತು ವಿದ್ಯಾರ್ಥಿಗಳಿಗೆ ಶಿಕ್ಷಣ ಸಹಾಯ ದೊರೆಯಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಈ ಹಿಂದೆಯೂ ಹಲವಾರು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದರೂ ಯಾವುದೇ ಸ್ಪಂದನೆ ದೊರೆತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು, ಇದೀಗ ಸರ್ಕಾರ ಸಮಾಜದ ಹಿತದೃಷ್ಟಿಯಿಂದ ಶೀಘ್ರವೇ ಭವಸಾರ್ ಕ್ಷತ್ರಿಯ ಸಮಾಜ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ದೀರ್ಘಕಾಲದ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿದ್ದಾರೆ.

ಭೂಸಂತ್ರಸ್ತ ರೈತರಿಂದ ಶೀಘ್ರ ಭೂಪ್ರವೇಶ: ರಾಜಶೇಖರ

ಕುರುಗೋಡು: ಭೂಸಂತ್ರಸ್ತ ರೈತರು ಹಲವು ದಿನಗಳಿಂದ ನಿರಂತರ ಹೋರಾಟ ಮತ್ತು ಈಗ ಉಪವಾಸ ಸತ್ಯಾಗ್ರಹ ಮಾಡಿಕೊಂಡು ಬಂದಿದ್ದು, ಆದರೆ, ಇಲ್ಲಿತನಕ ಹೋರಾಟಕ್ಕೆ ನ್ಯಾಯ ಸಿಕ್ಕಿಲ್ಲ, ಆದ್ದರಿಂದ ಭೂಸಂತ್ರಸ್ತ ರೈತರು ಅತಿ ಶೀಘ್ರದಲ್ಲಿ ಭೂಪ್ರವೇಶ ಮಾಡಲಿದ್ದಾರೆ ಎಂದು ಪಪಂ ಮಾಜಿ ಅಧ್ಯಕ್ಷ ವಿ.ರಾಜಶೇಖರ ಹೇಳಿದರು.

ಸಮೀಪದ ಕುಡತಿನಿ ಪಟ್ಟಣದಲ್ಲಿ ಭೂ ಸಂತ್ರಸ್ತರ ರೈತರ ಹೋರಾಟವು ಗುರುವಾರ 1245ನೇ ದಿನಕ್ಕೆ ಕಾಲಿಡುವ ಜೊತೆಗೆ ಮೇ 12ರಿಂದ ಆರಂಭಗೊಂಡ ಗುರುವಾರದ ಮೂರನೇ ದಿನದ ಸರದಿ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬೆಂಬಲ ನೀಡಿದ ನಂತರ ಮಾತನಾಡಿ, ಕುಡತಿನಿಯಲ್ಲಿ ರೈತರು ಭೂಸ್ವಾಧೀನ ಮತ್ತು ಅಕ್ರಮ ಭೂವರ್ಗಾವಣೆ ಖಂಡಿಸಿ ದೀರ್ಘಕಾಲದಿಂದ ನಿರಂತರ ಹೋರಾಟ ನಡೆಸುತ್ತಿದ್ದಾರೆ.



2012ರಲ್ಲಿ ಆರ್ಸೆಲರ್ ಮಿತ್ತಲ್ ಕಂಪನಿಗಾಗಿ ಕೆಐಎಡಿಬಿ ಅತಿ ಕಡಿಮೆ ಬೆಲೆಗೆ ಸ್ವಾಧೀನಪಡಿಸಿಕೊಂಡಿದ್ದ ಜಮೀನನ್ನು, ಇದುವರೆಗೂ ಕಂಪನಿಯು ಉಪಯೋಗಿಸಿರಲಿಲ್ಲ, ಈಗ ಈ ಜಮೀನನ್ನು ಜಿಂದಾಲ್ ಕಂಪನಿಗೆ ಅಕ್ರಮವಾಗಿ ವರ್ಗಾವಣೆ ಮಾಡುತ್ತಿರುವುದು ಸರಿಯಲ್ಲ ಎಂದರು.

ಭೂಸಂತ್ರಸ್ತರ ಹೋರಾಟ ಸಮಿತಿ ಗೌರವಾಧ್ಯಕ್ಷ ಯು.ಬಸವರಾಜ ಮಾತನಾಡಿ, ಮೇ 16ರಂದು ರೈತರೆಲ್ಲರೂ ಜಮೀನು ಪ್ರವೇಶ ಮಾಡಲಿದ್ದೇವೆ. ಮತ್ತು ಹೋರಾಟ ತಡೆದರೆ, ಮೇ 25ರಂದು ರಸ್ತೆ ಚಳುವಳಿ, ಜೂ.1ಕ್ಕೆ 500 ಬೈಕ್ ರ್‍ಯಾಲಿ ಮಾಡುತ್ತೇವೆ. 15ರೊಳಗೆ ಬಳ್ಳಾರಿ ಬಂದ್ ಮಾಡಿ, ಮತ್ತು ಅದೇ ದಿನದಂದು ರಾಜ್ಯ ಬಂದ್ ಮಾಡುವ ಸಾಧ್ಯತೆ ಇದೆ. ರೈತರಿಗೆ ನ್ಯಾಯ ಸಿಗುವರೆಗೂ ಹೋರಾಟ ಮಾಡುತ್ತೇವೆ ಎಂದರು.

ದಲಿತ ಮುಖಂಡ ಸಿ.ಆನಂದ ಅಂಬೇಡ್ಕರ್ ಅವರ ಕ್ರಾಂತಿ ಗೀತೆ ಹಾಡುವ ಮೂಲಕ ಹೋರಾಟಕ್ಕೆ ಮತ್ತಷ್ಟು ಹುಮ್ಮಸ್ಸು ನೀಡಿದರು.

ಮುಖಂಡರಾದ ಜಂಗ್ಲಿ ಸಾಬ್, ಅಂಬರೇಶ, ಮಹಾಂತೇಶ, ಜೆ.ಎಸ್. ವೆಂಕಟರಮಣಬಾಬು, ಜಾಕೀರ್, ಪಂಪಾಪತಿ, ತಿಪ್ಪೇಸ್ವಾಮಿ, ಲೆನಿನ್, ಸಿದ್ದಪ್ಪ, ಸತ್ಯಬಾಬು ಸೇರಿದಂತೆ ರೈತರಿದ್ದರು.